# ಮಾನವಿಕ ಕರ್ಣಾಟಕ

ಸಂಪುಟ ೩ ಸಂಚಿಕೆ ೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೩

# ಲೇಖಕರಿಗೆ ಸೂಚನೆಗಳು

೧ ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.


ಮಾನ್ಯರೆ,

ಈ ಸಂಚಿಕೆಯೊಂದಿಗೆ ಮಾನವಿಕ ಕರ್ಣಾಟಕದ 3ನೆಯ ಸಂಪುಟ ಮುಗಿಯುತ್ತದೆ. 4ನೆಯ ಸಂಪುಟಕ್ಕೆ ತಮ್ಮ ಚಂದಾಹಣವನ್ನು ದಯವಿಟ್ಟು ತತ್‌ಕ್ಷಣವೇ ಕಳಿಸಿಕೊಡಿ. ಹಾಗೆ ಕಳುಹಿಸುವಾಗ ಈ ಹಾಳೆಯ ಮಗ್ಗುಲಿಗಿರುವ ಹಾಳೆಯಲ್ಲಿ ವಿವರಗಳನ್ನು ತುಂಬಿ ಕಳುಹಿಸಿಕೊಡಿ.

ಇಂತೀ ನಮಸ್ಕಾರಗಳು

**ಪ್ರಭುಶಂಕರ**

ಡೈರೆಕ್ಟರ್




ಡಾ. ಹಸಮುಖ್ ಧೀರಜಲಾಲ್ ಸಾಂಕಲಿಯಾ

# ಮಾನವಿಕ ಕರ್ಣಾಟಕ

ಸಂಪುಟ ೩ ಸಂಚಿಕೆ ೪

೧೨

ಆಗಸ್ಟ್ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೩

MANAVIKA KARNATAKA, Kannada quarterly of the University of Mysore. Volume 3, Number 4, August 1973. Edited by H. S. Krishnaswamy Iyengar and Dr. A. V. Narasimha Murthy





ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

# ವಿಷಯಸೂಚಿ

# ಈ ಸಂಚಿಕೆಯ ಲೇಖನಗಾರರು

೧ **ಎಚ್. ಆರ್. ರಘುನಾಥ ಭಟ್,** ಅಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ,ಮಹಾರಾಜ ಕಾಲೇಜು, ಮೈಸೂರು

೨ **ಕಂಠೀರಾವ್,** ಉಪನಿರ್ದೇಶಕರು, ಭಾಷಾ ನಿರ್ದೇಶನಾಲಯ, ೬೪, ಅರಮನೆ ರಸ್ತೆ, ವಸಂತ ನಗರ, ಬೆಂಗಳೂರು, ೫೬೦೦೫೨

೩ **ಡಾ. ಕೊ. ವ್ಯಾ. ರಮೇಶ,** ಭಾರತ ಸರ್ಕಾರದ ಡೆಪ್ಯುಟಿ ಸೂಪರಿಂಟೆಂಡಿಗ್ ಎಪಿಗ್ರಾಫಿಸ್ಟ್, ಮೈಸೂರು

೪ **ಶಿವಲಂಕ ಶ್ರೀರಾಮಚಂದ್ರಮೂರ್ತಿ,** ಭಾರತ ಸರ್ಕಾರದ ಶಾಸನ ಇಲಾಖೆಯಲ್ಲಿ ತೆಲುಗು ಶಾಸನ ಸಂಶೋಧಕರು

೫ **ಕೆ. ಉಮಾಪತಿ ಶೆಟ್ಟಿ,** ಪೂಲ್ ಆಫೀಸರ್, ಸಿ. ಎಸ್. ಐ. ಆರ್., ಗ್ರಂಥಾಲಯ ವಿಜ್ಞಾನ ವಿಭಾಗ, ಮಾನಸಗಂಗೋತ್ರಿ

೬ **ಡಾ. ಬಾ. ರಾ. ಗೋಪಾಲ್,** ಶಾಸನತಜ್ಞರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

೭ **ಎಸ್. ನಾಗರಾಜು,** ರೀಡರ್, ಅರ್ಥಶಾಸ್ತ್ರ ವಿಭಾಗ, ಮಾನಸಗಂಗೋತ್ರಿ

೮ **ಡಾ. ಎಸ್. ಎಲ್. ಶಾಂತಕುಮಾರಿ,** ಸಂಶೋಧನ ಸಹಾಯಕಿ, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ

೯ **ಎಸ್. ಬಿ. ಪಾಂಗಣ್ಣಾಯ,** ಅಧ್ಯಾಪಕರು, ಗ್ರಂಥಾಲಯ ವಿಜ್ಞಾನ, ಮಾನಸಗಂಗೋತ್ರಿ

೧೦ **ಡಾ. ಪಿ. ಗುರುರಾಜ ಭಟ್,** ಪ್ರಿನ್ಸಿಪಾಲ್ ಮಿಲಾಗ್ರಿಸ್, ಕಾಲೇಜು, ಕಲ್ಯಾಣಪುರ, ದ.ಕ.

೧೧ **ಎನ್. ಪ್ರಭುಸ್ವಾಮಿ,** ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಾನಸಗಂಗೋತ್ರಿ

೧೨ **ಸೀತಾರಾಮ ಜಾಗೀರ್‌ದಾರ್,** ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

೧೩ **'ರಘುಸುತ'** ಕೆ. ಆರ್. ರಂಗಾಚಾರ್, ಅಧ್ಯಾಪಕರು, ಭೂಗೋಳಶಾಸ್ತ್ರ, ಪ್ರಥಮದರ್ಜೆ ಕಾಲೇಜು, ಮಿರ್ಲೆ, ೫೭೧೬೦೩

೧೪ **ಶುಭಚಂದ್ರ,** ಸಂಶೋಧನ ವಿದ್ಯಾರ್ಥಿ, ಜೈನಾಲಜಿ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

೧೫ **ಡಾ. ಎ. ಎಸ್. ಸೀತಾರಾಂ,** ಅಧ್ಯಾಪಕರು, ಶಿಕ್ಷಣ ವಿಭಾಗ, ಮಾನಸಗಂಗೋತ್ರಿ

೧೬ **ಎಸ್. ವಿ. ಸ್ವರ್ಣಲತಾ,** ನವೋದಯ ಸಾಹಿತ್ಯ ಮಂದಿರ, ೨೫, ಕಾಂತರಾಜ ಅರಸು ರಸ್ತೆ, ಮೈಸೂರು, ೫೭೦೦೦೪

೧೭ **ಡಾ. ಎ. ವಿ. ನರಸಿಂಹಮೂರ್ತಿ,** ರೀಡರ್, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸ ಗಂಗೋತ್ರಿ; ಮಾನವಿಕ ಕರ್ಣಾಟಕದ ಸಂಪಾದಕರಲ್ಲೊಬ್ಬರು

೧೮ **ಡಾ. ಎನ್. ಎಸ್. ವೀರಪ್ಪ,** ಮೈಸೂರಿನ ಶಿಕ್ಷಣ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು ; ಕನ್ನಡ ವಿಶ್ವಕೋಶದ ಜೀವಶಾಸ್ತ್ರ ವಿಭಾಗದ ಗೌರವ ಸಂಪಾದಕರು

ಎಚ್. ಆರ್. ರಘುನಾಥ ಭಟ್

# ಡಾ. ಹಸಮುಖ್ ಧೀರಜಲಾಲ್ ಸಾಂಕಲಿಯಾ

ಭಾರತೀಯ ಪುರಾತತ್ವದ ಆದ್ಯಪ್ರವರ್ತಕರಲ್ಲಿ ಡಾ. ಹಸಮುಖ್ ಧೀರಜ್‌ಲಾಲ್ ಸಾಂಕಲಿಯಾ ಅಗ್ರಗಣ್ಯರು. ನಮ್ಮ ದೇಶದ ಪೂರ್ವೇತಿಹಾಸವನ್ನು ಪುನರ್ರಚಿಸುವಲ್ಲಿ ಪ್ರಾಚ್ಯ ವಸ್ತುಸಂಶೋಧನೆಯ ಮಹತ್ವದ ಪಾತ್ರವನ್ನು ಬಹು ಹಿಂದೆಯೇ ಮನಗಂಡವರು. ಆ ದಿಶೆಯಲ್ಲಿ ಕಳೆದ ಮೂವತ್ತನಾಲ್ಕು ವರ್ಷಗಳಿಂದಲೂ ಸತತವಾಗಿ ದುಡಿಯುತ್ತ ಬಂದ ಪ್ರಕಾಂಡ ಪಂಡಿತರು.

## ಬಾಲ್ಯ

ಸಾಂಕಲಿಯಾ ಜನಿಸಿದ್ದು ಗುಜರಾತಿ ಮಧ್ಯಮವರ್ಗದ ವೈಷ್ಣವ ಕುಟುಂಬವೊಂದರಲ್ಲಿ (10 ಡಿಸೆಂಬರ್, 1908). ಇವರ ಜನ್ಮಸ್ಥಳ ಮುಂಬಯಿ. ಆದರೆ ಇವರ ಪೂರ್ವಿಕರು ಗುಜರಾತಿನಿಂದ ವ್ಯಾಪಾರೋದ್ಯೋಗ ನಿಮಿತ್ತವಾಗಿ ಮಹಾರಾಷ್ಟ್ರಕ್ಕೆ ಬಂದವರು.

ಪರಂಪರಾಗತವಾಗಿ ಬಂದ ಧಾರ್ಮಿಕ ಆಚಾರ ವಿಚಾರಗಳಲ್ಲಿ ಬಾಲಕ ಸಾಂಕಲಿಯಾಗೆ ಅಪಾರ ಶ್ರದ್ಧೆಯಿತ್ತು. ಚಿಕ್ಕಂದಿನಿಂದಲೇ ಸಂಸ್ಕೃತ ಗ್ರಂಥಗಳನ್ನು ಓದುವ ಅಭಿರುಚಿ ಬೆಳೆಸಿಕೊಂಡಿದ್ದರು. ಬಾಲ್ಯದಿಂದಲೂ ಅವರಿಗೆ ಒಳ್ಳೆಯ ಬೌದ್ಧಿಕ ವಾತಾವರಣವಿತ್ತು.

## ಶಿಕ್ಷಣ

ಇಂದಿನ ವಿದ್ಯಾರ್ಥಿಗಳಿಗೆ ತಮ್ಮ ಭವಿತವ್ಯದ ಗೊತ್ತುಗುರಿಗಳೇನೆಂಬುದರ ಸ್ಪಷ್ಟ ಪರಿಜ್ಞಾನವಿರುವುದು ವಿರಳ. ಆದರೆ ಸಾಂಕಲಿಯಾರವರಿಗೆ 1924ರಲ್ಲೇ ತಾನೇನಾದೇನು. ಏನಾಗಬೇಕು ಎಂಬುದರಲ್ಲಿ ವಿಶೇಷ ಆಸಕ್ತಿಯಿತ್ತು. ಇದಕ್ಕೆ ಕಾರಣವೂ ಇಲ್ಲದಿಲ್ಲ: ಇವರು ಶಿಕ್ಷಣ ಪಡೆದದ್ದು ಮುಂಬಯಿಯ ಎಲ್‌ಫಿನ್‌ಸ್ಟನ್ ಪ್ರೌಢಶಾಲೆಯಲ್ಲಿ. ಮೆಟ್ರಿಕ್ ತರಗತಿಯಲ್ಲಿದ್ದಾಗಲೆ ಲೋಕಮಾನ್ಯ ಟಿಳಕರು ಬರೆದ The Arctic Home in the Vedas ಎಂಬ ಪ್ರಸಿದ್ಧ ಗ್ರಂಥವನ್ನು ಓದಿದರು. ತಾರುಣ್ಯದ ಉದಯ ಕಾಲದಲ್ಲೆ ಟಿಳಕರ ಪ್ರಭಾವ ವಿಶೇಷವಾಯಿತು. ಇವರ ಜ್ಞಾನವರ್ಧಿನೀ ಕುಂಡಲಿನಿ ಜಾಗೃತವಾಯಿತು. ತಮ್ಮ ದೇಶದ ಪ್ರಾಚೀನ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡುವ ಆಸಕ್ತಿ ಕುದುರಿತು. ಆರ್ಯರ ಬಗ್ಗೆ ತಾವೂ ಏನಾದರೊಂದು ಸಂಶೋಧನೆ ಮಾಡಬೇಕೆಂಬ ಗೀಳು ಹಿಡಿಯಿತು.

ಸೇಂಟ್ ಜೇವಿಯರ್ ಕಾಲೇಜಿನಲ್ಲಿ ಸಾಂಕಲಿಯಾರವರ ಉಚ್ಚಶಿಕ್ಷಣ ಆರಂಭವಾಯಿತು. ರೆವರೆಂಡ್ ಫಾದರ್ ಹೆರಾಸ್‌ರವರಿದ್ದ ಈ ಕಾಲೇಜು ಹಸಮುಖ್‌ರ ಜೀವನಕ್ಕೆ ಹೊಸ ತಿರುವು ಕೊಟ್ಟಿತು. ಬಿ.ಎ. ಪರೀಕ್ಷೆಯಲ್ಲಿ ಪ್ರಶಂಸಾರ್ಹವಾಗಿ ತೇರ್ಗಡೆ ಹೊಂದಿದರು. ಅನಂತರ ಸಂಸ್ಕೃತದಲ್ಲಿ ಸ್ನಾತಕೋತ್ತರ ವ್ಯಾಸಂಗ ಆರಂಭಿಸಿದರು. ಫಾದರ್ ಹೆರಾಸರ ನೆಚ್ಚಿನ ಶಿಷ್ಯರಾದ ಇವರು ಎಂ.ಎ. ಪರೀಕ್ಷೆಯಲ್ಲೂ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು (1932). ಮುಂಬಯಿ ವಿಶ್ವವಿದ್ಯಾನಿಲಯದ ಎಲ್‌ಎಲ್. ಬಿ. ಪದವಿಯೂ ಇವರಿಗೆ ಪ್ರಾಪ್ತವಾಗಿತ್ತು (1931). ಫಾದರ್ ಹೆರಾಸರ ಪರಿಣತ ಮಾರ್ಗದರ್ಶನದಲ್ಲಿ

ಇವರು 'ನಾಲಂದಾ ವಿದ್ಯಾಪೀಠ'ವನ್ನು ಕುರಿತು ಬರೆದ ಪ್ರೌಢಪ್ರಬಂಧವನ್ನು ಮುಂಬಯಿ ವಿಶ್ವ ವಿದ್ಯಾನಿಲಯದವರು ಪ್ರಕಟಿಸಿ ಪ್ರೋತ್ಸಾಹಿಸಿದರು (1934). 'ಜಂಬೂದ್ವೀಪದಲ್ಲೇ ಅತ್ಯಮೋಘ ವಾದ ಈ ಜ್ಞಾನದೇಗುಲ' (ನಾಲಂದಾ)ವನ್ನು ಕುರಿತು ಪುರಾತತ್ವ ಆಕರಗಳನ್ನು ಆಧರಿಸಿ ಬರೆದ ಈ ಕೃತಿ ಅವರ ಒಂದು ಅಮೂಲ್ಯ ಕಾಣಿಕೆ. ಇದರಿಂದ ಸಾಂಕಲಿಯಾರವರ ವಿದ್ವತ್ ಪ್ರೌಢಿಮೆ ದೇಶ ವಿದೇಶಗಳಲ್ಲಿ ಮೆಚ್ಚಿಗೆ ಗಳಿಸಿತು. ಸಾಂಕಲಿಯಾರವರ ಸೂಕ್ಷ್ಮ ಸಂಶೋಧನಶೀಲತೆಯನ್ನು ಮೆಚ್ಚಿ ಕೊಂಡ ಫಾದರ್ ಹೆರಾಸ್ ಇವರನ್ನು ಹೆಚ್ಚಿನ ತರಬೇತಿಗಾಗಿ ಇಂಗ್ಲೆಂಡಿ ಗೆಹೋಗಲು ಪ್ರೋತ್ಸಾಹಿಸಿದರು. ತಮ್ಮ ಕೃಶದೇಹಿ ಮಗನನ್ನು ವಿದೇಶಕ್ಕೆ ಕಳಿಸಲು ತಂದೆತಾಯಿಗಳು ಹಿಂಜರಿಯುತ್ತಿದ್ದರು. ಆದರೆ ಫಾದರ್ ಹೆರಾಸರ ಮಾತನ್ನು ಅಲ್ಲಗಳೆಯಲಾಗಲಿಲ್ಲ.

ಇಂಗ್ಲೆಂಡಿನಲ್ಲಿ ಸಾಂಕಲಿಯಾ ಶಾಸ್ತ್ರಶುದ್ಧವಾಗಿ ಪುರಾತತ್ವಜ್ಞಾನವನ್ನು ಕರಗತಮಾಡಿಕೊಂಡರು. ಪ್ರೊಫೆಸರ್ ಕಾಡ್ರಿಂಗ್ಟನ್, ರಿಚರ್ಡ್ಸ್ ಮುಂತಾದ ಪ್ರಸಿದ್ಧ ಪುರಾತತ್ವಜ್ಞರ ಶ್ರೇಷ್ಠ ಮಾರ್ಗದರ್ಶನ ದಲ್ಲಿ ಸಾಂಕಲಿಯಾರ ಪ್ರತಿಭೆ ಅರಳಿತು. ಇವರ ತೇಜಸ್ವಿ ಪ್ರಭಾವ ಮತ್ತು ಸಂಶೋಧಕ ಪ್ರವೃತ್ತಿಯನ್ನು ಅವರು ಮೆಚ್ಚಿಕೊಂಡರು. ಪಿಎಚ್.ಡಿ. ಮಹಾಪ್ರಬಂಧದ ವಿಷಯವನ್ನು ತಾವೇ ಆಯ್ಕೆಮಾಡಿಕೊಳ್ಳಲು ಇವರಿಗೆ ಸ್ವಾತಂತ್ರ್ಯ ನೀಡಲಾಯಿತು. ಆಗಲೇ ಇವರಿಗೆ ತಮ್ಮ ಮಾತೃಭೂಮಿಯ ಬಗ್ಗೆ ವಿಶೇಷವಾದ ಪ್ರೇಮ ಜಾಗೃತಗೊಂಡದ್ದು. 'ಗುಜರಾತಿನ ಪುರಾತತ್ವ' (*'Archaeology of Gujarat'*) ಎಂಬ ಮಹಾ ಪ್ರಬಂಧ ಬರೆದು ತಮ್ಮ ನಾಡಿನ ಇತಿಹಾಸ, ಕಲೆ, ಸಂಸ್ಕೃತಿ ಮುಂತಾದವುಗಳನ್ನು ಪರಿಚಯಿಸಿಕೊಟ್ಟರು. ಇವರು ಲಂಡನ್ ವಿಶ್ವವಿದ್ಯಾನಿಲಯದ ಡಾಕ್ಟೊರಲ್ ಪದವಿಯನ್ನು 1937 ರಲ್ಲಿ ಪಡೆದರು.

### ಸಾಂಕಲಿಯಾ ಸಾಧನೆ

1937ರಲ್ಲಿ ಮರಳಿ ಮಾತೃಭೂಮಿಗೆ ಬಂದ ಡಾ. ಸಾಂಕಲಿಯಾರವರು ಭಾರತದೇಶದ ಪ್ರಾಗಿತಿಹಾಸವನ್ನು ಸಾಂಗೋಪಾಂಗವಾಗಿ ಪುನರ್ರಚಿಸುವ ಬೃಹತ್‌ಯೋಜನೆ ಹಾಕಿಕೊಂಡರು. ತಮ್ಮ ಪ್ರೇರಕ ಗುರುವಾದ (ಟೀಕರ) ಪವಿತ್ರ ಸ್ಮೃತಿಯನ್ನು ಸಾಕ್ಷಿಯಾಗಿಟ್ಟುಕೊಂಡು ಜ್ಞಾನಸಾಧನಮಾರ್ಗದಲ್ಲಿ ಮುನ್ನುಗ್ಗಿದರು. ಇವರು ತಮ್ಮ ಪ್ರಾಗೈತಿಹಾಸಿಕ ಸಂಶೋಧನೆಯ ಮುಹೂರ್ತಸ್ತಂಭವನ್ನು ಸ್ಥಾಪಿಸಿದ್ದು ಡೆಕ್ಕನ್ ಕಾಲೇಜಿನಲ್ಲಿ. 1939ರಿಂದ ಆ ಕಾಲೇಜಿನ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ (1971–74) ಅವಿರತ ವಾಗಿ ದುಡಿದರು. ಪುಣೆಯ ವಿದ್ಯಾಪೀಠದ ಪುರಾತತ್ವ ಇಲಾಖೆಯಲ್ಲಿ ಹಂಗಾಮಿ ಪ್ರಾಧ್ಯಾಪಕರಾಗಿ (1948–68) ಮತ್ತು ಬರೋಡ ವಿಶ್ವವಿದ್ಯಾನಿಲಯದಲ್ಲಿ ಗೌರವ ಟಾಗೋರ್ ಪ್ರಾಧ್ಯಾಪಕರಾಗಿ (1963–65) ಸೇವೆ ಸಲ್ಲಿಸಿದರು. ಹೀಗೆ ಪುಣೆಯೆ ಇವರ ಕರ್ಮಭೂಮಿಯಾಯಿತು. ಆರ್ಯಪೂರ್ವ ಪ್ರಾಗ್‌ಭಾರತ ನಡೆದುಬಂದ ದಾರಿಯನ್ನು ಗುರುತಿಸುವುದು ಇವರ ಗುರಿಯಾಗಿತ್ತು.

ಭಾರತೀಯ ಪುರಾತತ್ವ ಶೋಧನೆಯಲ್ಲಿಯ ಇದುವರೆಗಿನ ಸಾಧನೆಗಳನ್ನು ಸಮೀಕ್ಷಿಸಿದಲ್ಲಿ ಅವುಗಳ ಶ್ರೇಯಸ್ಸಿನ ಸಿಂಹಪಾಲು ಪ್ರೊ. ಎಚ್. ಡಿ. ಸಾಂಕಲಿಯಾರವರಿಗೇ ಸಲ್ಲುತ್ತದೆ. ಇವರು ಕಳೆದ ಮೂವತ್ತನಾಲ್ಕು ವರ್ಷಗಳಿಂದ ದೇಶದ ಹಲವೆಡೆ ಉತ್ಖನನ ಮಾಡಿದ್ದಾರೆ. ಭಾರತೀಯ ಪುರಾತತ್ವ ವಿಭಾಗದ ಡೈರೆಕ್ಟರ್–ಜನರಲ್‌ರ ಆಮಂತ್ರಣದ ಮೇರೆಗೆ ಡಾ. ಸಾಂಕಲಿಯಾ "ಮೊದಲನೆಯ ಗುಜರಾತ್ ಪುರಾತತ್ವ ಶೋಧನೆಯ" ನೇತಾರರಾದರು (1941–42). ಅಂದಿನಿಂದ ಇಂದಿನ ವರೆಗೆ ಸುಮಾರು ಮೂವತ್ತಾರು ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ನಿವೇಶನಗಳಲ್ಲಿ ಉತ್ಖನನ ನಡೆದಿದೆ. ಕೆಲವನ್ನು ಡಾ. ಸಾಂಕಲಿಯಾರವರೆ ಸ್ವತಃ ಮಾಡಿದ್ದಾರೆ. ಇನ್ನು ಕೆಲವನ್ನು ಡೆಕ್ಕನ್ ಕಾಲೇಜಿನ ಆಶ್ರಯದಲ್ಲಿ ಇಲ್ಲವೆ ಇವರ ಸಹೋದ್ಯೋಗಿ ಮತ್ತು ವಿದ್ಯಾರ್ಥಿಗಳೊಡನೆ ಅಥವಾ ಸ್ಥಳೀಯ ವಿಶ್ವವಿದ್ಯಾ ನಿಲಯಗಳ ಸಹಭಾಗಿತ್ವದಲ್ಲಿ ಮಾಡಿದ್ದುಂಟು. ವಿವರ ಹೀಗಿದೆ:

| ರಾಜ್ಯ | ಸ್ಥಳ | ಉತ್ಖನನದ ವರ್ಷ | ಕಾಲ |
|---|---|---|---|
| ಗುಜರಾತ್ | ಲಾಂಘನಾಜ್ | 1942–43, 1946–49, 1962–63 | ಸೂಕ್ಷ್ಮ ಶಿಲಾಯುಗ |
| | ಅಖಜ್ | 1947–48 | –ಅದೇ– |
| | ರಂಗಪುರ | 1947 | ಹರಪ್ಪ ಸಂಸ್ಕೃತಿ |
| | ದ್ವಾರಕಾ | 1952 | ಪ್ರಾಚೀನ ಇತಿಹಾಸ, |
| | ವಲಾಸನಾ | 1947–48 | ಸೂಕ್ಷ್ಮ ಶಿಲಾಯುಗ ಮುಸ್ಲಿಂ |
| | ಸೋಮನಾಥ | 1972 | ತಾಮ್ರ ಪಾಷಾಣಯುಗ |
| ಮಹಾರಾಷ್ಟ್ರ | ಕೊಲ್ಲಾಪುರ | 1945–46 | ಪ್ರಾಚೀನ ಇತಿಹಾಸ, ಮುಸ್ಲಿಂ |
| | ಜೋರ್ವೆ | 1950–51 | ತಾಮ್ರ ಪಾಷಾಣಯುಗ |
| | ನಾಸಿಕ್ | 1950–51 | ತಾಮ್ರ ಪಾಷಾಣಯುಗ ಮುಸ್ಲಿಂ |
| | ನೆವಾಸ | 1954–55, 1955–56, 1959–61 | ಮುಸ್ಲಿಂ, ಮರಾಠಾಯುಗ ದಿಂದ ತಾಮ್ರ ಪಾಷಾಣ, ಯುಗದ ವರೆಗೆ. |
| | ಚಾಂಡೋಲಿ | 1961 | ತಾಮ್ರ ಪಾಷಾಣಯುಗ |
| | ಸೋನಾಗಾಂವ್ | 1965 | –ಅದೇ– |
| | ಚಿರಕಿ | 1967–68 | ಆದಿಶಿಲಾಯುಗ |
| | ಪಂಡರಾಪುರ | 1968 | ಇತಿಹಾಸ |
| | ತ್ರಿಕೋನ | 1971 | ಪ್ರಾಚೀನ ಇತಿಹಾಸ (ಗುಹೆ ಉತ್ಖನನ) |
| | ಇನಾಂಗಾಂವ್ | 1969–70, 70–71, 71–72, 72–73–74 | ತಾಮ್ರ ಪಾಷಾಣಯುಗ |
| ಮಧ್ಯಪ್ರದೇಶ | ನಾವದಾ ಟೋಲಿ | 1953–54, 1957–59 | –ಅದೇ– |
| | ಮಹೇಶ್ವರ | 1953–54 | –ಅದೇ–, ಮುಸ್ಲಿಂ |
| | ಲಲಿತಪುರ | 1962 | ಆದಿ ಶಿಲಾಯುಗ |
| | ಮಹಾದೇವ ಪಿಪರಿಯಾ | 1963–64, 1964–65 | –ಅದೇ– |
| | ತ್ರಿಪುರಿ | 1966 | ಪ್ರಾಚೀನ ಇತಿಹಾಸ |
| | ಕಾಯಥಾ | 1968 | ತಾಮ್ರ ಪಾಷಾಣಯುಗ |
| | ದುರ್ಕಡಿನಾಲಾ (ಮಹೇಶ್ವರದ ಹತ್ತಿರ) | 1970–71 | ಆದಿ ಶಿಲಾಯುಗ |
| ಕರ್ನಾಟಕ | ತೆಕ್ಕಲಕೋಟಾ | 1964 | ನವ ಶಿಲಾಯುಗ |
| | ಸಂಗನಕಲ್ಲು | 1965 | –ಅದೇ– |

| ರಾಜ್ಯ | ಸ್ಥಳ | ಉತ್ಖನನದ ವರ್ಷ | ಕಾಲ |
|---|---|---|---|
| | ಅನಗವಾಡಿ | 1965 | ಆದಿ ಶಿಲಾಯುಗ |
| | ಹಳ್ಳೂರು | 1966–67 | ಸೂಕ್ಷ್ಮಶಿಲಾಯುಗ |
| | ತೇರದಿಲ್ | 1969 | ಬೃಹತ್ ಶಿಲಾಯುಗ |
| ರಾಜಸ್ಥಾನ | ಅಹಾರ್ | 1962 | ತಾಮ್ರ ಪಾಷಾಣಯುಗ |
| | ಬಾಗೋರ್ | 1968 | ಸೂಕ್ಷ್ಮಶಿಲಾಯುಗ |
| | ತಿಲವಾರಾ | 1967–68 | –ಅದೇ– |
| | ಅನುಪಗರ್ | 1971 | ತಾಮ್ರ ಪಾಷಾಣಯುಗ |
| ಆಂಧ್ರ ಪ್ರದೇಶ | ಪಲವಾಯಿ | 1967 | ನವ ಶಿಲಾಯುಗ |
| | ಕೊಡೆಕಲ್ | 1967–68 | –ಅದೇ– |
| | ಬಿಲ್ಲ ಸುರ್ಗಮ್ | 1971 | –ಅದೇ– (ಗುಹೆ ಉತ್ಖನನ) |
| ಅಸ್ಸಾಂ | ಗೌಹಾತಿ | 1970 | ಪ್ರಾಚೀನ ಇತಿಹಾಸ |

ಉತ್ಖನನಗಳಲ್ಲದೆ ಡಾ. ಸಾಂಕಲಿಯಾರವರು ನಮ್ಮ ದೇಶದ ನಾನಾ ಭಾಗಗಳಲ್ಲಿ ಭೂಅನ್ವೇಷಣೆ ಮಾಡಿದ್ದಾರೆ. ದೇಶದ ಅನೇಕ ನದೀ ಕಣಿವೆಗಳಲ್ಲಿ, ಗುಡ್ಡಗಾಡುಗಳಲ್ಲಿ, ಕೊಳ್ಳದಿನ್ನೆಗಳಲ್ಲಿ ತಿರುಗಾಡಿದ್ದಾರೆ. ಹೀಗೆ ಉತ್ಖನನ ಮತ್ತು ಭೂ ಅನ್ವೇಷಣೆಗಳಲ್ಲಿ ಪ್ರೊ. ಸಾಂಕಲಿಯಾರವರದು ಒಂದು ವಿಕ್ರಮ.

ಪುರಾತತ್ತ್ವ ಶೋಧನೆಗಳನ್ನು ಮಾಡುವುದು ಎಷ್ಟು ಮುಖ್ಯವೋ, ಅವುಗಳನ್ನು ಸಕಾಲದಲ್ಲಿ ಪ್ರಕಟಿಸುವುದೂ ಅಷ್ಟೇ ಅವಶ್ಯ. ಈ ದಿಸೆಯಲ್ಲಿ ಪ್ರೊ. ಸಾಂಕಲಿಯಾರವರ ಸಾಧನೆ ಸ್ತುತ್ಯಾರ್ಹ. ಸರ್ ಮಾರ್ಟಿಮರ್ ವ್ಹೀಲರರ ಮಾತಿನಲ್ಲೇ ಹೇಳುವುದಾದರೆ, "ಸಾಂಕಲಿಯಾರ ಅನೇಕ ಸದ್ಗುಣಗಳ ಪೈಕಿ, ತಮ್ಮ ಶೋಧನೆಗಳನ್ನು ಸಕಾಲದಲ್ಲಿ, ವಿವರಪೂರ್ಣವಾದ ವರದಿಗಳಲ್ಲಿ ಪ್ರಕಟಿಸುವುದೂ ಒಂದು." ಉತ್ಖನನದ ಅನಂತರ ವರದಿಗಳನ್ನು ತಯಾರಿಸುವಲ್ಲಿ ಮತ್ತು ಪ್ರಕಟಿಸುವಲ್ಲಿ ಪ್ರೊ. ಎಚ್. ಡಿ. ಸಾಂಕಲಿಯಾ ಅನುಸರಿಸುವ ಕ್ರಮ ಅನುಕರಣೀಯ. ಆಯಾ ವಿಭಾಗಗಳಿಗೆ ಸಂಬಂಧಪಟ್ಟ ಶಾಸ್ತ್ರಜ್ಞ, ತಂತ್ರಜ್ಞ ಹಾಗೂ ಕಲಾವಂತರನ್ನು ಸಂಘಟಿಸಿ, ಅವರೊಡನೆ ಸಮಾಲೋಚಿಸಿ, ಅವರೆಲ್ಲರ ಸಹ ಭಾಗಿತ್ವವನ್ನು ಸಮಾವೇಶಗೊಳಿಸಿ ಪ್ರಕಟಿಸುತ್ತಾರೆ. ಈ ವಿಷಯದಲ್ಲಿ ಗಳಿಸಿದ ಸಂಶೋಧನ ಶ್ರೇಯಸ್ಸನ್ನು ಅವರೊಂದಿಗೆ ಹಂಚಿಕೊಳ್ಳುವ ಸಾಂಕಲಿಯಾರ ನಿಸ್ವಾರ್ಥ ಬುದ್ಧಿ, ಪ್ರಾಮಾಣಿಕತೆ ಮೆಚ್ಚುವಂಥವು. ಪುರಾತತ್ತ್ವ ಶೋಧನೆಗಳನ್ನು ಪ್ರೊ. ಸಾಂಕಲಿಯಾ ಎಷ್ಟು ಕ್ರಮಬದ್ಧವಾಗಿ ಮಾಡುತ್ತಾರೊ ಅಷ್ಟೇ ಶಿಸ್ತಿನಿಂದ ಜನಸಾಮಾನ್ಯರಿಗೂ ತಿಳಿಯುವಂತೆ ತಿಳಿಯಾದ ಶೈಲಿಯಲ್ಲಿ ಪ್ರಕಟಿಸುತ್ತಾರೆ.

ಈ ಉತ್ಖನನದ ವರದಿಗಳಲ್ಲದೆ ಡಾ. ಸಾಂಕಲಿಯಾ ವಿಪುಲವಾಗಿ ಬರೆದಿದ್ದಾರೆ. ಇವರು ಪ್ರಕಟಿಸಿರುವ ಗ್ರಂಥಗಳು ಇಪ್ಪತ್ತಮೂರಕ್ಕೂ ಹೆಚ್ಚು. ಇವುಗಳಲ್ಲಿ ಸುಮಾರು ಹನ್ನೆರಡು ಸ್ವಂತ ಕೃತಿಗಳು. ಇವೆಲ್ಲವೂ ಭಾರತೀಯ ಪುರಾತತ್ತ್ವಕ್ಕೆ ನೀಡಿದ ಅಮೂಲ್ಯ ಕಾಣಿಕೆಗಳು. ಇವರು ಬರೆದಿರುವ ಸಂಶೋಧನ ಲೇಖನಗಳ ಸಂಖ್ಯೆ ಇನ್ನೂರಕ್ಕೂ ಹೆಚ್ಚು. ಪುರಾತತ್ತ್ವ, ಶಾಸನ, ಶಿಕ್ಷಣ ಕಲೆ ಮುಂತಾದ ವಿಷಯಗಳನ್ನು ಕುರಿತು ಬರೆದ ಈ ಸಂಶೋಧನ ಲೇಖನಗಳೆಲ್ಲ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಖ್ಯಾತಿಯ ಪತ್ರಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಆದರೆ ಸಾಂಕಲಿಯಾ ಮೂಲತಃ ಪುರಾತತ್ತ್ವವೇತ್ತರು. ಅವರ ಕೃತಿಗಳಲ್ಲಿ ಹೆಚ್ಚಿನವು ಪುರಾತತ್ತ್ವಕ್ಕೆ ಸಂಬಂಧಿಸಿದವು.

*Pre-history and Proto-history of India and Pakistan (1963)* ಎಂಬ ಬೃಹದ್ಗ್ರಂಥ ಡಾ. ಸಾಂಕಲಿಯಾ ಅವರ ಮೇರುಕೃತಿ. ಇದು ಪಾಕಿಸ್ತಾನವನ್ನೂ ಒಳಗೊಂಡ ಭಾರತದ ಪ್ರಾಕ್– ಮತ್ತು ಪೂರ್ವ–ಇತಿಹಾಸಕ್ಕೆ ನೀಡಿದ ಅಮೂಲ್ಯ ಕೊಡುಗೆ. (ವಿದ್ವತ್ ಪ್ರಪಂಚದಲ್ಲಿ ಮೆಚ್ಚುಗೆ ಗಳಿಸಿದ ಈ ಮಹಾಗ್ರಂಥದ ಎರಡನೆಯ ಆವೃತ್ತಿ ಸದ್ಯದಲ್ಲೆ ಪ್ರಕಟವಾಗಲಿದೆ.) ಮುಂಬಯಿ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ (1960ರ ಡಿಸೆಂಬರ್ 6–13) ಮಾಡಿದ 'ಭಗವಾನ್‌ಲಾಲ್ ಇಂದ್ರಜಿ' ಉಪನ್ಯಾಸಗಳನ್ನೆ ವಿಸ್ತರಿಸಿ ಬರೆದ ಈ ಗ್ರಂಥದಲ್ಲಿ ಪುರಾತತ್ವ ಆಕರಗಳನ್ನು ಆಧರಿಸಿ ಈ ನಾಡಿನ ಪ್ರಾಗೈತಿಹಾಸಿಕ ಜನಜೀವನ ಚಿತ್ರಿಸಿದ್ದಾರೆ.

ಇದುವರೆಗೆ ನಮ್ಮ ದೇಶಾದ್ಯಂತ ನೂರಾರು ಉತ್ಖನನಗಳಾಗಿವೆ. ಅವುಗಳ ಅಧ್ಯಯನವನ್ನು ಬಿಡಿಬಿಡಿಯಾಗಿ ಪ್ರಕಟಿಸಲಾಗಿದೆ. ಆದರೆ ಈ ಸಂಶೋಧನಗಳನ್ನೆಲ್ಲ ಒಂದೆಡೆ ಕ್ರೋಢೀಕರಿಸಿ ನೋಡುವ ವ್ಯಾಪಕವಾದ ಕಾರ್ಯವನ್ನು ಡಾ. ಸಾಂಕಲಿಯಾ ಈ ಗ್ರಂಥದಲ್ಲಿ ಮಾಡಿದ್ದಾರೆ. ಆದಿಶಿಲಾಯುಗದಿಂದ ಹಿಡಿದು ನವಶಿಲಾಯುಗ, ಕಂಚಿನ ಯುಗಗಳ ವರೆಗೆ, ಮಧ್ಯಶಿಲಾಯುಗವನ್ನು ಒಳಗೊಂಡ ಭಾರತೀಯ ಜನಜೀವನವನ್ನು ಅನೇಕ ವರ್ಷಗಳ ವರೆಗೆ ಅಧ್ಯಯನಮಾಡಿದ್ದಾರೆ. ಇದರಿಂದ ಭಾರತೀಯ ಸಂಸ್ಕೃತಿಯ ಪ್ರಾಗೈತಿಹಾಸಿಕ ಹಿನ್ನೆಲೆಯನ್ನು ಪರಿಪೂರ್ಣವಾಗಿ ಪುನರ್ರಚಿಸಲು ಸಾಧ್ಯವಾಯಿತು. ಅಲ್ಲದೆ ನಮ್ಮ ದೇಶದ ಪ್ರಾಗಿತಿಹಾಸದಲ್ಲಿ ಕಂಡುಬರುವ ಕೆಲವು ಸರ್ವಸಾಮಾನ್ಯ ತತ್ವಗಳನ್ನೂ ಗುರುತಿಸಲು ಅನುಕೂಲವಾಯಿತು. ಭೌಗೋಳಿಕವಾಗಿ ಈ ದೇಶದಲ್ಲಿ ವೈವಿಧ್ಯಗಳೇನಿದ್ದರೂ ಪ್ರಾಗೈತಿಹಾಸಿಕ ಕಾಲದಿಂದಲೂ ಸಾಂಸ್ಕೃತಿಕ ಏಕತೆ ರೂಪುಗೊಳ್ಳುತ್ತ ಬಂದಿದೆ. ಆ ಕಾಲದ ಆಯುಧಗಳ ಅಳತೆ, ಆಕಾರಗಳಲ್ಲಿ ಕಂಡುಬರುವ ಸಾಮ್ಯ ಮತ್ತು ತಂತ್ರಕೌಶಲ ಕುತೂಹಲಕಾರಿಯಾದ್ದು. ಇಂಥ ಒಂದು ಸರ್ವಮಾನ್ಯ ತತ್ವವನ್ನು ಭಾರತೀಯ ಪುರಾತತ್ವದಲ್ಲಿ ಗುರುತಿಸಿ ಅದಕ್ಕೆ ರಾಷ್ಟ್ರೀಯತ್ವವನ್ನು ತಂದುಕೊಟ್ಟವರು ಡಾ. ಸಾಂಕಲಿಯಾ.

*Stone Age Tools, Their Techniques and Probable Functions* (1964) ಎಂಬ ಇನ್ನೊಂದು ಸಚಿತ್ರಮಯ ಗ್ರಂಥದಲ್ಲಿ ಪ್ರಾಗೈತಿಹಾಸಿಕ ಮಾನವ ತಯಾರಿಸಿದ ಶಿಲಾಯುಧಗಳನ್ನು ಸಮಗ್ರವಾಗಿ ಸಮೀಕ್ಷಿಸಿದ್ದಾರೆ. ಭಾರತೀಯ ಪುರಾತತ್ವದ ಹಿನ್ನೆಲೆಯಲ್ಲಿ ಆದಿಮಾನವ ತನ್ನ ಅವಶ್ಯಕತೆಗೆ ತಕ್ಕಂತೆ ಆಯುಧಗಳನ್ನು ತಯಾರಿಸಿದ ಬಗೆ, ಅದರಲ್ಲಿ ತೋರಿಸಿದ ತಂತ್ರಕೌಶಲ ಮತ್ತು ಆಯುಧಗಳ ಉಪಯೋಗ ಮುಂತಾದ ಗಹನವಾದ ವಿಚಾರಗಳನ್ನು ಸಚಿತ್ರವಾಗಿ, ತಿಳಿಯಾದ ಶೈಲಿಯಲ್ಲಿ ವಿವರಿಸಿದ್ದಾರೆ. ಈ ಮೂಲಕ ಆ ಕಾಲದ ಜನಜೀನವದ ಚಿತ್ರಣವನ್ನು ಪುನರ್ರಚಿಸಿದ್ದಾರೆ. ಈ ಗ್ರಂಥ ಪುರಾತತ್ವ ವಿದ್ಯಾರ್ಥಿಗಳಿಗೆಲ್ಲ ಒಂದು ಅಮೂಲ್ಯವಾದ ಕೈಪಿಡಿಯಂತಿದೆ.

ಇತ್ತೀಚೆಗೆ ಡಾ. ಸಾಂಕಲಿಯಾರವರು ತಮ್ಮ ಉತ್ಖನನಗಳಲ್ಲಿ ನವೀನ ಕ್ರಮವನ್ನು ಅನುಸರಿಸತೊಡಗಿದ್ದಾರೆ. ಇತಿಹಾಸಪೂರ್ವಕಾಲದ ಜನಜೀವನದ ಸಂಪೂರ್ಣ ಚಿತ್ರಣವನ್ನು ಪಡೆಯುವ ಉದ್ದೇಶದಿಂದ ಅತ್ಯಾಧುನಿಕ ರೀತಿಯಲ್ಲಿ ಉತ್ಖನನ ಮಾಡತೊಡಗಿದ್ದಾರೆ. ಇನಾಂಗಾಂವ್ ಉತ್ಖನನವನ್ನು ಇಲ್ಲಿ ಸ್ಮರಿಸಬಹುದು. ತಾಮ್ರಪಾಷಾಣ ಯುಗದ (Chalcolithic) ಗ್ರಾಮಜೀವನವನ್ನು ಪರಿಪೂರ್ಣವಾಗಿ ಚಿತ್ರಿಸುವ ಉದ್ದೇಶದಿಂದ ಕಳೆದ 3–4 ವರ್ಷಗಳಿಂದಲೂ ಸತತವಾಗಿ ಪ್ರಯತ್ನಿಸುತ್ತಿದ್ದಾರೆ. ಆ ಕಾಲದ ಜನರ ಮನೆ ಮತ್ತು ಸಮಾಧಿಗಳು, ಧಾನ್ಯಗಳನ್ನು ಸಂಗ್ರಹಿಸಿಡುವ ಕಣಜ, ಮಡಕೆಗಳನ್ನು ಸುಡುವ ಒಲೆ (Kiln) ಮುಂತಾದವನ್ನು ಭೂಮಿಯಿಂದ ಹೊರತೆಗೆದಿದ್ದಾರೆ. ದಖ್ಖನ್ನಿನಲ್ಲಿ ಇದುವರೆಗೆ ನಡೆಸಿದ ಉತ್ಖನನಗಳಲ್ಲೆ ಇದು ಅತ್ಯಂತ ಫಲಕಾರಿಯಾಗಿದೆ.

ಅಮೆರಿಕ, ಜರ್ಮನಿ, ಫ್ರಾನ್ಸ್ ಮುಂತಾದ ದೇಶಗಳಲ್ಲಿ ಪುರಾತತ್ವವೇತ್ತರು 'ಬೈಬಲ್' ಮುಂತಾದ ಪ್ರಾಚೀನ ಪವಿತ್ರಗ್ರಂಥಗಳನ್ನು ಆಧರಿಸಿ ಉತ್ಖನನ ಮಾಡತೊಡಗಿದ್ದಾರೆ. ಈ ಜ್ಞಾನ ಕ್ಷೇತ್ರವನ್ನು 'ಗ್ರಂಥಾಧಾರ ಪುರಾತತ್ವ' (Text-aided archaeology) ಎಂದು ಕರೆಯಬಹುದು. 'ಬೈಬಲ್'ನಲ್ಲಿ ವರ್ಣಿಸಲಾಗಿರುವ ಕೋಟೆಕೊತ್ತಲ, ಅರಮನೆ ಮುಂತಾದವುಗಳಿಗೆ ಪುರಾತತ್ವ ಪ್ರಮಾಣಗಳಿವೆಯೆ–ಎಂಬುದನ್ನು ಅವರು ಪರೀಕ್ಷಿಸತೊಡಗಿದ್ದಾರೆ. ಇಂಥ ಒಂದು ಹೊಸ ಕ್ರಮವನ್ನು ಭಾರತದಲ್ಲಿ ಆರಂಭಿಸಿದವರು ಡಾ. ಸಾಂಕಲಿಯಾ (ಈ ಹಿಂದೆ ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್

ಮತ್ತು ಜಾನ್ ಮಾರ್ಷಲ್ ಈ ದಿಶೆಯಲ್ಲಿ ಮಾಡಿದ ಕಾರ್ಯವನ್ನು ಮರೆಯುವಂತಿಲ್ಲ.) ನಮ್ಮ ದೇಶದ ವೇದ ವೇದಾಂಗಗಳಲ್ಲಿ. ಪುರಾಣಗಳಲ್ಲಿ. ಮಹಾಕಾವ್ಯಗಳಲ್ಲಿ ವರ್ಣಿಸಿರುವಂತೆ ಈ ನಾಡಿನ ಗತವೈಭವಕ್ಕೆ ಪುರಾತಾತ್ವಿಕ ಪ್ರಮಾಣಗಳಿವೆಯೆ? ಇರುವುದಾದರೆ ಅವುಗಳನ್ನಾಧರಿಸಿ ನಾಡಿನ ಪೂರ್ವೇತಿಹಾಸವನ್ನು ಎಷ್ಟರಮಟ್ಟಿಗೆ ವಸ್ತುನಿಷ್ಠವಾಗಿ ಚಿತ್ರಿಸಲು ಸಾಧ್ಯ? ಡಾ. ಸಾಂಕಲಿಯಾರವರು ಈಗಾಗಲೆ ಕೈಗೊಂಡ ರಾಮಾಯಣದ ಆಳವಾದ ಅಧ್ಯಯನ ಈ ದೃಷ್ಟಿಯಿಂದ ಕೂಡಿದ್ದು. ಪುರಾತಾತ್ವಿಕ ದೃಷ್ಟಿಯಿಂದ ಶ್ರೀಮದ್ರಾಮಾಯಣದ ಕಾಲಪರಿಗಣನೆಯನ್ನು ಮಾಡುವುದಲ್ಲದೆ ಅದರಲ್ಲಿ ವರ್ಣಿಸಿರುವ ಸ್ಥಳ. ಜನಜೀವನವನ್ನು ಪರಿಶೀಲಿಸುವುದು ಸಾಂಕಲಿಯಾರವರ ಗುರಿಯಾಗಿದೆ. ರಾಮಾಯಣದ ಲಂಕೆಯ ವಿಚಾರವಾಗಿ. ಅಲ್ಲಿ ಬರುವ ರಾಕ್ಷಸರ. ವಾನರರ ವಿಚಾರವಾಗಿ ಸಾಂಕಲಿಯಾರವರು ಮಂಡಿಸುವ ವಾದಗಳು ಬಹುಶಃ ವಿಕಮ್ಮುಖವಾಗಿ ತೋರಬಹುದು. ಅಥವಾ ಅವರು ಕೊಡುವ ಉದಾಹರಣೆಗಳ ಮತ್ತು ಆಧಾರಗಳ ಸಾಧುತ್ವವನ್ನೆ ಪ್ರಶ್ನೆಮಾಡಬಹುದು. ಅದೇನೇ ಇರಲಿ. ಡಾ. ಸಾಂಕಲಿಯಾರವರ ಸಿದ್ಧಾಂತಗಳಿಗೆ ಗೌರವವಿದ್ದೇ ಇದೆ. ನಮ್ಮ ಇತಿಹಾಸ. ಪುರಾಣ. ಮಹಾಕಾವ್ಯಗಳನ್ನು ಪುರಾತತ್ವದ ದೃಷ್ಟಿಯಿಂದ. ಸ್ವತಂತ್ರವಾಗಿ ಹೇಗೆ ಅಧ್ಯಯನ-ಸಂಶೋಧನೆಗಳನ್ನು ಮಾಡಬಹುದು. ಮಾಡಬೇಕು. ಎಂಬುದು ಇಲ್ಲಿ ಪರಿಶೀಲನಯೋಗ್ಯ. ಭಾರತೀಯ ಪುರಾತತ್ವದ ಅರುಣೋದಯದ ಕಾಲದಲ್ಲಿರುವ ನಾವು ಡಾ. ಸಾಂಕಲಿಯಾರವರ ಕೊಡುಗೆಗಳ ಪೂರ್ಣ ಮೌಲ್ಯಮಾಪನ ಮಾಡುವುದು ಕಷ್ಟ. ಒಟ್ಟಿನಲ್ಲಿ ನಮ್ಮ ದೇಶದ ಪುರಾತತ್ವಕ್ಕೆ ಹೊಸ ಆಯಾಮಗಳನ್ನು ರಚಿಸಿದ ಕೀರ್ತಿ ಡಾ. ಸಾಂಕಲಿಯಾರವರದು.

ಪುರಾತತ್ವ ಒಂದು ಕಾಲದಲ್ಲಿ ಕೇಂದ್ರ ಇಲ್ಲವೆ ರಾಜ್ಯ ಸರ್ಕಾರಗಳಲ್ಲಿರುವ ಪುರಾತತ್ವ ವಿಭಾಗಗಳ ಗುತ್ತಿಗೆಯಾಗಿತ್ತು. ಈ ಮಿತಿಮಂತಿಕೆಯನ್ನು ಕಿತ್ತೊಗೆದು ವಿಶ್ವವಿದ್ಯಾನಿಲಯಗಳೂ. ಸಂಶೋಧನ ಸಂಸ್ಥೆಗಳೂ ಆಧುನಿಕ ರೀತಿಯಲ್ಲಿ ಉತ್ಖನನ ಮಾಡಬಹುದು-ಎಂಬುದನ್ನು ತೋರಿಸಿಕೊಟ್ಟವರು ಡಾ. ಸಾಂಕಲಿಯಾ. ಅಲ್ಲದೆ ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಪುರಾತತ್ವದ ಅಧ್ಯಯನ. ಅಧ್ಯಾಪನ ಮತ್ತು ಸಂಶೋಧನೆಗಳನ್ನು ಮಾಡುವಂತೆ ಇವರು ಪ್ರೋತ್ಸಾಹಿಸಿದರು. ಪುರಾತತ್ವ ಪಂಡಿತರ ಸ್ವತ್ತಾಗ ಕೂಡದು: ಅದು ಜನಸಾಮಾನ್ಯರಿಗೂ ತಿಳಿಯುವಂತಿರಬೇಕು ಎಂಬ ದೃಷ್ಟಿಯಿಂದ ಪುರಾತಾತ್ವಿಕ ವಿಷಯವಾಗಿ ಪ್ರಾಂತೀಯ ಭಾಷೆಗಳಲ್ಲಿ (ಹಿಂದಿ. ಗುಜರಾತಿ. ಮರಾಠಿ ಮುಂತಾದ ಭಾಷೆಗಳಲ್ಲಿ) ಇವರು ಗ್ರಂಥಗಳನ್ನು ಬರೆದರು. ಭಾರತದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಉತ್ಖನನ ನಡೆಸುವಾಗ ವಸ್ತು ಪ್ರದರ್ಶನ. ಭಾಷಣ ಮುಂತಾದವುಗಳ ಮುಖಾಂತರ ಇವರು ಜನಮನವನ್ನು ಸೆಳೆದಿದ್ದಾರೆ.

ಕರ್ನಾಟಕದ ಪುರಾತತ್ವಕ್ಕೆ ಡಾ. ಸಾಂಕಲಿಯಾ ಸಲ್ಲಿಸಿದ ಸೇವೆಯನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಬಳ್ಳಾರಿ. ಸಂಗನಕಲ್ಲು. ತೆಕ್ಕಲಕೋಟ. ಹಳ್ಳೂರ್. ತೇರ್‌ದಲ್ ಮುಂತಾದ ಪ್ರದೇಶಗಳಲ್ಲಿ ಅವರು ಇಲ್ಲವೇ ಅವರ ಶಿಷ್ಯರು ಉತ್ಖನನ ನಡೆಸಿದ್ದಾರೆ: ನವಶಿಲಾಯುಗದಲ್ಲಿ ಕರ್ನಾಟಕದ ಪಾತ್ರ ವೇನಿತ್ತೆಂಬುದನ್ನು ನಿಷ್ಕರ್ಷಿಸಿದ್ದಾರೆ. ಅಲ್ಲದೆ ಈ ನಿಟ್ಟಿನಲ್ಲಿ ಹೆಚ್ಚಿನ ಕೆಲಸ ಮಾಡುವಂತೆ ಕರ್ನಾಟಕದ ತರುಣ ಪುರಾತತ್ವಜ್ಞರಿಗೆ ಇವರು ತರಬೇತಿ ನೀಡಿದ್ದಾರೆ. ಇದುವರೆಗೆ ಆಗಿರುವ ಪುರಾತತ್ವ ಶೋಧನೆಗಳಲ್ಲಿ ಹೆಚ್ಚಿನವು ಡಾ. ಸಾಂಕಾಲಿಯಾರ ಶಿಷ್ಯರಿಂದಲೇ ಆಗಿವೆಯೆಂಬುದು ಗಮನಾರ್ಹ.

## ಸಾಂಕಲಿಯಾ ಪರಂಪರೆ

ಕಳೆದ ಮೂವತ್ತನಾಲ್ಕು ವರ್ಷಗಳಲ್ಲಿ ಡಾ. ಸಾಂಕಲಿಯಾರವರು ತರುಣ ಪುರಾತತ್ವಜ್ಞರ ದೊಡ್ಡ ತಂಡವನ್ನೆ ಸೃಷ್ಟಿಸಿ ಪ್ರಾಚ್ಯವಸ್ತು ಸಂಶೋಧನ ಕ್ಷೇತ್ರಕ್ಕೆ ಅವರನ್ನು ಆವಾಹಿಸಿದ್ದಾರೆ. ಭಾರತೀಯ ಪುರಾತತ್ವದ ಅಧ್ಯಯನದಲ್ಲಿ ಶಾಸ್ತ್ರಬದ್ಧವಾದ ಒಂದು ಕ್ರಮ ಶಾಶ್ವತವಾಗಿ ಇರಬೇಕೆಂಬುದನ್ನು ಸ್ವತಃ ತೋರಿಸಿಕೊಡುವುದರ ಮೂಲಕ ಇವರು ಒಂದು ಪರಂಪರೆಯನ್ನು ಹಾಕಿಕೊಟ್ಟರು. ಇವರು ಅಂತರ್‌ಭಾರತೀಯ ಪುರಾತತ್ವದ ವಿಷಯವಾಗಿ ಸಮಾಲೋಚಿಸುವ ಸರ್ವಪ್ರಥಮ ಯೋಜನೆಯ ಜನಕರು. ಇಂಥ ಯಾವುದೇ ಒಂದು ಯೋಜನೆಯನ್ನು ಅತ್ಯಂತ ಧೈರ್ಯದಿಂದ-ಜಿಗುಟುತನದಿಂದ ಕೂಡ-ಸಫಲಗೊಳಿಸುವುದರಲ್ಲಿ ಸಾಂಕಲಿಯಾ ನಿಸ್ಸೀಮರು. 1964ರ ವಸಂತಮಾಸದಲ್ಲಿ ಸಮಾವೇಶ

ಗೊಂಡಿದ್ದ ಅಖಿಲ ಭಾರತೀಯ ಪ್ರಾಗಿತಿಹಾಸ ವಿಚಾರಗೋಷ್ಠಿಯನ್ನೂ ಇಲ್ಲಿ ಉದಾಹರಿಸಬಹುದು. ದೇಶದ ನಾನಾ ವಿಶ್ವವಿದ್ಯಾನಿಲಯಗಳಿಂದ, ಸಂಶೋಧನ ಸಂಸ್ಥೆಗಳಿಂದ ಅನೇಕ ಪುರಾತತ್ವ ಪಂಡಿತರನ್ನು ಸಮಾವೇಶಗೊಳಿಸಿ ಭಾರತೀಯ ಪುರಾತತ್ವದ ಪ್ರಗತಿಯನ್ನು ಕುರಿತು ಸಿಂಹಾವಲೋಕನ ಮಾಡಿದರು. ಇದುವರೆಗೆ ನಡೆಸಿದ ಪುರಾತತ್ವ ಶೋಧನೆಗಳ ಮೌಲ್ಯಮಾಪನ ಮಾಡಿದರು. ಇತ್ತೀಚೆಗೆ (ಜೂನ್ 1974) ಇನ್ನೊಂದು ವಿಚಾರಗೋಷ್ಠಿ ಏರ್ಪಟ್ಟಿತ್ತು; ಕಳೆದ ಒಂದು ದಶಕದಲ್ಲಿ ಆದ (1964ರಿಂದೀಚೆಗೆ) ಪುರಾತತ್ವ ಅಧ್ಯಯನದ ಸಮೀಕ್ಷೆ ನಡೆಯಿತು. ಅಲ್ಲದೆ ಇವರು ಭಾರತೀಯ ಪುರಾತತ್ವದ ಸಮಗ್ರ ಪರಿಚಯವನ್ನು ತರುಣರಿಗೆ ಮಾಡಿಕೊಡಿಸುವ ಉದ್ದೇಶದಿಂದ ವಿಶ್ವವಿದ್ಯಾನಿಲಯಗಳ ಧನ ಸಹಾಯ ಆಯೋಗದ ಆಶ್ರಯದಲ್ಲಿ ಒಂದು ಹೊಸ ಪ್ರಯೋಗ ಮಾಡಿದರು. 1973ರ ಬೇಸಿಗೆ ರಜೆಯಲ್ಲಿ (ಮೇ–ಜೂನ್) ಒಂದು ತಿಂಗಳ ಪರ್ಯಂತ ಅಖಿಲ ಭಾರತ ಮಟ್ಟದಲ್ಲಿ ಬೇಸಿಗೆಯ ಶಿಬಿರ ಏರ್ಪಟ್ಟಿತ್ತು. ಉಪನ್ಯಾಸ, ಪ್ರಯೋಗ ಮತ್ತು ಕ್ಷೇತ್ರದರ್ಶನಗಳ ಮೂಲಕ ಇವರು ಪುರಾತತ್ವದ ಪರಿಚಯ ಮಾಡಿಕೊಟ್ಟರು. ಭಾರತೀಯ ಪುರಾತತ್ವದ ಅಧ್ಯಯನ, ಅಧ್ಯಾಪನ, ಸಂಶೋಧನೆ ಮತ್ತು ಪ್ರಸಾರ ಗಳಿಗೆ ಅನುಕೂಲವಾಗುವಂತೆ ಸುವ್ಯವಸ್ಥಿತವಾದ ಒಂದು ಕಟ್ಟಡವನ್ನು ಕಟ್ಟಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಅದಕ್ಕೆ ತಕ್ಕ ಪ್ರಯೋಗಾಲಯ, ವಾಚನಾಲಯ, ವಸ್ತುಸಂಗ್ರಹಾಲಯ ಮತ್ತು ಚಿತ್ರಾಲಯ ಗಳನ್ನು ಇವರು ಸೇರಿಸಿದ್ದಾರೆ. ಅಲ್ಲದೆ ದೇಶದ ನಾನಾಭಾಗಗಳಿಂದ ಪುರಾತತ್ವ ಪರಿಣತ ಅಧ್ಯಾಪಕರನ್ನು ಕರೆಸಿಕೊಂಡಿದ್ದಾರೆ. ಭಾರತೀಯ ಪುರಾತತ್ವದ ಒಂದು ಕುಟುಂಬವನ್ನೆ ಸ್ಥಾಪಿಸಿದ್ದಾರೆ. ತಮ್ಮ ಸಹೋ ದ್ಯೋಗಿಗಳನ್ನೆಲ್ಲ ಒಂದೇ ಕುಟುಂಬದವರಂತೆ ಪ್ರೀತಿವಾತ್ಸಲ್ಯಗಳಿಂದ ನೋಡಿಕೊಳ್ಳುವ ಪರಿಪಾಟಿ ಯನ್ನು ಹಾಕಿಕೊಟ್ಟಿದ್ದಾರೆ. ಅತೀವ ನಿಷ್ಠೆ, ಸತತ ಪರಿಶ್ರಮ ಮತ್ತು ಸಮಗ್ರಜ್ಞಾನದಿಂದ ಪುರಾತತ್ವ ದಲ್ಲಿ ಎಂಥ ಮಹಾ ಸಾಧನೆ ಮಾಡಬಹುದೆಂಬುದಕ್ಕೆ ಇವರು ಮಾದರಿ. ಅಂತೆಯೇ ಇಂದು ಡೆಕ್ಕನ್ ಕಾಲೇಜು ಪುರಾತತ್ವ ಕ್ಷೇತ್ರದಲ್ಲಿ ಒಂದು ಉಚ್ಚ ಸಂಸ್ಥೆ. ಇದನ್ನು 'ಸಾಂಕಲಿಯಾ ಸ್ಕೂಲ್' ಎಂದೇ ಕರೆಯಬಹುದು. 'ಸಾಂಕಲಿಯಾ ಪರಂಪರೆ'ಯಲ್ಲಿ ದೀಕ್ಷೆ ಹೊಂದಿದವರ ಸಂಖ್ಯೆ ಗಣನೀಯವಾದ್ದು. ಇವರ ವಿದ್ವತ್ಪೂರ್ಣ ಮಾರ್ಗದರ್ಶನದಲ್ಲಿ ಇದುವರೆಗೆ ನಲವತ್ತು ಮಂದಿ ವಿದ್ವಾಂಸರು ಪಿಎಚ್.ಡಿ.ಪದವಿ ಗಳಿಸಿದ್ದಾರೆ. ಇವರ ಈ ಶಿಷ್ಯಪರಂಪರೆಯಲ್ಲಿ ಸ್ವದೇಶ ವಿದೇಶಗಳ ಅನೇಕ ವಿದ್ವಾಂಸರಿದ್ದಾರೆ. ದೇಶದ, ವಿಶ್ವದ ಬೇರೆ ಬೇರೆ ಕಡೆಗಳಿಂದ ಅನೇಕ ಜ್ಞಾನಾರ್ಥಿಗಳು ಡಾ. ಸಾಂಕಲಿಯಾರನ್ನು ಹುಡುಕಿ ಕೊಂಡು ಬರುತ್ತಾರೆ. ಅವರಿಂದ ತರಬೇತಿಹೊಂದಿದವರು ಇಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪುರಾತತ್ವ ವಿಭಾಗದಲ್ಲಿ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಸಂಶೋಧನ ಸಂಸ್ಥೆಗಳಲ್ಲಿ ಗೌರವಾನ್ವಿತ ಹುದ್ದೆಯಲ್ಲಿದ್ದಾರೆ.

## ವ್ಯಕ್ತಿತ್ವ

ಡಾ. ಸಾಂಕಲಿಯಾ ಕೃಶ ಶರೀರಿ. ತೆಳ್ಳಗೆ, ಬೆಳ್ಳಗೆ, ಗಾಳಿಯಲ್ಲಿ ತೂರಿ ಹೋಗುವಂತಿದ್ದಾರೆ. ಸಾದಾ ಭಾರತೀಯ ಉಡುಪು. ಮುಖದಲ್ಲಿ ಮತ್ತು ನಡಿಗೆಯಲ್ಲಿ ವಿದ್ಯಾವಿನಯ ಸಂಪನ್ನತೆ. ಇವರದು, ಸೌಮ್ಯವ್ಯಕ್ತಿತ್ವ. ಮಾತಿಗಿಂತ ಕೃತಿಯಲ್ಲಿ ಹೆಚ್ಚಿನ ನಂಬಿಕೆ. ಕುಸುಮದಷ್ಟು ಕೋಮಲರು. ಮೃದು ಸ್ವಭಾವದವರಾದರೂ ಪ್ರಸಂಗ ಬಂದಾಗ ವಜ್ರದಂತೆ ಕಠೋರರಾಗಬಲ್ಲರು. ಪ್ರಶಸ್ತಿ, ಸನ್ಮಾನ ಹೊಗಳಿಕೆಗಳನ್ನು ಇವರು ಬೆನ್ನಟ್ಟಿದವರಲ್ಲ. ಅವೇ ಇವರನ್ನು ಹುಡುಕಿ ಬಂದದ್ದುಂಟು. ಅನೇಕ ಸುವರ್ಣ, ರಜತ ಪದಕಗಳೂ ಪ್ರಶಸ್ತಿಗಳೂ ಗೌರವ ಪದವಿಗಳೂ ಇವರಿಗೆ ಅಯಾಚಿತವಾಗಿ ಬಂದಿವೆ. ಭಗವಾನ್ ಲಾಲ್ ಇಂದ್ರಜಿ ಪ್ರಶಸ್ತಿ (ಮುಂಬಯಿ, 1933). ರಾಯಲ್ ಏಷ್ಯಾಟಿಕ್ ಸೊಸೈಟಿಯ ರಜತಪದಕ (ಮುಂಬಯಿ, 1944), ಗುಜರಾತ್ ಸಾಹಿತ್ಯಸಭೆಯ ಸುವರ್ಣಪದಕ (ಅಹಮದಾಬಾದ್, 1967), ದಾದಾಭಾಯಿ ನವರೋಜಿ ಪ್ರಶಸ್ತಿ (1968), ಇವು ಕೆಲವು. ನೆಹರೂ ಸ್ಮಾರಕನಿಧಿಯವರು ನೀಡಿದ ಪ್ರಪ್ರ ಥಮ'ನೆಹರೂ ಫೆಲೋಷಿಪ್' ಪಡೆದ ಆರು ಮಂದಿ ಶ್ರೇಷ್ಠ ವಿದ್ವಾಂಸರಲ್ಲಿ ಡಾ. ಸಾಂಕಲಿಯಾ ಒಬ್ಬರು (1968–70). ಭಾರತ ಸರ್ಕಾರ ಕಳೆದ ಗಣರಾಜ್ಯೋತ್ಸವದಂದು (ಜನವರಿ 1974) ಇವರಿಗೆ 'ಪದ್ಮಭೂಷಣ' ಗೌರವ ಪದವಿ ನೀಡಿ ಗೌರವಿಸಿತು.

ಡಾ ಸಾಂಕಲಿಯಾ ದೇಶವಿದೇಶಗಳಲ್ಲಿ. ಅನೇಕ ಸಂಶೋಧನ ಸಂಘ ಸಂಸ್ಥೆಗಳಲ್ಲಿ ಸಹಭಾಗಿತ್ವವುಳ್ಳವರು. ಪುರಾತತ್ವದ ವಿಷಯವಾಗಿ ನಾನಾ ಕಡೆಗಳಲ್ಲಿ ರಾಷ್ಟ್ರೀಯ ಸ್ಮಾರಕ ಭಾಷಣಗಳನ್ನು, ಪ್ರಚಾರೋಪನ್ಯಾಸಗಳನ್ನು ಮಾಡಿ ಬಂದವರು. ಅನೇಕ ಸಾಂಸ್ಕೃತಿಕ ನಿಯೋಗಗಳ ನೇತಾರರಾಗಿ ಪ್ರಪಂಚ ಪರ್ಯಟನ ಮಾಡಿದ್ದಾರೆ. ಸೋವಿಯೆತ್ ದೇಶ, ಅಮೆರಿಕ, ಇಂಗ್ಲೆಂಡ್, ಯುಗೊಸ್ಲಾವಿಯ, ಇರಾಕ್, ಇರಾನ್ ಮುಂತಾದ ದೇಶಗಳಿಗೆ ಇವರು ಭೇಟಿ ನೀಡಿದ್ದಾರೆ. ಇವರು ರಾಯಲ್ ಏಷ್ಯಾಟಿಕ್ ಸೊಸೈಟಿ (ಮುಂಬಯಿ), ಭಂಡಾರ್‌ಕರ್ ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್' (ಪುಣೆ), 'ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯ', 'ಆರ್ಕಿಯೋಲಾಜಿಕಲ್ ಸೊಸೈಟಿ ಆಫ್ ಇಂಡಿಯ' ಮುಂತಾದ ರಾಷ್ಟ್ರೀಯ ಸಂಸ್ಥೆಗಳ ಸದಸ್ಯರು. ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳ 'ಪುರಾತತ್ವ ಸಲಹಾ ಮಂಡಳಿ'ಗಳಲ್ಲಿ ಬಹುಕಾಲದಿಂದ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ಇಂಗ್ಲೆಂಡಿನ ಸೌತಾಂಪ್ಟನ್ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುವ (*World Archaeology*) ಎಂಬ ಪತ್ರಿಕೆಯ ಸಲಹಾ-ಸಂಪಾದಕರಾಗಿದ್ದಾರೆ. ಇಟಲಿಯ ಒಂದು ಪುರಾತತ್ವ ಸಂಸ್ಥೆಯ (Instituto Italiano DiPrehistoria E Protohistoria) ಗೌರವ ಸದಸ್ಯರಾಗಿದ್ದಾರೆ. ಅಲ್ಲದೆ Permanant Council of the International Congress of Prehistoric and Protohistoric Science ಎಂಬ ಸಂಸ್ಥೆಯ ಚುನಾಯಿತ ಸದಸ್ಯರು. ಮೇಲಾಗಿ ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪರಿಷತ್ತುಗಳಲ್ಲಿ, ಸಮ್ಮೇಳನಗಳಲ್ಲಿ ಮತ್ತು ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಇಷ್ಟೆಲ್ಲ ಖ್ಯಾತಿ ಗಳಿಸಿಯೂ ಡಾ. ಸಾಂಕಳಿಯಾ ವಿದ್ಯಾವಿನಯ ಸಂಪನ್ನರಾಗಿದ್ದಾರೆ. ಸರಳತೆ, ಸ್ವಚ್ಛತೆ, ಸ್ಪಷ್ಟತೆಗಳ ಮೂರ್ತಿವೆತ್ತ ಮಹಾಪುರುಷರಾಗಿದ್ದಾರೆ.

ಅರುವತ್ತಾರರಲ್ಲೂ ಅಮಿತೋತ್ಸಾಹ, ಸತತವಾಗಿ ದುಡಿಯುವ ಸಾಮರ್ಥ್ಯ. ತಮ್ಮ 'ತನು ಮನ ಧನ'ವನ್ನೂ ಡೆಕ್ಕನ್ ಕಾಲೇಜಿಗೆ, ಆಮೂಲಕ ಭಾರತೀಯ ಪುರಾತತ್ವಕ್ಕೆ, ಧಾರೆಯೆರೆದು ನಿರ್ದೇಶಕತ್ವದಿಂದ ಇತ್ತೀಚೆಗೆ ನಿವೃತ್ತರಾಗಿದ್ದಾರೆ. ಆದರೆ ಪುರಾತತ್ವದಲ್ಲಿ ಇನ್ನೂ ಹೆಚ್ಚು ಪ್ರವೃತ್ತರಾಗಿದ್ದಾರೆ. ಕಾಲೇಜಿನ ಆವರಣದಲ್ಲೇ ಇರುವ 'ಸಚ್ಚಿದಾನಂದ'ದಲ್ಲಿ ಅವರ ವಾಸ.

ಡಾ. ಸಾಂಕಳಿಯಾರವರು ಬರೆದ ಇತರ ಕೃತಿಗಳಲ್ಲಿ ಅತಿ ಮುಖ್ಯವಾದವು ಇವು: 1 *Archaeology of Gujarat*, Bombay 1941 (ಪಿಎಚ್.ಡಿ. ಮಹಾಪ್ರಬಂಧ). 2 *The Godavari Paleolithic Industry*, Poona, 1952, 3 *Pre- and Protohistory of Malwa*, Poona, 1949, 4 *Indian Archaeology Today*, Bombay, 1962, 5 *Excavations at Langhnaj*, Poona, 1966, 6 *Mesolithic and Pre-Mesolithic Industries from the Excavations at Sanganakallu*, Bellary, 1965, 969, 7 *Some Aspects of Prehistoric Technology*, New Delhi, 1970. ಉತ್ಖನನಗಳ ವರದಿಗಳು (ಇತರರೊಂದಿಗೆ): 1 *Excavations at Kolhapur*, Poona, 1952, 2 *The Excavations at Nasik and Jorwe*, Poona, 1955, 3 *Excavations at Maheswar and Navdatoli*, Poona, 1958, 4 *From History to Prehistory at Nevasa*, Poona, 1960, 5 *Excavations at Ahar*, Poona, 1969, 6 *The Chalcolithic Navdatoli*, Poona-Baroda, 1971.

ಕಂಠೀರಾವ್

# ಕಾನೂನುಗಳ ಅನುವಾದ ಸಮಸ್ಯೆ

## ಹಿನ್ನೆಲೆ

ಭಾರತಾದ್ಯಂತ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆದಾಗ, ಸ್ವಾತಂತ್ರ್ಯ ಪ್ರಾಪ್ತಿಯ ಅನಂತರ ಭಾರತದ ಭಾಷಾ ನೀತಿ ಹೇಗಿರಬೇಕೆಂಬ ಬಗ್ಗೆ ಚರ್ಚೆ ನಡೆಯುತ್ತಿತ್ತು. ಕಾಂಗ್ರೆಸ್ ಅಧಿವೇಶನಗಳಲ್ಲಿ ಕೂಡ ಈ ವಿಷಯವನ್ನು ಕುರಿತಾದ ವಾದವಿವಾದಗಳು ಆಗಾಗ ತಲೆದೋರುತ್ತಿದ್ದುವು. ತೀವ್ರಗತಿಯಿಂದ ಔದ್ಯಮಿಕ ಮತ್ತು ತಾಂತ್ರಿಕ ಬದಲಾವಣೆಯಾಗುತ್ತಿರುವ ಜಗತ್ತಿನಲ್ಲಿ ಅಂತರರಾಷ್ಟ್ರೀಯ ಭಾಷಾ ಸಂಪರ್ಕವನ್ನು ಬೆಳಸಿಕೊಳ್ಳುವುದು ಅನಿವಾರ್ಯವೆಂಬುದು ನಿರ್ವಿವಾದವಾದ ಮಾತಾಗಿದೆ. ಹೀಗೆ ಜಗತ್ತಿನ ಬಹುಭಾಗದಲ್ಲಿ ಪ್ರಚಲಿತವಿರುವ ಇಂಗ್ಲಿಷ್ ಭಾಷೆಯೊಂದಿಗೆ ಸಂಪರ್ಕವಿಟ್ಟುಕೊಂಡೂ ಅನೇಕ ಪಾಶ್ಚಾತ್ಯ ಪೌರಸ್ತ್ಯ ರಾಷ್ಟ್ರಗಳು ತಮ್ಮ ಆಂತರಿಕ ವ್ಯವಹಾರಕ್ಕೆ ತಮ್ಮ ದೇಶಭಾಷೆಗಳನ್ನೇ ಬಳಸಿಕೊಳ್ಳುತ್ತಿರುವ ಅಂಶ ನಮ್ಮ ರಾಷ್ಟ್ರನಾಯಕರ ಗಮನ ಸೆಳೆಯಿತು. ಅಷ್ಟೇ ಅಲ್ಲ, ವಿದೇಶಗಳ ನಾಡುನುಡಿಗಳ ಬೆಳವಣಿಗೆಯನ್ನು ಅಭ್ಯಸಿಸಿದ ಶಾಸ್ತ್ರವೇತ್ತರಿಗೆ ಸ್ವಭಾಷಾ ಅಭಿಮಾನವೂ ಜಾಗೃತವಾಯಿತು.

ಹೀಗಾಗಿ, ದೇಶದ ದಾಸ್ಯ ವಿಮೋಚನೆಯಾದ ಬಳಿಕ ನಮ್ಮ ರಾಷ್ಟ್ರದ ಭೌಗೋಲಿಕ ಚಿತ್ರ ಮಾರ್ಪಡಬೇಕೆಂದು, ಭಾಷಾನುಗುಣ ಪ್ರಾಂತಗಳ ರಚನೆಯಾಗಬೇಕೆಂದು ಮತ್ತು ಇಂಗ್ಲಿಷ್‌ನ ಸ್ಥಾನವನ್ನು ಭಾರತೀಯ ಭಾಷೆ ತುಂಬಬೇಕೆಂದು ಧ್ಯೇಯವಿಟ್ಟುಕೊಳ್ಳಲಾಯಿತು. ಹಿಂದೀ ಭಾಷೆ ಇಡೀ ಭಾರತಕ್ಕೆ ಸಂಪರ್ಕ ಭಾಷೆ (ಲಿಂಗ್ವ ಫ್ರಾಂಕ) ಆಗಬೇಕು ಎಂಬ ವಾದವೂ ದಿನೇದಿನೇ ಪ್ರಬಲವಾಗತೊಡಗಿತು.

ಉತ್ತರ ಭಾರತದಲ್ಲಿ ಸಂಸ್ಕೃತ, ಪ್ರಾಕೃತಗಳ ಹಿಡಿತ ತಪ್ಪಿ ಇವುಗಳಿಂದ ಕವಲೊಡೆದ ಮಾಗಧಿ, ಅರ್ಧಮಾಗಧಿ, ಪಾಲಿ, ವೈಶಾಲಿ, ಬಂಗಾಳಿ, ಗೌಳ, ಒರಿಯಾ ಇತ್ಯಾದಿ ಭಾಷೆಗಳು ಮುಸ್ಲಿಮರ ಆಗಮನಕ್ಕಿಂತ ಮುಂಚೆ ಅಲ್ಲಲ್ಲಿ ಪ್ರಚಲಿತವಿದ್ದುವು. ಸುಮಾರು ಒಂಬತ್ತನೆಯ ಶತಮಾನದಲ್ಲಿ ಭಾರತದಲ್ಲಿ ಮುಸಲ್ಮಾನರ ವಿಜಯಯಾತ್ರೆ ಆರಂಭವಾಗಿ ಕ್ರಮೇಣ ಅವರು ಇಲ್ಲಿ ಬೇರೂರಿ ಭಾರತಾದ್ಯಂತ ತಮ್ಮ ರಾಜ್ಯಭಾರಗಳನ್ನು ಸ್ಥಾಪಿಸಿಕೊಂಡರು. ಈ ಅವಧಿಯಲ್ಲಿ ಅವರೊಂದಿಗೆ ಬಂದ ಪರ್ಷಿಯನ್-ಅರಬ್ಬಿ ಭಾಷೆಗಳ ಸಂಪರ್ಕ ಮತ್ತು ಸಂಘರ್ಷ ಇವುಗಳ ಫಲವಾಗಿ ಉತ್ತರ ಭಾರತದ ಬಹುಭಾಗದಲ್ಲಿ ಒಂದು ಸಮ್ಮಿಶ್ರ ಭಾಷೆಯೇ ತಲೆದೋರಿತು. ಈ ಮಿಶ್ರಣ ಭಾಷೆಯನ್ನೇ ಅನ್ವರ್ಥಕವಾಗಿ 'ಉರ್ದು' ಎಂದು ಕರೆಯಲಾಯಿತು. ಕಾಲಕ್ರಮದಲ್ಲಿ ದಿಲ್ಲಿ ಸುಲ್ತಾನರ ಆಳ್ವಿಕೆ ಭದ್ರವಾದಂತೆ ಉತ್ತರ ಭಾರತದಲ್ಲೆಲ್ಲಾ ಆ ಭಾಷೆಯನ್ನೇ ರಾಜ್ಯಭಾರ ನಡೆಸುವುದಕ್ಕೂ ನ್ಯಾಯಾಲಯ ಆಡಳಿತಕ್ಕೂ ಉಪಯೋಗಿಸಿಕೊಳ್ಳಲಾಯಿತು.

ಈ ಪರಿವರ್ತನ ಕಾಲದಲ್ಲಿ ಉತ್ತರ ಭಾರತದ ಸಂಸ್ಕೃತ ಮೂಲದ ಅನೇಕ ಭಾಷೆಗಳು ಉರ್ದು ಕ್ರಿಯಾಪದಗಳಿಂದ ಕೂಡಿದ ಸಂಸ್ಕೃತಭೂಯಿಷ್ಠವಾದ ಮಾಧ್ಯಮವಾಗಿ ರೂಪಾಂತರ ಹೊಂದ

ತೊಡಗಿದವು. ಅಲ್ಲಲ್ಲಿ ಸಂಸ್ಕೃತ ಅಥವಾ ಇತರ ಭಾರತೀಯ ಪದಗಳಿದ್ದು, ಹೆಚ್ಚು ಭಾಗ ಪರ್ಷಿಯನ್-ಅರಬ್ಬೀ ಮೂಲಶಬ್ದಗಳಿಂದ ಕೂಡಿದ ಮಾಧ್ಯಮವು ಹಿಂದೂಸ್ತಾನಿ ಎಂದು ಕರೆಯಲ್ಪಡುತ್ತಿತ್ತು. ಇದನ್ನು 'ಖಡೀಬೋಲೀ' ಎಂದೂ ಕರೆಯುತ್ತಿದ್ದರು. ಕಾಲ ಕಳೆದಂತೆ ಉತ್ತರ ಪ್ರದೇಶದ ದೇಶೀ ಸಂಸ್ಥಾನಗಳಲ್ಲಿ ಮತ್ತು ದಕ್ಷಿಣದ ನಿಜಾಮರ ಆಳ್ವಿಕೆಯಲ್ಲಿ ಶುದ್ಧ ಉರ್ದು ಭಾಷೆಯ ಬೆಳವಣಿಗೆಗೆ ಪ್ರಯತ್ನ ಆರಂಭವಾಯಿತು. ಇದಕ್ಕಾಗಿ ಪರ್ಷಿಯ. ಅರಬ್ಬಿ ದೇಶಗಳಿಂದ ಭಾಷಾಕೋವಿದರು. ಶಾಸ್ತ್ರವೇತ್ತರು ಭಾರತಕ್ಕೆ ಬಂದು ದಿಲ್ಲಿ. ಆಗ್ರಾ, ಲಖನೌ. ಅಲಹಾಬಾದು. ಕಾನಪುರ ಮತ್ತು ದಕ್ಷಿಣ ಹೈದರಾಬಾದು ನಗರಗಳಲ್ಲಿ ನೆಲಸತೊಡಗಿದರು. ಅವರಿಗಾಗಿ ಉನ್ನತ ಪದವಿಗಳೂ ರಾಜಾಶ್ರಯವೂ ಕಾದಿದ್ದವು. ಭಾಷಾಂತರದ ಭಂಡಾರಾಗಾರಗಳನ್ನು ಏರ್ಪಡಿಸಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಉರ್ದು ಭಾಷೆಯನ್ನು ಆಮೂಲಾಗ್ರವಾಗಿ ಸಂಸ್ಕರಿಸಿ ಅದರಲ್ಲಿ ಬರುವ ಭಾರತೀಯ ಶಬ್ದಗಳನ್ನೆಲ್ಲ ಹೆಕ್ಕಿ ತೆಗೆದು ಕೇವಲ ಪರ್ಷಿಯನ್ ಮತ್ತು ಅರಬ್ಬೀ ಶಬ್ದಗಳಿಂದಲೇ ಅದನ್ನು ಪರಿಪುಷ್ಟಗೊಳಿಸಲಾಯಿತು. ಇಂಥ ಉರ್ದು ಭಾಷೆ ಆಡಳಿತ ಕ್ಷೇತ್ರದಲ್ಲೂ. ವಿಶ್ವವಿದ್ಯಾನಿಲಯ ಮಟ್ಟದ ಉನ್ನತ ವ್ಯಾಸಂಗ ಕ್ಷೇತ್ರದಲ್ಲೂ ನ್ಯಾಯಾಲಯಗಳಲ್ಲೂ ಅಧಿಕೃತವಾಗಿ ಬಳಕೆಗೆ ಬಂತು. ಅಗತ್ಯವಾದ ಕಾನೂನುಗಳ ಉರ್ದು ಭಾಷಾಂತರಗಳು. ಪಠ್ಯಪುಸ್ತಕಗಳು ಸಿದ್ಧವಾದುವು. ಹೈದರಾಬಾದಿನಂಥ ಪ್ರಮುಖ ದೇಶೀಯ ರಾಜ್ಯದಲ್ಲಿ ಉರ್ದು ಭಾಷೆಯೇ ರಾಜ್ಯದ ಅಧಿಕೃತ ಭಾಷೆಯಾಗಿ. ಕಾನೂನುಗಳ ಮೂಲ ರಚನೆಯೂ ಆ ಭಾಷೆಯಲ್ಲಿಯೇ ಆರಂಭವಾಯಿತು. ಪ್ರಾಯಶಃ ಭಾರತೀಯ ಭಾಷೆಯಲ್ಲಿ ಇಂಥ ಮಹತ್ಸಾಧನೆಯಾದ ಉದಾಹರಣೆ ಬೇರೊಂದಿಲ್ಲವೆಂದು ಹೇಳಬಹುದು.

ಭಾರತಕ್ಕೆ ಆಂಗ್ಲರು ಕಾಲಿಟ್ಟ ತರುವಾಯ ಭಾರತಾದ್ಯಂತ ಇಂಗ್ಲಿಷಿನ ಪ್ರಭಾವ ಹಬ್ಬಿತು.

ಆಡಳಿತ ಕ್ಷೇತ್ರದಲ್ಲಿ. ಶಿಕ್ಷಣ ಕ್ಷೇತ್ರದಲ್ಲಿ, ನ್ಯಾಯಾಲಯಗಳಲ್ಲಿ ಇಂಗ್ಲಿಷ್ ಭಾಷೆಯೇ ಅಧಿಕೃತ ಭಾಷೆಯಾಗಿ ಜಾರಿಗೆ ಬಂದಿತು. ಇದು ಇಂದಿಗೂ ನಮ್ಮೆಲ್ಲರ ಮೇಲೆ ಅಚ್ಚಳಿಯದ ಪ್ರಭಾವ ಹೊಂದಿದೆ. ನಮ್ಮ ಶಿಕ್ಷಣ ಮಾಧ್ಯಮವೂ ಆಗಿದೆ. ಸರ್ಕಾರದ ವಿಧಾಯಿ ಮತ್ತು ನ್ಯಾಯಿಕ ವ್ಯವಹಾರಗಳೆಲ್ಲ ಈ ಭಾಷೆಯಲ್ಲೇ ನಡೆಯುತ್ತಿವೆ. ಹೀಗೆ ಭಾರತದ ಬಹುಭಾಗದಲ್ಲಿ ಬಳಕೆಯಲ್ಲಿದ್ದ ಹಿಂದಿ, ಹಿಂದೂಸ್ತಾನಿ ಅಥವಾ ಉರ್ದು ಭಾಷೆಯಿಂದ ಮತ್ತು ಭಾರತಾದ್ಯಂತ ಏಕೈಕ ಸಂಪರ್ಕ ಭಾಷೆಯಾದ ಇಂಗ್ಲಿಷಿನಿಂದ ಅನೇಕಾನೇಕ ಪದಗಳು. ಶಬ್ದ ಪ್ರಯೋಗಗಳು ನಮ್ಮ ಉಳಿದ ಭಾಷೆಗಳಲ್ಲಿ ಸಮಾವೇಶಗೊಂಡವು.

ಉದಾ : ಹಿಂದಿ. ಹಿಂದೂಸ್ತಾನಿ ಅಥವಾ ಉರ್ದು ಮೂಲದ ಶಬ್ದಗಳು ಮತ್ತು ಪ್ರಯೋಗಗಳು ಕೆಳಗಿನಂತಿವೆ :

| | | |
|---|---|---|
| ಕಾನೂನು | ಬರಾವರ್ದು | ಖುಲಾಸಾ |
| ಕಾಯಿದೆ | ಹಾಜರಿ | ದರಖಾಸ್ತು |
| ಜಾಹೀರ್ನಾಮೆ | ಜವಾಬು | ದಾಖಲೆ |
| ಅಸಲು | ತಕರಾರು | ಮಂಜೂರಾತಿ |
| ನಕಲು | ಮಾಫಿ | ಮೊಕರೂರಾತಿ |
| ಮೊಖ್ತ್ಯಾರುನಾಮೆ | ದಸ್ತಾವೇಜು | ಸಾದಿಲ್ವಾರು |
| ಇತ್ತಿಲ್ಲನಾಮೆ | ಮೊಕದ್ದಮೆ | ವಾರಸು |
| ರಾಜೀನಾಮೆ | ದಾವೆ | ದಸ್ತಗಿರಿ |
| | ಜುಮ್ಲಾ | ಹರಾಜು |
| ತಹಶೀಲ್ದಾರ | ತಃಖ್ತೆ | ತಗಾದೆ |
| ತಾಲೂಕುದಾರ | ಬಂದೋಬಸ್ತು | ಹುಕುಮು |
| | | ಸಾದರ್ಮಾಡು |
| ಖತಲು | | ಸದರ್ |
| ಜುಲ್ಮಾನೆ | ತರ್ಜುಮೆ | ಜಿಂದಗಾನಿ |

| | | |
|---|---|---|
| ಅಟ್ಕೈರು | ಮಹಜರು | ಖಾಂದಾನು |
| | | ಹಕ್ಕು |
| ಇನ್‌ಕಾರು | ಅಮಲು ಬಜಾವಣೆ | ಸಖತ್ |
| | | ಸಾದಾ |

ಇಂಥ ಇನ್ನೂ ನೂರಾರು ಪದಗಳನ್ನು ಉದಾಹರಿಸಬಹುದಾಗಿದೆ. ಈ ಪದಗಳು ಮರಾಠಿ ಮತ್ತು ತೆಲುಗು ಭಾಷೆಯಲ್ಲೂ ಸೇರಿಕೊಂಡಿವೆ. ಟೀಪ್ರು. ಹೈದರ್ ಅಲಿಗಳ ಕಾಲದಲ್ಲಿ ಇದರಲ್ಲಿಯ ಅನೇಕ ಪದಗಳು ಹಳೆಯ ಮೈಸೂರಿನ ಕನ್ನಡದಲ್ಲೂ ಸೇರಿಕೊಂಡಿರುವುದು ಕಾಣಬರುವುದು. ಈ ಪದಗಳು ಮರಾಠಿಯಲ್ಲಿ ಸ್ವಲ್ಪ ರೂಪವ್ಯತ್ಯಾಸಗೊಂಡು ತನ್ಮೂಲಕವಾಗಿ ಗಡಿನಾಡಿನ ಕನ್ನಡ ಭಾಷೆಯಲ್ಲಿ ಸೇರಿಕೊಂಡಿವೆ. ಚಾಲ್ತಿ. ಫರಾಣೆ. ಫಡ್‌ನವೀಸ್. ಖಾಸನೀಸ್. ಚಿಟ್ನೀಸ್ ಮೊದಲಾದವುಗಳನ್ನು ಉದಾಹರಿಸಬಹುದು. ಚಿಟ್ನೀಸ್ ಎಂಬುದು 'ಚಿ-ಟ್ಟಿನವೀಸ್' ಎಂಬುದರ ಅಪಭ್ರಂಶ. ಹೀಗೆಯೇ 'ಫಡ್‌ನೀಸ್' ಎಂಬುದು 'ಫರ್ದನವೀಸ್' ಎಂಬುದರ ರೂಪಾಂತರ. ಫರ್ದ ಎಂದರೆ ಕೇಸು. ಮೊಕದ್ದಮೆ. ವಿಷಯ ಎಂದಾಗುವುದು. ನವೀಸ್ ಎಂದರೆ ಬರೆಯುವವನು 'ಫಡನವೀಸ್' ಎಂದರೆ 'ಕೇಸ್‌ವರ್ಕರ್. (Writer) ಎಂದ ಹಾಗೆ.

ಇನ್ನು ಈ ಶಬ್ದಗಳಲ್ಲಿ ಒಂದೇ ಪದ ಬೇರೆಬೇರೆ ಪ್ರದೇಶಗಳಲ್ಲಿ ಬೇರೆಬೇರೆ ಅರ್ಥವನ್ನು ಹೊಂದಿರುವುದನ್ನೂ ಕಾಣಬಹುದು. 'ಮಹಜರು' ಎಂಬ ಶಬ್ದಕ್ಕೆ 'ಪೊಲೀಸಿನ ಸ್ಥಳ ವರದಿ' ಎಂಬುದು ಒಂದಡೆಯಾದರೆ ಮತ್ತೊಂದೆಡೆ 'ನಿವೇದನೆ'. 'ಅರ್ಜಿ' ಎಂದಾಗುವುದು. ಮಹಜಗಿರುವ ಹಳೆಯ ಮೈಸೂರಿನ ಅರ್ಥವನ್ನು ಹಳೆಯ ಹೈದರಾಬಾದು ಪ್ರದೇಶದಲ್ಲಿ 'ಪಂಚನಾಮ' ಎಂಬ ಪದ ಸೂಚಿಸುತ್ತದೆ. ಹೀಗೆ 'ರಾಜಿನಾಮೆ' ಎಂಬುದು ಒಂದೆಡೆಗೆ 'ಪದತ್ಯಾಗ' (Resignation) ಎಂದಾದರೆ ಮತ್ತೊಂದೆಡೆಗೆ 'ಒಪ್ಪಂದ'. 'ಒಡಂಬಡಿಕೆ' ಎಂದಾಗುವುದು. ದಸ್ತಗಿರಿ ಎಂಬುದಕ್ಕೆ ಉರ್ದು ಭಾಷೆಯಲ್ಲಿ 'ಬಂಧನ' ಎಂಬ ಅರ್ಥ ಇಲ್ಲವೇ ಇಲ್ಲ. ಇದರ ಶುದ್ಧ ಶಬ್ದಾರ್ಥ. 'ಕೈ ಹಿಡಿಯುವುದು' ಎಂದಾಗುವುದು. ಇದು 'ಹಸ್ತಗ್ರಹಣ' ಎಂಬ ಸಂಸ್ಕೃತ ಮೂಲದ ಪರ್ಷಿಯನ್ ರೂಪ. ಪರ್ಷಿಯನ್ 'ಗೀರ್' ಎಂಬ ಧಾತುರೂಪ ಸಂಸ್ಕೃತದ 'ಗ್ರ' 'ಗ್ರಹಣ' ಎಂಬುದಕ್ಕೆ ಸಮಾನಾರ್ಥಕವಾಗಿದೆ. ಭಾರತೀಯ ಸಂಸ್ಕೃತಿಯ ಉಚ್ಛ್ರಾಯ ಕಾಲದಲ್ಲಿ ವಿದೇಶ ಭಾಷೆಗಳು ಸಂಸ್ಕೃತದ ಪ್ರಭಾವಕ್ಕೆ ಒಳಗಾಗಿರುವುದನ್ನು ಭಾಷಾ ಕೋವಿದರು ಇನ್ನೂ ಅನೇಕ ಉದಾಹರಣೆಗಳಿಂದ ತೋರಿಸಿಕೊಟ್ಟಿದ್ದಾರೆ.

ಇಂಗ್ಲಿಷ್ ಭಾಷೆಯಿಂದಂತೂ ಸಾವಿರಾರು ಶಬ್ದಗಳು ನಮ್ಮ ಭಾಷೆಗಳಿಗೆ ಸೇರಿಕೊಂಡಿವೆ. 'ಅಪೀಲು'. 'ಪ್ರೊಬೇಟು'. 'ವಾರಂಟು'. 'ನೋಟೀಸು'. ರಿಕಾರ್ಡ್. 'ರಿಜಿಸ್ಟರು', ಚೆಕ್ಕು, 'ಡ್ರಾಫ್ಟು'. 'ಬಿಲ್ಲು' ಇಂತಹ ಪದಗಳನ್ನು ನಾವು ಅನಿವಾರ್ಯವಾಗಿ ಉಳಿಸಿಕೊಳ್ಳಲೇಬೇಕಾಗುವುದು.

## ಸಂವಿಧಾನಗತ ಭಾಷಾ ಸೂತ್ರ

ಈ ಹಿನ್ನೆಲೆಯನ್ನು ಗಮನಿಸಿ ರಾಷ್ಟ್ರದ ಭಾಷಾನೀತಿಯನ್ನು ಸಂವಿಧಾನದ 17ನೆಯ ಅಧ್ಯಾಯದ 343-351ನೆಯ ಅನುಚ್ಛೇದಗಳಲ್ಲಿ ನಿರೂಪಿಸಲಾಗಿದೆ. ಇವುಗಳ ಮುಖ್ಯಾಂಶ ಹೀಗಿದೆ: 'ಹಿಂದಿ' ಭಾರತದ ಅಧಿಕೃತ ರಾಜಭಾಷೆಯಾಗಬೇಕು. ಅದು ಸಮೃದ್ಧವಾಗಿ ಬೆಳೆದು ಪರಿಣಾಮಕಾರಿಯಾಗಿ ಇಂಗ್ಲಿಷಿನ ಸ್ಥಾನವನ್ನು ತುಂಬುವ ವರೆಗೆ ಇಂಗ್ಲಿಷು ಈಗಿದ್ದ ಸ್ಥಾನದಲ್ಲಿಯೇ ಇರತಕ್ಕುದು. ಹಿಂದಿ ಭಾಷೆ ಸಮರ್ಥವಾಗಿ ಇಂಗ್ಲಿಷ್ ಸ್ಥಾನವನ್ನು ಗಳಿಸಿಕೊಂಡ ಅನಂತರವೂ ಹಿಂದೀತರ ಪ್ರದೇಶದ ಜನಗಳು ಬಯಸಿದರೆ ಅಥವಾ ಅಗತ್ಯವೆನಿಸಿದರೆ ಹಿಂದಿಯ ಜೊತೆಗೆ ಇಂಗ್ಲಿಷ್ ಕೂಡ ಅಧಿಕೃತ ಸಹಭಾಷೆಯಾಗಿ ಮುಂದುವರಿಯಬಹುದು. ರಾಜ್ಯಗಳು ತಮ್ಮ ಭಾಷೆಗಳಲ್ಲಿ ಒಂದನ್ನು ಅಥವಾ ಹಿಂದಿಯನ್ನು ತಮ್ಮ ರಾಜ್ಯದ ಅಧಿಕೃತ ಭಾಷೆಯನ್ನಾಗಿ ಮಾಡಿಕೊಳ್ಳಬಹುದು. ರಾಜ್ಯ ಮತ್ತು ಕೇಂದ್ರಗಳ ನಡುವಣ ವ್ಯವಹಾರಕ್ಕೆ ಹಿಂದಿ 'ಸಂಪರ್ಕ ಭಾಷೆ'ಯಾಗಬೇಕು. ಈ ಭಾಷಾ ಸೂತ್ರ ಆಡಳಿತಕ್ಷೇತ್ರಕ್ಕೂ ನ್ಯಾಯಾಲಯಗಳಿಗೂ ಶಾಸನ ರಚನೆಗೂ ವಿಸ್ತರಿಸಿದಾಗ ಅಧಿಕೃತ ಭಾಷಾಂತರಗಳ ಆವಶ್ಯಕತೆ ಉಂಟಾ

ಗುವುದು. ಸರ್ಕಾರದ ಅಧಿಕೃತ ರಾಜಭಾಷಾ ನೀತಿಯನ್ನೂ ಭಾಷಾಂತರದ ಸಮಸ್ಯೆಯನ್ನೂ ಕುರಿತು ಸೆಟಲ್‌ವಾಡರ ನೇತೃತ್ವದಲ್ಲಿ ರಚಿತವಾಗಿದ್ದ ಕಾನೂನು ಆಯೋಗ ಸುದೀರ್ಘವಾಗಿ ಚರ್ಚಿಸಿದೆ. ಸದ್ಯ ಇಲ್ಲಿ ಆ ವಿಷಯವನ್ನು ಎತ್ತಿಕೊಳ್ಳುವುದಿಲ್ಲ. ಸಂವಿಧಾನದ ಮೇರೆಗೆ ಸಂಸತ್ತಿನಿಂದಾಗಲಿ, ರಾಜ್ಯದ ವಿಧಾನಮಂಡಲಗಳಿಂದಾಗಲಿ ಈ ಬಗ್ಗೆ ಕಾನೂನುಗಳು ಏರ್ಪಡುವ ವರೆಗೆ ಶಾಸನ ರಚನೆಗೂ ನ್ಯಾಯಾಲಯಗಳಲ್ಲಿ ಡಿಕ್ರಿ, ನಿರ್ಣಯ ಮತ್ತು ತೀರ್ಪುಗಳನ್ನು ಕೊಡುವುದಕ್ಕೂ ಸದ್ಯಕ್ಕೆ ಇದ್ದಂತೆ ಇಂಗ್ಲಿಷನ್ನೇ ಉಪಯೋಗಿಸಬೇಕು. ಹಿಂದಿಯನ್ನು ನಮ್ಮ ರಾಷ್ಟ್ರದ ಎಲ್ಲ ವ್ಯವಹಾರಕ್ಕೂ ಶಕ್ತವಾದ ಭಾಷೆಯನ್ನಾಗಿ ಅಭಿವೃದ್ಧಿಪಡಿಸಲು ಮುಖ್ಯವಾಗಿ ಸಂಸ್ಕೃತದಿಂದಲೂ ಅಗತ್ಯವಾದಲ್ಲಿ ಇತರ ಎಲ್ಲ ರಾಷ್ಟ್ರೀಯ ಭಾಷೆಗಳಿಂದಲೂ ನೆರವು ಪಡೆಯಬೇಕು. ನಮ್ಮ ರಾಷ್ಟ್ರೀಯ ಭಾಷೆಗಳನ್ನು ಸಂವಿಧಾನದ 8ನೆಯ ಅನುಸೂಚಿಯಲ್ಲಿ ಕೊಡಲಾಗಿದೆ.

ಈ ನೀತಿ ನಿರೂಪಣೆಯ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರ ಶ್ರೀ ಬಿ. ಜಿ. ಖೇರ್ ಅವರ ಅಧ್ಯಕ್ಷತೆಯಲ್ಲಿ ಒಂದು ಭಾಷಾ ಆಯೋಗವನ್ನು ರಚಿಸಿತು. ಭಾರತದ ಎಲ್ಲ ರಾಜ್ಯಗಳ ಪ್ರತಿನಿಧಿಗಳೂ ಈ ಆಯೋಗದಲ್ಲಿದ್ದರು. ಈ ಆಯೋಗ ಸಮಸ್ಯೆಯನ್ನು ಕೂಲಂಕಷವಾಗಿ ಪರಾಮರ್ಶಿಸಿ ಭಾರತ ಸರ್ಕಾರಕ್ಕೆ ತನ್ನ ವರದಿಯನ್ನು ಒಪ್ಪಿಸಿತು. ಸಂಸತ್ತಿನ 30 ಜನ ಸದಸ್ಯರ ಸಮಿತಿ ಈ ವರದಿಯನ್ನು ಕುರಿತು ಪರಿಶೀಲನೆ ನಡೆಸಿ ರಾಷ್ಟ್ರಪತಿಯವರಿಗೆ ತನ್ನ ಅಭಿಪ್ರಾಯವನ್ನು ತಿಳಿಸಿತು. ರಾಷ್ಟ್ರಪತಿಯವರು 1961ರಲ್ಲಿ ಆದೇಶ ಹೊರಡಿಸಿ ಸರ್ಕಾರದ ಎಲ್ಲ ಕಾರ್ಯಕ್ಷೇತ್ರಗಳಲ್ಲೂ ಭಾಷಾನೀತಿ ಕಾರ್ಯಗತವಾಗಲು ಅನುಕೂಲವಾದ ಸಾಹಿತ್ಯ ನಿರ್ಮಾಣಕ್ಕೆ ಆಜ್ಞೆ ಮಾಡಿದರು. ಈ ಆದೇಶದ ಪ್ರಕಾರ, ಕೇಂದ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಆಯಾ ಭಾಷೆಗಳಲ್ಲಿ ವಿಶ್ವವಿದ್ಯಾನಿಲಯ ಮಟ್ಟದ ವರೆಗೂ ರಾಜ್ಯಗಳ ಅಧಿಕೃತ ಭಾಷೆಗಳನ್ನು ವ್ಯಾಸಂಗ ಮಾಧ್ಯಮಗಳಾಗಿ ಬಳಸಲು ಅಗತ್ಯವಾಗುವ ಪಠ್ಯಪುಸ್ತಕ ಇತ್ಯಾದಿಗಳ ನಿರ್ಮಾಣ ನಡೆದಿದೆ. ಈ ಕಾರ್ಯವನ್ನು ವಿಶ್ವವಿದ್ಯಾನಿಲಯಗಳೂ ಪಠ್ಯಪುಸ್ತಕ ರಚನಾ ವಿಭಾಗಗಳೂ ನಿರ್ವಹಿಸುತ್ತಿವೆ. ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ಹತ್ತು ವರ್ಷಗಳಷ್ಟು ಹಿಂದೆಯೇ ರಾಜಭಾಷಾ ಅಧಿನಿಯಮವನ್ನು ಅಂಗೀಕರಿಸಲಾಯಿತು. ಈ ಅಧಿನಿಯಮದ ಮೇರೆಗೆ ಆಯಾ ರಾಜ್ಯಗಳ ಆಡಳಿತ ಕ್ಷೇತ್ರದಲ್ಲಿ ರಾಜ್ಯದ ಅಧಿಕೃತ ಭಾಷೆಗೆ ಪ್ರಾಶಸ್ತ್ಯವನ್ನು ನೀಡುವ ಏರ್ಪಾಡು ನಡೆದಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ನಿವೃತ್ತ ಮುಖ್ಯ ಕಾರ್ಯದರ್ಶಿ ಕೆ. ನಾರಾಯಣ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ರಚಿತವಾದ ಭಾಷಾ ಸಮಿತಿ ಈ ಬಗ್ಗೆ ಸರ್ಕಾರಕ್ಕೆ ತನ್ನ ವರದಿ ಒಪ್ಪಿಸಿದೆ. ರಾಜ್ಯದ ಅಧಿಕೃತ ಭಾಷೆಯಾದ ಕನ್ನಡ ತಾಲೂಕು, ಸಬ್‌ಡಿವಿಜನ್ ಹಾಗೂ ಜಿಲ್ಲಾಮಟ್ಟಗಳಲ್ಲಿ ಹಂತ ಹಂತವಾಗಿ ಬಳಕೆಗೆ ಬರಲು ಏರ್ಪಾಡುಗಳನ್ನು ಮಾಡಲಾಗುತ್ತಿದೆ. ಈ ಭಾಷಾನೀತಿಗೆ ಪೂರ್ವ ಸಿದ್ಧತೆಯ ರೂಪವಾಗಿ ಕಾರ್ಯಾಲಯ ಕೈಪಿಡಿ, (ಕೆ. ಎಂ. ಕೃಷ್ಣರಾವ್, ಕೆ. ಎಸ್. ಧರಣೇಂದ್ರಯ್ಯ ಮತ್ತು ಎಂ. ಕೇಶವಭಟ್ಟರಿಂದ ಕೂಡಿದ ಸಮಿತಿ ತಯಾರಿಸಿದ. ಬಹುಮಟ್ಟಿಗೆ ಪರ್ಯಾಪ್ತವಾದ) ಆಡಳಿತ ಶಬ್ದಕೋಶ ಇತ್ಯಾದಿಗಳು ಸಿದ್ಧವಾಗಿ ಉಪಯೋಗಕ್ಕೆ ಬಂದಿವೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯವರು ಇತ್ತೀಚೆಗೆ ಹಿಂದಿ 'ಕಾರ್ಯಾಲಯ ಸಹಾಯಿಕಾ' ಎಂಬುದರ ಮಾದರಿಯನ್ನು ಹೋಲುವ 'ಕಛೇರಿ ಕೈಪಿಡಿ'ಯನ್ನು ಬೆಳಕಿಗೆ ತಂದಿದ್ದಾರೆ. ಈ ಕಾರ್ಯ ಸಮರ್ಪಕವಾಗಿ ನಡೆಯುವುದಕ್ಕೆ ಅನುಕೂಲವಾಗುವಂತೆ ಭಾಷಾಂತರ ಇಲಾಖೆಯನ್ನೂ ಪುನರ್ರಚಿಸಲಾಗಿದೆ.

1961ರಷ್ಟು ಹಿಂದೆಯೇ ಕೇಂದ್ರ ಮಟ್ಟದಲ್ಲಿ ರಾಷ್ಟ್ರಪತಿಯವರ ಆದೇಶದ ಮೇರೆಗೆ ರಾಜಭಾಷಾ ವಿಧಾಯಿ ಆಯೋಗ ಅಸ್ತಿತ್ವಕ್ಕೆ ಬಂತು. ಈ ಆಯೋಗದಲ್ಲಿ ಭಾರತದ ಎಲ್ಲ ರಾಜ್ಯಗಳ ಪ್ರತಿನಿಧಿಗಳೂ ಇದ್ದಾರೆ. ಈ ಆಯೋಗದವರು ಈಗಾಗಲೇ ಸುಮಾರು 200ರಷ್ಟು ಕಾನೂನುಗಳ ಹಿಂದಿ ಅಧಿಕೃತ ಪಾಠವನ್ನು ತಯಾರಿಸಿದ್ದಾರೆ. ಜೊತೆಜೊತೆಗೆ ಸುಮಾರು 10.000 ಶಬ್ದಗಳಿಂದ ಕೂಡಿದ ಒಂದು ಹಿಂದಿ ವಿಧಿ ಶಬ್ದಾವಳಿಯನ್ನೂ ತಯಾರಿಸಿದ್ದಾರೆ. ಕೇಂದ್ರ ಆಯೋಗ ನಿರ್ವಹಿಸುತ್ತಿರುವ ಕಾರ್ಯವನ್ನು ರಾಜ್ಯಮಟ್ಟದಲ್ಲಿ ನೆರವೇರಿಸಲು ಎಲ್ಲ ರಾಜ್ಯಗಳಲ್ಲೂ ರಾಜಭಾಷಾ ವಿಧಾಯಿ ಆಯೋಗಗಳು ಅಥವಾ ಸಮಿತಿಗಳು ಅಥವಾ ಮಂಡಲಿಗಳು ರಚಿಸಲ್ಪಟ್ಟಿವೆ. ಕರ್ನಾಟಕ ರಾಜ್ಯದಲ್ಲಿ ಇಂಥ ಒಂದು ಆಯೋಗ 1966ರಲ್ಲೇ ಅಸ್ತಿತ್ವಕ್ಕೆ ಬಂತು. ಕೇಂದ್ರ ಆಯೋಗ ಸಿದ್ಧಪಡಿಸಿದ ಕೇಂದ್ರ ಮೂಲಭೂತ ಶಾಸನಗಳ

ಕನ್ನಡ ಅಧಿಕೃತ ಪಾಠವನ್ನು ತಯಾರಿಸುವುದು ಮತ್ತು ಹಿಂದಿ ವಿಧಿ ಶಬ್ದಾವಳಿಯ ಆಧಾರದ ಮೇಲೆ ಒಂದು ಕನ್ನಡ ವಿಧಿ ಶಬ್ದಾವಳಿಯನ್ನು ತಯಾರಿಸುವುದು ಇದರ ಮುಖ್ಯ ಕಾರ್ಯವಾಗಿದೆ. ಇದಕ್ಕಾಗಿ ನಮ್ಮ ಪ್ರಾಚೀನ ಸಂಹಿತೆ, ಸ್ಮೃತಿ, ಅರ್ಥಶಾಸ್ತ್ರ ಮತ್ತು ಧರ್ಮಶಾಸ್ತ್ರ ಸಾಹಿತ್ಯದಿಂದ ಅನೇಕ ಉಪಯುಕ್ತ ಪದಗಳನ್ನು ಆಯ್ದುಕೊಳ್ಳಬಹುದಾಗಿದೆ. ಉದಾ:

| ಪ್ರಾಚೀನ ಶಬ್ದಗಳು | | ಅರ್ಥ |
|---|---|---|
| ಋಣಾದಾನ | ... | ಸಾಲ ಪಡೆಯುವುದು, ಹಿಂದಿರುಗಿಸುವುದು |
| ಸಂಧಿಕರ್ಮ | ... | ಒಪ್ಪಂದ, ಒಡಂಬಡಿಕೆ, ಕರಾರು ಮಾಡಿಕೊಳ್ಳುವುದು |
| ಅತಿಚಾರ | ... | Offences pertaining to excesses in drinking, gambling, etc. |
| ಕೂಟಯುದ್ಧ | ... | Unfair warfare |
| ಆಶುಮೃತಕ ಪರೀಕ್ಷೆ | ... | Post mortem |
| ಕನ್ಯಾಪ್ರಕರ್ಮ | ... | Raping of virgin girl |
| ಕಿತವ | ... | ಬೆಳ್ಳಿ, ಬಂಗಾರ, ಹಾಲು ಮೊದಲಾದವುಗಳನ್ನು ಕಲಬೆರಕೆ ಮಾಡುವುದು. (Adulteration) |
| ಸನ್ನಿಧಾತ | ... | Granary Officer |
| ಸಮಾಹರ್ತ | ... | Revenue Collector |
| ಪ್ರಾದೇಷ್ಟ್ರ | ... | Divisional Commissioner, ವಿಭಾಗಾಧಿಕಾರಿ |
| ಸೂತ್ರಾಧ್ಯಕ್ಷ | ... | Textile Commissioner (Officer) |
| ಶುಲ್ಕಾಧ್ಯಕ್ಷ | ... | Tax Officer |
| ಸುವರ್ಣಾಧ್ಯಕ್ಷ | ... | Gold Controller . |
| ಸೂನಾಧ್ಯಕ್ಷ | ... | Officer-in-Charge of Slaughter Houses |
| ಗೋಧ್ಯಕ್ಷ | ... | Cattle Wealth Officer or Officer-in-Charge of Animal Husbandry |
| ಸೀತಾಧ್ಯಕ್ಷ | ... | Officer-in-Charge of Agriculture and Horticulture |

ಇವೇ ಮೊದಲಾದ ಶಬ್ದಗಳನ್ನೂ ಪದನಾಮ ಸೂಚಕ ಅಭಿಧಾನಗಳನ್ನೂ ಆಯ್ದುಕೊಳ್ಳಬಹುದಾಗಿದ್ದರೂ ಏಕರೂಪತೆಯ ದೃಷ್ಟಿಯಿಂದ ಹಿಂದಿ ವಿಧಿಶಬ್ದಾವಳಿಯಲ್ಲಿ ಅಖಿಲ ಭಾರತೀಯ ಮಟ್ಟದಲ್ಲಿ ಅನುಮೋದಿತವಾದ ಶಬ್ದಗಳನ್ನೇ ರಾಜ್ಯಮಟ್ಟದಲ್ಲೂ ಬಳಸಿಕೊಳ್ಳಲಾಗುತ್ತಿದೆ. ಆಸೇತುಹಿಮಾಚಲ, ಗ್ರಾಮಪಂಚಾಯಿತಿಯಿಂದ ಭಾರತದ ಸರ್ವೋಚ್ಚ ನ್ಯಾಯಾಲಯದವರೆಗೆ, ವಿಧಿ ಶಬ್ದಾವಳಿ ಮತ್ತು ವಿಧಿ ಪ್ರಾರೂಪಗಳು ಒಂದೇ ತೆರನಾಗಿರಬೇಕೆಂಬ ಭಾಷಾ ಆಯೋಗದ ವರದಿಯ ಟಿಪ್ಪಣಿಯಲ್ಲಿ ಇಂಥ ಒಂದು ಏಕರೂಪದ ವಿಧಿ ಶಬ್ದಾವಳಿಯನ್ನು ಎಲ್ಲ ರಾಜ್ಯಗಳೂ ಅಳವಡಿಸಿಕೊಳ್ಳಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ಅರ್ಥಕ್ಕೆ ಬಾಧೆ ಬರುತ್ತಿದ್ದರೆ ಪರ್ಯಾಯ ಶಬ್ದಗಳನ್ನು ಸೂಚಿಸಲಾಗುವುದು. ಉದಾ: 'ಉಚಿತ' ಎಂಬುದು ಪುಕ್ಕಟೆ (free) ಎಂಬ ಅರ್ಥದಲ್ಲಿ ನಮ್ಮಲ್ಲಿ ಪ್ರಯೋಗದಲ್ಲಿದೆ. ಅದು ಬೇರೆ ಪ್ರದೇಶಗಳಲ್ಲಿ ಮತ್ತು ಹಿಂದಿಯಲ್ಲಿ proper ಎಂಬ ಅರ್ಥದಲ್ಲಿ ರೂಢಿಯಲ್ಲಿದೆ. ಈ ಕಾರಣ 'proper' ಎಂಬುದನ್ನು ಕನ್ನಡದಲ್ಲಿ 'ಸಮುಚಿತ' ಎಂದು ಸೂಚಿಸಬೇಕಾಯಿತು.

ಆಯಾ ಪ್ರದೇಶಗಳಲ್ಲಿ ರೂಢಿಯಲ್ಲಿರುವುದನ್ನೇ 'ರೂಢಿರ್ಯೋಗಾದ್ ಬಲೀಯಸೀ' ಎಂಬ ನಿಯಮಾನುಸಾರ ಉಳಿಸಿಕೊಳ್ಳುವ ಯತ್ನ ಮಾಡಲಾಗುತ್ತಿದೆ. ನವೀನ ನ್ಯಾಯಿಕ ಕಲ್ಪನೆಗಳನ್ನು ಸೂಚಿಸಲು 'ಉಪಸರ್ಗೇಣ ಧಾತ್ವರ್ಥೋ ಬಲಾದನ್ಯತ್ರ ನೀಯತೇ' ಎಂಬ ವ್ಯಾಕರಣ ಸೂತ್ರವನ್ನನುಸರಿಸಿ ಅಭಿಗ್ರಹಣ. ಅಧಿಗ್ರಹಣ. ಅಭಿಯಾಚನೆ. ಅಧಿಯಾಚನೆ. ಅಭಿಸಮಯ. ವ್ಯಪಗಮನ ಇವೇ ಮೊದಲಾಗಿ ಉಪಸರ್ಗಯುಕ್ತ ಶಬ್ದಗಳನ್ನು ಬಳಕೆಗೆ ತರಬೇಕಾಗಿದೆ. ಕಾನೂನು. ಶಾಸನ. ಕಾಯಿದೆ ಮೊದಲಾದ ಶಬ್ದಗಳು ಒಂದೊಂದು ಪ್ರಾಂತದಲ್ಲಿ ಒಂದೊಂದು ಅರ್ಥದಲ್ಲಿ ಪ್ರಯೋಗದಲ್ಲಿರುವುದರಿಂದ ಉಂಟಾಗುವ ತೊಡಕನ್ನು ನಿವಾರಿಸಲು ಏಕರೂಪದ ಪಾರಿಭಾಷಿಕಗಳನ್ನು ಉಪಯೋಗಿಸುವುದೇ ಸೂಕ್ತವೆಂದು ಅಭಿಪ್ರಾಯಪಡಲಾಗಿದೆ. ಈ ದೃಷ್ಟಿಯಿಂದ ಅಧಿನಿಯಮ. ವಿಧಿ. ವಿನಿಯಮ. ನಿಯಮ. ಉಪವಿಧಿ. ಖಂಡ. ಅಧ್ಯಾಯ. ಅಧಿಸೂಚನೆ. ಅಧ್ಯಾದೇಶ. ಘೋಷಣೆ. ಉದ್ಘೋಷಣೆ ಮತ್ತು ಪ್ರಖ್ಯಾಪನ ಇವೇ ಮೊದಲಾದ ಶಬ್ದಗಳನ್ನು ರಾಜ್ಯಗಳ ವಿಧಿ ಶಬ್ದಾವಳಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

ಇನ್ನು ನಮ್ಮ ನಮ್ಮ ರಾಜ್ಯಗಳ ಅಧಿಕೃತ ಭಾಷೆಗಳಲ್ಲಿ ಅಧಿಕೃತ ಪಾಠಗಳನ್ನು ತಯಾರಿಸುವಾಗ ಬರುವ ತೊಂದರೆಗಳನ್ನು ಸ್ವಲ್ಪ ಗಮನಿಸೋಣ.

ಇಂಗ್ಲಿಷ್ ಭಾಷೆಯಲ್ಲಿ ನಮ್ಮ ದೇಶಕ್ಕೆ ಅನ್ವಯಿಸುವ ಕಾನೂನುಗಳ ರಚನೆ ಸುಮಾರು 100 ವರ್ಷಗಳಿಂದ ಜಾರಿಯಲ್ಲಿದೆಯೆಂದು ಹೇಳಬಹುದು. ಪ್ರಗಲ್ಭ ಪಂಡಿತನೂ ನ್ಯಾಯ ಇತಿಹಾಸಾದಿ ಶಾಸ್ತ್ರಸಂಪನ್ನನೂ ಆದ ಥಾಮಸ್ ಬೆಬಿಂಗ್‌ಟನ್ ಮೆಕಾಲೆ ಮಹಾಶಯನಿಂದ ಕಾನೂನುಗಳ ಇಂಗ್ಲಿಷ್ ಪ್ರಾರೂಪಣ ಪದ್ಧತಿಗೆ ನಾಂದಿಯಾಯಿತು. ಈತನ ವಾಕ್ಯರಚನೆ ಗಡುಚಾದುದು ಮತ್ತು ಗಂಭೀರವಾದುದು. ಎರಡನೆಯ ಚಾರ್ಲ್ಸನ ಕಾಲದ ದುರ್ಭರ ರಾಜಕೀಯ ಪರಿಸ್ಥಿತಿಯನ್ನು It was a prodigy of wastefulness, corruption, ignorance and indolance ಎಂದೂ. ಅವನ ಪತನವನ್ನು 'That without the help of the City Charles I would not have been executed and that without the help of the City Charles II would not have been restored.', ಎಂದೂ ವರ್ಣಿಸಿ ಅಂದಿನ ಇಂಗ್ಲೆಂಡಿನ ರಾಜಕೀಯ ಸ್ಥಿತಿಗತಿಯನ್ನು ಸೂಚಿಸುತ್ತಾನೆ. ಇಂಥ ಮಹಾಶಯನಿಂದ ರಚಿತವಾದ ಭಾರತೀಯ 'ಸಾಕ್ಷ್ಯ ಅಧಿನಿಯಮ'ವೇ ಮೊದಲಾದ ಮೂಲಭೂತ ಕಾನೂನುಗಳು ಇಂದಿಗೂ ಅವನ ಪ್ರತಿಭೆ ಮತ್ತು ಪಾಂಡಿತ್ಯಕ್ಕೆ ಅಚ್ಚಳಿಯದ ಹೆಗ್ಗುರುತುಗಳಾಗಿವೆ. ಇಂಗ್ಲಿಷ್ ಪ್ರಾರೂಪಣ ಪದ್ಧತಿ ಸ್ವಲ್ಪ ಹೆಚ್ಚು ಕಡಿಮೆ ಇದೇ ಜಾಡಿನಲ್ಲಿ ನಡೆದುಕೊಂಡು ಬರುತ್ತಿದೆಯೆಂದು ಹೇಳಬಹುದು. ಆದರೆ ಇತ್ತೀಚೆಗೆ ಆಂಗ್ಲಭಾಷೆಯ ಮೇಲೆ ಭಾರತೀಯರಿಗಿರುವ ಪ್ರಭುತ್ವ ಶಿಥಿಲವಾದುದು ಅಲ್ಲಲ್ಲಿ ಕಂಡುಬರುತ್ತಿದೆ. ಇದರಿಂದ ಇಂಗ್ಲಿಷ್ ಪ್ರಾರೂಪಣ ಪದ್ಧತಿಯ ಶೈಥಿಲ್ಯವೂ ಪುನರುಕ್ತಿಯೂ ಅಸಮಾನ ಪದವಿನ್ಯಾಸವೂ ಕಂಡುಬಂದರೆ ಸೋಜಿಗವೇನೂ ಇಲ್ಲ.

ಇಂಗ್ಲಿಷ್ ಭಾಷೆಯಲ್ಲಿ ಅಪರಾಧ ಎಂಬುದರ ಪರ್ಯಾಯ ಅರ್ಥಗಳನ್ನು ಹತ್ತಾರು ಶಬ್ದಗಳು ಸೂಚಿಸುತ್ತವೆ. ಸ್ಥಳ. ಕಾಲ. ಸನ್ನಿವೇಶ ಮತ್ತು ವಿಷಯದ ಗಂಭೀರತೆಗಳಿಗನುಗುಣವಾಗಿ ಅವುಗಳ ಛಾಯೆ ವ್ಯತ್ಯಾಸಗೊಳ್ಳುತ್ತದೆ. **Offence, crime, delinquency, tart, fault, default, wrong, guilt** ಎಂಬ ಪದಗಳು ಅಪರಾಧದ ಬೇರೆಬೇರೆ ರೂಪಗಳನ್ನು ಸೂಚಿಸುತ್ತವೆ. ಇವುಗಳ ಪ್ರಭೇದವನ್ನು ನಮ್ಮ ಭಾರತೀಯ ಭಾಷೆಗಳಲ್ಲಿ ಕೂಡ. ಅಪರಾಧ. ಪಾತಕ. ತಪ್ಪು. ದೋಷ. ಚ್ಯುತಿ. ಲೋಪ. ಉಪದ್ರವ. ಕೀಡೆ ಮೊದಲಾಗಿ ವಿಂಗಡಿಸಬೇಕಾಗುವುದು. **Charge, Allegation, Accusation** ಎಂಬ ಬೇರೆ ಬೇರೆ ಪದಗಳು ಆಪಾದನೆ ಮತ್ತು ಆರೋಪಣೆಗಳ ಸ್ವರೂಪ ಭೇದವನ್ನು ಸೂಚಿಸುತ್ತವೆ. ಹೀಗೆಯೇ **Tax, surtax, duty, levy, surcharge, assessment** ಇವೇ ಮೊದಲಾದ ಶಬ್ದಗಳು ಪರ್ಯಾಯ ಶಬ್ದಗಳೆಂದು ಕಂಡುಬಂದರೂ ಒಂದೊಂದೂ ಕರಾಧಾನದ ಒಂದೊಂದು ರೂಪವನ್ನು ಸೂಚಿಸುತ್ತವೆ. ಈ ಪ್ರಭೇದಗಳನ್ನು ಕರ. ತೆರಿಗೆ. ಶುಲ್ಕ. ಉಪಕರ. ಅಧಿಕರ. ನಿರ್ಧರಣೆ. ಕಂದಾಯ. ಸುಂಕ. ಅಧಿಭಾರ.

ಭಾರ ಎಂಬುದಾಗಿ ಸೂಚಿಸಬೇಕಾಗುವುದು. ಜೀವನದಲ್ಲಿ ವ್ಯಾಪಕ ಮಾರ್ಪಾಡುಗಳೂ ವೈವಿಧ್ಯಗಳೂ ಉಂಟಾದಂತೆ, ಮಾನವ ವ್ಯಾಪಾರವನ್ನು ಸೂಚಿಸುವ ಶಬ್ದರಾಶಿಯೂ ಸೃಷ್ಟಿಯಾಗಲೇಬೇಕೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇನ್ನು, ಇಂಗ್ಲಿಷ್ ವಾಕ್ಯರಚನಾ ಕ್ರಮವನ್ನೂ (syntax) ಖಂಡವ್ಯವಸ್ಥೆಯನ್ನೂ (arrangement of clauses) ಯಥಾವತ್ತಾಗಿ ನಮ್ಮ ಭಾಷಾಂತರಗಳಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ದೂರಾನ್ವಯದಿಂದ ಅನೇಕ ಸಲ ಮುಖ್ಯಾಂಶವೇ ಮರೆಮಾಚಿ ಹೋಗುವುದು. ಕೆಲವು ಸಲ, ವಾಕ್ಯರಚನೆಯೇ ನಮ್ಮ ಭಾಷೆಗಳ ಜಾಯಮಾನಕ್ಕೆ ಒಗ್ಗುವುದಿಲ್ಲ. ವಾಕ್ಯ ಇಂಗ್ಲಿಷಿನಲ್ಲಿ 'when' ಎಂಬುದರಿಂದ ಆರಂಭವಾದರೆ ಕನ್ನಡ ಖಂಡವು ಯಾವಾಗ ಎಂಬುದರಲ್ಲಿಯೂ (where) ಎಂಬುವರಿಂದ ಆರಂಭವಾದರೆ ಎಲ್ಲಿ ಎಂಬುದರಲ್ಲಿಯೂ ಕೊನೆಗೊಳ್ಳಬೇಕು. ಹೀಗೆ ಕೆಲವು ಕಟ್ಟು ಪಾಡುಗಳನ್ನು ಹಾಕಿಕೊಳ್ಳಬೇಕಾಗುವುದು. Except as provided ಎಂಬುದನ್ನು 'ಉಪಬಂಧಿಸಿದಂತಲ್ಲದೆ' ಎಂದೂ notwithstandinga nything contained herein ಎಂಬುವನ್ನು 'ಇದರಲ್ಲಿ ಏನೇ ಇದ್ದರೂ' ಎಂದೂ unless otherwise provided ಎಂಬುವನ್ನು 'ಅನ್ಯಥಾ ಉಪಬಂಧಿಸಿದ್ದ ಹೊರತು' ಎಂದೂ nothing in this section ಎಂಬುದನ್ನು 'ಈ ಪ್ರಕರಣದಲ್ಲಿರುವುದು ಯಾವುದೂ' ಎಂದೂ—ಹೀಗೆ ಅನೇಕ ಖಂಡಗಳನ್ನು ನಾವು ನಿಷ್ಕರ್ಷೆಗೊಳಿಸಿ, ಅವುಗಳನ್ನು ತಪ್ಪದೆ ಆಯಾ ಸಂದರ್ಭಗಳಲ್ಲಿ ಉಪಯೋಗಿಸಿ ಪ್ರಾರೂಪದ ಏಕರೂಪತೆಯನ್ನು ಕಾಯ್ದುಕೊಳ್ಳಬೇಕಾಗುವುದು.

ಇದಲ್ಲದೆ, ಆಡಳಿತಕ್ಷೇತ್ರಕ್ಕೆ ಸಂಬಂಧಿಸಿದ ಸೇವಾ ನಿಯಮ ಇತ್ಯಾದಿಗಳನ್ನು ಕನ್ನಡಕ್ಕೆ ಭಾಷಾಂತರಿಸುವಾಗ ಅನೇಕ ಕಷ್ಟಗಳು ತಲೆದೋರುವುವು. ಇಂಗ್ಲಿಷಿನಲ್ಲಿರುವ ಶಬ್ದ ಮತ್ತು ಅದರಿಂದ ಅಭಿಪ್ರೇರಿತವಾದ ಮುಖ್ಯಾಂಶವನ್ನು ಗಮನಿಸಿ ಪಾರಿಭಾಷಿಕಗಳನ್ನು ಗೊತ್ತುಪಡಿಸಬೇಕಾಗುವುದು. ಉದಾಹರಣೆಗೆ, Retirement Pension, Pension, Superannuation Pension, Injury Pension, Invalid Pension, Disability Pension, Family Pension ಎಂಬ ಈ ಪ್ರಯೋಗಗಳನ್ನು ನಾವು ಸಮಾನವಾಗಿ ಎಲ್ಲ ಪ್ರಸಂಗಗಳಲ್ಲಿಯೂ ನಿವೃತ್ತಿ ವೇತನ ಎಂದು ಅನುವಾದಿಸಲು ಬರುವುದಿಲ್ಲ. ಒಂದೊಂದೂ ಒಂದೊಂದು ಪರಿಸ್ಥಿತಿಯಲ್ಲಿ ದೊರೆಯುವ ವೇತನ, ಧನಸಹಾಯ ಮತ್ತು ಸೌಲಭ್ಯವನ್ನು ಸೂಚಿಸುವುದು. ಆದುದರಿಂದ ಇವುಗಳನ್ನು ವಿಶ್ರಾಂತಿವೇತನ, ನಿವೃತ್ತಿವೇತನ, ವಯೋವೇತನ, ಕ್ಷತಿವೇತನ, ವಿಕಲತೆ ವೇತನ, ದುರ್ಬಲತೆ ವೇತನ, ಕುಟುಂಬ ವೇತನ ಎಂಬುದಾಗಿ ಸೂಚಿಸಬೇಕಾಗುವುದು. ಇದೇ ರೀತಿಯಾಗಿ Vacation, Leave, Holiday ಎಂಬ ಪದಗಳನ್ನೂ Apppoint ment, Post, Office, Vacancy ಎಂಬ ಸಮಾನಾರ್ಥಕ ಪದಗಳನ್ನೂ ಕ್ರಮವಾಗಿ ಬಿಡುವು, ರಜೆ, ರಜಾದಿನ ಎಂಬುದಾಗಿಯೂ ನೇಮಕ (ನಿಯುಕ್ತಿ), ಹುದ್ದೆ, ಪದ, ರಿಕ್ತಸ್ಥಾನ (ಖಾಲಿ ಜಾಗ) ಎಂಬ ಪದಗಳಿಂದಲೂ ಸೂಚಿಸಬೇಕಾಗುವುದು. Penalty, Punishment, Fine, Sentence ಎಂಬುವನ್ನು ದಂಡ, ದಂಡನೆ, ಜುಲ್ಮಾನೆ, ಶಿಕ್ಷೆ ಅಥವಾ ದಂಡಾಜ್ಞೆ ಎಂದೂ ನಿರೂಪಿಸಬೇಕಾಗುವುದು.

ಇದಕ್ಕಿಂತ ಹೆಚ್ಚಾಗಿ, ಭಾಷಾ ಜಾಯಮಾನಕ್ಕೆ ಒಗ್ಗುವಂತೆ ಭಾಷಾಂತರವಾಗಬೇಕಾದುದೂ ಅಗತ್ಯ. ಭಿನ್ನ ಸಂಸ್ಕೃತಿ, ಭಿನ್ನ ಸಂಸ್ಕಾರಗಳಿಂದಾಗಿ, ಪದಗಳಿಗೆ ಪದಗಳನ್ನು ಜೋಡಿಸಿದರೆ ಸರಿಹೊಂದುವುದಿಲ್ಲ. ಇದರಿಂದ ಅನುವಾದಗಳು ಶ್ರುತಿಸೌಮ್ಯತೆಯನ್ನೂ ಪದಮೈತ್ರಿಯನ್ನೂ ಕಳೆದುಕೊಂಡು, ಕರ್ಣಕಠೋರವೂ ನೀರಸವೂ ಆಗುವುದುಂಟು. ಉದಾ: widow of the deceased husband ಎಂಬುದನ್ನು ಇದ್ದಂತೆಯೇ 'ಮೃತಪತಿಯ ಅಥವಾ ಸತ್ತ ಗಂಡನ ವಿಧವೆ' ಎಂದು ಭಾಷಾಂತರಿಸಿದರೆ ವಿಹಿತವೆನಿಸುವುದೇ? ಬದಲಾಗಿ, 'ಮೃತನ ಪತ್ನಿ' ಎಂದರೆ ಶ್ರವಣ ಕಠೋರತೆ ಕಡಿಮೆಯಾಗುವುದಲ್ಲದೆ ಅರ್ಥಕ್ಕೆ ಬಾಧೆಯೂ ಬರುವುದಿಲ್ಲ. ಇದೇ ರೀತಿಯಾಗಿ A Hindu

person whether a male or female ಎಂಬುದನ್ನು ಇದ್ದಂತೆಯೇ 'ಬಿಟ್ಟು ಹಿಂದೂ ವ್ಯಕ್ತಿ ಗಂಡಸಾಗಿರಲಿ ಅಥವಾ ಹೆಂಗಸಾಗಿರಲಿ ಅಥವಾ ಪುರುಷನಾಗಿರಲಿ ಅಥವಾ ಸ್ತ್ರೀಯಾಗಿರಲಿ' ಎಂದು ಹೇಳುವ ದ್ರಾವಿಡ ಪ್ರಾಣಾಯಾಮದ ಬದಲಾಗಿ, ನೇರವಾಗಿ 'ಬಿಟ್ಟು ಹಿಂದೂ ಪುರುಷ ಅಥವಾ ಸ್ತ್ರೀ' ಎಂದು ಆರಂಭಿಸಿದರೆ ಅರ್ಥಕ್ಕೆ ಆಗುವ ವ್ಯಾಹತಿಯೇನು? Nothing ಎಂಬುದರಿಂದ ಆರಂಭವಾಗುವ ಖಂಡವನ್ನು ಕನ್ನಡದಲ್ಲಿ ನಿಷೇಧಾರ್ಥಕ ನಾಮಪದದಿಂದ (ವಿಷಯ) ಆರಂಭಿಸಲು ಸಾಧ್ಯವೇ ಇಲ್ಲ. ಇದನ್ನು 'ಯಾವುದೂ' ಎಂಬುವರಿಂದ (Positive) ಸೂಚಿಸಿ ವಾಕ್ಯಾಂತದಲ್ಲಿಯೇ ನಿಷೇಧಾರ್ಥಕ ಕ್ರಿಯಾಪದದಲ್ಲಿ ಕೊನೆಗೊಳಿಸಬೇಕಾಗುವುದು. ಹೀಗೆ ಅನೇಕ ಸಮಸ್ಯೆಗಳು ನಮ್ಮ ಮುಂದೆ ಬರುವುವು.

ಈ ಎಲ್ಲ ಸಮಸ್ಯೆಗಳನ್ನು ಕುರಿತು ಸಾಮೂಹಿಕ ಚರ್ಚೆ ನಡೆಸಿ ಒಂದು ನಿರ್ಣಯಕ್ಕೆ ಬರಲು ಎರಡು ಸಲ ದಿಲ್ಲಿಯಲ್ಲಿ ರಾಜಭಾಷಾ ಸಮ್ಮೇಳನ ನಡೆಯಿತು. ಆಡಳಿತ ವ್ಯವಹಾರಕ್ಕೂ ಶಾಸನ ರಚನೆಗೂ ನ್ಯಾಯಾಲಯಕ್ಕೂ ಬೇಕಾಗುವ, ಮೇಲೆ ವಿವರಿಸಿದ, ಸಾಹಿತ್ಯವನ್ನು ಸಾಧ್ಯವಾದಷ್ಟು ತೀವ್ರವಾಗಿ ಸಿದ್ಧಪಡಿಸಬೇಕೆಂದು ಈ ಸಮ್ಮೇಳನಗಳು ಒತ್ತಾಯಪಡಿಸಿವೆ. ಈ ಅನುಕೂಲಗಳೆಲ್ಲ ಏರ್ಪಟ್ಟರೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 137ನೆಯ ಪ್ರಕರಣ ಮತ್ತು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 558ನೆಯ ಪ್ರಕರಣದ ಮೇರೆಗೆ ಕೆಲವು ಹಂತಗಳಲ್ಲಾದರೂ ನ್ಯಾಯಾಲಯಗಳಲ್ಲಿ ಕನ್ನಡ ವನ್ನು ಬಳಕೆಗೆ ತರಬಹುದಾಗಿದೆ. ಭಾಷಾ ನಿರ್ದೇಶನಾಲಯ ಮತ್ತು ರಾಜಭಾಷಾ ವಿಧಾಯಿ ತಜ್ಞ ಸಮಿತಿ ಈ ಕಾರ್ಯದ ಹೊಣೆಯನ್ನು ಹೊತ್ತುಕೊಂಡಿವೆ.

ಈ ಕಾರ್ಯದಲ್ಲಿ ನಿರತರಾದ ವ್ಯಕ್ತಿಗಳು ಏಕಭಾಷಾ ವಿಶಾರದರಾದರೆ ಸಾಲದು. ನೆರೆಹೊರೆಯ ಭಾಷೆಗಳ ಸ್ವಲ್ಪ ಪರಿಜ್ಞಾನವೂ ಅವಶ್ಯಕ. ಇದಕ್ಕಿಂತ ಹೆಚ್ಚಾಗಿ ಇಂಗ್ಲಿಷನ್ನು ಸರಿಯಾಗಿ ಅರ್ಥ ಮಾಡಿ ಕೊಳ್ಳಲು ಪ್ರಯತ್ನಮಾಡಬೇಕಾಗುವುದು. ಭಾಷಾಜ್ಞಾನದ ಜೊತೆಗೆ ಕಾನೂನು ವ್ಯಾಸಂಗವೂ ಆಗಿದ್ದರೆ ಇನ್ನೂ ಒಳ್ಳೆಯದು. ಇಲ್ಲದಿದ್ದರೆ. *Ab initio, Ab Intestato, Ad Infinitum, Ad interium, Alibi, Amicus curiae, Animus possidendi Caveatemptor, Damnum sine Injuria, Informa Papuris,* ಇಂಥ ಲ್ಯಾಟಿನ್ ಪದಗಳಿಗೆ ಸರಿಯಾಗಿ ಅರ್ಥಮಾಡುವುದೂ ಅವಕ್ಕೆ ತಕ್ಕಂತೆ ಕನ್ನಡದಲ್ಲಿ ಶಬ್ದಸೃಷ್ಟಿ ಮಾಡುವುದೂ ಕಷ್ಟಕರವಾಗುವುದು. ಕನ್ನಡ ಭಾಷಾಂತರಕಾರರು ಅಥವಾ ಈ ದೃಷ್ಟಿಯಿಂದ ರಾಜ ಭಾಷಾ ಅಧಿಕೃತ ಪಾಠಗಳನ್ನು ತಯಾರಿಸುವ ಎಲ್ಲ ಕನ್ನಡ ವಿಧಿಪ್ರಾರೂಪಕರು ಕಾನೂನು ಪರಿಜ್ಞಾನ ಹೊಂದಿರುವುದು ಅತ್ಯವಶ್ಯ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಭಾಷೆ, ಕಾನೂನು ಪರಿಚಯ ಎರಡನ್ನೂ ಸಮತೂಕವಾಗಿ ಸರಿಹೊಂದಿಸಿಕೊಳ್ಳದಿದ್ದರೆ ಅತ್ಯಲ್ಪ ಮಹತ್ವದ ಅನುವಾದವೂ ಪ್ರಮಾದ ಕ್ಕೀಡಾಗುತ್ತದೆ. ಉದಾ: Then the balance should be struck ಎಂಬು ದನ್ನು 'ಶಿಲುಕನ್ನು ಹೊಡೆದು ಹಾಕಬೇಕು' ಎಂದೂ Therefore in such cases no objection slip need be issued ಎಂಬುದನ್ನು 'ಆದುದರಿಂದ ಇಂಥ ಸಂದರ್ಭ ಗಳಲ್ಲಿ ಆಕ್ಷೇಪಣೆ ಇಲ್ಲ ಎಂದು ಪ್ರಮಾಣಪತ್ರ ಕೊಡತಕ್ಕುದು' ಎಂದೂ ಅನುವಾದಿಸಿ ಅರ್ಥ ಮತ್ತು ಉದ್ದೇಶ ಇವೆರಡರ ಕೊಲೆ ಮಾಡಿದುದನ್ನು ನೋಡುತ್ತೇವೆ. ಈ ದೃಷ್ಟಿಯಿಂದಲೇ ಈ ಕ್ಷೇತ್ರದಲ್ಲಿ ಕಾರ್ಯನಿರತರಾದವರು. ಇಂಗ್ಲಿಷ್ ಪ್ರಾರೂಪಣ ವಿಭಾಗದಲ್ಲಿ ಕೆಲಸ ಮಾಡುವವರು ಹೊಂದಿರುವ ಯೋಗ್ಯತೆಗಳನ್ನೂ ಅರ್ಹತೆಗಳನ್ನೂ ಕುರಿತು ಕೇಂದ್ರ ರಾಜಭಾಷಾ ಆಯೋಗದವರು ಆಗಾಗ ಸಲಹೆ ನೀಡುತ್ತ ಬಂದಿದ್ದಾರೆ.

ಭಾಷೆಯಲ್ಲಿ ಬದಲಾವಣೆಯಾಗುತ್ತಿರುವುದನ್ನು ಮತ್ತು ಕನ್ನಡೀಕರಣವನ್ನು ಅನೇಕರು ಆಕ್ಷೇಪಿ ಸುತ್ತಾರೆ. ಇಂಗ್ಲಿಷ್ ಭಾಷೆಯನ್ನೂ ಉರ್ದು ಭಾಷೆಯನ್ನೂ ಪರಕೀಯರ ಪ್ರೀತಿ ಸಂಪಾದನೆಗಾಗಿ ಅಥವಾ ಉದರನಿಮಿತ್ತಕ್ಕಾಗಿ ಕಲಿತು ಅದನ್ನೇ ಮನೆಮಾತಾಗಿ ಮಾಡಿಕೊಂಡ ಅಲ್ಪಸಂಖ್ಯಾತರು ಇಂಥ ಆಕ್ಷೇಪಣೆಗಳನ್ನು ಎತ್ತಬಹುದು. ಅನ್ಯಭಾಷೆಗಳನ್ನು ನಾವು ಕಲಿಯುವುದಾಗಲಿ, ಅವುಗಳಲ್ಲಿ

ಅಪಾರ ಪಾಂಡಿತ್ಯವನ್ನು ಗಳಿಸುವುದಾಗಲಿ ನಮ್ಮ ತಾಯ್ನುಡಿಯ ಏಳಿಗೆಗೆ ಆತಂಕವನ್ನೊಡ್ಡಕೂಡದು. ಇಂಗ್ಲಿಷ್ ಭಾರತಾದ್ಯಂತ ಸಂಪರ್ಕಭಾಷೆಯಾದುದರಿಂದ ಮುಂದುವರಿದ ಜನಾಂಗಗಳ ಅನೇಕ ಸ್ವತಂತ್ರ ವಿಚಾರಗಳನ್ನೂ ನಾನಾಮುಖ ಸಾಧನೆಗಳನ್ನೂ ಅರಿತುಕೊಳ್ಳಲು ಅನುಕೂಲವಾಯಿತೆಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ನಮ್ಮ ದೇಶದಲ್ಲಿ ಜನಜಾಗೃತಿ ಉಂಟಾಗಿ ವಿಚಾರೈಕ್ಯ ಮೂಡಿ ಸ್ವಾತಂತ್ರ್ಯಪ್ರಾಪ್ತಿಯ ಹೋರಾಟಕ್ಕೆ ಸಂಪರ್ಕಭಾಷೆಯಾದ ಇಂಗ್ಲಿಷ್ ಸಲ್ಲಿಸಿದ ಸೇವೆಯನ್ನು ಯಾರೂ ಅಲ್ವೀಕರಿಸುವುದಿಲ್ಲ. ಆದರೆ ಸ್ವತಂತ್ರವಾದ ನಮ್ಮ ದೇಶ ನಮ್ಮ ನಾಡನುಡಿಯ ಪುರೋಭಿವೃದ್ಧಿಗಾಗಿ ಯತ್ನಿಸುವುದು ಅತ್ಯವಶ್ಯ. ಈ ಉದ್ದೇಶದಿಂದಲೇ ಭಾಷೆಯ ಬಗ್ಗೆ ಅನುಸರಿಸಬೇಕಾದ ವಿಧಾನವನ್ನು ಸಂವಿಧಾನ ಸೂತ್ರರೂಪವಾಗಿ ಸೂಚಿಸಿದೆ. ಕೇಂದ್ರ ಮತ್ತು ರಾಜ್ಯಸರ್ಕಾರಗಳವರು ಈ ಭಾಷಾ ನೀತಿಯನ್ನು ಕಾರ್ಯಗತಗೊಳಿಸಿ ಜನಗಳಿಗಿತ್ತ ಭರವಸೆಯನ್ನು ಈಡೇರಿಸಿ ತನ್ಮೂಲಕ ಸರ್ವತೋಮುಖವಾಗಿ ಜನರ ಆಶೋತ್ತರಗಳನ್ನು ಪೂರೈಸಲು ಕಂಕಣಬದ್ಧರಾಗಿದ್ದಾರೆ. ನಮ್ಮ ಮಟ್ಟಿಗೆ ಹೇಳುವುದಾದರೆ. 'ಕನ್ನಡಂ ಕತ್ತುರಿಯಲ್ತೆ', 'ಲಲಿತಪದ ಕನ್ನಡದ ನುಡಿಯೊಳು ತನ್ನ ಮುಕುತಿಯ ಗಳಿಸಿಕೊಂಡರೆ ಸಾಲದೆ' ಎಂಬ ನಮ್ಮ ಪ್ರಾಚೀನರ ಉಕ್ತಿಯನ್ನು ಅಭಿಮಾನಪೂರ್ವಕವಾಗಿ ನೆನೆದುಕೊಂಡು. ಮತ್ತೆ ಕನ್ನಡ ಭಾಷಾ ಸರಸ್ವತಿ ಅಧಿಕಾರದ ಗದ್ದುಗೆಯನ್ನೇರಿ ವಿಜೃಂಭಿಸಲಿ ಎಂದು ತುಂಬು ಮನಸ್ಸಿನಿಂದ ಹಾರೈಸಬೇಕಾಗಿದೆ.

# ನ್ಯಾಯಾಲಯ ಭಾಷೆ

ನ್ಯಾಯಾಲಯಗಳ ಕ್ಷೇತ್ರಕ್ಕೆ ಬಂದಾಗ ಪರಭಾಷಾ ವ್ಯವಸ್ಥೆಯ ವೈಪರೀತ್ಯ ಚೆನ್ನಾಗಿ ವೇದ್ಯವಾಗುತ್ತದೆ. ಕೆಳಕೋರ್ಟುಗಳಲ್ಲಿ ಕಕ್ಷಿಗಳ ವಿಚಾರಣೆ, ಸಾಕ್ಷ್ಯ ಇವು ಕನ್ನಡದಲ್ಲಿರಬಹುದು. ಆದರೆ ಜಿಲ್ಲಾ ಮಟ್ಟಕ್ಕೆ ಬಂದ ಕೂಡಲೆ ಇಂಗ್ಲಿಷು ಸಂಪೂರ್ಣವಾಗಿ ಆವರಿಸುತ್ತದೆ. ವಾದ, ಸಾಕ್ಷ್ಯದ ದಾಖಲೆ, ತೀರ್ಪು– ಎಲ್ಲವೂ ಇಂಗ್ಲಿಷಿನಲ್ಲಿ. ಉಚ್ಚ ನ್ಯಾಯಾಲಯದಲ್ಲಿ ಇಂಗ್ಲಿಷಿನದೇ ಪ್ರಭುತ್ವ. ಹೀಗಾಗಿ ಇದು ಇಂಗ್ಲಿಷ್ ಬಲ್ಲವರ ಏಕಸ್ವಾಮ್ಯವಾಗಿದೆ. ಇಂಗ್ಲಿಷನ್ನು ತೆಗೆದುಹಾಕಿದರೆ ಆಗ ಇವರ ಶಕ್ತಿ ಬಹಳ ಮಟ್ಟಿಗೆ ಕುಗ್ಗುತ್ತದೆ. ಇವರ ವ್ಯಾಪಾರ ಇಳಿಯುತ್ತದೆ. ನ್ಯಾಯಾಲಯಗಳಲ್ಲಿ ಏನು ನಡೆಯುತ್ತಿದೆಯೆಂಬುದರ ಬಗ್ಗೆ ಕಕ್ಷಿಯನ್ನು ಅಂಧಕಾರದಲ್ಲಿಟ್ಟಿರುವ ವರೆಗೂ ನ್ಯಾಯವಾದಿಗಳಿಗೆ ಅನುಕೂಲ. ಇದು ಒಂದು ಹಿತಾಸಕ್ತಿ. ಆದ್ದರಿಂದಲೇ ದೇಶಭಾಷೆಗೆ ವಿರೋಧ.

ಕರ್ನಾಟಕದ ನ್ಯಾಯಾಲಯದಲ್ಲಿ ಕನ್ನಡವನ್ನು, ಇತರ ರಾಜ್ಯಗಳ ನ್ಯಾಯಾಲಯಗಳಲ್ಲಿ ಅಲ್ಲಲ್ಲಿಯ ಭಾಷೆಗಳನ್ನು, ಬಳಸುವ ಬಗ್ಗೆ ಇರುವ ತೊಂದರೆಗಳು ಎರಡು. ಒಂದು ಇಂಗ್ಲಿಷ್ ಪರವಾದವರ ವಾದ. ನ್ಯಾಯಾಲಯದಲ್ಲಿ ಬಳಕೆಗೆ ಬರುವಷ್ಟು ಸಾಮರ್ಥ್ಯವನ್ನು ನಮ್ಮ ಭಾಷೆಗಳು ಗಳಿಸಿಕೊಂಡಿಲ್ಲ– ಎಂಬುದು ಒಂದು ವಾದ. ನ್ಯಾಯಾಲಯಗಳಲ್ಲಿಯ ವ್ಯವಹಾರ ಬಹಳಮಟ್ಟಿಗೆ ಪೂರ್ವನಿದರ್ಶನಗಳನ್ನೇ ಅವಲಂಬಿಸಿರುವುದರಿಂದ, ಇವು ಅಡಕವಾಗಿರುವ ಕಾನೂನು ವರದಿಗಳೆಲ್ಲ ಇಂಗ್ಲಿಷಿನಲ್ಲಿರುವುದರಿಂದ, ಕನ್ನಡವನ್ನು ಅನುಸರಿಸುವುದು ಕಷ್ಟ ಎಂದು ವಾದಿಸಲಾಗಿದೆ. ಆದರೆ ಅನೇಕ ಶತಮಾನಗಳಿಂದ ಬೆಳೆದುಬಂದಿರುವ ಪ್ರಾದೇಶಿಕ ಭಾಷೆಗಳು ನ್ಯಾಯಾಲಯಕ್ಕೆ ಒಗ್ಗುವುದಿಲ್ಲವೆಂಬುದರಲ್ಲಿ ಅರ್ಥವಿಲ್ಲ. ಇವನ್ನು ತರಲು ಪ್ರಾಮಾಣಿಕ ಪ್ರಯತ್ನ ಅಗತ್ಯ. ಕಾನೂನು ವರದಿಗಳು ಇಂಗ್ಲಿಷಿನಲ್ಲೇ ಇದ್ದರೂ ಅಭ್ಯಂತರವಿಲ್ಲ. ಅವಲ್ಲಿ ಮುಖ್ಯವಾದವನ್ನು ಪ್ರಾದೇಶಿಕ ಭಾಷೆಗಳಲ್ಲಿ ಕ್ರಮಕ್ರಮವಾಗಿ ತರಲು ಪ್ರಯತ್ನ ಮಾಡಬೇಕು. ಎಲ್ಲಿ ತತ್‌ಕ್ಷಣ ಪ್ರಾದೇಶಿಕ ಭಾಷೆಯ ಬಳಕೆ ಸಾಧ್ಯವಿಲ್ಲವೋ ಅಲ್ಲಿ ಇಂಗ್ಲಿಷನ್ನು ಬಳಸಿಕೊಂಡರೂ ಅಭ್ಯಂತರವಿಲ್ಲ. ಬೇಕಾದ್ದು ಮನಸ್ಸು. ಮಾರ್ಗ ತಾನಾಗಿಯೇ ಹೊಳೆಯುತ್ತದೆ. ಯಾವ ಭಾಷೆಯೇ ಆಗಲಿ, ಅದನ್ನು ಬಳಸುತ್ತಿದ್ದರೆ ಹರಿತವಾಗಿರುತ್ತದೆ. ಎಲ್ಲ ಭಾಷೆಗಳೂ ಬೆಳೆಯುವುದು ಅನ್ಯೋನ್ಯ ಸಹಕಾರದಿಂದಲೇ. ಪರಸ್ಪರ ಕೊಡು–ಕೊಳ್ಳುವುದೇ ಬೆಳವಣಿಗೆಯ ಮೂಲ.[1]

—ಎಚ್ಚೆಸ್ಕೆ

---

1 ಭಾರತದ ಭಾಷಾ ಸಮಸ್ಯೆ, ಗಾಂಧೀ ಭವನ, ಮಾನಸಗಂಗೋತ್ರಿ, ಮೈಸೂರು (1973), ಪು. 53–54

ಡಾ. ಕೊ. ವ್ಯಾ. ರಮೇಶ
ಶಿವಲಂಕ ಶ್ರೀರಾಮಚಂದ್ರಮೂರ್ತಿ

# ಅಹದನಕರಂ ತಾಮ್ರಶಾಸನ : ಒಂದು ಪುನಃಪರಿಶೀಲನೆ

ಹಿಂದಿನ ಮದರಾಸು ಮಾಗಣೆಯ 'ಅಹದನಕರಂ'ಎಂಬಲ್ಲಿ ದೊರೆತದ್ದೆಂದು ಹೇಳಲಾದ ಐತಿಹಾಸಿಕ ಮಹತ್ತ್ವದ ತಾಮ್ರಶಾಸನವೊಂದನ್ನು ಖ್ಯಾತ ಶಾಸನತಜ್ಞ ಫ್ಲೀಟರು 1884ನೆಯ ಇಸವಿಯಲ್ಲಿ 'ಇಂಡಿಯನ್ ಆಂಟಿಕ್ವರಿ'ಯ 13ನೆಯ ಸಂಪುಟದ 185–87ನೆಯ ಪುಟಗಳಲ್ಲಿ ಪ್ರಕಟಿಸಿದ್ದರು. ಈ 'ಅಹದನಕರಂ' ಅಂದಿನ ವಿಶಾಲವಾದ ಮದರಾಸು ಮಾಗಣೆಯ ಯಾವ ಪ್ರಾಂತ್ಯದಲ್ಲಿ ಇತ್ತು ಎಂಬುದಾಗಲಿ ಅದರ ಇಂದಿನ ಹೆಸರೇನೆಂಬುದಾಗಲಿ ತಿಳಿಯದಾಗಿದೆ. ದಕ್ಷಿಣ ಭಾರತದ ವಾಣಿಜ್ಯ ಇತಿಹಾಸದ ದೃಷ್ಟಿಯಿಂದ ಈ ತಾಮ್ರಶಾಸನ ಅತಿ ಮುಖ್ಯವಾದುದೆಂಬ ಕಾರಣದಿಂದ ಅದನ್ನು ಕುರಿತ ಈ ಪರಿಶೀಲನಾತ್ಮಕ ಲೇಖನವನ್ನು ಬರೆಯಲಾಗಿದೆ.

ಲಿಪಿಶಾಸ್ತ್ರ ದೃಷ್ಟಿಯಿಂದ ಕ್ರಿ.ಶ. 9ನೆಯ ಶತಮಾನದ ಮಧ್ಯಕಾಲಕ್ಕೆ ಸರಿಹೊಂದುವ ಪ್ರಾಚೀನ ತೆಲುಗು–ಕನ್ನಡ ಲಿಪಿಯಲ್ಲಿ ಹಾಗೂ ಸಂಸ್ಕೃತ ಮತ್ತು ತೆಲುಗು ಭಾಷೆಗಳಲ್ಲಿ ಬರೆಯಲಾಗಿರುವ ಈ ಶಾಸನ, ಚಾಳುಕ್ಯ ಮನೆತನದ ಸರ್ವಲೋಕಾಶ್ರಯ ವಿಷ್ಣುವರ್ಧನ ಮಹಾರಾಜನ ಆಳಿಕೆಯಲ್ಲಿ ಹೊರಡಿಸಿದ್ದು. ಈ ಅರಸ ವೇಂಗಿಯ ಪೂರ್ವೀ ಚಾಳುಕ್ಯ ಮನೆತನದ 5ನೆಯ ವಿಷ್ಣುವರ್ಧನನೇ (ಕ್ರಿ.ಶ. 847–49) ಇರಬೇಕು. ಶಾಸನ ಪಾಠದ ಸಂಸ್ಕೃತ ಮತ್ತು ತೆಲುಗು ಭಾಗಗಳ ಪದವಾಕ್ಯ ರಚನೆಗಳಲ್ಲಿ ಹಲವಾರು ಲೋಪದೋಷಗಳು ಕಂಡುಬರುತ್ತವೆಯಾಗಿ ಫ್ಲೀಟರು ಈ ಶಾಸನ ಒಂದು ವೇಳೆ ಕೃತಕವಿರಲೂಬಹುದೆಂಬ ಸಂಶಯವನ್ನು ಹೊರಗೆಡವಿರುತ್ತಾರೆ. ಹಾಗೆ ಶಾಸನ ಕೃತಕವೇ ಆಗಿದ್ದರೂ, ಲಿಪಿಶಾಸ್ತ್ರ ದೃಷ್ಟಿಯಿಂದ ಅದರ ಹುಟ್ಟು ಮೇಲೆ ಹೇಳಿರುವಂತೆ ಕ್ರಿ.ಶ. 9ನೆಯ ಶತಮಾನದ ಮಧ್ಯಭಾಗದಲ್ಲೇ ಆಗಿರುವ ಕಾರಣ, ಪ್ರಸ್ತುತ ಶಾಸನವನ್ನು ಅಂದಿನ ದಕ್ಷಿಣ ಭಾರತದ ಸಾಮಾಜಿಕ–ಸಾಂಸ್ಕೃತಿಕ ಇತಿಹಾಸದ ಪುನಾರಚನೆಗೆ ಬಳಸಿಕೊಳ್ಳುವುದು ಸಮಂಜಸವೇ ಹೌದು.

ಶಾಸನ ಪಾಠದ ತೆಲುಗು ಭಾಗವನ್ನು ತಪ್ಪಿಂದ ಅರ್ಥವಿಸಲಾಗಲಿಲ್ಲವೆಂದು ಫ್ಲೀಟರು ಹೇಳಿರುತ್ತಾರೆ. ಅನಂತರ ಈ ಶಾಸನವನ್ನು ಪರಿಶೀಲನೆಗೆ ತೆಗೆದುಕೊಂಡ ಕೆಲವು ದೇಶೀ ವಿದ್ವಾಂಸರು ಶಾಸನದ ತೆಲುಗು ಪಾಠದ ಬಗ್ಗೆ ಬೇರೆ ಬೇರೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಅಂಥ ಅಭಿಪ್ರಾಯಗಳ ಒಪ್ಪು ತಪ್ಪುಗಳನ್ನು ಈ ಕೆಳಗೆ ಸಂದರ್ಭಾನುಸಾರವಾಗಿ ವಿವೇಚಿಸಿರುತ್ತೇವೆ.

ಒಟ್ಟು 34 ಸಾಲುಗಳಿಂದ ಕೂಡಿರುವ ಶಾಸನ ಪಾಠದ ಮೊದಲ 17 ಸಾಲುಗಳಲ್ಲಿ ಪೂರ್ವೀ ಚಾಳುಕ್ಯ ಮನೆತನದ ಮತ್ತು ಆಳರಸರ 5ನೆಯ ವಿಷ್ಣುವರ್ಧನನ ಪ್ರಶಸ್ತಿಗಳನ್ನು ನೀಡಲಾಗಿದೆ. ಅವುಗಳಿಂದ ಉಪಯುಕ್ತವಾದ ಹೊಸ ವಿಚಾರಗಳೇನೂ ತಿಳಿದುಬರುವುದಿಲ್ಲ. 17–20ನೆಯ ಸಾಲುಗಳಲ್ಲಿ ಕೊರೆಯಲಾಗಿರುವ ದಾನಭಾಗದ ಪಾಠ ಹೀಗಿದೆ:

"ಸ್ವಸ್ತಿ ಪೃಥಿವೀ ಪಲ್ಲವ ಪಟ್ಟನಬುನ ಊರಿವಾರು ಕರಿಗಳ್ಳ
ಪಡವರಿಕಿ ಊರಿಸ್ವಾಮುಳ್ ಇಚ್ಚಿನ ಸ್ಥಿತಿ ರೆಣ್ಬುವಾಡಲ

ಪಟ್ಟನಾವುರಕು ಅರಿಯು ಡಗುತೆಜ಼ಿಯು ಸಿದ್ದಾಯಬು
ದಂಡು ದಶಾಪರಾಧಬುನು ಸರ್ವಬಾಧಾಪರಿಯಾರವು ಊರು
ದಾಯ ಸೇಸಿ ಇಚ್ಚಿ[ರಿ*]"[1]

ಮೇಲಿನ ಪಾಠವನ್ನು ಹೀಗೆ ಕನ್ನಡಿಸಬಹುದಾಗಿದೆ:

"ಸ್ವಸ್ತಿ ಪೃಥಿವೀ ಪಲ್ಲವ ಪಟ್ಟನದ ಊರಿನವರಾದ
ಕರಿಗಳ್ಳ ವಡವರಿಗೆ ಊರ ಸ್ವಾಮಿಗಳು ಕೊಟ್ಟ ಸ್ಥಿತಿ–
ರೆಂಡುವಾಡಲ ಪಟ್ಟನದವರು ತೆರಬೇಕಾದ ಅರಿ, ಡಗು ತೆಜಿ,
ಸಿದ್ಧಾಯ, ದಂಡು ದಶಾಪರಾಧಗಳನ್ನು ಸರ್ವಬಾಧಾ ಪರಿ–
ಹಾರವಾಗಿ ಊರುದಾಯ ಮಾಡಿ ಕೊಟ್ಟರು."

ಹೀಗಾಗಿ, ರೆಂಡುವಾಡಲ ಪಟ್ಟನದವರಿಂದ ತೆಜಿಯ ರೂಪದಲ್ಲಿ ವಸೂಲಾಗುತ್ತಿದ್ದ ಅರಿ, ಡಗು ತೆಜಿ, ಸಿದ್ಧಾಯ, ದಂಡು ದಶಾಪರಾಧ ಎಂಬ ಸುಂಕಗಳ ಆಯವೇ ದಾನವಾದಲಾದ ಸ್ಥಿತಿ ಎಂದಾಗುತ್ತದೆ. ದಾನವನ್ನು ಪೃಥಿವೀ ಪಲ್ಲವ ಪಟ್ಟನದ ಊರಿನವರಾದ (ಅಂದರೆ ಆ ಊರಿನಲ್ಲಿ ಪ್ರತಿಷ್ಠಿತರಾದ) ಕರಿಗಳ್ಳ ವಡವರೆಂಬ ದೇವರಿಗೆ ನೀಡಲಾಯಿತು. ಈ ಹೆಸರಿನ ಉತ್ತರಾರ್ಧವಾದ 'ವಡವರ್' ಎಂಬುದು ಸಂಸ್ಕೃತದ ಭಟ್ಟಾರಕ=ಭಟ್ಟಾರ=ಭಟಾರವೆಂಬ ಪದದಿಂದ ಹುಟ್ಟಿದ ತದ್ಭವವಿರಬೇಕು. 'ವಡವರ್' ಎಂಬುದು ತಮಿಳಿನ 'ಉಡೈಯವರ್' ಎಂಬುದರ ಪ್ರತಿರೂಪವಿರಬಹುದೆಂಬ ವೇಟೂರಿ ಪ್ರಭಾಕರಶಾಸ್ತ್ರಿಗಳ[2] ಮತ್ತು ಮಲ್ಲಂಪಲ್ಲಿ ಸೋಮಶೇಖರ ಶರ್ಮರ[3] ಅಭಿಪ್ರಾಯ ಸರಿಯುಲ್ಲವೆಂಬುದು ನಮ್ಮ ಭಾವನೆ. ಏಕೆಂದರೆ 'ಉಡೈಯವರ್' ಎಂಬುದು ಕನ್ನಡಕ್ಕಾಗಲಿ ತೆಲುಗಿಗಾಗಲಿ ಇಳಿದಾಗ 'ವಡೆಯರ್ (=ಒಡೆಯರು)' ಎಂದು ವಕಾರಲೋಪದೊಂದಿಗೆ ಕಾಣಿಸಿಕೊಳ್ಳಬೇಕೇ ಹೊರತು, ಯಕಾರಲೋಪ ಉಂಟಾಗದು.

ಇನ್ನು, 'ಕರಿಗಳ್ಳ' ಎಂಬುದನ್ನು 'ಕರಿಗಲ್ಲ ತಾಡನ'ದಂಥ ಪ್ರಶಸ್ತಿಯ ಸಾಮ್ಯೈಕದೇಶ ಗ್ರಹಣವಾಗಿ ಕೊಂಡು 'ಆನೆಗಳ ಗಲ್ಲವನ್ನು ಹೊಡೆಯುವುದರಲ್ಲಿ ಸಮರ್ಥರು' ಎಂದು ಆ ಪದಕ್ಕೆ ಅರ್ಥ ನೀಡಬಹುದೆಂಬ ವೇಟೂರಿ ಪ್ರಭಾಕರ ಶಾಸ್ತ್ರಿಗಳ ಮತ ಸರಿಯಾದುದಲ್ಲ.[4] ಪೂರ್ವೀ ಚಾಳುಕ್ಯ ಅರಸು ಗುಣಗ ವಿಜಯಾದಿತ್ಯನ ಸಾತಲೂರು ತಾಮ್ರಶಾಸನದಲ್ಲಿ[5] 5ನೆಯ ವಿಷ್ಣುವರ್ಧನನಿಗೆ 'ವರಕರಿಗಲ್ಲ ಭೂಮಿಪ' ಎಂಬ ಬಿರುದನ್ನು ನೀಡಲಾಗಿದೆ. ಈ ಪ್ರಶಸ್ತಿಯನ್ನು 'ಆನೆಗಳನ್ನು ಪಳಗಿಸುವುದರಲ್ಲಿ ಸಮರ್ಥನಾದ ಭೂಪತಿ' ಎಂದಾಗಲಿ, 'ವೈರಿಗಳ ಆನೆಗಳನ್ನು ಸೆರೆಹಿಡಿಯುವುದರಲ್ಲಿ ಸಮರ್ಥನಾದ ಅರಸ'ನೆಂದಾಗಲಿ ಅರ್ಥವಿಸಬಹುದಾಗಿದೆ. ಹೀಗಾಗಿ ಪ್ರಸ್ತುತ ತಾಮ್ರಶಾಸನದಲ್ಲಿ ನಮೂದಿಸಲಾಗಿರುವ ದಾನವನ್ನು ಪಡೆದ ದೇವರಿಗೆ 5ನೆಯ ವಿಷ್ಣುವರ್ಧನನ ಪ್ರಶಸ್ತಿಯಾದ ಕರಿಗಲ್ಲ (<ಕನ್ನಡ: ಕರಿಗಳ್ಳ=ಕರಿ+ಕಳ್ಳ) ಎಂಬುದನ್ನೇ ಹೆಸರಾಗಿ ನೀಡಲಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಬಹುಶಃ ಈ ದೇವರ ಪ್ರತಿಷ್ಠಾಪನೆಗೆ 5ನೆಯ ವಿಷ್ಣು ವರ್ಧನನೇ ಕಾರಣನಿದ್ದಿರಬಹುದು.

ದಾನವನ್ನು ಕೊಟ್ಟವರು ಪೃಥಿವೀಪಲ್ಲವ ಪಟ್ಟನದ 'ಊರಸ್ವಾಮಿಗಳು'; ದಾನದ ಸ್ಥಿತಿಗೆ ತೆರಿಗೆಯ ಆಯವನ್ನು ಪೂರೈಸಿದವರು ರೆಂಡುವಾಡಲ ಪಟ್ಟನದ ಪ್ರಜೆಗಳು. ಪಟ್ಟನವೆಂಬುದು ಸಮುದ್ರತೀರದ ವರ್ತಕ ಪ್ರಧಾನವಾದ ಯಾವುದೇ ನಗರ ಅಥವಾ ಊರಿಗೆ ವಿಶಿಷ್ಟನಾಮ. ಕರ್ನಾಟಕದ ಹಾಗೂ ಆಂಧ್ರಪ್ರದೇಶದ ಕೆಲವು ಶಾಸನಗಳಲ್ಲಿ ಆಂಥ ವರ್ತಕ ಪಟ್ಟಣಗಳ ವರ್ತಕ ಪ್ರಮುಖರನ್ನು 'ಪಟ್ಟಣ

---

[1] *Ind. Ant.*, Vol. XIII, p. 186

[2] ಭಾರತಿ, ಸಂಪುಟ 5, ಸಂಚಿಕೆ 2, ಪುಟ 96–110

[3] ಅದೇ, ಪುಟ 286–301

[4] ಅದೇ, ಪುಟ 102

[5] ಅದೇ, ಸಂಪುಟ 1, ಸಂಚಿಕೆ 1, ಪುಟ 104, ಶಾಸನಪಾಠದ 24ನೆಯ ಸಾಲು

ಸ್ವಾಮಿ', 'ಪಟ್ಟಣ ಸೆಟ್ಟಿ', 'ಸೆಟ್ಟಿ ಪಟ್ಟಣ ಸ್ವಾಮಿ' ಎಂದು ಮುಂತಾಗಿ ಕರೆಯಲಾಗಿದೆ. ಆದ ಕಾರಣ ಪ್ರಸ್ತುತ ಶಾಸನದ ದಾನಿಗಳಾದ 'ಊರ ಸ್ವಾಮಿಗಳು' ಪೃಥಿವೀ ಪಲ್ಲವ ಪಟ್ಟಣದ ವರ್ತಕ ಪ್ರಮುಖರಾದ ಪಟ್ಟಣ ಸ್ವಾಮಿಗಳೇ ಆಗಿರುತ್ತಾರೆ. ಪೃಥಿವೀ ಪಲ್ಲವ ಪಟ್ಟಣ ಮತ್ತು ರೆಂಡುವಾಡಲ ಪಟ್ಟಣ ಒಂದೇ ಊರಿನ ಎರಡು ಹೆಸರುಗಳಿದ್ದಿರಬಹುದು; ಅಲ್ಲದಿದ್ದಲ್ಲಿ ನೆರೆಹೊರೆಯ ಎರಡು ವರ್ತಕ ಕೇಂದ್ರಗಳ ಹೆಸರುಗಳಿದ್ದಿರಲೂಬಹುದು.

ಶಾಸನ ಪಾಠದ 23–33ನೆಯ ಸಾಲುಗಳಲ್ಲಿ ಹಲವು ವ್ಯಕ್ತಿಗಳ ಪ್ರಸ್ತಾಪವಿದೆ. ಅವರೆಲ್ಲರೂ ಬಹುಶಃ ಪೃಥಿವೀ ಪಲ್ಲವ ಪಟ್ಟಣದ ಊರ ಸ್ವಾಮಿಗಳೂ, ಅದೇ ಕಾರಣದಿಂದ, ಮಾಡಲಾದ ದಾನ ಕಾರ್ಯಕ್ಕೆ ಅಧಿಕೃತ ಸಾಕ್ಷಿಗಳೂ ಇದ್ದಿರಬೇಕು. ಆ ವ್ಯಕ್ತಿಗಳಲ್ಲಿ ಕೆಲವರ ಹೆಸರುಗಳ ಹಿಂದೆ ಕಂಡು ಬರುವ 'ಮಹಾನಭಿಯುಳ್' ಮತ್ತು 'ಮಹಾಸತ್ಥವುಳ್' ಎಂಬೀ ಎರಡು ಉಪನಾಮಗಳು ಐತಿಹಾಸಿಕ ಮಹತ್ತ್ವದವಾಗಿವೆ. ಇಲ್ಲಿಯವರೆಗೆ ಈ ಶಾಸನವನ್ನು ಕುರಿತು ಬರೆದಿರುವ ವಿದ್ವಾಂಸರೆಲ್ಲರೂ ಈ ಎರಡು ಉಪನಾಮಗಳನ್ನು ಸರಿಯಾಗಿ ಗುರುತಿಸಲಾರದೆ ಹೋಗಿರುವರು. ಮಹಾನಭಿಯುಳ್ ಮತ್ತು ಮಹಾಸತ್ಥವುಳ್ ಅನುಕ್ರಮವಾಗಿ 'ಮಹದಭಿಜ್ಞ'ಮತ್ತು 'ಮಹಾಸತ್ತ್ವ'ಗಳ ವ್ಯಾವಹಾರಿಕ ರೂಪಗಳೆಂಬುದು ವೇಟೂರಿ ಪ್ರಭಾಕರ ಶಾಸ್ತ್ರಿಗಳ ಅಭಿಪ್ರಾಯವಾದರೆ, ಕುಂದೂರಿ ಈಶ್ವರದತ್ತರು 'ಮಹಾಸತ್ಥವುಳ್' ಎಂಬ ಉಪನಾಮದ ಮಟ್ಟಿಗೆ ಶಾಸ್ತ್ರಿಗಳ ಮತವನ್ನೆ ಎತ್ತಿ ಹಿಡಿದು, ಮಹಾನಭಿಯುಳ್ ಎಂಬುದು 'ಮಹಾನ್+ಅಭಿಜ್ಞ'ದಿಂದ ಹುಟ್ಟಿದ್ದೆಂದೂ, ಅದು ಪೃಥಿವೀ ಪಲ್ಲವಪಟ್ಟನದ 'ಮಹಾನಾಡಿ'ನ ಮುಖ್ಯಸ್ಥರನ್ನು ಗುರುತಿಸುತ್ತದೆಯೆಂದೂ ಹೇಳಿರುತ್ತಾರೆ. ಮೇಲಿನ ಈ ಎರಡು ವಿವರಣೆಗಳೂ ಸರಿಯಲ್ಲವೆಂಬುದು ನಮ್ಮ ಭಾವನೆ. ಮೇಲೆ ಹೇಳಿರುವಂತೆ ಪೃಥಿವೀ ಪಲ್ಲವ ಪಟ್ಟನವು ತೀರ ಪ್ರದೇಶದ ವರ್ತಕ ನಗರವಿತ್ತೆಂದ ಮೇಲೆ 'ಮಹಾನಭಿಯುಳ್' ಎಂಬುದು 'ಮಹಾನಾವಿಕುಲು (<ಸಂಸ್ಕೃತ: ಮಹಾನಾವಿಕ) ಎಂಬುದರ ಭ್ರಷ್ಟರೂಪವೆಂದುಕೊಳ್ಳುವುದೇ ಸರಿ. ಶಾಸನ ಪಾಠದ 32ನೆಯ ಪಂಕ್ತಿಯಲ್ಲಿ ಈ ಉಪನಾಮವನ್ನು 'ಮಹನವಿಲ' ಎಂದು 'ವ'ಕಾರದೊಂದಿಗೆ ಬರೆದಿರುವುದು ಇದನ್ನೆ ಸಮರ್ಥಿಸುವಂತಹದಾಗಿದೆ. ಈ ಸಂದರ್ಭದಲ್ಲಿ ಮಲಯದಲ್ಲಿ ದೊರೆತಿರುವ ಕ್ರಿ.ಶ. 5ನೆಯ ಶತಮಾನದ ದಾಕ್ಷಿಣಾತ್ಯ ಲಿಪಿಯಲ್ಲಿ ಬರೆಯಲಾಗಿರುವ ಸಂಸ್ಕೃತ ಶಾಸನವೊಂದರಲ್ಲಿ[6] 'ಮಹಾನಾವಿಕ ಬುಧಗುಪ್ತನ ಪ್ರಸ್ತಾಪವಿರುವುದನ್ನು ಸ್ಮರಿಸಬಹುದಾಗಿದೆ. ಹೀಗಾಗಿ ಪ್ರಸ್ತುತ ತಾಮ್ರಶಾಸನದಲ್ಲಿ ಉಕ್ತವಾಗಿರುವ ವ್ಯಕ್ತಿಗಳಲ್ಲಿ 'ಮಹಾನಭಿಯುಳ್' ಎಂಬ ಉಪನಾಮವನ್ನು ಹೊತ್ತವರು ಕಡಲಿನಾಚೆಗಿನ ದೇಶಗಳೊಂದಿಗೆ ವ್ಯಾಪಾರ ಸಂಪರ್ಕ ಬೆಳೆಸಿದ್ದ ವರ್ತಕ ಪ್ರಮುಖರಿದ್ದರು.

ಅದರಂತೆಯೆ 'ಮಹಾಸತ್ಥವುಳ್' ಎಂಬುದು 'ಮಹಾಸಾರ್ಥವಾಹುಲು' (<ಸಂಸ್ಕೃತ: ಮಹಾಸಾರ್ಥವಾಹ) ಎಂಬುದರ ಭ್ರಷ್ಟರೂಪ. ಈ ಉಪನಾಮವನ್ನು ಪ್ರಸ್ತುತ ಶಾಸನ ಪಾಠದ 29 ಮತ್ತು 31ನೆಯ ಸಾಲುಗಳಲ್ಲಿ 'ಮಹಸರ್ತ್ಥವಳ್' ಎಂದೂ 33ನೆಯ ಪಂಕ್ತಿಯಲ್ಲಿ 'ಮಹಸರ್ತ್ಥವಲ' ಎಂದೂ ರೇಫದೊಂದಿಗೆ ಬರೆದಿರುವುದು ನಮ್ಮ ಈ ವಿವರಣೆಗೆ ಪೋಷಕವಾಗಿದೆ. ಉತ್ತರ ಪ್ರದೇಶದ ಮಥುರಾ ಮತ್ತು ಮಹಾರಾಷ್ಟ್ರದ ಕುಡಾ ಎಂಬಲ್ಲಿಯ ಪ್ರಾಕೃತ ಶಾಸನಗಳಲ್ಲಿ 'ಸಾರ್ಥವಾಹ' 'ಸಾರ್ತ್ಥವಾಹಿನೀ' ಎಂಬ ಪ್ರಯೋಗಗಳು ಕಂಡುಬರುತ್ತವೆ[7]. 'ಕಥಾಸರಿತ್ಸಾಗರ'. 'ಪಂಚತಂತ್ರ'ವೇ ಮೊದಲಾದ ಸಂಸ್ಕೃತ ಕೃತಿಗಳಲ್ಲೂ ಸಾರ್ಥವಾಹರ ಪ್ರಸ್ತಾಪಗಳಿವೆ. ಪ್ರಸ್ತುತ ಶಾಸನದಲ್ಲಿ ಉಕ್ತವಾಗಿರುವ ವ್ಯಕ್ತಿಗಳಲ್ಲಿ 'ಸತ್ಥವುಳ್' ಎಂಬ ಉಪನಾಮವನ್ನು ಹೊತ್ತವರು ಒಳನಾಡಿನ ವ್ಯಾಪಾರಿಗಳಿದ್ದರು. ಈ ವ್ಯಕ್ತಿಗಳನ್ನು ಪ್ರಸ್ತಾಪಿಸುವಲ್ಲಿ ನರಳೋಕ್ ಎಂಬಾತನಿಗೆ ಮಹಾನಭಿಯುಳ್ ಮತ್ತು ಮಹಾಸತ್ಥವುಳ್ ಎಂಬೆರಡು ಉಪನಾಮಗಳನ್ನೂ ನೀಡಿರುವುದನ್ನೂ. ನಂದಿ ಮಹಾನವಿಯುಳ್ ಎಂಬಾತ ಕರಿಗಲ ಪೃಥಿವೀ ಸತ್ಥವುಳ್ ಎಂಬಾತನ ಮಗನೆಂದು ಹೇಳಿರುವುದನ್ನೂ ನೋಡುವಾಗ,

---

[6] *J A S B* (Letters), Vol. I, p. 17

[7] *Lüders' List*, Nos. 30, 1062, 1065, 1066

ಶಾಸನ ಹುಟ್ಟಿಕೊಂಡ ಕಾಲಕ್ಕೆ ಈ ಉಪನಾಮಗಳು ಕೇವಲ ಸಾಂಪ್ರದಾಯಿಕ ಕುಲೋಪನಾಮಗಳಾಗಿ ಉಳಿದಿರಲಿಲ್ಲವೆಂಬುದೂ. ಅನ್ವರ್ಥ ವೃತ್ತ್ಯುಪನಾಮಗಳೇ ಆಗಿದ್ದುವೆಂಬುದೂ ಸ್ಪಷ್ಟವಾಗುತ್ತದೆ. ಒಟ್ಟಿನಲ್ಲಿ ಕ್ರಿ.ಶ. 9ನೆಯ ಶತಮಾನದಲ್ಲಿ ಪೃಥಿವೀ ಪಲ್ಲವ ಪಟ್ಟಣವು ಒಳನಾಡ ವ್ಯಾಪಾರ ಹಾಗೂ ಕಡಲಿನಾಚೆಗಿನ ಹೊರನಾಡುಗಳೊಡನೆ ವಾಣಿಜ್ಯ ಇವುಗಳ ದೃಷ್ಟಿಯಿಂದ ಐತಿಹಾಸಿಕ ಪ್ರಾಧಾನ್ಯ ಪಡೆದಿತ್ತೆಂಬುದು ವಿಶದವಾಗುತ್ತದೆ.

ಪ್ರಸ್ತುತ ಶಾಸನದ ಕೊನೆಯಲ್ಲಿ 'ಶ್ರೀ ಜಿಷ್ಟಿ ಪೆನ್ದಟಜ್ಜಿಗನ್ಡಾನ್ಡು' ಎಂದು ಬರೆಯಲಾಗಿದೆ. 'ಗನ್ಡಾನ್ಡು' ಎಂಬುದು ಇಂದಿನ ತೆಲುಗು ಭಾಷೆಯ 'ಗಂಡರಿಂಚಿನವಾಡು'. ಕನ್ನಡದ 'ಕಂಡರಿಸಿದವನು' ಎಂಬುದಕ್ಕೆ ಪ್ರಾಚೀನ ರೂಪ. ತಳಕಾಡಿನ ಗಂಗರ ತಾಮ್ರಶಾಸನಗಳನ್ನು ಬರೆದವರಲ್ಲಿ 'ಪೆರ್ನ್ರ್ಗಟ್ಟಾಜಿ' ಎಂಬ ಉಪನಾಮದ ಲೇಖಕರು ಕಂಡುಬರುತ್ತಾರೆ. 'ಪೆರ್ನ್ರ್ಗಟ್ಟಾಜಿ' ಎಂಬುದಕ್ಕೆ (ತಮಿಳು: ಪೆರು-ಪೆರುನ್ತಟ್ಟಾರನ್) ಮಹಾಸುವರ್ಣಕಾರ ಎಂದರ್ಥ. ಪೃಥಿವೀ ಪಲ್ಲವ ಪಟ್ಟಣ. ಪೆನ್ದಟ್ಟಜ್ಜಿ ಎಂಬೀ ಪ್ರಯೋಗಗಳ ಆಧಾರದ ಮೇಲೆ ಅಂದಿನ ಪೂರ್ವೀ ಚಾಳುಕ್ಯ, ಪಲ್ಲವ ಮತ್ತು ತಳಕಾಡಿನ ಗಂಗ ಮನೆತನಗಳ ನಡುವೆ ನಿಕಟ ಸಂಪರ್ಕ ಬೆಳೆದಿತ್ತೆಂದು ಹೇಳಬಹುದಾಗಿದೆ.

ಕೆ. ಉಮಾಪತಿ ಶೆಟ್ಟಿ

# ಭಾರತೀಯ ವಿದ್ಯಾಭ್ಯಾಸದ ಗೊತ್ತುಗುರಿಗಳು ಹಾಗೂ ಗ್ರಂಥಾಲಯ ಸೇವೆ

ಶಾಲೆ. ಗ್ರಂಥಾಲಯ–ಎರಡೂ ನಮ್ಮ ಸಮಾಜದ ಜ್ಞಾನ ಪ್ರಸಾರ ಸಂಸ್ಥೆಗಳು. ಶಾಲೆ ವಿವಿಧ ಹಂತಗಳ ವಿದ್ಯಾಭ್ಯಾಸವನ್ನು ನಿರ್ದಿಷ್ಟ ಯೋಜನೆಯ ಚೌಕಟ್ಟಿನಲ್ಲಿ ಒದಗಿಸಿದರೆ, ಗ್ರಂಥಾಲಯ ಯಾವ ಬಗೆಯ ಅಸ್ತಿ ಆತಂಕ ಇಲ್ಲದೆ ವಯಸ್ಸು ಮತ್ತು ಪಾಸು ಫೇಲುಗಳ ಕಾಟ ಇಲ್ಲದೆ ಜೀವನ ಪರಿಯಂತವೂ ನಮ್ಮ ಬೆಳವಣಿಗೆಯ ಅವಕಾಶಗಳನ್ನು ಒದಗಿಸುತ್ತದೆ. ಮಾನವನ ಇತಿಹಾಸದಲ್ಲಿ ಸಾಮಾನ್ಯವಾಗಿ ಶಾಲೆ, ಗ್ರಂಥಾಲಯಕ್ಕಿಂತ ಮೊದಲು ಬಂದಿದ್ದು. ಎಲ್ಲ ದೇಶಗಳಲ್ಲಿಯೂ ವಿದ್ಯಾಭ್ಯಾಸದ ಗೊತ್ತುಗುರಿಗಳು ಗ್ರಂಥಾಲಯಗಳ ಕಾರ್ಯವಿಧಾನ ಮತ್ತು ಗೊತ್ತುಗುರಿಗಳ ರೂಪುವಿಕೆಯ ಮೇಲೆ ಪ್ರಭಾವ ಬೀರಿವೆ. ಒಂದು ದೇಶದಲ್ಲಿ ಗ್ರಂಥಾಲಯಗಳ ಪಾತ್ರವನ್ನು ತಿಳಿಯಲು ಆ ದೇಶದ ವಿದ್ಯಾಭ್ಯಾಸದ ಗೊತ್ತುಗುರಿಗಳನ್ನು ತಿಳಿಯಬೇಕಾದ್ದು ಅನಿವಾರ್ಯ.

ವಿದ್ಯಾಭ್ಯಾಸದ ಗೊತ್ತುಗುರಿಗಳು ನಿಶ್ಚಿತ ಉದ್ದೇಶಗಳ ಸ್ಪಷ ಹೇಳಿಕೆಗಳು. ವಿದ್ಯಾ ಇಲಾಖೆಗಳು. ವಿವಿಧ ಹಂತಗಳ ಶಾಲಾ ಕಾಲೇಜುಗಳು ಈ ಗೊತ್ತುಗುರಿಗಳನ್ನು ಸಾಧಿಸುವ ದೃಷ್ಟಿಯಿಂದ ತಮ್ಮ ಆಡಳಿತ ವ್ಯವಸ್ಥೆಯನ್ನು ರೂಪಿಸಿಕೊಳ್ಳುತ್ತವೆ. ಸ್ಪಷ್ಟವಾದ ಗುರಿಗಳು ವಿದ್ಯಾಪರಿಣತರಿಗೂ ಪ್ರಸಾರಕರಿಗೂ ಸತ್ಪ್ರೇರಣೆ ಕೊಡುವುವಲ್ಲದೆ. ಒಟ್ಟಿನಲ್ಲಿ ವಿದ್ಯಾಸಂಸ್ಥೆಗಳಿಗೆ ಮಾರ್ಗಸೂಚಿಗಳಾಗುತ್ತವೆ. ಆಡಳಿತಕ್ಕೆ ಭದ್ರ ಬುನಾದಿಯನ್ನು ಒದಗಿಸುತ್ತವೆ; ಸಾಧನೆಗಳ ಮೌಲ್ಯಮಾಪನಗಳೂ ಆಗುತ್ತವೆ. ಆದ್ದರಿಂದಲೇ ಅವಕ್ಕೆ ಅಷ್ಟು ಪ್ರಾಮುಖ್ಯ. ಇಂಥ ಗೊತ್ತುಗುರಿಗಳು ಶಾಶ್ವತವಾದವಲ್ಲ. ಸಮಾಜದ ಸನ್ನಿವೇಶ ಬದಲಾದಂತೆಲ್ಲ ಅವೂ ಬದಲಾಗುತ್ತವೆ.

## ನವಭಾರತದ ವಿದ್ಯಾಭ್ಯಾಸದ ಗೊತ್ತುಗುರಿಗಳು

ಭಾರತೀಯ ಪರಂಪರೆಯ ಜೀವನಾದರ್ಶಗಳು ಧಾರ್ಮಿಕ ಸ್ವರೂಪದವಾಗಿವೆ. ಅವುಗಳ ಪ್ರಕಾರ ಪಾರಮಾರ್ಥಿಕ ವಿಚಾರಗಳು ಐಹಿಕ ವಿಚಾರಗಳಿಗಿಂತ ಹೆಚ್ಚು ಮುಖ್ಯ. ಸಾಮಾಜಿಕ ಅಂತಸ್ತು, ಜಾತಿಗಳನ್ನು ಈ ರೂಢಮೂಲ ಪರಂಪರೆ ಒಪ್ಪುತ್ತದೆ. ಅವಿಭಕ್ತ ಕುಟುಂಬ ಈ ಪರಂಪರೆಯ ಮತ್ತೊಂದು ಆದರ್ಶ. ಇಪ್ಪತ್ತನೆಯ ಶತಮಾನದ ಆದಿಯಿಂದಲೂ ಭಾರತದಲ್ಲಿ ಬದಲಾವಣೆಯ ನವೋದಯವಾಗಿದ್ದು, ಸ್ವಾತಂತ್ರ್ಯಾನಂತರ ಬದಲಾವಣೆಯ ಗಾಳಿ ಮತ್ತಷ್ಟು ಬಲವಾಗಿ ಬೀಸುತ್ತಿದೆ. ಪರಂಪರಾಗತ ಮೌಲ್ಯಗಳು ಪ್ರಾಶಸ್ತ್ಯವನ್ನು ಕಳೆದುಕೊಳ್ಳುತ್ತಿದ್ದು ಹೊಸ ಜೀವನ ಮೌಲ್ಯಗಳು ರೂಪುಗೊಳ್ಳುತ್ತಿವೆ. ಅವಿಭಕ್ತ ಕುಟುಂಬದ ಸ್ಥಾನವನ್ನು ವಿಭಕ್ತ ಕುಟುಂಬ ಆಕ್ರಮಿಸುತ್ತಿದೆ. 'ಜಾತಿ'ಯ ಪ್ರಭಾವ ಅಲ್ಪಸ್ವಲ್ಪ ಆದರೂ ತಗ್ಗಿದೆ. ಕಾಲೇಜು ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ಕುರಿತು ಅಧ್ಯಯನ ಮಾಡಿರುವ ಪರಂಜಪೆಯವರ ಪ್ರಕಾರ ಗಮನಾರ್ಹವಲ್ಲದ ಅತ್ಯಲ್ಪ ಸಂಖ್ಯೆಯ ವಿದ್ಯಾರ್ಥಿಗಳು ಮಾತ್ರವೇ ಇಂದು

ಸಮಾಜದಲ್ಲಿ ಪ್ರತಿಷ್ಠೆ ಜಾತಿಯನ್ನವಲಂಬಿಸದೆ ಎಂದು ಯೋಚಿಸುತ್ತಾರೆ.[1] ಸಮಾಜಶಾಸ್ತ್ರಜ್ಞ ಎಂ.ಎನ್. ಶ್ರೀನಿವಾಸ್ ಸಮಾಜದಲ್ಲಿ ನಮ್ಮ ಪರಂಪರೆಗೆ ಅನುಗುಣವಾದ ಬದಲಾವಣೆಗಳಿಂದಲೂ (Sanskritization) ಪಾಶ್ಚಾತ್ಯ ಪ್ರಭಾವದಿಂದಲೂ ನಮ್ಮ ಜೀವನವಿಧಾನ ಬದಲಿಸಿದ್ದು ಜಾತಿಮತಗಳ ದುಷ್ಪರಿಣಾಮಗಳು ಸಾಕಷ್ಟು ಸ್ಥಗಿತಗೊಂಡಿವೆ ಎನ್ನುತ್ತಾರೆ.[2] ಈ ಇಂದಿನ ಸಮಾಜದಲ್ಲಿ ಬಡವ–ಬಲ್ಲಿದರಲ್ಲಿಯ ಘರ್ಷಣೆ. ಜಾತಿಜಾತಿಗಳ ತಿಕ್ಕಾಟಕ್ಕಿಂತ ಹೆಚ್ಚು ಗಂಭೀರವಾದ್ದಾಗಿದೆ. ದೇವಾನಂದನ್ ಮತ್ತು ಥಾಮಸ್ ಅವರು ಭಾರತೀಯ ಜೀವನದ ನವೀನೀಕರಣದಲ್ಲಿ ಮಹತ್ಪಾತ್ರ ವಹಿಸಿರುವ ನಾಲ್ಕು ಜೀವನಮೌಲ್ಯಗಳನ್ನು ಗುರ್ತಿಸಿದ್ದಾರೆ: 1 ವ್ಯಕ್ತಿಗತ ಸ್ವಾತಂತ್ರ್ಯದ ಹೊಸ ಅರಿವು, 2 ಸರ್ವಸಮಾನತೆಯ ತಿಳಿವು. 3 ಜಾತ್ಯತೀತ ದೃಷ್ಟಿ. ಮತ್ತು 4 ಕ್ರಾಂತಿಕಾರಕ ಬದಲಾವಣೆಗಳ ಹೊಚ್ಚಹೊಸ ತಿಳಿವಳಿಕೆ.[3] ಈ ಮೌಲ್ಯಗಳು ಪಟ್ಟಣಗಳಲ್ಲೂ ಹಳ್ಳಿಗಳಲ್ಲೂ ನಮ್ಮ ಜನಜೀವನದಲ್ಲಿ ಹಾಸು ಹೊಕ್ಕಾಗಿವೆಯೆಂದು ಅವರು ಕಂಡುಕೊಂಡಿದ್ದಾರೆ. ಇಂದಿನ ಸಮಾಜದಲ್ಲಿ ಜನರ ಕಾರ್ಯ ಕಾರಣಗಳನ್ನು ಆರ್ಥಿಕ ಪ್ರೇರಣೆಗಳು ಹೆಚ್ಚು ಹೆಚ್ಚಾಗಿ ನಿರ್ಧರಿಸುತ್ತಿವೆ.

ಭಾರತ ಸ್ವತಂತ್ರವಾದ ಅನಂತರ ರಾಷ್ಟ್ರನಾಯಕರೂ ವಿದ್ಯಾಪರಿಣತರೂ ನಮ್ಮ ವಿದ್ಯಾಭ್ಯಾಸದ ಗೊತ್ತುಗುರಿಗಳಿಗೂ ರಾಷ್ಟ್ರದ ಅವಶ್ಯಕತೆಗಳಿಗೂ ಇದ್ದ ಅಪಾರ ಅಂತರವನ್ನು ಗುರುತಿಸಿ. ದೀರ್ಘಾವಧಿ ಪರಿಣಾಮಕಾರಿಯಾದ ಗೊತ್ತುಗುರಿಗಳನ್ನು ರೂಪಿಸತೊಡಗಿದರು. ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಹಲವಾರು ಸಮಿತಿಗಳು ಆಗಾಗ ವಿಚಾರವಿನಿಮಯ ನಡೆಸಿ ನಮ್ಮ ವಿದ್ಯಾಭ್ಯಾಸದ ಗೊತ್ತುಗುರಿಗಳನ್ನು ನಿರ್ದಿಷ್ಟಪಡಿಸುವ ಕಾರ್ಯ ಕೈಗೊಂಡುವು. ಅವುಗಳ ಸಾಧನೆಗಾಗಿ ಶಾಲಾ–ಕಾಲೇಜುಗಳ ರೀತಿ ನೀತಿ. ಕಾರ್ಯಕ್ರಮಗಳನ್ನು ಪರಿಷ್ಕೃತಗೊಳಿಸುವ ಯತ್ನ ಸತತವಾಗಿ ನಡೆಯಿತು. ದೇಶವಿದೇಶಗಳ ವಿದ್ಯಾಪರಿಣತರನ್ನೊಳಗೊಂಡಿದ್ದ ಶಿಕ್ಷಣ ಆಯೋಗ (1964–66) ರಾಷ್ಟ್ರದ ವಿದ್ಯಾಭ್ಯಾಸದ ಗೊತ್ತುಗುರಿಗಳನ್ನು ನಿರ್ದಿಷ್ಟಪಡಿಸಿದ್ದು. ಅವೇ ಇಂದು ನಮ್ಮ ದಾರಿದೀಪ.

## ಭಾರತೀಯ ವಿದ್ಯಾಭ್ಯಾಸದ ಗೊತ್ತುಗುರಿಗಳು ಹಾಗೂ ರಾಷ್ಟ್ರಾಭಿವೃದ್ಧಿ

ಭಾರತೀಯ ವಿದ್ಯಾಭ್ಯಾಸದ ಗೊತ್ತುಗುರಿಗಳು ಸ್ಪಷ್ಟವಾಗಿ ರಾಷ್ಟ್ರದ ಸಾಮಾಜಿಕ ಅವಶ್ಯಕತೆಗಳನ್ನು ಪ್ರತಿಬಿಂಬಿಸುತ್ತವೆ. ಶಾಲಾಕಾಲೇಜುಗಳನ್ನು ರಾಷ್ಟ್ರದ ಆಶೋತ್ತರಗಳನ್ನು ಈಡೇರಿಸಿಕೊಳ್ಳುವ ಸಾಧನಗಳನ್ನಾಗಿ ಮಾಡುವ ನೇರ ಪ್ರಯತ್ನ ಮಾಡುತ್ತವೆ. ರಾಷ್ಟ್ರಸಮಸ್ಯೆಗಳಾದ ಆಹಾರ ಸ್ವಾವಲಂಬನೆ. ಆರ್ಥಿಕ ಬೆಳವಣಿಗೆ. ಪೂರ್ಣ ಉದ್ಯೋಗಾವಕಾಶ. ಸಾಮಾಜಿಕ–ರಾಜಕೀಯ ಭಾವೈಕ್ಯ ಮತ್ತು ರಾಜಕೀಯ ಬೆಳವಣಿಗೆಗಳೊಡನೆ ವಿದ್ಯಾಭ್ಯಾಸದ ಗೊತ್ತುಗುರಿಗಳಿಗೆ ನೇರವಾದ ಸಂಬಂಧ ಕಲ್ಪಿಸಲಾಗಿದೆ. ಸಮಾಜದಲ್ಲಿ ಬದಲಾವಣೆ ಉಂಟುಮಾಡುವ ಉತ್ತಮ ಸಾಧನ ವಿದ್ಯಾಭ್ಯಾಸ ಎಂಬ ದೃಷ್ಟಿಯನ್ನು ಒಪ್ಪಲಾಗಿದೆ. ಸಂಪನ್ಮೂಲಗಳ ಅಭಿವೃದ್ಧಿ. ತಾಂತ್ರಿಕ ತರಪೇತಿಗಳಷ್ಟೇ ಆರ್ಥಿಕ ಬೆಳವಣಿಗೆಗೆ ಕಾರಣ ಆಗಲಾರವು. ಇದೀ ಜನತೆಯಲ್ಲಿ ನೂತನ ಜೀವನವಿಧಾನ. ಚಿಂತನೆ. ಕೆಲಸಗಳನ್ನು

---

[1] A.C. Paranjpe, *Caste, Prejudice and the Individual* (Bombay: Lalvani Publishing House, 1970), p. 212

[2] M. N. Srinivas, 'Castes: Can they exist in the India of tomorrow?' In *Caste in Modern India and other Essays*, Asia Publishing House, 1962), p. 76.

[3] P. D. Devanandan and M. M. Thomas, *Indian quest for Democracy* (Calcutta : YMCA Publishing House, 1955), pp. 18–21

ಕುರಿತ ತಿಳಿವನ್ನುಂಟುಮಾಡುವುದು ಆರ್ಥಿಕ ಬೆಳವಣಿಗೆಯ ಅಡಿಗಲ್ಲು. ಸಂಪ್ರದಾಯಬದ್ಧ ಸಮಾಜ ಕೈಗೊಳ್ಳುವ ಆರ್ಥಿಕ ಅಭಿವೃದ್ಧಿಯ ಮಹಾಕಾರ್ಯವನ್ನು ರಾಬರ್ಟ್ ಹೇಲ್‌ಬ್ರೂನರ್ 'ಮಹಾಪ್ರಸ್ಥಾನ' ಎಂದು ಬಣ್ಣಿಸಿ ಅದರ ಸಾಧನೆಗೆ "ದೊಡ್ಡ ಪ್ರಮಾಣದ ಮಾನವೀಯ ಬದಲಾವಣೆ" ಅಗತ್ಯವೆನ್ನುತ್ತಾರೆ.4 ಇಂಥ ಬದಲಾವಣೆಯನ್ನು ಹಿಂಸಾಯುತ ಕ್ರಾಂತಿ ಇಲ್ಲದೆ ಸಾಧಿಸಲು ಇರುವ ಏಕಮಾತ್ರ ಸಾಧನವೆಂದರೆ ವಿದ್ಯಾಭ್ಯಾಸ ಎಂದು ಶಿಕ್ಷಣ ಆಯೋಗ ಸ್ಪಷ್ಟಪಡಿಸಿದೆ.5

ಪ್ರಜಾಪ್ರಭುತ್ವ ಭಾವನೆಗಳ ಮತ್ತು ರಾಷ್ಟ್ರೀಯತೆಯ ಅರಿವನ್ನು ಜನತೆಯಲ್ಲಿ ಉಂಟು ಮಾಡುವುದು ಇಂದು ವಿದ್ಯಾಭ್ಯಾಸದ ಒಂದು ಘೋಷಿತ ಗುರಿ. ರಾಜ್ಯಭಾಷೆಗಳನ್ನು ಬೋಧನೆಯ ಮಾಧ್ಯಮವನ್ನಾಗಿಸುವುದು. ಇಂಗ್ಲಿಷ್ ಮತ್ತಿತರ ಪ್ರಪಂಚ ಭಾಷೆಗಳನ್ನು ಕಡೆಗಣಿಸದಿರುವುದು ಮತ್ತೊಂದು ಗುರಿ. ಅಂತರರಾಜ್ಯ ಮತ್ತು ಅಂತರರಾಷ್ಟ್ರೀಯ ಸಂಪರ್ಕಕ್ಕೆ ಪ್ರಾಮುಖ್ಯ ಕೊಡಲಾಗಿದೆ. ಶೀಘ್ರ ಸಾಮಾಜಿಕ ಬದಲಾವಣೆ ಮತ್ತು ನವೀಕರಣಗಳಿಗೂ ವಿದ್ಯಾಭ್ಯಾಸದ ಪ್ರಗತಿಗೂ ಇರುವ ಸಂಬಂಧವನ್ನು ಮೊದಲಬಾರಿಗೆ ನಿರ್ದಿಷ್ಟಪಡಿಸಲಾಗಿದೆ. ವಿದ್ಯಾಭ್ಯಾಸಕ್ಕೂ ರಾಷ್ಟ್ರದ ಉತ್ಪಾದನೆಗೂ ಇರುವ ಸಂಬಂಧವನ್ನು ಗುರುತಿಸಿ. ವಿಜ್ಞಾನದ ಅಭ್ಯಾಸ, ಕೆಲಸದ ಅನುಭವ. ವೃತ್ತಿಪ್ರಧಾನ ಶಿಕ್ಷಣ ಗಳಿಗೆ ಪ್ರಾಮುಖ್ಯ ಕೊಡಲಾಗಿದೆ. ಜಾತ್ಯತೀತ ದೃಷ್ಟಿಯ ಬೆಳವಣಿಗೆ ಭಾರತೀಯ ವಿದ್ಯಾಭ್ಯಾಸದ ಮತ್ತೊಂದು ಗುರಿ. ಸರ್ವಮತಗಳ ಅಭ್ಯಾಸ. ಪರಸ್ಪರ ಸಹನೆಯ ಆವಶ್ಯಕತೆಯನ್ನು ಮನವರಿಕೆ ಮಾಡಿಕೊಡಲಾಗಿದೆ. ವಿಜ್ಞಾನದ ಅಭ್ಯಾಸ ಮತ್ತು ತೆರೆದ ಮನಸ್ಸಿನ ಬೆಳವಣಿಗೆಗೆ ಕೊಡುವ ಪ್ರೋತ್ಸಾಹ ಜಾತ್ಯತೀತ ಮನೋಧರ್ಮದ ಬೆಳವಣಿಗೆಗೆ ಅನುಕೂಲ ವಾತಾವರಣ ಕಲ್ಪಿಸುವುದೆಂಬ ನಿರೀಕ್ಷೆ ಮಾಡಲಾಗಿದೆ. ಧಾರ್ಮಿಕ. ನೈತಿಕ ಆದರ್ಶಗಳ ಪ್ರಚಾರ ಸಮಾಜದ ನವೀನೀಕರಣಕ್ಕೆ ವಿರೋಧಿ ಯಲ್ಲ ಎಂದು ಸಾರಲಾಗಿದೆ. ಸಾರ್ವತ್ರಿಕ ವಿದ್ಯಾಭ್ಯಾಸವೇ ಸಮಾಜ ಆಧುನಿಕವಾಗಲು ಇರುವ ನೇರ ಮತ್ತು ಯಶಸ್ವಿ ದಾರಿ ಎಂದು ಪ್ರತಿಪಾದಿಸಲಾಗಿದೆ.

ಪೂರ್ಣ ಉದ್ಯೋಗ ನಮ್ಮ ವಿದ್ಯಾಭ್ಯಾಸದ ಮತ್ತೊಂದು ಘೋಷಿತ ಗುರಿ. ವಿದ್ಯಾಭ್ಯಾಸಕ್ಕೂ ಉದ್ಯೋಗಕ್ಕೂ ನೇರ ಸಂಪರ್ಕ ಇಲ್ಲದ ಇಂದಿನ ಪರಿಸ್ಥಿತಿಯನ್ನು ಶಿಕ್ಷಣ ಆಯೋಗ 'ಶೋಚನೀಯ' ಎಂದು ಬಣ್ಣಿಸಿ. ಅಂಥ ಸಂಪರ್ಕ ಸೃಷ್ಟಿಸಬೇಕು ಎನ್ನುತ್ತದೆ. ಪ್ರತಿ ಪದವೀಧರನಿಗೂ ಪದವೀದಾನ ಸಮಯದಲ್ಲೇ ಉದ್ಯೋಗ ಕೊಡುವ ಕೊಡುಗೆ ಚೀಟಿಯನ್ನು ಕೊಡುವಂತಾಗಬೇಕು. ಆ ಉದ್ಯೋಗ ವನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕು ಪದವಿ ಪಡೆಯುವವನಿಗಿರಬೇಕು ಎನ್ನುತ್ತದೆ ಶಿಕ್ಷಣ ಆಯೋಗ6. ಇಂದು ನಮ್ಮಲ್ಲಿ ಸಾರ್ವತ್ರಿಕ ನಿರುದ್ಯೋಗ ಇದ್ದರೂ ಬ್ಲಾಗ್. ಲಯಾರ್ಡ್ ಮತ್ತು ಉಡಾಲ್‌ರ ಅಧ್ಯಯನದ ಪ್ರಕಾರ ಸೆಕೆಂಡರಿ ಮತ್ತು ಕಾಲೇಜು ವಿದ್ಯಾಭ್ಯಾಸ ಭಾರತದಲ್ಲಿ ಇನ್ನೂ. ಉತ್ತಮ ಎನ್ನಬಹುದಾದ ಪ್ರತಿಫಲವನ್ನು ತರುತ್ತಿವೆ: ಸಾಮಾಜಿಕ ಪ್ರತಿಫಲ ಅಷ್ಟೇ ಸಮಾಧಾನಕರ ಅಲ್ಲವಾದರೂ ಸಹ.7

---

4 Robert Heilbroner, *The Great Ascent* (New York : Harper and Row, 1963), p. 66

5 *Report of the Education Commission : 1964–66* (New Delhi: Ministry of Education, Govt. of India, 1966), p.4

6 *Report of the Education Commission :* 1964–66, p. 106

7 Blaug, M ; Layard, R ; Woodhall, M. *The Causes of Graduate Unemployment in India* (London : Allen & Unwin, 1967) p. 223

## ಬಡತನ—ರಾಷ್ಟ್ರಾದಾಯದ ಸಮಾನ ಹಂಚಿಕೆ

ಸರ್ವವ್ಯಾಪಿಯಾಗಿರುವ ಬಡತನ, ಭಾರತ ಬಹುಕಾಲದಿಂದ ಎದುರಿಸುತ್ತಿರುವ ರಾಷ್ಟ್ರೀಯ ಸಮಸ್ಯೆ. ರಾಷ್ಟ್ರದ ಸರಾಸರಿ ಆದಾಯ 1968–69ರಲ್ಲಿ 500 ರೂ.ಗಳಿಗೂ ಕಡಿಮೆ; ಸರಾಸರಿ ವೆಚ್ಚ 300 ರೂ.ಗಳಿಗೂ ಕಡಿಮೆ.[8] ರಾಷ್ಟ್ರದ ಪಂಚವಾರ್ಷಿಕ ಯೋಜನೆಗಳು ಕನಿಷ್ಠ ರಾಷ್ಟ್ರೀಯ ಆದಾಯ ತತ್ತ್ವವನ್ನು ಒಪ್ಪಿ ಅತ್ಯಲ್ಪಕಾಲದಲ್ಲಿ ಅದು ಸಿದ್ಧ ಆಗುವುದೆಂದು ಘೋಷಿಸಿದ್ದುವು. ಗಣನೀಯವಾದ ಆರ್ಥಿಕ ಬೆಳವಣಿಗೆಯೇ ಇಂಥ ಸಾಧನೆಗೆ ಸಾಕು ಎಂಬುದು ಅಂದಿನ ನಂಬಿಕೆ ಆಗಿತ್ತು. ಆದರೆ ಈಗ ಇಂಥ ಸಾಧನೆ ಕೇವಲ ಆರ್ಥಿಕ ಅಭಿವೃದ್ಧಿಯಿಂದ ಮಾತ್ರವೇ ಆಗದು; ಸಮಾನ ಹಂಚಿಕೆಯ ಪೂರ್ವ ಯೋಜಿತ ಕಾರ್ಯಕ್ರಮಗಳೂ ಪೂರಕವಾಗಿ ಇರಬೇಕು ಎಂದು ಅರಿವಾಗಿದೆ. ಇಂಥ ಪ್ರಯತ್ನಗಳಿಲ್ಲದಾಗ ಬಡವರು ಕನಿಷ್ಠ ಅವಶ್ಯಕತೆಗಳನ್ನು ಪಡೆಯುವ ಮೊದಲೇ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಾರೆ. ಬಡವ ಬಲ್ಲಿದರ ನಡುವೆ ಬೆಳೆಯುವ ಅಂತರ ಪ್ರಜಾಪ್ರಭುತ್ವದ ಬುನಾದಿಯನ್ನೇ ಅಲುಗಿಸುತ್ತದೆ. ಖ್ಯಾತ ಅರ್ಥಶಾಸ್ತ್ರಜ್ಞ ದಾಂಡೇಕರರು ಹೇಳುವಂತೆ, ರಾಷ್ಟ್ರಾಭಿವೃದ್ಧಿಯ ಅಲ್ಪ ಗಳಿಕೆ ಸಹ ಸಮಾನವಾಗಿ ಹಂಚಿಕೆ ಆಗಿಲ್ಲ. ಗ್ರಾಮವಾಸಿಗಳಾದ ಶೇ. 70ರಷ್ಟು ಕಡು ಬಡವರ ಸ್ಥಿತಿ ಎಲ್ಲ ಯೋಜನೆಗಳ ಅನಂತರವೂ ಮೊದಲಿನಂತೆಯೇ ಇದ್ದು, ನಗರವಾಸಿಗಳಾದ ಶೇ. 20ರಷ್ಟು ಕಡುಬಡವರ ಸ್ಥಿತಿ ಮೊದಲಿಗಿಂತ ಶೋಚನೀಯವಾಗಿದೆ. ಆದರೆ ಮಧ್ಯಮ ವರ್ಗದ ಅತ್ಯನುಕೂಲಸ್ಥರು ಮತ್ತು ಶ್ರೀಮಂತರು ಸಮಾಜದ ಇತರ ವರ್ಗಗಳವರಿಗಿಂತ ಹೆಚ್ಚು ಲಾಭ ಪಡೆದಿದ್ದಾರೆ.[9] ಆಡಳಿತ ಕಾಂಗ್ರೆಸ್ಸಿನ ರಾಷ್ಟ್ರೀಯ ಘೋಷಣೆ ಸಹ 'ಗರೀಬಿ ಹಟಾವೋ' ಎಂಬುದನ್ನು ಇಲ್ಲಿ ಸ್ಮರಿಸಬಹುದು. ಶಿಕ್ಷಣ ಆಯೋಗ ಈ ಸಮಸ್ಯೆಯನ್ನು ಗಮನಿಸಿದ್ದು, ಹೆಚ್ಚಿನ ಆರ್ಥಿಕ ಅಭಿವೃದ್ಧಿ, ಜನಸಂಖ್ಯೆಯ ನಿಯಂತ್ರಣ ಮತ್ತು ರಾಷ್ಟ್ರಾದಾಯದ ಸಮಾನವಿತರಣೆಯಲ್ಲಿ ದಲಿತವರ್ಗಗಳಿಗೆ ಹೆಚ್ಚಿನ ಪಾಲು ದೊರೆಯಬೇಕೆಂಬುದು–ಇವುಗಳಿಗೆ ಬೆಂಬಲಕೊಟ್ಟಿದೆ. ವಿದ್ಯಾಪರಿಣತರೂ, ಶಾಲಾಕಾಲೇಜುಗಳೂ ಈ ಸಮಸ್ಯೆಯನ್ನು ಕುರಿತು ಇನ್ನು ಮುಂದೆ ಹೆಚ್ಚು ಹೆಚ್ಚು ವಿಚಾರ ಮಾಡುವುದರಲ್ಲಿ ಸಂದೇಹ ಇಲ್ಲ. ನಮ್ಮ ಗೊತ್ತುಗುರಿಗಳಲ್ಲಿ ಈ ಸಮಸ್ಯೆ ಪ್ರತಿಬಿಂಬಿಸುವ ಕಾಲ ಈಗ ಬಂದಿದೆ.

## ವಿದ್ಯಾಭ್ಯಾಸದ ಗೊತ್ತುಗುರಿಗಳು—ಗ್ರಂಥಾಲಯ ಸೇವೆ

ಭಾರತದಲ್ಲಿ ಇಂದು ಹಲವು ಬಗೆಯ ಗ್ರಂಥಾಲಯಗಳು ಬೆಳೆಯುತ್ತಿವೆ. ರಾಷ್ಟ್ರದ ಹಲವು ರಾಜ್ಯಗಳು (ಕರ್ನಾಟಕವೂ ಸೇರಿ) ಗ್ರಂಥಾಲಯ ಕಾನೂನುಗಳನ್ನು ಮಾಡಿದ್ದು, ಸಾರ್ವಜನಿಕ ಗ್ರಂಥಾಲಯ ಸೇವೆಯ ವ್ಯವಸ್ಥಿತ ಬೆಳವಣಿಗೆಯ ಆರಂಭ ಆಗಿದೆ. ಕಾಲಕ್ರಮದಲ್ಲಿ ದೇಶದ ಎಲ್ಲ ಪ್ರಜೆಗಳಿಗೂ ಗ್ರಂಥಾಲಯ ಸೇವೆ ಲಭಿಸುವ ಸೂಚನೆಗಳಿವೆ. ಶಿಕ್ಷಣ ಆಯೋಗ ಗ್ರಂಥಾಲಯಗಳು ಮತ್ತಿತರ ಸಾಮಾಜಿಕ ಸಂಸ್ಥೆಗಳು ರಾಷ್ಟ್ರೀಯ ಗೊತ್ತುಗುರಿಗಳನ್ನು ಸಾಧಿಸುವುದರಲ್ಲಿ ವಹಿಸಬಹುದಾದ ಮಹತ್ಪಾತ್ರವನ್ನು ಒತ್ತಿ ಹೇಳಿದೆ. ಗ್ರಂಥಾಲಯಗಳು ಎಲ್ಲ ವಯಸ್ಸಿನ, ಎಲ್ಲ ಅಂತಸ್ತುಗಳ, ಎಲ್ಲ ಗುಂಪುಗಳ ಜನರೊಡನೆ ಕೆಲಸ ಮಾಡಬಲ್ಲವು. ಎಲ್ಲರಿಗೂ ಜ್ಞಾನಾರ್ಜನೆಯ ಸಮಾನಾವಕಾಶವನ್ನು ಒದಗಿಸಿ ಸಮಾನತೆಯ ವಾತಾವರಣವನ್ನು ಪೋಷಿಸಬಲ್ಲವು.

ನಮ್ಮ ಜನತೆಯಲ್ಲಿ ಅರ್ಧಕ್ಕೂ ಮೀರಿದ ಜನ ನಿರಕ್ಷರರು. ಆದರೂ ಅವರು ರಾಷ್ಟ್ರ, ರಾಜ್ಯ ಹಾಗೂ ಗ್ರಾಮಮಟ್ಟದಲ್ಲಿ ಸ್ವಯಮಾಡಳಿತದಲ್ಲಿ ಭಾಗವಹಿಸಬೇಕಾದವರು. ತೀರ್ಮಾನಗಳನ್ನು

---

[8] *India 1971–72 . A Reference Annual* (New Delhi : Ministry of Information, Govt. of India, 1971), p. 173

[9] V. M. Dandekar and R. Nilakantha, *Poverty in India* (Bombay : Indian School of Political Economy, 1971), p. 32

ಮಾಡುವವರು. ಇಂಥ ಸನ್ನಿವೇಶದಲ್ಲಿ ಗ್ರಂಥಾಲಯಗಳ ಹೊಣೆ ಶಾಲಾಕಾಲೇಜುಗಳಿಗಿಂತ ಹೆಚ್ಚಿನದಾಗುತ್ತದೆ. ಗ್ರಂಥಾಲಯಕ್ಕೆ ತಾವಾಗಿಯೇ 'ಅಭ್ಯಾಸ ಬಲ'ದಿಂದ ಬರುವ ಅಕ್ಷರ ಬಲ್ಲವರೊಡನೆ ಮಾತ್ರವೇ ನಮ್ಮ ಕೆಲಸ ಎಂದು ಭಾವಿಸಿ ಗ್ರಂಥಪಾಲರು ತೃಪ್ತಿಪಟ್ಟುಕೊಳ್ಳುವ ಕಾಲ ಇನ್ನಿಲ್ಲ. ಓದು–ಬರಹ ಬಂದರೂ ಎಂದೂ ಗ್ರಂಥಾಲಯಕ್ಕೆ ಬರದ ಸಹಸ ಸಂಖ್ಯೆಯ ಜನರನ್ನು ಕುರಿತು. ಅದಕ್ಕೂ ಹೆಚ್ಚಾಗಿ ಓದು–ಬರಹ ಬಾರದ ಲಕ್ಷಗಟ್ಟಲೆ ಪ್ರಜೆಗಳನ್ನು ಕುರಿತು ಚಿಂತಿಸಿ. ಅವರಿಗೆ ಗ್ರಂಥಾಲಯ ಎಂಥ ಸೇವೆ ಸಲ್ಲಿಸಬಹುದು. ಸಲ್ಲಿಸಬೇಕು ಎಂದು ವಿಚಾರ ಮಾಡಬೇಕಾಗಿದೆ. ಇದುವರೆಗೆ ಬೆಳೆದು ಬಂದ. ಕೆಲವು ಜನರಿಗೆ ಮಾತ್ರ ಸೇವೆಸಲ್ಲಿಸುವ ಮತ್ತು ಗ್ರಂಥ ಸಂಪತ್ತನ್ನು ರಕ್ಷಿಸುವ ಹೊಣೆ ಮಾತ್ರ ನಮ್ಮದು ಎಂಬ. ಹಳೆಯ ಪದ್ಧತಿ ಮೀರಿ ಗ್ರಂಥಪಾಲರು ಹೊಸದೃಷ್ಟಿ ಬೆಳಸಿಕೊಳ್ಳಬೇಕಾಗಿದೆ. ಭಾರತೀಯ ವಿದ್ಯಾಭ್ಯಾಸದ ಗುರಿಗಳ ಸಾಧನೆಯಲ್ಲಿ ಪರಿಣಾಮಕಾರಿ ಸೇವೆ ಸಲ್ಲಿಸಲು ಗ್ರಂಥಾಲಯಗಳಿಗೆ ಅನ್ಯಥಾ ಮಾರ್ಗ ಇಲ್ಲ. ಗ್ರಂಥಾಲಯಗಳ ಕೆಲಸಗಾರರು ತತ್‌ಕ್ಷಣ ಬದಲಾವಣೆಯ ಏಜೆಂಟರುಗಳಾಗಬೇಕಾಗಿದೆ. ಬದಲಾವಣೆಯ ಬೆನ್ನೆಲುಬಾಗುವುದು ಯಾವ ಸಮಾಜದಲ್ಲಾದರೂ ಕಷ್ಟದ ಕೆಲಸ. ಸಂಪ್ರದಾಯ ಶರಣ ಸಮಾಜದಲ್ಲಂತೂ ಅದು ಬಹು ಕಷ್ಟಸಾಧ್ಯ. ನಮ್ಮ ಗ್ರಂಥಾಲಯಗಳ ಅಧಿಕಾರಿಗಳು. ಕೆಲಸಗಾರರು ಇಂಥ ಕೆಲಸವನ್ನು ಮಾಡಬೇಕಾಗಿದೆ.

ಗ್ರಂಥಾಲಯ ಇರುವುದು ಓದು ಬಲ್ಲ ಹಲವರಿಗಾಗಿ ಎಂಬ ನಂಬಿಕೆಯನ್ನು ನಾವು ಬಿಡಬೇಕಾಗಿದೆ. ಅವು ಸಮಾಜದ ಪ್ರತಿಷ್ಠಿತರಿಗೆ ಮಾತ್ರ ಸೇವೆಸಲ್ಲಿಸುವ ಸಂಸ್ಥೆಗಳಲ್ಲ. ಇಡೀ ಸಮಾಜದ ಸೇವೆಯನ್ನು ಗುರಿಯಾಗಿ ಉಳ್ಳ ಸಂಸ್ಥೆಗಳು. ಸಮಾಜದ ದೀನದಲಿತರು. ಶೋಷಿತರು ಸಹ ಗ್ರಂಥಾಲಯದ ಸೇವೆಗೆ ಹಕ್ಕುದಾರರು. ಇಂಥವರಿಗೆ ವಿಶೇಷ ಶ್ರಮದಿಂದಲಾದರೂ ಸೇವೆಸಲ್ಲಿಸುವುದು ಗ್ರಂಥಪಾಲರ ಘೋಷಿತ ಉದ್ದೇಶ ಆಗಬೇಕು. ಇಂಥ ಸಾಮಾಜಿಕ ಪ್ರಜ್ಞೆ ಇಂದು ಪಶ್ಚಿಮ ರಾಷ್ಟ್ರಗಳ ಗ್ರಂಥಪಾಲರಲ್ಲಿ ಕಾಣುತ್ತಿದೆ. ಅಮೆರಿಕೆಯ ಲೈಬ್ರರಿ ಅಸೋಸಿಯೇಷನ್ ಆಶ್ರಯದಲ್ಲಿ ಇತ್ತೀಚೆಗೆ 'ಸಾಮಾಜಿಕ ಕರ್ತವ್ಯ ಪ್ರಜ್ಞೆ' ಎಚ್ಚರಿಸುವ ಏಕೋದ್ದೇಶದಿಂದ ಒಂದು ಗುಂಪು ಕಾರ್ಯಪ್ರವೃತ್ತವಾಗಿದೆ. ಇಂಗ್ಲೆಂಡಿನಲ್ಲಿ Librarians for Social change (ಸಾಮಾಜಿಕ ಬದಲಾವಣೆಗೆ ಲೈಬ್ರೇರಿಯನ್ನರುಗಳು) ಎಂಬ ಹೊಸ ಪತ್ರಿಕೆ ಆರಂಭ ಆಗಿದೆ. ಸಾಮಾಜಿಕ ಬದಲಾವಣೆಗಾಗಿ ಕೆಲಸ ಮಾಡುವುದೂ ತಮ್ಮ ಕರ್ತವ್ಯ ಎಂದವರು ಭಾವಿಸುತ್ತಿದ್ದಾರೆ. ರಾಷ್ಟ್ರದ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಅವರು ಮೂಕಪ್ರೇಕ್ಷಕರಾಗಿ ಇನ್ನೂ ಉಳಿಯಲು ಅಪೇಕ್ಷಿಸುವುದಿಲ್ಲ. ಬೆಳವಣಿಗೆಯ ಶೈಶವಾವಸ್ಥೆಯಲ್ಲಿರುವ ನಮ್ಮ ಗ್ರಂಥಾಲಯಗಳು ಕೇವಲ ಮಧ್ಯಮವರ್ಗದವರ ಸಂಸ್ಥೆಗಳಾಗಿರದೆ. ಇಡೀ ಸಮಾಜದ ಪ್ರಾತಿನಿಧಿಕ ಸಂಸ್ಥೆಗಳಾಗಿ ಬೆಳೆಯಲು ಯತ್ನಿಸಬೇಕು. ಘೋಷಿತಗುರಿಗಳನ್ನು ಸಾಧಿಸುವ ಮಹೋದ್ದೇಶದಿಂದ ಗ್ರಂಥಪಾಲರು ಚಲನಚಿತ್ರಗಳು. ವೃತ್ತಪತ್ರಿಕೆಗಳು. ರೇಡಿಯೋ. ಧ್ವನಿಮುದ್ರಿಕೆಗಳು. ಚಿತ್ರಗಳು. ಹರಿಕಥೆ. ಭಜನೆ. ಸಂಗೀತಕಚೇರಿಗಳು ಇತ್ಯಾದಿ ನಾನಾ ರೀತಿಯ ಸಾಮಾಜಿಕ ಸಂಪರ್ಕ ಸಾಧನಗಳ ಸಕ್ರಿಯ ಸಹಕಾರ ಪಡೆಯಬೇಕು.

ಗ್ರಂಥ ಸಂಗ್ರಹಣೆ. ಅವನ್ನು ಜನರ ಉಪಯೋಗಕ್ಕೆ ಸಿದ್ಧಪಡಿಸುವುದು ಮತ್ತು ಆಡಳಿತ. ಗ್ರಂಥಾಲಯ ವಿಜ್ಞಾನದ ಆಧಾರಸ್ತಂಭಗಳೆನಿಸಿದ್ದರೂ.ಅವುಗಳ ಪರಿಮಿತಿಯನ್ನೂ ದಾಟಿ ನೂತನ ರೀತಿನೀತಿಗಳನ್ನು ಗ್ರಂಥಾಲಯಸೇವೆಯಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಸಾಮಾಜಿಕ ಕ್ರಾಂತಿ ಕಹಳೆ ಊದಬೇಕಾಗಿದೆ. ಗ್ರಂಥಪಾಲ ತಾನಿರುವ ಸಮಾಜ. ಸುತ್ತಲಿನ ಪರಿಸರದೊಡನೆ ಐಕ್ಯ ಸಾಧಿಸಿ. ಅದರ ಉನ್ನತಿಗೆ ವಿಶೇಷ ಯತ್ನ ಮಾಡಬೇಕಾಗಿದೆ. ತಾವು ಓದುವ ಅಥವಾ ಕೇಳುವ ಅಥವಾ ನೋಡುವ ವಿಚಾರ ತಮ್ಮ ನಿತ್ಯಜೀವನಕ್ಕೆ ಸಂಬಂಧಪಟ್ಟದ್ದೆಂದು ಜನರಿಗೆ ಮನದಟ್ಟಾದರೆ ಅವರು ಹೆಚ್ಚು ಪರಿಣಾಮಕಾರಿ ರೀತಿಯಲ್ಲಿ ಬೇಗಬೇಗ ಕಲಿಯುತ್ತಾರೆ. ಸಮಾಜದ ಸಮಸ್ಯೆಗಳೊಡನೆ ಮಿಳಿತರಾಗುವುದೇ ಪ್ರಜಾಪ್ರಭುತ್ವದ ಯಶಸ್ಸಿಗೆ ಮೂಲ. ಹಾಗಾಗುವಂತಹ ಕಾರ್ಯಕ್ರಮಗಳನ್ನು ಗ್ರಂಥಾಲಯಗಳು ರೂಪಿಸಬೇಕು. ಸಾಮಾಜಿಕ ಸಂಸ್ಥೆಗಳ ಸಭೆಗಳು ಸೇರಲು ಗ್ರಂಥಾಲಯಗಳು ಸ್ಥಳ ಒದಗಿಸಬೇಕು. ಜನರ ನಿತ್ಯ ಜೀವನಕ್ಕೆ ಅನುಕೂಲ ಆಗುವಂತಹ. ಅವರ ಆವಶ್ಯಕತೆಗಳನ್ನು ಪೂರೈಸುವಂತಹ ಕಲಿಕೆಯ ಅವಕಾಶಗಳನ್ನು ಗ್ರಂಥಾಲಯ ಒದಗಿಸಬೇಕು. ಪುಸ್ತಕಗಳನ್ನು ಎರವಲು ಕೊಡುವುದರಿಂದಲೇ

ತಮ್ಮ ಕೆಲಸ ತೀರಿತು ಎಂಬ ಭಾವನೆ ಬಿಡಬೇಕು. ಜನಜೀವನಕ್ಕೆ ಬೇಕಾದ ಎಲ್ಲ ಸುದ್ದಿಯನ್ನೂ ಸಂಗ್ರಹಿಸಿ. ಆವಶ್ಯಕತೆ ಇರುವವರಿಗೆ, ಬೇಕೆಂದಾಗ ಅದನ್ನು ಒದಗಿಸುವ ವಿಶೇಷ ಯತ್ನಮಾಡಬೇಕು. ಜನರಿಗೆ ಉಪಯೋಗ ಆಗುವ ಯಾವ ಸುದ್ದಿಯೂ ಅಲ್ಪವಲ್ಲ ಎಂಬ ಮನೋಭಾವ ಮೂಡಬೇಕು. ಗ್ರಂಥಾಲಯ ತನ್ನ ಸುತ್ತಮುತ್ತಲಿನ ಸರಕಾರಿ ಹಾಗೂ ಖಾಸಗಿ ಸೇವಾ ಸಂಸ್ಥೆಗಳೊಡನೆ ಒಂದಾಗಿ ಕಾರ್ಯಪ್ರವೃತ್ತವಾಗಬೇಕು. ತಾನುಂಟೋ ಮೂರು ಲೋಕ ಉಂಟೋ ಎಂಬ ಧೋರಣೆಗೆ ಈ ಯುಗದಲ್ಲಿ ಸ್ಥಳ ಇಲ್ಲ. ಹೀಗೆ ಮಾಡುವುದರಿಂದ ಮಾತ್ರವೇ ಜನಮನೋಭಾವದ ಬದಲಾವಣೆಗೆ ಕೆಲಸ ಮಾಡಲು ಸಾಧ್ಯ. ಗ್ರಂಥಾಲಯ ನಿರ್ದಿಷ್ಟ ಕಾಲದಲ್ಲಿ ಗ್ರಂಥಗಳನ್ನು ಹಂಚುವ ಸಂಸ್ಥೆ ಎಂಬ ಭಾವನೆ ಬಿಟ್ಟು ಅದು ಜನಸೇವೆಗಾಗಿ ನಿರ್ಮಿತವಾದ ಹಲವು ದಾರಿಗಳಲ್ಲಿ ಒಂದು ಎಂಬ ತಿಳಿವು ಬರಬೇಕು. ಸಾಮಾಜಿಕ ಬದಲಾವಣೆ. ರಾಷ್ಟ್ರಾಭಿವೃದ್ಧಿ. ಸಾರ್ವತ್ರಿಕ ವಿದ್ಯಾಭ್ಯಾಸ. ಜ್ಞಾನಪ್ರಸಾರ. ಇತ್ಯಾದಿಗಳ ಅಧ್ವರ್ಯುಗಳಾಗಬೇಕಾದರೆ ಗ್ರಂಥಪಾಲರು ತಕ್ಕಷ್ಟು ಬದಲಾವಣೆ ಹೊಂದಬೇಕಾದ್ದು ಅನಿವಾರ್ಯ. ಹೀಗೆ ಆದಾಗ ನಮ್ಮ ಗ್ರಂಥಾಲಯಗಳು ನಮ್ಮ ಸಂಸ್ಕೃತಿಯ ಒಂದು ಶಕ್ತಿ ಆಗುತ್ತವೆ. ಪ್ರಜೆಗಳ ವ್ಯಕ್ತಿಗತ ಬೆಳವಣಿಗೆ ಹಾಗೂ ರಾಷ್ಟ್ರದ ಅಭಿವೃದ್ಧಿಗೆ ಪೂರಕ. ಪ್ರೇರಕ ಸಂಸ್ಥೆಗಳಾಗುತ್ತವೆ. ನಮ್ಮ ವಿದ್ಯಾಭ್ಯಾಸದ ರಾಷ್ಟ್ರೀಯ ಗೊತ್ತುಗುರಿಗಳ ಸಾಧನೆಗೆ ತಮ್ಮದೇ ಆದ ಕಾಣಿಕೆ ಸಲ್ಲಿಸುವ ಚೈತನ್ಯ ಗಳಿಸುತ್ತವೆ.

ಡಾ. ಬಾ. ರಾ. ಗೋಪಾಲ

# ಬೀದರ್ ಜಿಲ್ಲೆಯ ಶಾಸನಗಳು—೨

## ಪೆರ್ಮಾಡಿಯ ಭಾಲ್ಕಿ ಶಾಸನ

ಭಾಲ್ಕಿ ಬೀದರ್ ಜಿಲ್ಲೆಯ ತಾಲ್ಲೂಕುಗಳಲ್ಲಿ ಒಂದು. ಅದೇ ಹೆಸರಿನ ಊರು ತಾಲೂಕಿನ ಮುಖ್ಯ ಸ್ಥಳ. ಈ ಊರಿನ ಬಾಲೂರಾವ್ ಮಾಲೀ ಪಾಟೀಲರ ಮನೆಯ ಸಮೀಪದಲ್ಲಿ ವಿಶ್ವನಾಥರಾವ್‌ರವರ ಮನೆಯ ಹಿತ್ತಲಿನಲ್ಲಿ ಪ್ರಸ್ತುತ ಶಾಸನಕಲ್ಲು ಬಿದ್ದಿತ್ತು. 32 ಸಾಲುಗಳುಳ್ಳ ಈ ಶಾಸನ ಸುರಕ್ಷಿತವಾಗಿದೆ. ಅಕ್ಷರಗಳು ಸ್ಫುಟವಾಗಿವೆ. ಇವು 12ನೆಯ ಶತಮಾನದ ಲಿಪಿಗೆ ಹೊಂದುತ್ತವೆ.

ಈ ಶಾಸನ ಕಲ್ಯಾಣದ ಚಾಳುಕ್ಯರ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಕಾಲದ್ದು. ಅರಸ ಕಲ್ಯಾಣಪುರದ ನೆಲೆವೀಡಿನಲ್ಲಿದ್ದನೆಂದು ಶಾಸನ ತಿಳಿಸುತ್ತದೆ. ಆ ಸಂದರ್ಭದಲ್ಲಿ ಕುಮಾರ ಬಂಗಾಜಿ ಬಪ್ಪನಂಕಕಾಜಿನೆಂದೆಲ್ಲಾ ಬಿರುದಾಂಕಿತನಾದ ಮಹಾಮಂಡಲೇಶ್ವರ ಕುಮಾರಂ ಮಮ್ಮಾ ಹೆಮ್ಮಾ[ಡಿ*]ದೇವನು ರಾಜಧಾನಿಪಟ್ಟಣ ಭಲ್ಲುಂಕೆಯ ದೇವರುಗಳಿಗೆ ಗಾಣಗಳನ್ನು ದಾನಮಾಡಿದನೆಂದೂ. ಅಲ್ಲಿಯ ಇಬ್ಬರು ದೇವರುಗಳಿಗೆ ಮಾತ್ರ ಪ್ರತಿವರುಷ ಕ್ರಮವಾಗಿ ಆರು ಹಾಗೂ ಎಂಟು ಗದ್ಯಾಣಗಳು ಸಲ್ಲುವಂತೆ ಏರ್ಪಾಡು ಮಾಡಿದನೆಂದೂ ಶಾಸನ ಹೇಳುತ್ತದೆ.

ಈ ಮಹಾಮಂಡಲೇಶ್ವರನನ್ನು ಗುರುತಿಸುವುದು ಮುಖ್ಯ. ಈತನನ್ನು ಕುಮಾರನೆಂದೂ ಬಪ್ಪನಂಕಕಾಜಿನೆಂದೂ ವರ್ಣಿಸಿರುವುದು ಗಮನಾರ್ಹ. ಅಲ್ಲದೆ ಇವನನ್ನು ಮಮ್ಮ ಹೆಮ್ಮಾಡಿದೇವನೆಂದು ಕರೆದಿದೆ. ಮಮ್ಮ ಎಂದರೆ ಮೊಮ್ಮಗ. ಮೊಮ್ಮಗ ಹೆಮ್ಮಾಡಿದೇವ ಭೂಲೋಕಮಲ್ಲ ಸೋಮೇಶ್ವರನ ಮಗನಾದ ಪ್ರತಾಪ ಚಕ್ರವರ್ತಿ ಎನಿಸಿದ ಇಮ್ಮಡಿ ಜಗದೇಕಮಲ್ಲ. ಕ್ರಿ.ಶ. 1141ರ ಶಾಸನವೊಂದರಲ್ಲಿ ಈತನನ್ನು ತ್ರಿಭವನಮಲ್ಲ ಪೆರ್ಮಾಡಿದೇವನೆಂದು ಕರೆದಿದೆ.[1] ಕಡೂರು ಜಿಲ್ಲೆಯ ಶಾಸನದಲ್ಲಿ ಈತನನ್ನು ತ್ರಿಭುವನಮಲ್ಲ ಹೆಮ್ಮಾಡಿದೇವನೆಂದು ಕರೆಯಲಾಗಿದೆ.[2] ಈ ಶಾಸನದ ಕಾಲ ಚಾಳುಕ್ಯವಿಕ್ರಮಶಕೆಯ 71ನೆಯ ವರ್ಷದ ಕಾಳಯುಕ್ತಿ ಸಂವತ್ಸರಕ್ಕೆ ಸಮನಾದ ಕ್ರಿ.ಶ. 1138–39. ದೇವರನಾವದಗಿ ಶಾಸನದಲ್ಲಿ ಚಾಳುಕ್ಯ ವಂಶಾವಳಿಯನ್ನು ನಿರೂಪಿಸುವಾಗ ಭುವನೈಕ. ವಿಕ್ರಮಾಂಕ. ಭೂಲೋಕರನಂತರ ಪೆರ್ಮಾಡಿನೃಪನಾಳಿದನೆಂದು ಹೇಳಿದೆ.[3] ಪ್ರಸ್ತುತ ಶಾಸನದಲ್ಲಿ ಉಕ್ತನಾದ ಕುಮಾರ ಹೆಮ್ಮಾಡಿದೇವನು ವಿಕ್ರಮಾದಿತ್ಯನ ಮೊಮ್ಮಗನಾದ ಇಮ್ಮಡಿ ಜಗದೇಕಮಲ್ಲ ಪೆರ್ಮಾಡಿಯೇ ಎಂಬುದರಲ್ಲಿ ಸಂದೇಹವಿಲ್ಲ. ಜಗದೇಕಮಲ್ಲನಿಗೆ ಪೆರ್ಮಾಡಿ ಎಂಬ ಬಿರುದಿತ್ತು. ಅದು ಆತನ ವೈಯಕ್ತಿಕ ಹೆಸರೂ ಆಗಿರಬಹುದು.

---

[1] *South Indian Inscriptions*, Vol. X, pt. I, No. 236

[2] *Ep. Carn.*, Vol. VI, kol. 76

[3] S.I.I., Vol. XX No. 111

ನಮ್ಮ ಶಾಸನದ ಕಾಲ ಚಾಲುಕ್ಯವಿಕ್ರಮ 24ನೆಯ ಪ್ರಮಾದಿ ಸಂವತ್ಸರದ ಮಾರ್ಗಶಿರ ಪೂರ್ಣಿಮೆ, ಬೃಹಸ್ಪತಿವಾರ; ಅಂದು ಸೋಮಗ್ರಹಣವಿತ್ತು. ಈ ವಿವರಗಳು ಕ್ರಿ.ಶ. 1099ರ ನವೆಂಬರ್ 20ನೆಯ ದಿನಾಂಕಕ್ಕೆ ಸರಿಹೋಗುತ್ತದೆ. ಆದರೆ ಅಂದು ಬುಧವಾರವಾಗಿತ್ತು.

ಇದುವರೆಗೆ ತಿಳಿದಂತೆ ಜಗದೇಕಮಲ್ಲನ ಮೊದಲ ಶಾಸನದ ಕಾಲ 1124.[1] ಚಿತ್ರದುರ್ಗದ ಓಡಿಂಬೇಶ್ವರಾಲಯದಲ್ಲಿರುವ ಈ ಶಾಸನ ಜಗದೇಕಮಲ್ಲ ರಾಜ್ಯವಾಳುತ್ತಿದ್ದನೆಂದು ಹೇಳಿ, ಆತನ ಸಾಮಂತನಾದ ಉಚ್ಚಂಗಿಯ ಪಾಂಡ್ಯವಂಶದ ವಿಜಯಪಾಂಡ್ಯದೇವನನ್ನು ಹೆಸರಿಸುತ್ತದೆ. ಶಾಸನದ ಕಾಲ ಶಕವರ್ಷ 10.... ಶೋಭಕೃತ್ಸಂವತ್ಸರ. ಇದರಲ್ಲಿ ಉಕ್ತನಾದ ಜಗದೇಕಮಲ್ಲ ಜಯಸಿಂಹನಾಗಿರಬಹುದೆಂದು ಈ ಅಸ್ಪಷ್ಟವಾದ ತೇದಿಯಿಂದ ಊಹಿಸಬಹುದಾದರೂ, ಶೋಭಕೃತ್ ಸಂವತ್ಸರಕ್ಕೆ ಸಮನಾದ ಕ್ರಿ.ಶ. ವರ್ಷ 1004, 1064 ಅಥವಾ 1124 ಆಗುತ್ತದೆ. 1004ರಲ್ಲಿ ಜಯಸಿಂಹ ಆಳುತ್ತಿರಲಿಲ್ಲ. 1064ರ ವೇಳೆಗೆ ಆತ ಮರಣಿಸಿ ಎರಡು ದಶಕಗಳೇ ಸಂದಿದ್ದುವು. ಆದ್ದರಿಂದ ಶಾಸನದ ಕಾಲ 1124 ಆಗಿರಬಹುದೆಂದು ಭಾವಿಸಿ, ಇದರಲ್ಲಿ ಉಕ್ತನಾದ ಜಗದೇಕಮಲ್ಲನು ವಿಕ್ರಮಾದಿತ್ಯನ ಮೊಮ್ಮಗನಾದ ಇಮ್ಮಡಿ ಜಗದೇಕಮಲ್ಲನೆಂದೇ ಹೇಳಬೇಕು. ಆದರೆ ಆಗ ಆತ ಇನ್ನೂ ಆಳುತ್ತಿರಲಿಲ್ಲ; ತಾತನ ಅಧೀನದಲ್ಲಿ ಮಹಾಮಂಡಲೇಶ್ವರನಾಗಿದ್ದಿರಬಹುದು.

ಭಾಲ್ಕಿಯ ನಮ್ಮ ಶಾಸನದಿಂದ ಇವನು ಕ್ರಿ.ಶ. 1099ರ ವೇಳೆಗೇ ಮಹಾಮಂಡಲೇಶ್ವರನೆನಿಸಿಕೊಂಡಿದ್ದನೆಂದು ತಿಳಿದುಬರುತ್ತದೆ. ಶಾಸನದಲ್ಲಿ ಈತ ಯಾವುದೇ ಪ್ರಾಂತ್ಯದ ಅಧಿಕಾರಿಯಾಗಿದ್ದನೆಂದು ಹೇಳಿಲ್ಲ. ಭಲ್ಲುಂಕೆ ಪಟ್ಟಣ—ಭಲ್ಕಿ—ರಾಜಧಾನಿಯಾದ ಕಲ್ಯಾಣಕ್ಕೆ ಸಮೀಪದಲ್ಲಿದ್ದ ನಗರ. ಸಹಜವಾಗಿಯೇ ಅರಸನ ನೇರವಾದ ಆಡಳಿತಕ್ಕೆ ಅಧೀನವಾದ ನಗರವಾಗಿದ್ದಿರಬಹುದು. ಅಲ್ಲದೆ ಪೆರ್ಮಾಡಿ ಕೇವಲ ಮಹಾಮಂಡಲೇಶ್ವರ ಪದವಿಯನ್ನು ಪಡೆದು ಇನ್ನೂ ಆಡಳಿತದ ಜವಾಬ್ದಾರಿ ವಹಿಸಿರಲಿಲ್ಲ. ಕಾರಣ ಸ್ಪಷ್ಟ.

ಶಾಸನದ ಕಾಲ ಕ್ರಿ.ಶ. 1099. ಎಂದಮೇಲೆ ಆ ವೇಳೆಗೆ ಈತನಿಗೆ ಸುಮಾರು 20 ವರ್ಷಗಳಾಗಿದ್ದುವೆಂದು ಊಹಿಸಿದರೂ, ಈತ ಕ್ರಿ.ಶ. ಸುಮಾರು 1079ರಲ್ಲಿ ಜನಿಸಿದನೆಂದಾಗುತ್ತದೆ. ಆ ವೇಳೆಗೆ ಈತನ ಅಜ್ಜ ಆಳತೊಡಗಿ ಕೇವಲ ಎರಡು-ಮೂರು ವರ್ಷಗಳಾಗಿದ್ದುವು. ಜಗದೇಕಮಲ್ಲ ಆಳತೊಡಗಿದ್ದು ಸುಮಾರು 1138ರಲ್ಲಿ. ಆ ವೇಳೆಗೆ ಆತನಿಗೆ ಸುಮಾರು 60 ವರ್ಷಗಳಾಗಿದ್ದುವು. ಆತ ಸಾಯುವಾಗ (ಕ್ರಿ.ಶ. 1150) ಆತನಿಗೆ ಸುಮಾರು 72 ವರ್ಷ. ಮುಮ್ಮಡಿ ತೈಲ ಈತನ ಕಿರಿಯ ಸೋದರ. ಆತನ ಆಳ್ವಿಕೆಯ ಕೊನೆಯ ವರ್ಷ ಸುಮಾರು 1162 ಎಂದು ಸಾಮಾನ್ಯವಾಗಿ ಒಪ್ಪಲಾಗಿದೆ. ಜಗದೇಕಮಲ್ಲನಿಗಿಂತ 2–3 ವರ್ಷಗಳು ಕಿರಿಯನಾಗಿರಬಹುದಾದ ಮುಮ್ಮಡಿ ತೈಲ ಸುಮಾರು 1082ರಲ್ಲಿ ಜನಿಸಿದ್ದಿರಬಹುದು. ಎಂದಮೇಲೆ ಆತ ಸಾಯುವಾಗ ಆತನಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು. ಇನ್ನು ಜಗದೇಕಮಲ್ಲ ಕ್ರಿ.ಶ. 1079ರಲ್ಲಿ ಜನಿಸಿದನೆಂದರೆ ಆತನ ತಂದೆಗೆ ಆಗ 20 ವರ್ಷಗಳಾದರೂ ಆಗಿದ್ದಿರಬಹುದು. ಎಂದರೆ ಭೂಲೋಕಮಲ್ಲ ಸೋಮೇಶ್ವರ 1059 ಅಥವಾ 1054ರಲ್ಲಿ (25 ವರ್ಷಗಳೆಂದೂಹಿಸಿ) ಜನಿಸಿರಬೇಕು. ಈತ 1138ರ ವರೆಗೆ ಆಳಿದನೆಂದಾಗ, ಈತ 85 ಅಥವಾ 80 ವರ್ಷಗಳಾದರೂ ಜೀವಿಸಿರಬೇಕು. ಇನ್ನು ಆರ್ವಡಿ ವಿಕ್ರಮಾದಿತ್ಯನಾದರೋ, ಹೆಚ್ಚು ಕಡಿಮೆ ಶತಾಯುಷಿಯಾಗಿದ್ದಿರಬಹುದು. ಭೂಲೋಕಮಲ್ಲ ಸುಮಾರು 1059ರಲ್ಲಿ ಜನಿಸಿದನೆಂದ ಮೇಲೆ ಈತ 1039ರಲ್ಲಿ ಜನಿಸಿರಬೇಕು. ಹೀಗೆ ಈ ಚಾಳುಕ್ಯ ಅರಸರೆಲ್ಲ ದೀರ್ಘಾಯುಷಿಗಳಾಗಿದ್ದರೆಂಬುದು ಈಗ ಸ್ಪಷ್ಟವಾಗುತ್ತದೆ.

ಪೆರ್ಮಾಡಿ ಜಗದೇಕಮಲ್ಲ ಪಟ್ಟಕ್ಕೆ ಬಂದಾಗ ಆತನಿಗೆ ಆಗಲೇ ಸುಮಾರು 60 ವರ್ಷಗಳು ಸಂದಿದ್ದುವು. ಹನ್ನೆರಡು ವರ್ಷಗಳ ಬಳಿಕ ಮುಮ್ಮಡಿ ತೈಲ ಅಧಿಕಾರ ವಹಿಸಿದಾಗ ಆತನಿಗೆ 70 ವರ್ಷಗಳೇ ಆಗಿದ್ದಿರಬೇಕು. ಇದೊಂದು ನೂತನ ಅಂಶ. ಕಲಚುರಿ ಇಮ್ಮಡಿ ಬಿಜ್ಜಲ ಕ್ರಿ.ಶ. 1105ರ

---

[1] Yazdani : *Early History of the Deccan*

ಸುಮಾರಿನಲ್ಲಿ ಜನಿಸಿರಬೇಕೆಂದು ಡಾ. ದೇಸಾಯಿಯರು ಊಹಿಸಿದ್ದಾರೆ.[5] ಎಂದ ಮೇಲೆ ಜಗದೇಕಮಲ್ಲನಿಗಿಂತ ಈತ 25 ವರ್ಷಗಳಿಗೂ ಕಿರಿಯ. ಸಹಜವಾಗಿಯೇ ಮುಮ್ಮಡಿ ತೈಲನಿಗೂ ಕಿರಿಯ. ಆದರೆ ಮಹತ್ವಾಕಾಂಕ್ಷಿ. ಜಗದೇಕಮಲ್ಲ ಆಳತೊಡಗಿದಾಗ ಈತನಿಗೆ ಇನ್ನೂ 22 ವರ್ಷಗಳ ಪ್ರಾಯ. ಜಗದೇಕಮಲ್ಲನೂ ತೈಲನೂ ಬಿಜ್ಜಳನಿಗಿಂತ ಕಿರಿಯರು ಎಂದು ಇದುವರೆವಿಗೂ ಭಾವಿಸಲಾಗಿತ್ತು. ಆದರೆ ಈ ಶಾಸನ ಅದನ್ನು ಅಲ್ಲಗಳೆಯುತ್ತದೆ.

ಐವತ್ತು ವರ್ಷಗಳ ದೀರ್ಘಕಾಲ ಆಳಿದ ವಿಕ್ರಮಾದಿತ್ಯನ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ ಅಲ್ಲಲ್ಲಿ ಸಾಮಂತರು ದಂಗೆ ಎದ್ದಿದ್ದರೆಂಬುದು ತಿಳಿದಿದೆ. ಹೊಯ್ಸಳ ವಿಷ್ಣುವರ್ಧನ ಇವರಲ್ಲಿ ಪ್ರಮುಖ. ತನ್ನ ಅಭೀಷ್ಟಸಿದ್ಧಿಗಾಗಿ ಈತ ಹಲವು ವರ್ಷಗಳು ಕಾಯಬೇಕಾಯಿತು. ಮುಮ್ಮಡಿ ಸೋಮೇಶ್ವರನ ಕಾಲದಲ್ಲೂ ಈತ ಸಾಮಂತನಾಗಿಯೇ ಮುಂದುವರಿಯಬೇಕಾಯಿತು. ಆದರೆ ಪೆರ್ಮಾಡಿ ಜಗದೇಕಮಲ್ಲನ ಕಾಲದಲ್ಲಿ ಆತನ ಮುದಿ ವಯಸ್ಸನ್ನೂ, ಬಹುಶಃ ತತ್ಪರಿಣಾಮವಾದ ಅಶಕ್ತತೆಯನ್ನೂ ಗಮನಿಸಿ ವಿಷ್ಣುವರ್ಧನ ಇನ್ನೊಮ್ಮೆ ತನ್ನ ಪ್ರಯತ್ನವನ್ನು ಮುಂದುವರಿಸಿದ. ಧಾರವಾಡ ಜಿಲ್ಲೆಯ ಬಂಕಾಪುರ ಇವನ ವಶವಾಯಿತು. ಒಮ್ಮೊಂದೊಮ್ಮೆ ತನ್ನ ಸ್ವಾತಂತ್ರ್ಯವನ್ನು ಘೋಷಿಸಿಕೊಳ್ಳಲಾಗದಿದ್ದರೂ ಇವನನ್ನು ವಿರೋಧಿಸದೆ ದೂರದಿಂದಲೇ ಈ ಎಲ್ಲ ಘಟನೆಗಳನ್ನೂ ಅರಸ ಅವಲೋಕಿಸುತ್ತಿದ್ದನೆಂಬುದನ್ನು ಗಮನಿಸಿದಾಗ ವಿಷ್ಣುವರ್ಧನನನ್ನು ದಮನಮಾಡಲು ಅವನು ಹಿಂದೆಗೆದನೆಂದೇ ಹೇಳಬೇಕಾಗುತ್ತದೆ.

ಹತ್ತಿರದಲ್ಲೇ ಇದ್ದ ಬಿಜ್ಜಳನಿಗೆ ಇದು ಉತ್ತೇಜನಕಾರಿಯಾಯಿತು. ಮೊದಲೇ ಮಹತ್ವಾಕಾಂಕ್ಷಿಯಾಗಿದ್ದ ಬಿಜ್ಜಳನಿಗೆ ಮುಪ್ಪಡರಿದ ಜಗದೇಕಮಲ್ಲನಾಗಲೀ ಅನಂತರ ಬಂದ ತೈಲನಾಗಲೀ ಪ್ರಬಲ ವಿರೋಧಿಯಾಗುವುದು ಸಾಧ್ಯವಿರಲಿಲ್ಲ. ಅವರ ವಯಸ್ಸೇ ಅವರಿಗೆ ವಿರೋಧವಾಗಿತ್ತು. ಶಕ್ತಿ-ಸಾಮರ್ಥ್ಯಗಳಲ್ಲಿ, ರಾಜತಂತ್ರದಲ್ಲಿ, ಆಡಳಿತದಲ್ಲಿ ಏಕಮೇವಾದ್ವಿತೀಯನೆನಿಸಿದ್ದ ಬಿಜ್ಜಳನಿಗೆ ಚಾಳುಕ್ಯರನ್ನೂ ಬದಿಗೆ ಸರಿಸುವುದು ಕಷ್ಟವಾಗಲಿಲ್ಲ. ಇತರ ಸಾಮಂತರಿಗಿಲ್ಲದ ಸೌಲಭ್ಯ ಆತನಿಗಿತ್ತು. ಚಾಳುಕ್ಯರ ಅತ್ಯಂತ ಹತ್ತಿರದ ಸಂಬಂಧಿಯಾದ ಆತ ರಾಜಧಾನಿಯ ರಾಜಕೀಯದ ಅಂತರ್ಯವನ್ನೆಲ್ಲ ಅರಿತಿದ್ದನಲ್ಲದೆ, ಅಲ್ಲಿಯ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ. ಅರಸರಾಗಿದ್ದ ಕೊನೆಯ ಇಬ್ಬರು ಚಾಳುಕ್ಯರಿಗಿಂತ ಹೆಚ್ಚು ಸಾಮರ್ಥ್ಯಶಾಲಿಯಾಗಿದ್ದ ಬಿಜ್ಜಳನಿಗೆ ಅವರನ್ನು ಕಡೆಗಣಿಸಿ ಕಾರ್ಯಪ್ರವೃತ್ತನಾಗುವುದು ಕಷ್ಟವಾಗಲಿಲ್ಲ. ಅದಕ್ಕೇ 'ವೀರಭೋಜ್ಯಾವಸುಂಧರಾ' ಎಂಬ ವಾಕ್ಯ ಪ್ರಸಿಯಲ್ತು ಎಂದು ಬಿಜ್ಜಳನ ಶಾಸನಗಳು ಘೋಷಿಸಿವೆ.

ಭಲ್ಲುಂಕೆ ಪಟ್ಟಣ ಇಂದಿನ ಭಾಲ್ಕಿ. ಇಲ್ಲಿ ತ್ರೈಪುರುಷ, ಕಪಿಲೇಶ್ವರ, ಉತ್ತರೇಶ್ವರ ಮತ್ತು ಭಲ್ಲುಂಕೇಶ್ವರವೆಂಬ ಶೈವಾಲಯಗಳಲ್ಲದೆ ಒಂದು ಬ್ರಹ್ಮ ಜಿನಾಲಯವೂ ಇತ್ತೆಂದು ಇವರಿಂದ ತಿಳಿದು ಬರುತ್ತದೆ. ತ್ರೈಪುರುಷ ದೇವಾಲಯಕ್ಕೆ ಸೇರಿದಂತೆ ಒಂದು ಸತ್ರವೂ ಇತ್ತು. ಈ ದೇವಾಲಯದಲ್ಲಿ ಸೊಡರೆಣ್ಣೆಗೆ ಮತ್ತು ಸತ್ರದಲ್ಲಿ ಉಪಯೋಗಕ್ಕೆ ಕ್ರಮವಾಗಿ ಮೂರು ಗಾಣಗಳನ್ನೂ ಅರಸು ಕುಮಾರ ದಾನಮಾಡಿದ. ಕಪಿಲೇಶ್ವರಾಲಯಕ್ಕೂ ಬ್ರಹ್ಮಜಿನಾಲಯಕ್ಕೂ ಒಂದೊಂದು ಗಾಣ ಮಾತ್ರ. ಉತ್ತರೇಶ್ವರ ಹಾಗೂ ಭಲ್ಲುಂಕೇಶ್ವರ ದೇವಾಲಯಗಳಿಗೆ ಕ್ರಮವಾಗಿ ಪರಿಷಂಪ್ರತಿ ಆರು ಮತ್ತು ಎಂಟು ಗದ್ಯಾಣಗಳು ಸಲ್ಲುವಂತೆ ಸಹ ಏರ್ಪಡಿಸಲಾಯಿತು. ಈ ಹಣ ಮಹಾಜನದ ಸಿದ್ದಾಯದಲ್ಲಿ ಒಂದು ಭಾಗ. 'ಸಿದ್ದಾಯ' ಎಂಬ ಪದಕ್ಕೆ ನಿಗದಿಗೊಳಿಸಲಾದ ಸುಂಕ, ಆದಾಯ ಎಂದು ಅರ್ಥವನ್ನು ಕೊಡಲಾಗಿದೆ.[6] ಮಹಾಜನದ ಸಿದ್ದಾಯ ಎಂದರೇನು? ಮಹಾಜನರಿಗೆ ತಾವು ಹೊತ್ತ ಹೊಣೆಗಾಗಿ (ಇಂದಿನ ಶಾಸಕರಿಗೆ ಕೊಟ್ಟಂತೆ) ಭತ್ಯ-ವೇತನ?-ಕೊಡಲಾಗುತ್ತಿತ್ತೆ?. ಆ ಹಣದಲ್ಲಿ ಒಂದು ಭಾಗವನ್ನು ದೇವಾಲಯಕ್ಕೆ ಕೊಡಬೇಕೆಂದು ಶಾಸನದಲ್ಲಿ ಸೂಚಿಸಿದೆಯೇ? ತಿಳಿಯದು.

---

5 Dr. P. B. Desai : *Basavesvara and his times*, p. 25

6 D. C. Sircar : *Indian Epigraphical Glossary*, p. 311

ಕುಮಾರ ಪೆರ್ಮಾಡಿ ಇಂತಹ ಕಟ್ಟಳೆಯನ್ನು ಮಾಡಿ ಇದನ್ನು ನಡೆಸಿಕೊಂಡು ಬರುವಂತೆ ಅಲ್ಲಿಯ ಮೇಲಾಳ್ಕೆಯ ಅರಸರಿಗೆ ಜವಾಬ್ದಾರಿ ಹೊರಿಸಿದಂತೆ ತೋರುತ್ತದೆ.

## ಶಾಸನ ಪಾಠ

1 ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀಪ್ರಿಥ್ವೀವ
2 ಲ್ಲಭ ಮಹಾರಾಜಾಧಿರಾಜ ಪರಮೇಸ್ವರ
3 (ಪರಮೇಸ್ವರ) ಪರಮಭಟ್ಟಾರಕ ಸತ್ಯಾಶ್ರಯಕು[ಳ]
4 ತಿಳಕ ಚಾಳುಕ್ಯಾಭರಣ ಶ್ರೀಮತ್ತ್ರಿಭುವ
5 ನಮಲ್ಲದೇವರ ವಿಜಯರಾಜ್ಯಮುತ್ತರೋತ್ತ
6 ರಾಭಿವ್ರಿದ್ಧಿಪ್ರವರ್ದ್ಧಮಾನಮಾಚನ್ದ್ರಾರ್ಕ್ಕತಾರಂ
7 ಬರಂ ಸಲುತ್ತಮಿರೆ ಕಲ್ಯಾಣಪುರದ [ನೆ]
8 (ಲೆ)ವೀಡಿನಲ್ಲು ಸುಖಸಂಕಥಾವಿನೋದದಿಂ ರಾಜ್ಯ[ಂ]
9 ಗೆಯ್ಯುತ್ತಮಿರೆ ತತ್ಪಾದಪದ್ಮೋಪಜೀವಿ ಸ
10 ಮಧಿಗತಪಂಚಮಹಾಶಬ್ದ ಮಹಾ
11 ಮಣ್ಡಳೇಶ್ವರಂ ವೀರಮಹೇಶ್ವರನಾಶ್ರಿತಜನ
12 ಕಲ್ಪವ್ರಿಕ್ಷ ಭುಜಬಳದಕ್ಷ ದುಷ್ಟತುರ
13 ಗಾರೂಢರೇವನ್ತ ಮತ್ತಗಜಾರೂಢಭಗ-
14 ದತ್ತನರಿರಾಯಬಿರುದ ಕುವರಬಂಗಾಱಂ ಬ-
15 ಪ್ಪನಂಕಕಾಱಂ ಶ್ರೀಮನ್ಮಹಾಮಣ್ಡಳೇಶ್ವರಂ ಕು
16 ಮಾರಂ ಪಮ್ಮ ಹಮ್ಮಾ[ಡಿ*] ದೇವರು ಸ್ವಸ್ತಿ ಶ್ರೀಮ
17 ಚ್ಚಾಳುಕ್ಯವಿಕ್ರಮವರ್ಶದ ಇಪ್ಪತ್ತನಾಲ್ಕನೆ
18 ಯ ಪ್ರಮಾಥಿ ಸಂವತ್ಸರದ ಮಾರ್ಗ್ಗಸಿರದ ಪು
19 ಣ್ಣಮೆ ಬ್ರಿಹಸ್ಪತಿವಾರದಂದು ಸೋಮಗ್ರಹಣ
20 ನಿಮಿತ್ತವಾಗಿ ಶ್ರೀಮತ್‌ರಾಜಧಾನಿ ಪಟ್ಟಣ
21 ಭಲ್ಲುಂಕೆಯ ಶ್ರೀಮತ್ತ್ರೈಪುರುಷದೇವರಿಗ್ಗೆ
22 ಸೊಡರೆಣ್ಣೆಗೆ ಗಾಣ ಮೂಱು ಅಲ್ಲಿಯ
23 ಶತ್ರಕ್ಕೆ ಗಾಣಂ ಮೂಱು ಕಪಿಲೇಶ್ವರದೇವರ್ಗ್ಗೆ ಗಾಣ
24 ಒನ್ದು ಬ್ರಹ್ಮಜಿನಾಲಯಕ್ಕೆ ಗಾಣ ಒನ್ದು ಶ್ರೀಮ
25 ಮುತ್ತರೇಶ್ವರದೇವರ ಶ್ರೀಖಣ್ಡಧೂಪನಿವೇದ್ಯ
26 ಕ್ಕೆ ಮಹಾಜನದ ವಿದ್ಯಾಯದಲ್ಲಿ ವರಿಷಂಪ್ರತಿ ಗ
27 ದ್ಯಾಣ ಅಱು ಶ್ರೀಮತ್ ಭಲ್ಲುಂಕೇಶ್ವರ ದೇವರ್ಗ್ಗೆ ಗದ್ಯಾ
28 ಣವೆಂಟು ಇಂತಿನಿತುಮಂ ಸ್ವಧರ್ಮ್ಮದಿಂ ಮೇಲಾಳ್ಕೆ ಅರಸು
29 ಪ್ರತಿಪಾಳಿಸಿ ಸಿದ್ಧಾಯದಲಿಹುವರಿದನಾವ್ರೋ
30 ರ್ವ್ವರಿಳಿದರಳಿದವರ್ವ್ವಾರಣಾಸಿಯಲ್ಲಕವಿಲೆಯುಂ ಬ್ರಾ
31 ಹ್ಮಣರುಮಂ ಕೊಂದವರು ಸ್ವದತ್ತಾಂ ಪರದತ್ತಾಂ ವಾ ಯೋ ಹರೇತಿ
32 ವಸುನ್ಧರಾ ಷಷ್ಟಿರ್ವರ್ಶಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿ॥

ಎಸ್. ನಾಗರಾಜು

# ಕರ್ನಾಟಕದಲ್ಲಿ ಕೈಗಾರಿಕಾ ರಾಜಿ ಸಂಧಾನ ವ್ಯವಸ್ಥೆ*

ಕೈಗಾರಿಕಾ ರಾಜಿ ಸಂಧಾನ (ಇಂಡಸ್ಟ್ರಿಯಲ್ ಕಾನ್ಸಿಲಿಯೇಷನ್) ಕೈಗಾರಿಕಾ ವಿವಾದಗಳಲ್ಲಿ ಮೂರನೆಯ ವ್ಯಕ್ತಿಯ ಪ್ರವೇಶದಿಂದ ಏರ್ಪಡುವ ಒಪ್ಪಂದ ವಿಧಾನಗಳಲ್ಲೊಂದಾಗಿದೆ. ರಾಜಿ ಸಂಧಾನ ವೇರ್ಪಡಿಸುವ ವ್ಯಕ್ತಿ ಅಥವಾ ಮಂಡಲಿ (ಕಾನ್ಸಿಲಿಯೇಟರ್ ಅಥವಾ ಕಾನ್ಸಿಲಿಯೇಷನ್ ಬೋರ್ಡ್) ವಿವಾದಗ್ರಸ್ತ ಗುಂಪುಗಳೆರಡನ್ನೂ, ಅಂದರೆ ಕಾರ್ಮಿಕರು ಮತ್ತು ಆಡಳಿತ ವರ್ಗದವರಿಬ್ಬರನ್ನೂ, ಒಟ್ಟಾಗಿ ಕಲೆಯುವಂತೆ ಮಾಡಿ ಪರಸ್ಪರವಾಗಿ ನೇರ ಮಾತುಕತೆಯ ಮೂಲಕ ರಾಜಿ ಮಾಡಿಕೊಳ್ಳುವುದನ್ನು ಪ್ರೋತ್ಸಾಹಿಸುವುದು ಇದರ ವಿಧಾನ. ಆದರೆ ಅವರು ತಮ್ಮ ವೈಯಕ್ತಿಕ ತೀರ್ಪನ್ನಾಗಲಿ ಪ್ರಭಾವವನ್ನಾಗಲಿ ಅವರ ಮೇಲೆ ಹೇರುವುದಿಲ್ಲ. ಹಾಗೇನಾದರೂ ಹೇರಿದರೆ ಅದು ರಾಜಿ ಸಂಧಾನವಾಗುವುದಿಲ್ಲ. ಈ ವ್ಯವಸ್ಥೆ ಪ್ರಪಂಚದ ಎಲ್ಲ ಕೈಗಾರಿಕಾ ರಾಷ್ಟ್ರಗಳಲ್ಲೂ ಅಸ್ತಿತ್ವದಲ್ಲಿದೆ. ಕೈಗಾರಿಕಾ ವಿವಾದಗಳನ್ನು ಸಾಧ್ಯವಾದಷ್ಟು ಬಗೆಹರಿಸಿ ಆ ಮೂಲಕ ಆ ರಾಷ್ಟ್ರಗಳ ಆರ್ಥಿಕ ಮುನ್ನಡೆಗೆ ಸಹಾಯಕವಾಗಿದೆ. ಭಾರತದಲ್ಲೂ ಸಂಧಾನ ವ್ಯವಸ್ಥೆ ಕೇಂದ್ರ ಹಾಗೂ ರಾಜ್ಯಗಳ ಮಟ್ಟದಲ್ಲಿ ಕಾನೂನು ಬದ್ಧವಾಗಿ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕ ರಾಜ್ಯದಲ್ಲಿರುವ ಪ್ರಸ್ತುತ ಕೈಗಾರಿಕಾ ರಾಜಿ ಸಂಧಾನ ಯಂತ್ರದ ಕಾರ್ಯನಿರ್ವಹಣೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವುದು, ಅದರ ಅಸಮರ್ಪಕ ಕಾರ್ಯನಿರ್ವಹಣೆಗೆ ಕಾರಣಗಳೇನೆಂಬುದನ್ನು ವಿವೇಚಿಸುವುದು ಮತ್ತು ರಾಷ್ಟ್ರೀಯ ಕಾರ್ಮಿಕ ಮಂಡಲಿ ಈ ವ್ಯವಸ್ಥೆಯ ಬಗ್ಗೆ ಮಾಡಿರುವ ಸಲಹೆಗಳನ್ನು ಪರೀಕ್ಷಿಸುವುದು ಈ ಲೇಖನದ ಮುಖ್ಯ ಉದ್ದೇಶ.

## ಚಾರಿತ್ರಿಕ ಹಿನ್ನೆಲೆ

ಭಾರತದಲ್ಲಿ ಕೈಗಾರಿಕಾ ಸಂಧಾನ ವ್ಯವಸ್ಥೆ 1929ರ ಕೈಗಾರಿಕಾ ವಿವಾದಗಳ ಕಾನೂನಿನ ಪ್ರಕಾರ ಅಸ್ತಿತ್ವಕ್ಕೆ ಬಂತೆಂದು ಹೇಳಬಹುದು. ಅಂತೆಯೇ ತಾತ್ಕಾಲಿಕ ಸಂಧಾನ ಮಂಡಲಿಯನ್ನು ಅವಶ್ಯವಾದಾಗ, ಅಂದರೆ ಕೈಗಾರಿಕಾ ವಿವಾದಗಳನ್ನೂ ಬಗೆಹರಿಸಬೇಕಾದಾಗ, ನೇಮಿಸುವ ಹಕ್ಕನ್ನು ಸರ್ಕಾರ ಪಡೆಯಿತು. ಆದರೆ 1947ರ ಕೈಗಾರಿಕಾ ಅಧಿನಿಯಮದ ಪ್ರಕಾರ ಖಾಯಂ ಸಂಧಾನಾಧಿಕಾರಿಯನ್ನಾಗಲಿ ಮಂಡಲಿಯನ್ನಾಗಲಿ ನೇಮಿಸುವ ಹಕ್ಕನ್ನು ಸರ್ಕಾರ ಪಡೆಯಿತು. ಮುಂದೆ 1951ರಲ್ಲಿ ಈ ಅಧಿನಿಯಮದ ವ್ಯಾಪ್ತಿಯನ್ನು ರಾಜ್ಯಗಳಿಗೂ ವಿಸ್ತರಿಸಿದಾಗ ರಾಜ್ಯ ಸರ್ಕಾರಗಳೂ ಖಾಯಂ ಸಂಧಾನ ವ್ಯವಸ್ಥೆಯನ್ನು ಏರ್ಪಡಿಸಲು ಹಕ್ಕು ಪಡೆದುವು.

ಕರ್ನಾಟಕ ರಾಜ್ಯದಲ್ಲಿ 1931ರಲ್ಲೇ ಸಂಧಾನಮಂಡಲಿಯೊಂದನ್ನು ಆಗಿನ ಮೈಸೂರು ಸರ್ಕಾರ ನೇಮಿಸಿತು. ಈ ಮಂಡಲಿಯಲ್ಲಿ ಕಾರ್ಮಿಕರು, ಉದ್ಯಮಿಗಳು ಹಾಗೂ ಸರ್ಕಾರವನ್ನು ಪ್ರತಿನಿಧಿಸುವ

---

* ಈ ಲೇಖನವನ್ನು ಎಕನಾಮಿಕ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾದ ನನ್ನ Conciliation Machinery in Mysore—An Analysis ಎಂಬ ಲೇಖನವನ್ನು ಆಧರಿಸಿ ಬರೆಯಲಾಗಿದೆ.

ಆರು ಮಂದಿ ಸದಸ್ಯರಿದ್ದರು. ರಾಜ್ಯದಲ್ಲಿಯ ಕೈಗಾರಿಕಾ ಸಂಬಂಧ ಹದಗೆಡದಂತೆ ನೋಡಿಕೊಳ್ಳುವುದು ಅದರ ಮುಖ್ಯ ಉದ್ದೇಶವಾಗಿತ್ತು. ಮುಂದೆ 1942ರಲ್ಲಿ ಮೈಸೂರು ಕಾರ್ಮಿಕ ಅಧಿನಿಯಮ ಜಾರಿಗೆ ಬಂದಾಗಿನಿಂದ ರಾಜ್ಯದ ರಾಜಿ ಸಂಧಾನಯಂತ್ರ ಕಾನೂನಿನ ಬೆಂಬಲ ಪಡೆಯಿತು. ಅಧಿನಿಯಮದ ಪ್ರಕಾರ ರಾಜ್ಯ ಸರ್ಕಾರ ವಿವಾದಕ್ಕೊಳಪಟ್ಟ ಪಂಗಡಗಳೆರಡೂ ಅಪೇಕ್ಷಿಸಿದಲ್ಲಿ ಅಥವಾ ಕಾನೂನು ಮತ್ತು ಶಿಸ್ತುಗಳಿಗೆ ಚ್ಯುತಿ ಉಂಟಾದಲ್ಲಿ ಸಂಧಾನಾಧಿಕಾರಿಯನ್ನು ನೇಮಿಸಲೂ ಆ ಅಧಿಕಾರಿ ತನ್ನ ಕಾರ್ಯದಲ್ಲಿ ವಿಫಲನಾದಲ್ಲಿ ಸರ್ಕಾರ ಆ ವಿವಾದವನ್ನು ಸಂಧಾನ ಮಂಡಲಿಗೆ ವಹಿಸಲೂ ಅಧಿಕಾರ ಪಡೆಯಿತು. ಕೇಂದ್ರ ಸರ್ಕಾರ ಜಾರಿಗೆ ತಂದ ಕೈಗಾರಿಕಾ ವಿವಾದಗಳ ಅಧಿನಿಯಮ 1951ರಲ್ಲಿ ಮೈಸೂರು ರಾಜ್ಯಕ್ಕೂ ಅನ್ವಯಿಸಲ್ಪಟ್ಟಿತು. 1956ಕ್ಕೆ ಮುಂಚೆ, ಭಾಷಾನುಗುಣ ರಾಜ್ಯ ವಿಂಗಡಣೆಯಾಗುವುದಕ್ಕೆ ಮೊದಲು, ರಾಜ್ಯದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಸಂಧಾನಾಧಿಕಾರಿಗಳ ಆವಶ್ಯಕತೆ ಇರಲಿಲ್ಲವಾದರೂ 1956ರಿಂದೀಚೆಗೆ ಕೈಗಾರಿಕಾ ವಿವಾದಗಳ ಸಂಖ್ಯೆ ಅಧಿಕಗೊಂಡುದರಿಂದ ಈ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚು ಮಾಡುವುದು ಅನಿವಾರ್ಯವಾಯಿತು.

## ಕರ್ನಾಟಕದ ಸಂಧಾನ ವ್ಯವಸ್ಥೆ ಮತ್ತು ಅದರ ಕಾರ್ಯನಿರ್ವಹಣೆ

ರಾಜ್ಯದಲ್ಲಿ ಈಗ ಒಟ್ಟು ಇಪ್ಪತ್ತೊಂದು ಕೈಗಾರಿಕಾ ಸಂಧಾನಾಧಿಕಾರಿಗಳಿದ್ದಾರೆ. ರಾಜ್ಯದ ಕಾರ್ಮಿಕ ಕಮಿಷನರ್ ಪ್ರಧಾನ ಸಂಧಾನಾಧಿಕಾರಿ. ಅವರು ರಾಜ್ಯಾದ್ಯಂತ ಉದ್ಭವಿಸುವ ಕೈಗಾರಿಕಾ ವಿವಾದಗಳಲ್ಲಿ ಸಂಧಾನವನ್ನೇರ್ಪಡಿಸಲು ಅಧಿಕಾರ ಪಡೆದಿರುತ್ತಾರೆ. ಅವರ ಕೈಕೆಳಗೆ ಮೂರು ಜನ ಉಪ ಕಾರ್ಮಿಕ ಕಮಿಷನರುಗಳು, ಆರು ಮಂದಿ ಸಹಾಯಕ ಕಾರ್ಮಿಕ ಕಮಿಷನರುಗಳು ತಮ್ಮ ತಮ್ಮ ವಿಭಾಗಗಳಲ್ಲಿ ಉದ್ಭವವಾಗುವ ಕೈಗಾರಿಕಾ ವಿವಾದಗಳಲ್ಲಿ ಸಂಧಾನವೇರ್ಪಡಿಸುವ ಅಧಿಕಾರವನ್ನು ಹೊಂದಿದ್ದಾರೆ. ಮೇಲಿನ ಅಧಿಕಾರಿಗಳ ಮೇಲೆ ಕೆಲಸದ ಒತ್ತಡ ಹೆಚ್ಚಾಗಿರುವುದರಿಂದಲೂ ವಿವಾದಗಳನ್ನು ಆದಷ್ಟು ಶೀಘ್ರವಾಗಿ ಬಗೆಹರಿಸುವ ಉದ್ದೇಶದಿಂದಲೂ ಕೆಲವು ಕಾರ್ಮಿಕಾಧಿಕಾರಿಗಳೂ ತಮ್ಮ ಅಧಿಕಾರ ವ್ಯಾಪ್ತಿಯೊಳಗಿರುವ ಪ್ರದೇಶಗಳಲ್ಲಿ ಹಾಗೂ ಇನ್ನೂರು ಕಾರ್ಮಿಕರಿಗಿಂತ ಕಡಿಮೆ ಕೆಲಸಗಾರರಿರುವ ಉದ್ಯಮ ಸಂಸ್ಥೆಗಳಲ್ಲಿ ಕಾರ್ಮಿಕ ವಿವಾದಗಳನ್ನು ಬಗೆಹರಿಸುವುದಕ್ಕಾಗಿ ಸಂಧಾನವನ್ನೇರ್ಪಡಿಸುವ ಅಧಿಕಾರ ಪಡೆದಿದ್ದಾರೆ.

1947ರ ಕೈಗಾರಿಕಾ ವಿವಾದಗಳ ಕಾನೂನು ಮತ್ತು ಅದರ ಪರಿಷ್ಕರಣೆಗಳ ಪ್ರಕಾರ ಸಾರ್ವಜನೋಪಯೋಗಿ ಸಂಸ್ಥೆಗಳಲ್ಲಿ ರಾಜಿ ಸಂಧಾನಾಧಿಕಾರಿ ವಿವಾದ ಪ್ರಾರಂಭವಾದಂದಿನಿಂದ ತಾನೇ ಸ್ವತಃ ರಾಜಿ ಸಂಧಾನ ಪ್ರಾರಂಭಿಸಲು ಅಧಿಕಾರ ಪಡೆದಿರುತ್ತಾನೆ. ಆದರೆ ಇತರ ಉದ್ಯಮ ಸಂಸ್ಥೆಗಳ ವಿವಾದಗಳಲ್ಲಿ ಸಂಧಾನ ಕೈಗೊಳ್ಳುವುದರಲ್ಲಿ ತಾನೇ ಸ್ವತಃ ಉದ್ಯುಕ್ತನಾಗುವುದಿಲ್ಲ. ವಿವಾದಗ್ರಸ್ತ ಗುಂಪುಗಳಿಂದ ಕರೆ ಬರುವ ವರೆಗೆ ಅಥವಾ ಕಾನೂನು ಮತ್ತು ಶಿಸ್ತುಗಳ ಉಲ್ಲಂಘನೆಯಾಗುವ ವರೆಗೆ ಅವನು ಪ್ರವೇಶಿಸುವುದಿಲ್ಲ. ಮತ್ತೆ ಕೆಲವು ಸಂದರ್ಭಗಳಲ್ಲಿ ತನ್ನ ಸ್ವಂತ ಇಚ್ಛೆಯ ಮೇರೆಗೆ ಸಂಧಾನ ನಡೆಸಲೂ ಅಧಿಕಾರ ಪಡೆದಿರುತ್ತಾನೆ. ಈ ಸಂಧಾನವು ವಿವಾದವನ್ನು ಬಗೆಹರಿಸುವುದರಲ್ಲಿ ಯಶಸ್ವಿಯಾದಲ್ಲಿ ಒಂದು ಇತ್ಯರ್ಥಪತ್ರವನ್ನು (ಮೆಮೊರಾಂಡಂ ಆಫ್ ಸೆಟ್ಲ್‌ಮೆಂಟ್) ತಯಾರಿಸಲಾಗುತ್ತದೆ. ಇದಕ್ಕೆ ಎರಡು ಪಕ್ಷಗಳ ಪ್ರತಿನಿಧಿಗಳ ಒಪ್ಪಿಗೆ ಇದೆಯೆಂಬುದನ್ನು ಸೂಚಿಸುವುದಕ್ಕೋಸ್ಕರ ಸಂಧಾನಾಧಿಕಾರಿಯ ಸಮ್ಮುಖದಲ್ಲಿ ಎಲ್ಲರೂ ಸಹಿಮಾಡಬೇಕಾಗುತ್ತದೆ. ಈ ಪತ್ರದಲ್ಲಿ ಸೂಚಿಸಿರುವ ಕಾಲದ ವರೆವಿಗೆ ಒಡಂಬಡಿಕೆಯ ಷರತ್ತುಗಳು ಅನುಷ್ಠಾನದಲ್ಲಿರುತ್ತವೆ. ಆದರೆ ಸಂಧಾನ ವಿಫಲವಾದಲ್ಲಿ ಸಂಧಾನಾಧಿಕಾರಿ ವೈಫಲ್ಯಕ್ಕೆ ಕಾರಣಗಳನ್ನೊಳಗೊಂಡ ವೈಫಲ್ಯ ವರದಿಯನ್ನು (ಫೇಲ್ಯೂರ್ ರಿಪೋರ್ಟ್) ನಿಯಮಿತ ಕಾಲದೊಳಗೆ ಸರ್ಕಾರಕ್ಕೆ ಸಲ್ಲಿಸಬೇಕು. ಸರ್ಕಾರ ಈ ವಿವಾದವನ್ನು ನ್ಯಾಯ ಮಂಡಳಿಗೆ (ಟ್ರೈಬ್ಯುನಲ್) ಅಥವಾ ಕೈಗಾರಿಕಾ ನ್ಯಾಯಾಲಯಕ್ಕೆ (ಇಂಡಸ್ಟ್ರಿಯಲ್ ಕೋರ್ಟ್) ನ್ಯಾಯ ತೀರ್ಪಿಗಾಗಿ ವಹಿಸುವ ಅಥವಾ ವಹಿಸದಿರುವ ಹಕ್ಕು ಹೊಂದಿರುತ್ತದೆ.

ರಾಜ್ಯದಲ್ಲಿಯ ರಾಜಿ ಸಂಧಾನ ಯಂತ್ರ 1966ರಿಂದ 1971ರ ವರೆಗೆ ತನ್ನ ಕಾರ್ಯವನ್ನು ಹೇಗೆ ನಿರ್ವಹಿಸಿದೆಯೆಂಬುದನ್ನು ಕೆಳಗೆ ಕೊಟ್ಟಿರುವ ಕೋಷ್ಟಕ 1 ತಿಳಿಸುತ್ತದೆ.

## ಕೋಷ್ಟಕ 1

ಕರ್ನಾಟಕದಲ್ಲಿಯ ಕೈಗಾರಿಕಾ ರಾಜಿ ಸಂಧಾನ ವ್ಯವಸ್ಥೆಯ ಕಾರ್ಯನಿರ್ವಹಣೆ 1966 ರಿಂದ 1971ರವರೆಗೆ[1]

| ವರ್ಷ | ಸಂಧಾನ ವ್ಯವಸ್ಥೆಗೆ ವಹಿಸಲಾದ ವಿವಾದಗಳ ಸಂಖ್ಯೆ | ಸಂಧಾನ ಯಂತ್ರ ಇತ್ಯರ್ಥ ಪಡಿಸುವುದಕ್ಕೆ ವಾಸ್ತವವಾಗಿ ಕೈಗೊಂಡ ವಿವಾದಗಳ ಸಂಖ್ಯೆ | ಸಂಧಾನಯಂತ್ರ ಯಶಸ್ವಿಯಾಗಿ ಇತ್ಯರ್ಥಪಡಿಸಿದ ವಿವಾದಗಳ ಸಂಖ್ಯೆ | ಕೈಗೊಂಡ ಎಲ್ಲಾ ವಿವಾದಗಳ ಯಶಸ್ವಿಯಾದ ವಿವಾದಗಳ ಸೇಕಡ | ಸಂಧಾನ ವಿಫಲವಾದ ವಿವಾದಗಳ ಸಂಖ್ಯೆ | ವಿಫಲ ವಿವಾದಗಳ ಸೇಕಡ | ವಾಪಸು ಪಡೆದ ವಿವಾದ ಸಂಖ್ಯೆ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1966 | 1789 | 1339 | 489 | 36.5 | 565 | 42.1 | 285 |
| 1967 | 1631 | 1450 | 525 | 36.2 | 535 | 36.9 | 390 |
| 1968 | 1470 | 1320 | 530 | 40.2 | 568 | 43.0 | 222 |
| 1969 | 1300 | 1141 | 496 | 43.5 | 429 | 37.4 | 216 |
| 1970 | 1053 | 924 | 381 | 41.2 | 183 | 19.8 | 360 |
| 1971[2] | 925 | — | — | — | 386 | 41.7[3] | — |

ಮೇಲಿನ ಪಟ್ಟಿಯನ್ನು ಅವಲೋಕಿಸಿದಾಗ, ಕರ್ನಾಟಕ ರಾಜ್ಯದ ರಾಜಿ ಸಂಧಾನ ಯಂತ್ರದ ಕಾರ್ಯನಿರ್ವಹಣೆ ಅರ್ಥವಾಗುವುದಲ್ಲದೆ, 1966ರಿಂದ 1971ರ ವರೆಗಿನ ಆರು ವರ್ಷಗಳ ಅವಧಿಯಲ್ಲಿ ಈ ಯಂತ್ರದ ಕಾರ್ಯಾಚರಣೆಗೆ ವಹಿಸಲಾದ ವಿವಾದಗಳ ಸಂಖ್ಯೆ ಇಳಿಮುಖವಾಗುತ್ತಿರುವುದು ಗೋಚರವಾಗುತ್ತದೆ. 1966ರಲ್ಲಿ 1789 ವಿವಾದಗಳು ಈ ಯಂತ್ರದ ಕಾರ್ಯಾಚರಣೆಗೊಳಪಟ್ಟಿದ್ದು ಕ್ರಮೇಣ ಪ್ರತಿವರ್ಷವೂ ಇಳಿಯತೊಡಗಿ 1971ರಲ್ಲಿ ಈ ವಿವಾದಗಳ ಸಂಖ್ಯೆ ಕೇವಲ 921ರಷ್ಟು ಕೆಳಗಿನ ಮಟ್ಟ ಮುಟ್ಟಿತು. ಅಷ್ಟೇ ಅಲ್ಲದೆ ವಾಸ್ತವವಾಗಿ ಈ ಸಂಧಾನವ್ಯವಸ್ಥೆ ಇತ್ಯರ್ಥಪಡಿಸಲು ತೆಗೆದುಕೊಂಡ ಕೈಗಾರಿಕಾ ವಿವಾದಗಳ ಸಂಖ್ಯೆಯೂ ಸಾಕಷ್ಟು ಇಳಿಯುತ್ತಿರುವುದು ಗಮನಾರ್ಹವಾಗಿದೆ. ಉದಾಹರಣೆಗೆ 1966ರಲ್ಲಿ ಈ ವ್ಯವಸ್ಥೆ ವಾಸ್ತವವಾಗಿ ಬಗೆಹರಿಸಲು ತೆಗೆದು

1 ಮೂಲ: ಲೇಬರ್ ಕಮಿಷನರ ಕಚೇರಿ, ಬೆಂಗಳೂರು

2 ಮೂಲ: ವಾರ್ಷಿಕವರದಿ 1971–72, ಕಾರ್ಮಿಕ ಇಲಾಖೆ. ಭಾರತ ಸರ್ಕಾರ

3 ಒಟ್ಟು ವಿವಾದಗಳಲ್ಲಿ ವಿಫಲವಾದ ವಿವಾದಗಳ ಸೇಕಡ

ಕೊಂಡ ವಿವಾದಗಳ ಸಂಖ್ಯೆ 1339 ಆಗಿತ್ತು. 1970ರಲ್ಲಿ[4] ಈ ವಿವಾದಗಳ ಸಂಖ್ಯೆ 924ಕ್ಕೆ ಇಳಿಯಿತು. ಇದಕ್ಕೆ ವ್ಯತಿರಿಕ್ತವಾಗಿ ರಾಜ್ಯದ ಸಂಧಾನಯಂತ್ರ ವಾಸ್ತವವಾಗಿ ಇತ್ಯರ್ಥವನ್ನೇರ್ಪಡಿಸಲು ತೆಗೆದು ಕೊಂಡ ವಿವಾದಗಳಲ್ಲಿ ಯಶಸ್ವಿಯಾಗಿ ಇತ್ಯರ್ಥ ಏರ್ಪಡಿಸಿದ ವಿವಾದಗಳ ಸೇಕಡ ವರ್ಷೇ ವರ್ಷೇ ಅಧಿಕಗೊಳ್ಳುತ್ತಿರುವುದನ್ನೂ ಕಾಣಬಹುದು. ಅದರ ಪ್ರಕಾರ ಈ ಸೇಕಡ 1966ರಲ್ಲಿ 36.5 ಆಗಿದ್ದು 1969ರಲ್ಲಿ 43.5 ಕ್ಕೆ ಏರಿತು. 1966—1970ರ ಅವಧಿಯ ಐದು ವರ್ಷಗಳೊಳಗೆ ಸಂಧಾನದ ಮೂಲಕ ರಾಜ್ಯದಲ್ಲಿ ಬಗೆಹರಿಸಲ್ಪಟ್ಟ ವಿವಾದಗಳ ಸರಾಸರಿ ಸೇಕಡ 40 ಆಗಿದ್ದು ಅದೇ ಅವಧಿಯಲ್ಲಿ ಸಂಧಾನ ವಿಫಲವಾದ ವಿವಾದಗಳ ಸರಾಸರಿ ಸೇಕಡ ಸುಮಾರು 36. ರಾಜ್ಯದ ಸಂಧಾನ ವ್ಯವಸ್ಥೆ ಯಶಸ್ವಿಯಾಗಿ ಕಾರ್ಯನಿರ್ವಹಣೆ ಮಾಡುತ್ತಿದೆಯೆನ್ನಲು ಈ ಅಂಕಿಗಳು ಸಾಕ್ಷಿ.

ಆದರೆ ಈ ವ್ಯವಸ್ಥೆಯ ಕಾರ್ಯದಕ್ಷತೆಯನ್ನು ಅಳತೆ ಮಾಡುವಾಗ ನಾವು ಅದರ ಜಯಾಪಜಯ ಗಳೆರಡನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಅಂದರೆ ಅದು ಎಷ್ಟು ವಿವಾದಗಳಲ್ಲಿ ರಾಜಿಯನ್ನೇರ್ಪಡಿ ಸುವುದರಲ್ಲಿ ಜಯಗಳಿಸಿತೆಂಬುದನ್ನೇ ಅಲ್ಲದೆ ಅದರ ಸಂಧಾನ ವೈಫಲ್ಯಗಳನ್ನೂ ವಿಶ್ಲೇಷಿಸಬೇಕು.

## ಸಂಧಾನ ವೈಫಲ್ಯಗಳು

1966–1971ರ ಅವಧಿಯೊಳಗೆ ರಾಜ್ಯದ ಸಂಧಾನಯಂತ್ರದ ಕಾರ್ಯಾಚರಣೆಗೊಳಪಡಿಸಿದ ಒಟ್ಟು ಕೈಗಾರಿಕಾ ವಿವಾದಗಳಲ್ಲಿ ಗಣನೀಯ ಸಂಖ್ಯೆಯ ವಿವಾದಗಳು ಯಶಸ್ವಿಯಾಗಿ ಬಗೆ ಹರಿಸಲ್ಪಡಲಿಲ್ಲ ವೆಂಬುದು ಮೇಲಿನ ಕೋಷ್ಟಕ 1ರಿಂದಲೇ ವ್ಯಕ್ತವಾಗುತ್ತದೆ. ಉದಾಹರಣೆಗೆ ಸಂಧಾನದ ಮೂಲಕ ಯಶಸ್ವಿಯಾಗಿ ಬಗೆಹರಿಸಲ್ಪಡದ ವಿವಾದಗಳ ಸೇಕಡ 1966ರಲ್ಲಿ 42ರಷ್ಟಿದ್ದುದು 1968ರಲ್ಲಿ 43ಕ್ಕೆ ಏರಿತು. ಮತ್ತೆ 1966 ಮತ್ತು 1970ರಲ್ಲಿ ಅದು ಇಳಿಮುಖವಾಗಿದ್ದು 1971ರಲ್ಲಿ ಸೇಕಡ 41.7ಕ್ಕೆ ಏರಿತು. ರಾಜ್ಯದ ಸಂಧಾನಯಂತ್ರ ಪ್ರತಿವರ್ಷವೂ ರಾಜಿಯನ್ನೇರ್ಪಡಿಸಲು ವಾಸ್ತವವಾಗಿ ತೆಗೆದುಕೊಂಡ ಕೈಗಾರಿಕಾವಿವಾದಗಳಲ್ಲಿ ಸೇಕಡ 40ರಷ್ಟು ವಿವಾದಗಳಲ್ಲಿ ಒಮ್ಮತವೇರ್ಪಡದೆ ಅದು ವಿಫಲವಾಯಿತೆಂದ ಮೇಲೆ ಈ ಯಂತ್ರದ ಅಥವಾ ವ್ಯವಸ್ಥೆಯ ಕಾರ್ಯನಿರ್ವಹಣೆ ಸಾಕಷ್ಟು ಸಮರ್ಪಕ ವಾಗಿಲ್ಲವೆಂಬುದರಲ್ಲಿ ಸಂದೇಹವಿಲ್ಲ.

ಮೇಲಿನ ಹೇಳಿಕೆಯನ್ನು ಪುಷ್ಟೀಕರಿಸುವುದಕ್ಕೆ ಮತ್ತೊಂದು ಅಂಶವನ್ನು ಅವಲೋಕಿಸಬಹುದು. ದೇಶದ ಬೇರೆಬೇರೆ ರಾಜ್ಯಗಳ ಜೊತೆಯಲ್ಲಿ ಹೋಲಿಸಿ ನೋಡಿದರೆ ಕರ್ನಾಟಕ ರಾಜಿ ಸಂಧಾನ ಯಂತ್ರ 1971ರಲ್ಲೇ[5], ಉತ್ತರ ಪ್ರದೇಶವೊಂದನ್ನು ಬಿಟ್ಟರೆ, ಇತರ ರಾಜ್ಯಗಳ ಸಂಧಾನ ಯಂತ್ರ ಗಳಿಗಿಂತ ಅಧಿಕವಾಗಿ ವೈಫಲ್ಯಗಳನ್ನು ಅನುಭವಿಸಬೇಕಾಯಿತೆಂಬುದು ಮುಂದಿನ ಪಟ್ಟಿಯಿಂದ ವ್ಯಕ್ತವಾಗುತ್ತದೆ.

---

4 1971ರ ಈ ವಿವಾದಗಳ ಅಂಕ ಅಂಶಗಳು ಪ್ರಕಟವಾಗಿಲ್ಲ.

5 ವಾರ್ಷಿಕ ವರದಿ: ಕಾರ್ಮಿಕ ಇಲಾಖೆ, ಭಾರತ ಸರ್ಕಾರ.

**ಕೋಷ್ಟಕ 2**

1971ರಲ್ಲಿ ವಿವಿಧ ರಾಜ್ಯಗಳ ಸಂಧಾನ ಯಂತ್ರಗಳಿಗೆ ವಹಿಸಲಾದ ಹಾಗೂ ಸಂಧಾನ ವಿಫಲವಾದ ಕೈಗಾರಿಕಾ ವಿವಾದಗಳು

| ಕೇಂದ್ರ ಮತ್ತು ರಾಜ್ಯಗಳು | ಸಂಧಾನ ಯಂತ್ರಗಳಿಗೆ ವಹಿಸಲಾದ ವಿವಾದಗಳ ಸಂಖ್ಯೆ | ಸಂಧಾನ ವಿಫಲವಾದ ವಿವಾದಗಳ ಸಂಖ್ಯೆ | ಸೇಕಡ |
|---|---|---|---|
| ಕೇಂದ್ರ ರಾಜಿ ಸಂಧಾನ ಯಂತ್ರ | 6,075 | 920 | 15 |
| ಆಂಧ್ರಪ್ರದೇಶ | ... | ... | ... |
| ಅಸ್ಸಾಂ | ... | ... | ... |
| ಬಿಹಾರ | ... | ... | ... |
| ಗುಜರಾತ್ | 2,803 | 856 | 35.4 |
| ಹರಿಯಾಣ | 1,907 | 454 | 23.8 |
| ಹಿಮಾಚಲ ಪ್ರದೇಶ | ... | ... | ... |
| ಜಮ್ಮು ಮತ್ತು ಕಾಶ್ಮೀರ | ... | ... | ... |
| ಕೇರಳ | 5,098 | 222 | 4.4 |
| ಮಧ್ಯ ಪ್ರದೇಶ | 326 | 122 | 37.4 |
| ಮಹಾರಾಷ್ಟ್ರ | 6,351 | 1,355 | 21.2 |
| ಮೈಸೂರು | 925 | 386 | 41.7 |
| ಒರಿಸ್ಸ | ... | ... | ... |
| ಪಂಜಾಬು | 3.094 | 1,186 | 38.4 |
| ರಾಜಸ್ಥಾನ ಮತ್ತು ತಮಿಳುನಾಡು | ... | ... | ... |
| ಉತ್ತರ ಪ್ರದೇಶ | 5,407 | 2,673 | 49.4 |

ಕೇಂದ್ರ ಸಂಧಾನ ಯಂತ್ರದ ಜೊತೆಯಲ್ಲಿ ಹೋಲಿಸಿದಾಗ ರಾಜ್ಯದ ಸಂಧಾನ ಯಂತ್ರ ಹೆಚ್ಚು ವೈಫಲ್ಯ ಅನುಭವಿಸಿದೆಯೆಂದು ಗೊತ್ತಾಗುತ್ತದೆ. ಈ ವಿಷಯ ಕೆಳಗೆ ಕೊಟ್ಟಿರುವ ಕೋಷ್ಟಕ 3ರಿಂದ ತಿಳಿಯುತ್ತದೆ.

**ಕೋಷ್ಟಕ 3**

ಕೇಂದ್ರ ಮತ್ತು ಕರ್ನಾಟಕ ಸಂಧಾನ ಯಂತ್ರಗಳ ಸಂಧಾನ ವೈಫಲ್ಯಗಳು 1970ಮತ್ತು 1971.[6]

| | ಸಂಧಾನ ವ್ಯವಸ್ಥೆಗೆ ವಹಿಸಲಾದ ಕೈಗಾರಿಕೆ ವಿವಾದಗಳ ಒಟ್ಟು ಸಂಖ್ಯೆ | | ಸಂಧಾನ ವಿಫಲವಾದ ವಿವಾದಗಳ ಸುಂಖ್ಯೆ | | ಸೇಕಡ | |
|---|---|---|---|---|---|---|
| | 1970 | 1971 | 1970 | 1971 | 1970 | 1971 |
| ಕೇಂದ್ರ ಸಂಧಾನಯಂತ್ರ | 6953 | 6075 | 951 | 920 | 13.7 | 15.1 |
| ಕರ್ನಾಟಕ ಸಂಧಾನ ಯಂತ್ರ | 818 | 925 | 374 | 386 | 45.7 | 41.7 |

6 ಇಂಡಿಯನ್ ಲೇಬರ್ ಸ್ಟಾಟಿಸ್ಟಿಕ್ಸ್ 1972 ಮತ್ತು ಪಂಜಾಬ್ ಸರ್ಕಾರದ ಪಾಕೆಟ್ ಬುಕ್ ಆಫ್ ಸ್ಟಾಟಿಸ್ಟಿಕ್ಸ್ 1973

**ಕೈಗಾರಿಕಾ ಶಾಂತಿ**

ರಾಜ್ಯದ ಸಂಧಾನ ವ್ಯವಸ್ಥೆ ಎಷ್ಟು ಯಶಸ್ವಿಯಾಗಿ ತನ್ನ ಕಾರ್ಯ ನಿರ್ವಹಿಸುತ್ತಿದೆಯೆಂಬುದು ಅದು ರಾಜ್ಯದಲ್ಲಿ ಮುಷ್ಕರಗಳನ್ನು ಮತ್ತು ಬೀಗಮುದ್ರೆಗಳನ್ನು ತಪ್ಪಿಸುವುದರ ಮೂಲಕ ಕೈಗಾರಿಕಾ ಶಾಂತಿ ಸ್ಥಾಪನೆಗೆ ಎಷ್ಟರ ಮಟ್ಟಿಗೆ ಸಹಾಯಕವಾಗಿದೆಯೆಂಬುದನ್ನೂ ಅವಲಂಬಿಸಿದೆ. ಕೆಳಗೆ ಕೊಟ್ಟಿರುವ ಕೋಷ್ಟಕ 4ರ ಪ್ರಕಾರ 1970ರಲ್ಲಿ ರಾಜ್ಯದ ಕೈಗಾರಿಕಾ ಸಂಧಾನ ವ್ಯವಸ್ಥೆಗೆ ಒಳಪಡಿಸಿದ್ದ ಕೈಗಾರಿಕಾ ವಿವಾದಗಳ ಒಟ್ಟು ಸಂಖ್ಯೆಯಲ್ಲಿ ಸೇಕಡ 13.2 ವಿವಾದಗಳು ಮಾತ್ರ ಕಾರ್ಯಸ್ತಂಭನಗಳಲ್ಲಿ, ಎಂದರೆ ಮುಷ್ಕರಗಳು ಮತ್ತು ಬೀಗಮುದ್ರೆಗಳಲ್ಲಿ ಪರ್ಯವಸಾನಗೊಂಡುವು. ಈ ವಿಷಯದಲ್ಲಿ ಮಧ್ಯ

**ಕೋಷ್ಟಕ 4**

1970ರಲ್ಲಿ ರಾಜ್ಯದ ರಾಜಿಸಂಧಾನ ಯಂತ್ರಕ್ಕೆ ವಹಿಸಲ್ಪಟ್ಟ ಕೈಗಾರಿಕಾ ವಿವಾದಗಳಲ್ಲಿ ಕಾರ್ಯ ಪರ್ಯವಸಾನವಾದ ವಿವಾದಗಳು*

| ರಾಜ್ಯಗಳು | ಸಂಧಾನ ಯಂತ್ರಗಳಿಗೆ ವಹಿಸಲಾದ ಕೈಗಾರಿಕಾ ವಿವಾದಗಳು | ಕೈಗಾರಿಕಾ ಕಾರ್ಯ ಸ್ತಂಭನಗಳು | ಸೇಕಡ |
|---|---|---|---|
| ಆಂಧ್ರ ಪ್ರದೇಶ | 847 | 163 | 19.2 |
| ಅಸ್ಸಾಂ | 680 | 18 | 2.7 |
| ಬಿಹಾರ | ... | 205 | ... |
| ಗುಜರಾತ್ | 2484 | 91 | 3.7 |
| ಹರಿಯಾಣ | 1467 | 53 | 3.6 |
| ಜಮ್ಮು ಮತ್ತು ಕಾಶ್ಮೀರ | 25 | 4 | 16.0 |
| ಕೇರಳ | 5597 | 283 | 4.7 |
| ಮಧ್ಯ ಪ್ರದೇಶ | 275 | 170 | 61.4 |
| ಮಹಾರಾಷ್ಟ್ರ | ... | 704 | ... |
| ಮೈಸೂರು | 818 | 108 | 13.2 |
| ಒರಿಸ್ಸ | 361 | 29 | 8.4 |
| ಪಂಜಾಬ್ | 3649 | 26 | 0.1 |
| ರಾಜಸ್ಥಾನ | 844 | 39 | 4.6 |
| ತಮಿಳು ನಾಡು | 2359 | 279 | 11.7 |
| ಉತ್ತರ ಪ್ರದೇಶ | 5000 | 220 | 4.4 |
| ಪಶ್ಚಿಮ ಬಂಗಾಳ | ...... | 405 | ... |

ಪ್ರದೇಶ (ಸೇಕಡ 61.4) ಜಮ್ಮು ಮತ್ತು ಕಾಶ್ಮೀರ (ಸೇ. 16.0) ಹಾಗೂ ಆಂಧ್ರಪ್ರದೇಶ (ಸೇಕಡ 19.2). ಇವಕ್ಕಿಂತ ಕರ್ನಾಟಕ ರಾಜ್ಯದ ಸಂಧಾನ ಯಂತ್ರ ಹೆಚ್ಚು ಪರಿಣಾಮಕಾರಿಯಾಗಿ ಕೆಲಸಮಾಡುತ್ತಿದೆಯೆಂದು ಗೊತ್ತಾಗುತ್ತದೆ. ಆದರೆ ಇತರ ರಾಜ್ಯಗಳೊಂದಿಗೆ. ಅಂದರೆ ಉತ್ತರ ಪ್ರದೇಶ (ಸೇ. 4.4) ರಾಜಸ್ಥಾನ (ಸೇಕಡ 4.3), ಕೇರಳ (ಸೇಕಡ 4.7) ಇತ್ಯಾದಿ ರಾಜ್ಯಗಳೊಂದಿಗೆ ಹೋಲಿಸಿದಾಗ

* ಮೂಲ: ಇಂಡಿಯನ್ ಲೇಬರ್ ಸ್ಟ್ಯಾಟಿಸ್ಟಿಕ್ಸ್ 1972, ಪು. 176 ಮತ್ತು 193

ನಮ್ಮ ರಾಜ್ಯದ ಸಂಧಾನ ವ್ಯವಸ್ಥೆ ರಾಜ್ಯದಲ್ಲಿ ಕೈಗಾರಿಕಾ ಶಾಂತಿಯನ್ನು ಸ್ಥಾಪಿಸುವುದರಲ್ಲಿ ಈ ರಾಜ್ಯಗಳ ವ್ಯವಸ್ಥೆಯಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ಗೊತ್ತಾಗುತ್ತದೆ.

ಅಷ್ಟೇ ಅಲ್ಲದೆ ರಾಜ್ಯದ ರಾಜಿ ಸಂಧಾನ ಯಂತ್ರದ ಹಿಂದಿನ ವರ್ಷಗಳ ಸಾಧನೆಯೊಂದಿಗೆ ಹೋಲಿಸಿ ನೋಡಿದಾಗಲೂ ಇದೇ ಅಂಶ ಹೊರಬೀಳುತ್ತದೆ. ಉದಾಹರಣೆಗೆ 1967ರಲ್ಲಿ ಆ ವರ್ಷದ ರಾಜಿ ಸಂಧಾನ ವ್ಯವಸ್ಥೆಯ ಗಮನಕ್ಕೊಳಪಡಿಸಿದ್ದ ಕೈಗಾರಿಕಾ ವಿವಾದಗಳ ಒಟ್ಟು ಸಂಖ್ಯೆಯಲ್ಲಿ ಸೇಕಡ 9.2ರಷ್ಟು ಮಾತ್ರ ಮುಷ್ಕರ ಮತ್ತು ಬೀಗಮುದ್ರೆಗಳಲ್ಲಿ ಕೊನೆಗೊಂಡು ರಾಜ್ಯದಲ್ಲಿಯ ಕೈಗಾರಿಕಾ ಶಾಂತಿಯನ್ನು ಕಲಕಿದುವು. ಆದರೆ 1970ರಲ್ಲಿ ಈ ಸೇಕಡ 13.2ಕ್ಕೆ ಏರಿದ್ದು ಈ ವ್ಯವಸ್ಥೆಯ ಹೆಚ್ಚಿನ ಸಂಧಾನ ವೈಫಲ್ಯಕ್ಕೆ ನಿದರ್ಶನವಾಗಿದೆ.

### ರಾಜಿ ಸಂಧಾನ ವೈಫಲ್ಯಗಳಿಗೆ ಕಾರಣಗಳು

ಮೇಲಿನ ಅಂಕ ಅಂಶಗಳು ರಾಜ್ಯದ ರಾಜಿ ಸಂಧಾನ ವ್ಯವಸ್ಥೆ ಸಾಕಷ್ಟು ಸಮರ್ಪಕ ರೀತಿಯಲ್ಲಿ ಕಾರ್ಯ ನಿರ್ವಹಣೆ ನಡೆಸುತ್ತಿಲ್ಲವೆಂಬುದನ್ನು ಪುಷ್ಟೀಕರಿಸುತ್ತವೆ. ಇದು ಕರ್ನಾಟಕ ರಾಜ್ಯ ಸಂಧಾನ ಯಂತ್ರಕ್ಕೆ ಅಲ್ಲದೆ ದೇಶದ ಎಲ್ಲ ರಾಜ್ಯಗಳ ಸಂಧಾನಯಂತ್ರಗಳಿಗೂ ಅನ್ವಯಿಸುತ್ತದೆ. ರಾಷ್ಟ್ರದ ಎಲ್ಲ ಸಂಧಾನ ವ್ಯವಸ್ಥೆಗಳೂ ಅಸಮರ್ಪಕ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದಕ್ಕೆ ಅನೇಕ ಕಾರಣಗಳಿವೆ. ಈ ಕಾರಣಗಳೆಲ್ಲವನ್ನೂ ರಾಷ್ಟ್ರೀಯ ಕಾರ್ಮಿಕ ಮಂಡಳಿ ನೇಮಿಸಿದ ಒಂದು ಅಧ್ಯಯನ ತಂಡ[7] ತನ್ನ ವರದಿಯಲ್ಲಿ ಪರಿಶೀಲಿಸಿದೆ. ಅದರ ಪ್ರಕಾರ ಸಂಧಾನಕ್ರಮದಲ್ಲಿ ಕಾಲವಿಳಂಬ, ಕಾರ್ಮಿಕ ಸಂಘಗಳು ಮತ್ತು ಉದ್ಯಮಶೀಲರು ಸಂಧಾನಯಂತ್ರಗಳ ಮೇಲಿಟ್ಟಿರುವ ಅಸಡ್ಡೆಯ ಮನೋಭಾವ, ಸಂಧಾನಾಧಿಕಾರಿಗಳ ಗುಣವಿಶೇಷಗಳಲ್ಲಿ ಕೊರತೆ ಮತ್ತು ರಾಜಕೀಯ ಹಾಗೂ ಆರ್ಥಿಕ ಒತ್ತಡಗಳಿಗೆ ಅವರು ಮಣಿಯುವುದು, ಕಾರ್ಮಿಕ ವಿವಾದಗಳ ಕಡ್ಡಾಯ ತೀರ್ಮಾನ ಪದ್ಧತಿ (ಅಡ್ಜೂಡಿಕೇಷನ್ ಸಿಸ್ಟಮ್) ಇತ್ಯಾದಿ ಕಾರಣಗಳೆಲ್ಲವೂ ಸಂಧಾನಯಂತ್ರಗಳ ಅಸಮಾಧಾನಕರ ಕಾರ್ಯನಿರ್ವಹಣೆಗೆ ಕಾರಣಗಳಾಗಿವೆ. ಆದ್ದರಿಂದ ಈ ಎಲ್ಲಾ ದೋಷಗಳ ನಿವಾರಣೆ ಮತ್ತು ಅದರ ಮೂಲಕ ರಾಜ್ಯದ ಸಂಧಾನಯಂತ್ರದ ಕಾರ್ಯದಕ್ಷತೆಯನ್ನು ಉತ್ತಮಗೊಳಿಸಿ ರಾಜ್ಯದ ಕೈಗಾರಿಕಾ ಬಾಂಧವ್ಯದ ಪರಿಸ್ಥಿತಿಗಳು ಉತ್ತಮಗೊಳ್ಳುವಂತೆ ಮಾಡುವುದು ಅತ್ಯಾವಶ್ಯಕವಾದ ಕೆಲಸ. ಈ ದೃಷ್ಟಿಯಲ್ಲಿ ರಾಷ್ಟ್ರೀಯ ಕಾರ್ಮಿಕ ಮಂಡಲಿ ಮಾಡಿರುವ ಶಿಪಾರಸುಗಳು ಸಮಂಜಸವಾಗಿ ಕಾಣುತ್ತವೆ.

ರಾಷ್ಟ್ರೀಯ ಕಾರ್ಮಿಕ ಮಂಡಲಿ ಮಾಡಿರುವ ಮುಖ್ಯ ಶಿಪಾರಸು ಇವು: ರಾಜ್ಯಗಳ ರಾಜಿ ಸಂಧಾನ ಯಂತ್ರಗಳು ದಕ್ಷತೆಯಿಂದ ಕಾರ್ಯ ನಿರ್ವಹಿಸುವಂತೆ ಹಾಗೂ ಅವು ಕೈಗಾರಿಕಾ ಶಾಂತಿ ಸ್ಥಾಪನೆಯಲ್ಲಿ ಮುಖ್ಯ ಪಾತ್ರ ವಹಿಸುವಂತೆ ಮಾಡಬೇಕಾದರೆ ಅವನ್ನು ಮಂಡಲಿ ಶಿಫಾರಸ್ಸು ಮಾಡಿರುವ ಕೈಗಾರಿಕಾ ಸಂಬಂಧ ಸಮಿತಿಗಳ ಭಾಗವನ್ನಾಗಿ ಮಾಡಬೇಕು. ಅದರಿಂದ ಅವನ್ನು ರಾಜಕೀಯ ಆರ್ಥಿಕ ಮತ್ತು ಅಧಿಕಾರಿಶಾಹಿ ಒತ್ತಡಗಳಿಂದ ವಿಮುಕ್ತಗೊಳಿಸಿ ಅವು ಸ್ವತಂತ್ರವಾಗಿ ಕಾರ್ಯ ನಿರ್ವಹಣೆ ಮಾಡಲು ಅವಕಾಶಕೊಟ್ಟಂತಾಗುತ್ತದೆ. ಅಷ್ಟೇ ಅಲ್ಲದೆ ಒತ್ತಡಗಳಿಂದ ವಿಮುಕ್ತವಾದ ರಾಜಿ ಸಂಧಾನ ವ್ಯವಸ್ಥೆ ಕಾರ್ಮಿಕರು ಮತ್ತು ಮಾಲಿಕರ ವಿಶ್ವಾಸ ಮತ್ತು ನಂಬಿಕೆಗೆ ಪಾತ್ರವಾಗಿ ತನ್ನ ಕಾರ್ಯವನ್ನು ಅತಿ ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆಯೆಂಬ ಅಭಿಪ್ರಾಯವನ್ನು ಮಂಡಲಿ ಸೂಚಿಸಿತು.

ಮಂಡಲಿಯ ಈ ಅಭಿಪ್ರಾಯಕ್ಕೆ ಕೇಂದ್ರ ಮತ್ತು ರಾಜ್ಯಸರ್ಕಾರಗಳೆರಡೂ ವಿರೋಧ ವ್ಯಕ್ತಪಡಿಸಿವೆ. ಅವು ರಾಜಿ ಸಂಧಾನ ವ್ಯವಸ್ಥೆಯನ್ನು ಕೈಗಾರಿಕಾ ಸಂಬಂಧ ಮಂಡಲಿಗೇನಾದರೂ ವಹಿಸಿಕೊಟ್ಟಲ್ಲಿ ರಾಜ್ಯ ಮತ್ತು ಕೇಂದ್ರಸರ್ಕಾರಗಳಿಗೆ ತಮ್ಮ ಅಧಿಕಾರವ್ಯಾಪ್ತಿಗೆ ಸೇರಿದ

---

[7] *Report on the Labour Administration* (Southern Region) submmitted by the study group of the National Commission on Labour 1971

ಪ್ರದೇಶಗಳಲ್ಲಿ ಕೈಗಾರಿಕಾ ಸಂಬಂಧಗಳ ಮೇಲೆ ಯಾವ ವಿಧವಾದ ಹತೋಟಿಯೂ ಇರದೆ ಶಾಂತಿ ಮತ್ತು ಶಿಸ್ತುಪಾಲನೆಯ ಕೆಲಸ ಅತಿ ಕ್ಲಿಷ್ಟಕರವಾಗುವುದೆಂದು ಅವುಗಳ ಅಭಿಪ್ರಾಯ. ಆದ್ದರಿಂದ ಸ್ಥಾಯೀ ಕಾರ್ಮಿಕ ಸಮಿತಿಯಲ್ಲಿ ಒಂದು ತ್ರಿಪಕ್ಷ ಒಪ್ಪಂದವಾಯಿತು. ಅದರ ಪ್ರಕಾರ ಸಂಧಾನ ಕಾರ್ಯವನ್ನು ಸರ್ಕಾರಗಳೇ ಇಟ್ಟುಕೊಂಡು ವಿವಾದಗಳ ಕಡ್ಡಾಯ ತೀರ್ಮಾನ ಮಾಡುವ ಕೆಲಸವನ್ನೂ ಪ್ರಾತಿನಿಧಿಕ ಕಾರ್ಮಿಕ ಸಂಘವನ್ನು ಗುರುತಿಸಿ ಅದು ತನ್ನ ವಿಶೇಷ ಕಾರ್ಯ ಗಳನ್ನು ಕೈಗೊಳ್ಳಲು ಅರ್ಹತಾಪತ್ರ ಕೊಡುವುದರ ಮೂಲಕ ಅವಕಾಶ ಮಾಡಿಕೊಡುವ ಕೆಲಸವನ್ನೂ ಕೈಗಾರಿಕಾ ಸಂಬಂಧ ಮಂಡಲಿಗೆ ವಹಿಸಿಕೊಡುವಂತೆ ತೀರ್ಮಾನವಾಯಿತು. ಈ ಅಂಶಗಳನ್ನೊಳ ಗೊಂಡ ಒಂದು ಸಮಗ್ರ ಮಸೂದೆಯನ್ನು ಈ ಸಲದ ಸಂಸತ್ತಿನ ಮುಂದೆ ಮಂಡಿಸಲಾಗುವುದೆಂದು ಹೇಳಲಾಗಿದೆ.

ರಾಜಿ ಸಂಧಾನ ಕಾರ್ಯವನ್ನು ಸರ್ಕಾರವೇ ಇಟ್ಟುಕೊಳ್ಳಬೇಕೆಂಬ ವಾದ ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ವಿವಾದಕ್ಕೊಳಗಾದ ಗುಂಪುಗಳೆರಡನ್ನೂ ಒಟ್ಟಾಗಿ ಕಲೆಯುವಂತೆ ಮಾಡಿ ನೇರ ಮಾತು ಕತೆಯ ಮೂಲಕ ವಿವಾದಗಳನ್ನು ಬಗೆಹರಿಸಲು ಪ್ರೋತ್ಸಾಹಿಸುವ ಸಂಧಾನ ಕ್ರಮವನ್ನು ಸರ್ಕಾರಿ ಅಧಿಕಾರಿಗಳಿಗೆ ವಹಿಸುವ ಬದಲಾಗಿ ಸ್ವತಂತ್ರವಾದ ಹಾಗೂ ಯಾವ ಒತ್ತಡಗಳಿಗೂ ಮಣಿಯದ ಕೈಗಾರಿಕಾ ಬಾಂಧವ್ಯ ಮಂಡಲಿಯಂಥ ಒಂದು ಉಚ್ಚ ಸಂಸ್ಥೆಗೆ ವಹಿಸಿಕೊಟ್ಟರೆ ಅದು ಖಂಡಿತವಾಗಿಯೂ ಹೆಚ್ಚು ಪರಿಣಾಮಕಾರಿಯಾದ ರೀತಿಯಲ್ಲಿ ಸಂಧಾನ ಕಾರ್ಯ ನಿರ್ವಹಿಸುವುದೆಂಬುದರಲ್ಲಿ ಸಂದೇಹವಿಲ್ಲ. ಈಗಿರುವಂತೆ ಸಂಧಾನಕಾರ್ಯವನ್ನು ಮತ್ತು ವಿವಾದಗಳ ಕಡ್ಡಾಯ ತೀರ್ಮಾನಮಾಡುವ ಕಾರ್ಯವನ್ನು ಬೇರೆಬೇರೆ ಸಂಸ್ಥೆಗಳಿಗೆ ವಹಿಸಿಕೊಟ್ಟರೆ ಇದುವರೆಗೂ ಉಂಟಾಗುತ್ತಿರುವ ಪರಿಣಾಮಗಳು ಪುನರಾ-ವರ್ತಿಸುವುದರಲ್ಲಿ ಸಂಶಯವಿಲ್ಲವೆಂದು ಹೇಳಬಹುದು. ಆದ್ದರಿಂದ ರಾಜ್ಯದ ರಾಜಿ ಸಂಧಾನ ವ್ಯವಸ್ಥೆ ಯನ್ನೂ ಕೈಗಾರಿಕಾ ಸಂಬಂಧ ಮಂಡಲಿಗೆ ವಹಿಸಿಕೊಟ್ಟು ಅದು ಎಷ್ಟರ ಮಟ್ಟಿಗೆ ಯಶಸ್ವಿಯಾಗಿ ಕಾರ್ಯನಿರ್ವಹಿಸುವುದೆಂಬುದನ್ನು ಸ್ವಲ್ಪ ಕಾಲವಾದರೂ ಕಾದು ನೋಡಬಹುದು.

ಒಟ್ಟಿನಲ್ಲಿ ಕರ್ನಾಟಕ ಸಂಧಾನ ಯಂತ್ರ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲವಾದ ಕಾರಣ ಅದನ್ನು ಹೆಚ್ಚು ಪರಿಣಾಮಕಾರಿ ಸಂಸ್ಥೆಯನ್ನಾಗಿ ಮಾಡಬೇಕೆಂಬುದು ನಿರ್ವಿವಾದ. ಇದು ಸಾಧ್ಯ ವಾಗಬೇಕಾದರೆ ಈ ಸಂಸ್ಥೆಯನ್ನು ಎಲ್ಲ ವಿಧವಾದ ಒತ್ತಡಗಳಿಂದ ವಿಮುಕ್ತಿಗೊಳಿಸಿ. ರಾಷ್ಟ್ರೀಯ ಕಾರ್ಮಿಕ ಮಂಡಲಿಯ ಮುಖ್ಯ ಶಿಫಾರಸ್ಸುಗಳಲ್ಲೊಂದಾದ ಕೈಗಾರಿಕಾ ಸಂಬಂಧ ಮಂಡಲಿಯ ಒಂದು ಭಾಗವನ್ನಾಗಿ ಮಾಡುವುದು ಕೈಗಾರಿಕಾ ಶಾಂತಿಸ್ಥಾಪನೆಯ ದೃಷ್ಟಿಯಿಂದ ಸೂಕ್ತವೆನಿಸುತ್ತದೆ.

ಡಾ. ಎಸ್. ಎಲ್. ಶಾಂತಕುಮಾರಿ

# ಕುಕ್ಕನೂರು ಅಗ್ರಹಾರ

ಆ ಕುಂತಳ ದೇಶಕ್ಕೆ ತಿಳ
ಕಾಕೃತಿವೊಲ್ ಬೆಳ್ವೊಲಂ ವಿರಾಜಿಸುವದಱೊಳ್
ಶ್ರೀ ಕುಕ್ಕನೂರು ಮೂವತ್ತು
ಲೋಕಸ್ತುತವಲ್ಲಿ ಕುಕ್ಕನೂರ್ಸೊಗಯಿಸುಗುಂ॥[1]

ಆ ಮೂವತ್ತಱ ನಡುವೆ ಮ
ಹಾ ಮಹಿಮಂ ಸರ್ವಸಂಪದಧಿಕತೆಯಿಂದಂ
ಶ್ರೀಮನ್ಮಹಾಗ್ರಹಾರವ
ಸಾಮಾನ್ಯಂ ಕುಕ್ಕನೂರು ಮಿಗೆ ಸೊಗಯಿಸುಗುಂ॥[2]

ಹೀಗೆ, ಕುಂತಳ ದೇಶಕ್ಕೆ ತಿಲಕಾಕೃತಿಯಾಗಿದ್ದ ಬೆಳ್ವೊಲ–300 ನಾಡಿನಲ್ಲಿಯ ಮೂವತ್ತು ಗ್ರಾಮಗಳನ್ನೊಳಗೊಂಡ ಕುಕ್ಕನೂರು–30 ಒಂದು ಆಡಳಿತ ಘಟಕವಾಗಿತ್ತು. ಕುಕ್ಕನೂರೇ ಈ ವಿಭಾಗದ ಮುಖ್ಯಸ್ಥಳ. ಇದು 'ತ್ರಿಂಶದ್ಗ್ರಾಮಾಧಿಪತಿ'[3] ಎಂದೂ ವರ್ಣಿತವಾಗಿದೆ. 10–12ನೆಯ ಶತಮಾನಗಳಲ್ಲಿ ಇದು ಒಂದು ಪ್ರಸಿದ್ಧ ಅಗ್ರಹಾರವಾಗಿತ್ತು. ಹೀಗೆ ಹಿಂದೆ ಸುಪ್ರಸಿದ್ಧವಾಗಿದ್ದ ಕುಕ್ಕನೂರು ಅಗ್ರಹಾರ ಈಗ ಒಂದು ಚಿಕ್ಕ ಹಳ್ಳಿ. ಇದು ಈಗಿನ ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲೂಕಿನಲ್ಲಿದೆ.

ಕುಕ್ಕನೂರು–20 ಪ್ರಾಂತ್ಯ, ಕುಕ್ಕನೂರಿನ ಸುತ್ತಮುತ್ತಲಿನ ಮಂಗಳೂರು, ಸಿರಿಯೂರು, ಹಂಚಿನಾಳ, ಕಲ್ಲೂರು, ಮುದವೊಳಲ್, ಬೆಣಕಲ್, ನಿಟ್ಟಾಲಿ, ತಳಕಲ್ಲು, ಬೆಲುಕುಡೆ, ಹಡಲಗೆರೆ, ಎಡೆಯಹಳ್ಳಿ ಮುಂತಾದ 20 ಹಳ್ಳಿಗಳನ್ನೊಳಗೊಂಡಿತ್ತು. ಅವುಗಳಲ್ಲಿ ಈಗಿನ ಯಲಬುರ್ಗಿ ತಾಲೂಕಿನಲ್ಲಿರುವ ಮಂಗಳೂರು, ಸಿರೂರು, ಕಲ್ಲೂರು, ಮುದೊಳ್, ಬೆಣಕಲ್, ತಳಕಲ್ಲು, ಈ ಮುಂತಾದವು ಗುರುತಿಸಲ್ಪಟ್ಟಿವೆ.

ಈ ಅಗ್ರಹಾರ ಚಂದ್ರಹಾಸ ಪಟ್ಟಣದ ಹಾಗೂ ಕುಂತಲಿಪುರವೆಂದು ಕರೆಯಲ್ಪಡುತ್ತಿತ್ತೆಂದು ಇಲ್ಲಿಯ ಸ್ಥಳಪುರಾಣದಿಂದ ತಿಳಿದುಬರುತ್ತದೆ. ಆದರೂ ಈ ಐತಿಹ್ಯಕ್ಕೆ ಪ್ರಾಚೀನ ಆಧಾರವಿಲ್ಲ. ಅಲ್ಲದೆ ಇಲ್ಲಿ ದೊರೆತಿರುವ ಶಾಸನಗಳೂ ಇದನ್ನು ಸಮರ್ಥಿಸುವುದಿಲ್ಲ.

---

1 **ಶಾಸನ ಪರಿಚಯ,** ಪಿ.ಬಿ. ದೇಸಾಯಿ, ಪು. 86

2 **ಅದೇ,** ಪು. 81

3 *J. B. B. R. A. S,* XII, ಪು. 43

ಕುಕ್ಕನೂರು ಎಂಬ ಪದಕ್ಕೆ ಅರ್ಥವನ್ನು ಹೇಳುವುದು ಸುಲಭವಲ್ಲ. ಇದಕ್ಕೆ ಸಂಬಂಧಿಸಿದಂತೆ ಅನೇಕ ಹೇಳಿಕೆಗಳಿವೆಯಾದರೂ, ಕುಕ್ಕನೆಂಬ ಒಬ್ಬ ವ್ಯಕ್ತಿಯ ನಿಮಿತ್ತ[4] ಇದಕ್ಕೆ ಕುಕ್ಕನೂರೆಂಬ ಹೆಸರು ಬಂದಿರಬಹುದೆಂದು ಪಲವು ವಿದ್ವಾಂಸರು ಊಹಿಸಿದ್ದಾರೆ.

ಇದರ ಪ್ರಾಚೀನತೆಯ ಬಗ್ಗೆ ಹೇಳುವುದಾದಲ್ಲಿ, ಸುಮಾರು ಏಳನೆಯ ಶತಮಾನದ ಹೊತ್ತಿಗೆ ಇದು ಅಸ್ತಿತ್ವದಲ್ಲಿತ್ತೆಂದು ಇಲ್ಲಿ ದೊರೆತಿರುವ ಶಾಸನಗಳಿಂದ ತಿಳಿದುಬರುತ್ತದೆ. ಚಾಳುಕ್ಯರ ಅರಸನಾದ ಒಂದನೆಯ ವಿಕ್ರಮಾದಿತ್ಯನ ಒಂದು ಶಾಸನದಲ್ಲಿ ಇದರ ಉಲ್ಲೇಖವಿದೆ. ಹಾಗೆಯೇ, ವಿಜಯನಗರದ ಕಾಲದಲ್ಲೂ ಇದು ಪ್ರಾಶಸ್ತ್ಯ ಪಡೆದ ಅಗ್ರಹಾರವಾಗಿತ್ತೆಂದು ಹೇಳುವ ಶಾಸನಗಳೂ ಇವೆ. ಹೀಗೆ, ಇಲ್ಲಿ, ಬಾದಾಮಿಯ ಚಾಳುಕ್ಯರ ಕಾಲದಿಂದ ಹಿಡಿದು ಕರ್ನಾಟಕವನ್ನು ವೈಭವದ ಶಿಖರಕ್ಕೇರಿಸಿದ ವಿಜಯನಗರದ ಅರಸರ ಕಾಲದ ವರೆಗೆ ದೊರೆತಿರುವ ಸುಮಾರು 22 ಶಾಸನಗಳು ಈ ಸ್ಥಳದ ವಿಚಾರ ವನ್ನು ತಿಳಿಯಲು ಸಹಾಯಕವಾಗಿವೆ.

ಇಲ್ಲಿ ದೊರೆತಿರುವ ಶಾಸನಗಳಿಂದ, ಈ ಸ್ಥಳ ಒಂದು ಹೆಸರಾಂತ ಅಗ್ರಹಾರವಾಗಿತ್ತೆಂದೂ ಮಹಾಮಾತೆಯಾದ ಜ್ಯೇಷ್ಠಾದೇವಿಯ ಆವಾಸಸ್ಥಾನವಾಗಿದ್ದಿತೆಂದೂ ತಿಳಿದು ಬರುತ್ತದೆ. ಆದರೆ ಇದು ಅಗ್ರಹಾರವಾಗಿ ಪರಿವರ್ತಿಸಲ್ಪಟ್ಟ ಕಾಲ ಹಾಗೂ ಇತರ ವಿವರಗಳ ಬಗ್ಗೆ ದೊರೆತಿರುವ ಶಾಸನ ಗಳು ಹೆಚ್ಚು ಸಹಾಯಕವಾಗಿಲ್ಲವಾದರೂ ಒಂದೆರಡು ಶಾಸನಗಳು ಇದರ ಬಗ್ಗೆ ಸಾರಸ್ಯಪೂರ್ಣ ವಾದ ವಿವರಗಳನ್ನು ನೀಡುತ್ತವೆ.

ಸೇವುಣರ ರಾಜನಾದ ಕನ್ನರದೇವನ ಪ್ರಧಾನಿಯಾಗಿದ್ದ ಚಾವುಂಡರಾಯ ಇದನ್ನು ಅಗ್ರಹಾರ ವನ್ನಾಗಿ ಮಾಡಿ ಅಲ್ಲಿಯ ಪ್ರತಿಷ್ಠಿತರಾದ ಬ್ರಾಹ್ಮಣರಿಗೆ ಸರ್ವಬಾಧಾ ಪರಿಹಾರವಾಗಿ ಧಾರೆಯೆರೆದು ಕೊಟ್ಟನೆಂದು ಒಂದು ಶಾಸನ ತಿಳಿಸುತ್ತದೆ[6]. ಈ ಅಗ್ರಹಾರ ಸ್ವಲ್ಪ ಕಾಲಾನಂತರ ಹೀನಸ್ಥಿತಿಗೆ ಬಂತೆಂದು ತೋರುತ್ತದೆ. ಈ ಕಾರಣಕ್ಕಾಗಿ ವಿಜಯನಗರದ ಎರಡನೆಯ ಹರಿಹರನ ಕಾಲದಲ್ಲಿ ಈ ಅಗ್ರಹಾರದ ಜೀರ್ಣೋದ್ಧಾರವಾಯಿತು. ಒಂದು ಶಾಸನ ಹೇಳುವಂತೆ:

ಕುಕ್ಕನೂರು ಅಗ್ರಹಾರವು ಖಿಲವಾಗಿ ಹೋದಲ್ಲಿ
ಜೀರ್ಣೋದ್ಧಾರವಂ ಮಾಡಿ ಕುಕ್ಕನೂರ
ಶ್ರೀ ಮಹಾಮಾಯಾಂಗರಂಗ ಭೋಗಕ್ಕೆಂದು...
ಚತರ್ವೇದಾಧ್ಯಯನ ಸ್ಥಾಪನೆಗಂ ಸಮರ್ಪಿಸಿದ
ಕುಕ್ಕನೂರು ಗ್ರಾಮಕ್ಕೆ ಸಲ್ಲುವ......[7]

ಹೀಗೆ ಖಿಲವಾಗಿ ಹೋಗಿದ್ದ ಕುಕ್ಕನೂರು ಅಗ್ರಹಾರವನ್ನು ಜೀರ್ಣೋದ್ಧಾರಮಾಡಿ, ಅದು ಪುನರ್ ವಸತಿಗೆ ಯೋಗ್ಯವಾದ್ದನ್ನಾಗಿಯೂ ಮಹಾಮಾಯೆಯ ಪೂಜೆಗೆ ಯೋಗ್ಯವಾದ್ದನ್ನಾಗಿಯೂ ಮಾಡ ಬೇಕೆಂಬ ಉದ್ದೇಶದಿಂದ, ಹರಿಹರ ಅಲ್ಲಿಯ ಸಾಸಿರ್ವರಲ್ಲಿ ಮುಖ್ಯರಾದ ಭಟ್ಟಪ್ಪಯ್ಯ ಎನ್ನುವವರಿಗೆ ಅದನ್ನು ಧಾರಾಪೂರ್ವಕವಾಗಿ ಕೊಟ್ಟನೆಂದು ಈ ಶಾಸನ ವಿವರಿಸುತ್ತದೆ.

ಕುಕ್ಕನೂರು ಒಂದು ಹಿರಿಯ ಅಗ್ರಹಾರವಾಗಿತ್ತು. ಈ ಅಗ್ರಹಾರದ ಮಹತ್ತ್ವವನ್ನು ಶಾಸನ ಗಳು ಬಗೆಬಗೆಯಾಗಿ ಬಣ್ಣಿಸುತ್ತವೆ. ಇದರಿಂದ ಈ ಸ್ಥಳ ಹೆಸರಾಂತ ವಿದ್ಯಾಕೇಂದ್ರವೂ ವಿದ್ವನ್ಮಣಿಗಳ ವಾಸಸ್ಥಳವೂ ಧಾರ್ಮಿಕ ಕ್ಷೇತ್ರವೂ ಆಗಿತ್ತೆಂದು ತಿಳಿದುಬರುತ್ತದೆ.

---

4 ಪಿ. ಬಿ. ದೇಸಾಯಿ, ಕುಕ್ಕನೂರ ಶ್ರೀ ಮಹಾಮಾಯೆ, ಪು. 4

5 ಅದೇ

6 **J. B, B. R. A. S, XII, ಪು. 44**

7 *Andhra Pradesh Govt. Archaeological Series, No 9, p. 32*

ಇದು ನಾಲ್ವತ್ತೆಂಟು ಕೇರಿಗಳನ್ನೊಳಗೊಂಡಿತ್ತು. ಸಮೃದ್ಧವಾದ ಸ್ಥಳವಾಗಿತ್ತೆಂದು ವರ್ಣಿಸಲ್ಪಟ್ಟಿರುವ ಇದು ಸೌಂದರ್ಯದ ಬೀಡಾಗಿತ್ತು. ಶಾಸನಗಳು ತಿಳಿಸುವಂತೆ ಇದು ತಟಾಕಗಳಿಂದಲೂ ದೇವತಾಭವನಗಳಿಂದಲೂ ವೇದಾಧ್ಯಯನ ಮಾಡಿದವರಿಂದಲೂ ಯಜ್ಞದೀಕ್ಷಿತರಿಂದಲೂ ಶಾಸ್ತ್ರ, ಪುರಾಣ ತರ್ಕ ಕೋವಿದರಿಂದಲೂ ಕಂಗೊಳಿಸುತ್ತಿತ್ತು.[8] ಅಲ್ಲಿದ್ದ ಹೊಲಗಳೂ ಹೂಹಣ್ಣಿನ ತೋಟಗಳೂ ಅದರ ಸೊಬಗನ್ನು ಇಮ್ಮಡಿಗೊಳಿಸಿದ್ದುವು. ಅಲ್ಲಿದ್ದ ದೇವಯನಕೆಱೆ, ಎರಣೆಗೆಱೆ, ಹರದಗೆಱೆ ಕಡಲಗೆಱೆ ಮುಂತಾದ ಕೆರೆಗಳು ಅಲ್ಲಿಯ ಫಲವತ್ತಾದ ಭೂಮಿ ಹಾಗೂ ಅಲ್ಲಿಯ ಸಂಪತ್ತಿಗೆ ಕಾರಣವಾಗಿದ್ದುವೆಂದು ಹೇಳಬಹುದು.

ಈ ಅಗ್ರಹಾರದ ಬ್ರಾಹ್ಮಣ ನಿವಾಸಿಗಳ ಬಗ್ಗೆ ಹೇಳುತ್ತಾ ಶಾಸನಕವಿ, "ಇದು ಬ್ರಾಹ್ಮಣಶಾಲೆಯಿಂ ಬ್ರಹ್ಮಕುಂಡದಿನಿವ ಬಹ್ಮರೆನಿಪ್ಪ ದ್ವಿಜರಿಂದಂ ಕುಕ್ಕನೂರು ಬ್ರಹ್ಮಲೋಕಕ್ಕೆ ದೊರೆಯಾಯ್ತು"[9] ಎಂದು ವರ್ಣಿಸುತ್ತಾನೆ. ಈ ಗ್ರಾಮದಲ್ಲಿ ನೆಲೆಸಬೇಕೆಂಬ ಉತ್ಕಟೇಚ್ಛೆಯುಳ್ಳವನಾದ ಶಂಭುವು ಕ್ಷೇತ್ರಪಾಲನೊಡಗೂಡಿ ಇಲ್ಲಿಗೆ ಬಂದು ನೆಲಸಿದನೆಂಬ ವರ್ಣನೆ ಒಂದು ಶಾಸನದಲ್ಲಿ ಬರುತ್ತದೆ[10]. ಅದೇ ರೀತಿ, ಅನೇಕ ಅವತಾರಗಳನ್ನು ಹೊಂದಿದ ಶಿವ ಹಾಗೂ ಇತರ ದೇವತೆಗಳು ಬ್ರಾಹ್ಮಣರ ರೂಪದಲ್ಲಿ ಬಂದು ಇಲ್ಲಿ ನೆಲಸಿದ್ದರೇನೋ ಎನ್ನುವಂತಿದ್ದಿತೆಂಬ ಬಣ್ಣನೆಯೂ ಬರುತ್ತದೆ. ಅಲ್ಲಿಯ ಬ್ರಾಹ್ಮಣರು ಪಾಂಡಿತ್ಯದಲ್ಲಿ ಬ್ರಹ್ಮನಂತೆ ಇದ್ದರೆಂದೂ, ಪುರುಷೋತ್ತಮ ಹಾಗೂ ಮಹೇಶ್ವರರು ಸಾಧಾರಣವಾದ ಜನರಂತೆ ಬಂದು ಇಲ್ಲಿ ನೆಲೆಸಿದ್ದಾರೇನೋ ಎನ್ನುವಂತಿತ್ತೆಂದೂ ಶಾಸನಗಳು ವಿವರಿಸುತ್ತವೆ.

ಇಲ್ಲಿಯ ಮಹಾಜನರ ಸಂಖ್ಯೆ 1000. ಈ ಮಹಾಜನರು ಪಂಡಿತರೂ ಸಮರ್ಥ ಆಡಳಿತಗಾರರೂ ಆಗಿದ್ದರೆಂದು ಹೇಳಬಹುದು. ಅವರು ತಮ್ಮ ಶ್ರೇಷ್ಠ ತಿಳಿವಳಿಕೆ, ಸದ್ಗುಣ, ಪಾಂಡಿತ್ಯ ಮತ್ತು ವಿನಯಗಳಿಗೆ ಹೆಸರಾಗಿದ್ದರು. ಅವರು ಚತುರ್ವೇದ, ಸಕಲಶಬ್ದ. ವಿದ್ಯಾನಿಪುಣರಾಗಿದ್ದರಷ್ಟೆ ಅಲ್ಲದೆ ತರ್ಕ, ವ್ಯಾಕರಣ, ಪುರಾಣ, ಕಾವ್ಯ, ನಾಟಕ, ಭರತ, ವಾತ್ಸಾಯನ ಮುಂತಾದ ಅನೇಕ ಶಾಸ್ತ್ರಗಳಲ್ಲಿ ಪರಿಣಿತರಿದ್ದರು.[11]

ಇದು ವಿದ್ಯಾಕೇಂದ್ರವಾಗಿದ್ದಿತಾದರೂ ಈಗ ದೊರೆತಿರುವ ಶಾಸನಗಳು ಇಲ್ಲಿ ನಡೆಯುತ್ತಿದ್ದ ವ್ಯಾಸಂಗದ ಬಗ್ಗೆ ತಿಳಿಯಲು ಹೆಚ್ಚು ಸಹಾಯಕವಾಗಿಲ್ಲವೆನ್ನಬಹುದು.

ಇಲ್ಲಿಯ ನಾಗರಿಕರ ಬಗ್ಗೆ ಹೇಳುತ್ತ ಕವಿ ಹೀಗೆ ವರ್ಣಿಸುತ್ತಾನೆ:

> [ವರ] ಪತಿಬ್ರತೋನ್ನತೆಯಂಗನೆಯರು· ಸಕಳಾಗಮಾನ್ವಿತರು
> ಗುರುಮರುದಗ್ನಿ ವಿಪ್ರಪರಿತೃಪ್ತಿಕರರು ವಸುಧಾಮರೋತ್ತಮರು
> ಪರದರ ಪಾಮರಕ್ಕೆಜಿ ಜನಂ ಶಿವಭಕ್ತಿನಿಯುಕ್ತರೆಂಬ ಸ
> ಚ್ಚರಿತದೆ ಕುಕ್ಕನೂರ್ಕೃತಯುಗಂ ನೆಲೆಗೊಂಡವೆನಲ್ ತೋಱುಗುಂ॥[12]

---

8 A. A.S 18, P. 55.
ಆ ವಿಷಯದೊಳ್ ಸಂವೇಷ್ಟಿತರಾಮವಾಪಿ ತಟಾಕ (ಕಂ) ಬಹುದೇವತಾ ಭವನದಿಂ·ವೇದಾಢ್ಯ(ಢ್ಯ)ರಿಂಯಜ್ಞ ದೀಕ್ಷಿತರಿಂ ಶಾಸ್ತ್ರ ಪುರಾಣ ತಾರ್ಕವಿದರಿ (ರಿಂ) ಶ್ರೀ ಕುಕ್ಕನೂರೊಪ್ಪುಗು

9 ಶಾ. ಪ., ಪು. ೮೬

10 J. B. B. R. A. S., XII, ಪು. 43–44

11 ಶಾ. ಪ., ಪು. 83

12 ಅದೇ, ಪು. 65

ಹೀಗೆ ಪತಿವ್ರತೆಯರು, ಶಿವಭಕ್ತ ಸಚ್ಚರಿತರಾಗಾ ದನರಿಕರನ್ನೊಳಗೊಂಡ ಇದು ಕೃತಯುಗದ ನೆನಪನ್ನು ತಂದುಕೊಡುತ್ತಿದ್ದಿತಂತೆ.

ಇದು ಒಂದು ಧಾರ್ಮಿಕ ಕ್ಷೇತ್ರವೂ ಆಗಿತ್ತು. ಅನೇಕ ಸಿದ್ಧರು, ಯೋಗಿಗಳು ಇಲ್ಲಿ ನೆಲೆಸಿದ್ದರು. ಇಲ್ಲಿ ಅನೇಕ ದೇವಾಲಯಗಳಿದ್ದುವು. ಉದಾ: ಗಣೇಶ್ವರ, ಬ್ರಹ್ಮೇಶ್ವರ, ತೋಟಿಗೇಶ್ವರ, ಗವರೇಶ್ವರ, ಹನುಮಂತದೇವ, ಮಲ್ಲಿಕಾರ್ಜುನ ಮುಂತಾದವು. ಈ ಎಲ್ಲ ದೇವಾಲಯಗಳ ಜೊತೆಗೆ ಜ್ಯೇಷ್ಠಾ ದೇವಿಯ ದೇವಾಲಯವನ್ನು ಇಲ್ಲಿ ಮರೆಯುವಂತಿಲ್ಲ. ಈ ಎಲ್ಲ ದೇವಾಲಯಗಳ ಪೋಷಣೆಗಾಗಿ ಭಕ್ತಾದಿ ಗಳು ಹೇರಳವಾಗಿ ದಾನಗಳನ್ನು ವಿವಿಧರೂಪದಲ್ಲಿ ಕೊಡುತ್ತಿದ್ದರು.

ಈ ಎಲ್ಲ ದೇವಾಲಯಗಳಿಗಿಂತ ಜ್ಯೇಷ್ಠಾದೇವಿಯ ದೇವಾಲಯ ಹೆಚ್ಚು ಜನಪ್ರಿಯವಾಗಿತ್ತೆಂದು ಹೇಳಬಹುದು. ಈಕೆ ಕಾಳಿಕಾ ಮಹಾಮಾಯಿ ಅಥವಾ ಮಹಾಲಕುಮಿ ಎಂದು ಕರೆಯಲ್ಪಡುತ್ತಿದ್ದಳು. ಕುಕ್ಕನೂರು ಜಗಜ್ಜನನಿ ಎನ್ನಿಸಿಕೊಂಡ ಈ ಮಹಾಮಾಯೆಯ ಆವಾಸಸ್ಥಾನವಾಗಿತ್ತು. ಶಾಸನಗಳು ಈ ದೇವತೆಯನ್ನು ವಿಪುಲವಾಗಿ ಬಣ್ಣಿಸುತ್ತವೆ.

ಶರಣೆಂದಂಗಭಯ ಪ್ರದಾನಫಳಮಂ ಕೈಗೂಡುವಳ್ ಸೊರ್ಕ್ಕಿ ಮಾ
ಕರಿಸುತ್ತಿರ್ಪ ಮದಾಂಧನಪ್ಪ ವಿಳಸಾಯುದ್ವಿಷಮಂ ತಂನ ಚಾ
ಮರದಿಂ ತೊಟ್ಟೆನೆಂದೆ ಬೀಸಿ ಕಳೆವಳು ತಕ್ಕಾಯುಮಂ ತಂನ ಭೀ
ಕರ ಕಾಕಾನನಕಾಗಳಂತೆ ಗುಜಿಮಾಳ್ಪಳು ಜ್ಯೇಷ್ಠೆ ಸಾಮಾನ್ಯೆಯೆ॥13

ಎಱಗುವ ಬಱಸಿಡಿಲಂ ನೆಱೆ
ದಱಿಯಟ್ಟುವ ಕಾಲಮೃತ್ಯುವಂ ನುಂಗುವ ಪೇ
ರಱಿಕೆಯ ಪೆರ್ಮ್ಮಾರಿಯ ನಾ
ರುಱದಲ್ ಬರ್ದು ಕಾಡಲಾರ್ಪ್ಪರಾಳಿಕೆಯಂ॥14

ಒಸೆದಾರಂ ಪೊರ್ದ್ದೆಯುವವ
ರೆಸಕಮನುಡುಗಿಸದೆ ಮಾಣಳಾಜ್ಯೇಷ್ಠೆಯ ನಾ
ಬ್ಬೆಸಯಿಸಿ ಬಾಳ್ವವರಾಕೆಯ
ಗಸಣಿಯೆ ಬೇಡೆಂದು ದಿವಿಜರಳ್ಕುತ್ತಿರ್ಪರ್॥

ಅದಱಿಂ ಕಾಳಿಕೆಯಂ ನೆನೆ
ವುದು ಬಣ್ಣಿಪುದೆರವಿಗೊಳ್ವುದಾ ಬ್ರತಮಂ ನೋಂ
ಪುದು ಮಱಿಯಂ ಪುಗುವುದು ಸ
ಮ್ಮದವುಣ್ಮೆ ನಿಜೇಷ್ಟಸಿದ್ಧಿಯಂ ಬಯಸುವವಂ॥15

ಜ್ಯೇಷ್ಠಾದೇವಿಯ ಈಗಿನ ದೇವಾಲಯ ಇತ್ತೀಚೆಗೆ ಕಟ್ಟಿದ್ದೆಂದು ಹೇಳಬಹುದು. ಇದರ ಆವರಣದಲ್ಲಿ ಮತ್ತೆರಡು ದೇವಾಲಯಗಳಿವೆ. ಇವು ಸುಮಾರು 10–11ನೆಯ ಶತಮಾನಕ್ಕೆ ಸೇರಿ ದವೆಂದು ಹೇಳಬಹುದು.

---

13 ಶಾ. ಪ., ಪು. 88

14 ಅದೇ

15 ಅದೇ, ಪು. 90

ಕ್ರಿ.ಶ. 1379ರಲ್ಲಿ ಕುಕ್ಕನೂರು ಅಗ್ರಹಾರ ಪುನಃ ನಿರ್ಮಾಣಗೊಂಡಾಗ ಜ್ಯೇಷ್ಠಾದೇವಿಯ ಆಲಯವೂ ಗಂಡಿನ ಭಟ್ಟಪ್ಪಯ್ಯನಿಂದ ದುರುಸ್ತುಗೊಳಿಸಲ್ಪಟ್ಟಿತೆಂದು ಹೇಳಬಹುದು. ಆದರೆ, ಸುಮಾರು 15–16ನೆಯ ಶತಮಾನದ ಹೊತ್ತಿಗೆ ಅದು ಮುಸಲ್ಮಾನರ ದಾಳಿಯಿಂದ ತೊಂದರೆ ಗೀಡಾಯಿತು. ಅವರು ಈ ಸ್ಥಳವನ್ನು ಸುಡುವ ಪ್ರಯತ್ನ ನಡೆಸಿದಾಗ ಆ ವೆಂಕಿ ಈ ದೇವಾಲಯ ವನ್ನೂ ಸ್ವಲ್ಪಮಟ್ಟಿಗೆ ಭಗ್ನಗೊಳಿಸಿತು. ಮುಂದೆ, ಅಲ್ಲಿಯ ನಾಡಗೌಡಿಕೆಯನ್ನು ಮಾಡುತ್ತಿದ್ದ ದೇವರಾಯಗೌಡ ದೇಸಾಯಿ ಎನ್ನುವವರು ಇದನ್ನು ಜೀರ್ಣೋದ್ಧಾರ ಮಾಡಿ, ಇದನ್ನು ಪೂಜಾಯೋಗ್ಯ ವಾದ ಸ್ಥಳವನ್ನಾಗಿ ಮಾಡಿದರೆಂದು ತಿಳಿದುಬರುತ್ತದೆ. ದೇವರಾಯಗೌಡ ದೇಸಾಯರು ಮಹಾ ಮಾತೆಯ ಪ್ರಧಾನ ಅರ್ಚಕರಾಗಿದ್ದ ಭಟ್ಟಾಚಾರ್ಯರ ಮೊಮ್ಮಕ್ಕಳೆಂದು ಹೇಳಲಾಗಿದೆ.

ಜ್ಯೇಷ್ಠಾದೇವಿಯ ಭಕ್ತರಲ್ಲಿ ಒಬ್ಬನಾದ ಕಾಲೇಶ್ವರ ಎನ್ನುವವನು ಈಕೆಯ ಉಪಾಸಕನಾಗಿದ್ದ. ಇವನ ಪೂರ್ವಜರು ಸೂಡಿಯ ನಾಗೇಶ್ವರ ದೇವಾಲಯದ ಕಾಳಾಮುಖ ಶೈವರ ಗುರುಗಳಾಗಿದ್ದರು. ತನ್ನ ಪಾಂಡಿತ್ಯದ ಹಿರಿಮೆಯಿಂದಾಗಿ ಇವನು ಸಿದ್ಧಾಂತಿ ಎಂದೂ ಕರೆಯಲ್ಪಡುತ್ತಿದ್ದ.

ಹೀಗೆ ಕುಕ್ಕನೂರು ಅಗ್ರಹಾರ ಸುಮಾರು 7ನೆಯ ಶತಮಾನದಿಂದ 16ನೆಯ ಶತಮಾನದ ವರೆಗೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರವೆಂದು ಖ್ಯಾತಿ ಪಡೆದ ಅಗ್ರಹಾರವಾಗಿತ್ತು.

# ವೀರಗಲ್ಲುಗಳು-ವೀರಪೂಜೆ

ಯಾರಲ್ಲಾಗಲೀ ಒಂದು ವಿಶೇಷ ಗುಣ ಕಂಡುಬಂದಾಗ, ವಿಶೇಷ ಶಕ್ತಿ ಕಂಡುಬಂದಾಗ, ನಮಗೆ ಅವರಲ್ಲಿ ವಿಶ್ವಾಸ ಉಂಟಾಗುತ್ತದೆ; ಕ್ರಮವಾಗಿ ಅದು ಗೌರವಭಾವವಾಗುತ್ತದೆ. ಇಂತಹ ಜನರನ್ನು ನಮ್ಮ ಜನ ಮೆಚ್ಚಿ ಮರ್ಯಾದೆಯಿಂದ ಕಾಣುವುದು ಹಾಗಿರಲಿ, ಅವರನ್ನು ಪೂಜಾಸ್ಥಾನಕ್ಕೇರಿಸಿದ್ದಾರೆ. ವೀರಪೂಜೆ ನಮ್ಮ ಜನಕ್ಕೇ ವಿಶಿಷ್ಟವಾದ ಲಕ್ಷಣವಲ್ಲ; ಮಾನವ ಕುಲಕ್ಕೇ ಇದೊಂದು ಸಹಜ ಗುಣವಾಗಿದೆ. ವೀರರು ಪರಾಕ್ರಮವನ್ನು ತೋರಿಸುವುದರಲ್ಲೇನೂ ಆಶ್ಚರ್ಯವಿಲ್ಲ. ಈ ಪರಾಕ್ರಮ ಪ್ರಕಟನೆಯ ಉದ್ದೇಶ್ಯ ಮುಖ್ಯ. ಆ ಉದ್ದೇಶ್ಯಕ್ಕಾಗಿ ವೀರರು ಪ್ರಾಣಗಳನ್ನರ್ಪಿಸಿದ್ದಾರೆ. ಯಾವ ಯಾವ ಕಾರಣಗಳಿಗಾಗಿ ವೀರರು ತಮ್ಮ ಪ್ರಾಣಗಳನ್ನರ್ಪಿಸಿದರೆಂಬ ವಿವರಗಳು ಯಾವ ಇತಿಹಾಸದಲ್ಲೂ ಕಂಡುಬರುವುದಿಲ್ಲ. ಅವುಗಳನ್ನು ನಾವು ವೀರಗಲ್ಲುಗಳಲ್ಲಿ ಪಡೆಯಬಹುದು. ಯಾವ ಹಳ್ಳಿಗೇ ಹೋಗಿ ನೋಡಿ. ಗುಡಿಯ ಬಳಿಯೋ, ಕೆರೆಕಟ್ಟೆಯ ಹತ್ತಿರವೋ, ವೀರಗಲ್ಲುಗಳು ಕಣ್ಣಿಗೆ ಬೀಳುತ್ತವೆ. ಕೆಲವು ವೀರಗಲ್ಲುಗಳಲ್ಲಿ ಚಿತ್ರಗಳಿರುತ್ತವೆ; ಕೆಲವು ವೀರಗಲ್ಲುಗಳಲ್ಲಿ ಬರಹ ಮಾತ್ರವಿರುತ್ತದೆ; ಮತ್ತೆ ಕೆಲವು ವೀರಗಲ್ಲುಗಳಲ್ಲಿ ಚಿತ್ರಗಳೂ, ಬರಹಗಳೂ ಎರಡೂ ಇರುತ್ತವೆ. ಚಿತ್ರಗಳಿಂದ ಕೂಡಿದ ಹಲವು ವೀರಗಲ್ಲುಗಳು ಉತ್ತಮ ಕಲಾನೈಪುಣ್ಯತೆಯಿಂದ ಕೂಡಿರುತ್ತವೆ.

ದರೋಡೆಕಾರರೂ, ದಾಳಿಕೋರರೂ, ಹಳ್ಳಿಗಳ ಮೇಲೆ ಬಿದ್ದು ಅವುಗಳ ಅಳಿವಿನ ಕರಾತಕರ್ಮ ತೋರಿಸಿದಾಗ ವೀರರನೇಕರು ಅವರನ್ನೆದುರಿಸಿ, ಹೋರಾಡಿ, ಅವರನ್ನು ತೀರಿಸಿದ್ದಾರೆ. ಅನೇಕ ಸಂದರ್ಭಗಳಲ್ಲಿ ಇಂತಹ ಹೊಡೆದಾಟಗಳಲ್ಲಿ ತಾವೂ ಜೀವ ಕೊಟ್ಟಿದ್ದಾರೆ; ಹಳ್ಳಿಗಳನ್ನು ಕಾಪಾಡಿದ್ದಾರೆ. ಅಂತಹ ವೀರರಿಗೆ ಕೃತಜ್ಞತೆಯಿಂದ ಜನ ವೀರಗಲ್ಲುಗಳನ್ನು ಹಾಕಿಸಿದ್ದಾರೆ. ವೀರರ ಗುಡಿಗಳನ್ನು ಕಟ್ಟಿಸಿದ್ದಾರೆ. ವೀರಪೂಜೆಗಾಗಿ ದತ್ತಿಗಳನ್ನು ಬಿಟ್ಟಿದ್ದಾರೆ. ಈ ಅಂಶಗಳೊಂದೊಂದನ್ನು ಕುರಿತೂ ಶಾಸನಗಳು ವಿವರಗಳನ್ನೊದಗಿಸುತ್ತವೆ.[1]

— **ತಿ. ತಾ. ಶರ್ಮ**

1 ನಮ್ಮ ಜನ ನಡೆಸಿದ ಜೀವನ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ. ಬೆಂಗಳೂರು 4. ಪು. 9–10

ಎಸ್. ಬಿ. ಪಾಂಗಣ್ಣಾಯ

# ಗ್ರಾಮೀಣ ಗ್ರಂಥಾಲಯಗಳ ಉದ್ದೇಶ

ಐತಿಹಾಸಿಕವಾಗಿ ಗ್ರಂಥಾಲಯಗಳಿಗೆ ಸಾವಿರಾರು ವರ್ಷಗಳ ಪರಂಪರೆ ಇರುವುದಾದರೂ ಈ ದೀರ್ಘ ಕಾಲದಲ್ಲಿ ಗ್ರಂಥಾಲಯಗಳು ಮುಖ್ಯವಾಗಿ ಅರಮನೆಗಳು, ಶ್ರೀಮಂತರ ಮನೆಗಳು, ಧಾರ್ಮಿಕ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಮತ್ತು ಪ್ರಧಾನ ನಗರಗಳಲ್ಲಿ ಹುಟ್ಟಿ ಬೆಳೆದವು. 20ನೆಯ ಶತಮಾನದ ಮಧ್ಯಭಾಗದಲ್ಲಿ ಸುಧಾರಿತ ಮಟ್ಟದ ಗ್ರಾಮೀಣ ಗ್ರಂಥಾಲಯಗಳ ಆವಶ್ಯಕತೆಯನ್ನು ಆಧುನಿಕ ಜಗತ್ತು ಮನಗಂಡಿತು. ಈ ದಿಸೆಯಲ್ಲಿ ಪ್ರಗತಿ ಸಾಧಿಸಲು ಎದುರಾದ ಹಲವಾರು ಪ್ರತಿಕೂಲಗಳನ್ನು ಗೆದ್ದು ನವೀನ ವಿಧಾನಗಳನ್ನು ಬಳಸಿಕೊಳ್ಳುವುದು ಸಾಧ್ಯವಾಗಿರುವುದರಿಂದ ಇಂದು ಜಗತ್ತಿನಾದ್ಯಂತ ಸಾವಿರಾರು ಗ್ರಾಮೀಣ ಗ್ರಂಥಾಲಯಗಳು ಬೆಳೆಯುತ್ತಿವೆ.

ಪ್ರಪಂಚದ ಮೂರನೆಯ ಎರಡು ಭಾಗ ಜನ ಹಳ್ಳಿಗಳಲ್ಲಿ ವಾಸ ಮಾಡುತ್ತಾರೆ. ಪಟ್ಟಣಗಳಲ್ಲಿ ಕೈಗಾರಿಕೆ, ಶಿಕ್ಷಣಮಟ್ಟ, ತಂತ್ರಜ್ಞಾನಗಳ ಬೆಳವಣಿಗೆಗೆ ಪರಿಣಾಮಕಾರಿಯಾಗಿ ಸಹಕರಿಸಬಲ್ಲ ಸಂಸ್ಥೆಗಳೆಂದರೆ ಗ್ರಂಥಾಲಯಗಳೆಂಬುದರಲ್ಲಿ ಸಂದೇಹವಿಲ್ಲ. ಈ ಸೌಲಭ್ಯಗಳ ಅಭಾವದಿಂದಾಗಿ ಹಳ್ಳಿಗರ ನೇಕರು ಪಟ್ಟಣಗಳಿಗೆ ವಲಸೆ ಬಂದಿರುವುದರಿಂದ ಉದ್ಭವಿಸಿರುವ ಸಮಸ್ಯೆಯನ್ನು ಕುರಿತು ನಾವು ಗಂಭೀರವಾಗಿ ಚಿಂತಿಸುತ್ತೇವೆ.ಹಳ್ಳಿಗಳಲ್ಲಿ ತಾಂಡವವಾಡುತ್ತಿರುವ ಬಡತನ, ಶಿಕ್ಷಣ ಹಾಗೂ ತಂತ್ರಜ್ಞಾನದ ಅಭಾವ ಕುರಿತು ನಾವು ಚರ್ಚಿಸುತ್ತೇವೆ. ಆದರೂ ಪಟ್ಟಣದ ಜನರಿಗೆ ಬೇಕಾದ ಸೌಲಭ್ಯಗಳಿಗಾಗಿ ನಮ್ಮ ಹೆಚ್ಚಿನ ಸಂಪನ್ಮೂಲಗಳನ್ನು ನಾವು ವ್ಯಯಿಸಿದ್ದೇವೆಯೇ ಹೊರತು ದೇಶದ ಅತಿ ಹೆಚ್ಚು ಜನ ವಾಸವಾಗಿರುವ ಹಳ್ಳಿಗಳಿಗೆ ಇವೇ ಸೌಕರ್ಯಗಳನ್ನು ನೀಡುವುದರ ಕಡೆಗೆ, ಗ್ರಂಥಾಲಯ ಹಾಗೂ ಇನ್ನಿತರ ಜೀವನಾವಶ್ಯ ಸೌಲಭ್ಯಗಳನ್ನು ನೀಡುವುದಕ್ಕೆ ಲಕ್ಷ್ಯನೀಡುತ್ತಿಲ್ಲ. ನಮ್ಮ ಹಳೆಯ ಧೋರಣೆಗಳನ್ನು ತ್ಯಜಿಸಿ ಹಳ್ಳಿಗರೂ ಪಟ್ಟಣಿಗರಷ್ಟೇ ಮುಖ್ಯರೆಂದು ತಿಳಿದು ಹಳ್ಳಿಗಳ ಸಮಸ್ಯೆಗಳ ಪರಿಹಾರಕ್ಕಾಗಿ ಮತ್ತು ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗಾಗಿ ನಮ್ಮ ಸಂಪನ್ಮೂಲಗಳನ್ನು ಸಾಕಷ್ಟು ಪ್ರಮಾಣದಲ್ಲಿ ಆ ಕಡೆ ಹರಿಸಬೇಕಾಗಿದೆ.

ಬಹಳ ಕಾಲದಿಂದ ಬಂದಿರುವ ನಂಬಿಕೆಗಳು ಮತ್ತು ಆರ್ಥಿಕ ಸಾಮಾಜಿಕ ಅಸಮತೆಗಳು ಇಂದು ದೂರವಾಗುತ್ತಿವೆ. ಶಿಕ್ಷಣ, ವೈದ್ಯಕೀಯ ಸೌಲಭ್ಯಗಳು, ಕೃಷಿ ವಿಸ್ತರಣ ಕಾರ್ಯಗಳು, ಸಾಕ್ಷರತಾ ಚಳುವಳಿ, ರೇಡಿಯೋ ಮೊದಲಾದ ಜನತಾ ಸಂಪರ್ಕ ಮಾಧ್ಯಮಗಳು ಈಗ ಹಳ್ಳಿಗರಿಗೂ ದೊರಕುತ್ತಿವೆ. ಹಳ್ಳಿಗಳಲ್ಲಿ ಅದರಲ್ಲೂ ಹೆಚ್ಚಾಗಿ ಯುವ ಜನರಲ್ಲಿ ಗ್ರಂಥಾಲಯಗಳಿಗಾಗಿ ಬೇಡಿಕೆಗಳು ಹೆಚ್ಚುತ್ತಿವೆ. ಯಾವುದೇ ಯೋಜನೆಯಿಂದ ಲಾಭ ಪಡೆಯುವ ಜನಸಮುದಾಯ ಅದಕ್ಕೆ ಉತ್ತಮ ಪ್ರತಿಕ್ರಿಯೆಯನ್ನು ತೋರಿಸಿದರೆ ಮಾತ್ರ ಆ ಯೋಜನೆ ಯಶಸ್ವಿಯಾದೀತು. ಅಂತೆಯೇ ಗ್ರಂಥಾಲಯಗಳ ಬಗ್ಗೆ ಜನತೆ ಹೆಚ್ಚು ಆಸಕ್ತಿ ವ್ಯಕ್ತಪಡಿಸಿದರೆ ಮಾತ್ರ ಗ್ರಂಥಾಲಯಗಳು ಕೂಡ ಉತ್ತಮ ರೀತಿಯ ಸೇವಾ ಸೌಲಭ್ಯಗಳನ್ನು ನೀಡಲು ಮುಂದೆ ಬರುತ್ತವೆ. ಇಂದು ಜಗತ್ತಿನ ಅನೇಕ ಕಡೆಗಳಲ್ಲಿ ಗ್ರಂಥಾಲಯಗಳ ಅವಶ್ಯಕತೆಯ ಅರಿವು ಮೂಡಿರುವುದರಿಂದ ಅವುಗಳ ಬೆಳವಣಿಗೆಗೆ ಯೋಗ್ಯ ಸಂದರ್ಭ ದೊರೆತಂತಾಗಿದೆ. ಈಗಿನ ಹೊಸ ವಾತಾವರಣಕ್ಕೆ ಹೊಂದಿಕೊಳ್ಳಬೇಕಾದರೆ ಗ್ರಾಮೀಣ ಗ್ರಂಥಾಲಯಗಳು ಕೂಡ

ಒಂದಿನಿಂದಲೂ ರೂಢಿಗೆ ಬಂದಿರುವ ಕ್ರಮಗಳನ್ನು ಸಾಕಷ್ಟು ಹೊಂದಿಸಿಕೊಂಡು ಅವುಗಳಿಂದ ಗ್ರಾಮಸ್ಥರು ಹೆಚ್ಚಿನ ಪ್ರಯೋಜನ ಹೊಂದಲು ಸಾಧ್ಯವಾಗುವಂತೆ ಉಪಕ್ರಮಿಸಬೇಕಾಗುತ್ತದೆ. ಗ್ರಾಮೀಣ ಗ್ರಂಥಾಲಯಗಳ ಅಭಿವೃದ್ಧಿಗಾಗಿ ಪ್ರತ್ಯೇಕವಾದ 'ಇದಮಿತ್ಥಂ' ಎನ್ನುವ ನಿಯಮಗಳನ್ನು ಪಾಲಿಸಬೇಕೆಂಬರ್ಥವಲ್ಲ. ಗ್ರಾಮಗಳ ಪೂರ್ವೇತಿಹಾಸ, ಸಾಂಸ್ಕೃತಿಕ ಪರಂಪರೆ ಮತ್ತು ಭೌಗೋಲಿಕ ಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಅವು ತಮ್ಮ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು.

## ಗ್ರಾಮೀಣ ಗ್ರಂಥಾಲಯಗಳ ಉದ್ದೇಶ

ಯಾವ ಪ್ರಧಾನ ಉದ್ದೇಶಗಳನ್ನಿಟ್ಟುಕೊಂಡು ಪಟ್ಟಣಗಳಲ್ಲಿ ಗ್ರಂಥಾಲಯಗಳು ಕಾರ್ಯವೆಸಗುತ್ತಿವೆಯೋ ಅವೇ ಉದ್ದೇಶಗಳು ಗ್ರಾಮ ಪ್ರದೇಶದ ಗ್ರಂಥಾಲಯಗಳಿಗೂ ಅನ್ವಯವಾಗುತ್ತವೆ.

1 ಮನುಷ್ಯನ ವ್ಯಕ್ತಿತ್ವ ವಿಕಾಸಕ್ಕೆ, ತನ್ಮೂಲಕ ಸಮಾಜದ ಅಭಿವೃದ್ಧಿಗೆ ಪೂರಕವಾಗುವ ವಿದ್ಯೆ, ಉತ್ತಮ ಸಂಸ್ಕಾರ ಹಾಗೂ ಮನೋರಂಜನೆಯನ್ನೀಯಬಲ್ಲ ಗ್ರಂಥಗಳು, ನಿಯತಕಾಲಿಕೆಗಳು, ಚಿತ್ರಪಟಗಳು, ಧ್ವನಿಮುದ್ರಿಕೆಗಳು, ಶ್ರವಣ ಟೇಪುಗಳು ಮೊದಲಾದವು ವಾಚಕರಿಗೆ ದೊರಕುವಂತೆ ಅವನ್ನು ಸಂಗ್ರಹಿಸಬೇಕಾಗುತ್ತದೆ.

2 ಗ್ರಂಥಗಳ ಉಪಯೋಗವನ್ನು ಓದುಗರು ಯೋಗ್ಯರೀತಿಯಲ್ಲಿ ಪಡೆಯುವಂತಾಗಲು ಅವರವರ ಅಭಿರುಚಿಯನ್ನು ತಿಳಿದು ತಮ್ಮ ಸಂಗ್ರಹದಲ್ಲಿರುವ ಗ್ರಂಥಗಳನ್ನು ಅವರ ಅವಗಾಹನೆಗೆ ತಂದು ಅವನ್ನು ಬಳಸುವ ವಿಧಾನಗಳಲ್ಲಿ ನಿರ್ದೇಶನ ನೀಡಲು ಸಮರ್ಥರಾದ ಅರ್ಹ ಸಿಬ್ಬಂದಿಯನ್ನು ನೇಮಿಸಬೇಕು.

3 ಗ್ರಾಮ ಪ್ರದೇಶಗಳಲ್ಲಿ ಗ್ರಂಥಾಲಯಗಳನ್ನು ಕಟ್ಟಲು ಯೋಗ್ಯ ನಿವೇಶನಗಳನ್ನಾರಿಸಿ, ಗ್ರಂಥಾಲಯ ನೀಡುವ ಸೌಲಭ್ಯಗಳ ಮೌಲ್ಯವನ್ನು ಜನ ತಿಳಿದುಕೊಳ್ಳುವಂತೆ ಮಾಡಬೇಕು.

4 ಅನಕ್ಷರಸ್ಥರು, ಅಲ್ಪಸ್ವಲ್ಪ ಓದು ಬರಹ ಬಲ್ಲವರು, ಹೆಚ್ಚಿನ ಜ್ಞಾನ ಪಡೆಯಲು ಆಸಕ್ತಿಯುಳ್ಳವರು–ಹೀಗೆ ವಿಭಿನ್ನ ವರ್ಗಗಳ ಜನರು ಹಳ್ಳಿಗಳಲ್ಲಿ ವಾಸವಾಗಿರುತ್ತಾರೆ. ಗ್ರಾಮಪ್ರದೇಶದ ಗ್ರಂಥಾಲಯಗಳು ತಮ್ಮ ಸುತ್ತಮುತ್ತಲಿನ ಶಾಲೆಗಳು, ವ್ಯವಸಾಯ ಶಿಕ್ಷಣ ಕಾಲೇಜುಗಳು, ಸಾರ್ವಜನಿಕ ಗ್ರಂಥಾಲಯಗಳೊಂದಿಗೆ ಸಂಬಂಧ ಇಟ್ಟುಕೊಂಡು ಎಲ್ಲ ವರ್ಗಗಳ ಜನರಿಗೂ ಗ್ರಂಥಗಳನ್ನು ಹಾಗೂ ವಿವಿಧ ಮಾಹಿತಿಗಳನ್ನು ನೀಡುವ ಕಾರ್ಯಾಲಯಗಳಾಗಿರಬೇಕು.

ಹಳ್ಳಿಗಳಲ್ಲಿ ಜನಸಾಂದ್ರತೆಯಿರುವುದು ಕಡಿಮೆ. ಆರ್ಥಿಕವಾಗಿಯೂ ಹಳ್ಳಿಗಳು ಮೇಲ್ಮಟ್ಟದಲ್ಲಿರುವುದಿಲ್ಲ. ಜನಸಂಖ್ಯೆಯ ಮಿತಿಯಿಲ್ಲದೆ ಎಲ್ಲ ಹಳ್ಳಿಗಳಿಗೂ ಗ್ರಂಥಾಲಯಗಳನ್ನು ಒದಗಿಸಬೇಕಾದರೆ ಕೆಲವು ತೊಡಕುಗಳಿವೆ.

1 ಒಳ್ಳೆಯ ಗ್ರಂಥಗಳನ್ನು ಆಯ್ಕೆ ಮಾಡಲು ಸಹಾಯಕವಾದ ಆಕರ ಗ್ರಂಥಗಳು ಇರುವುದಿಲ್ಲ. ಗ್ರಂಥಗಳನ್ನು ಕಪಾಟುಗಳಲ್ಲಿ ಕ್ರಮಬದ್ಧವಾಗಿ ಜೋಡಿಸಲು ಮತ್ತು ಓದುಗರಿಗೆ ನೆರವೀಯಲು ಸಮರ್ಥರಾದ ತರಬೇತು ಪಡೆದ ಗ್ರಂಥಪಾಲಕರ ಕೊರತೆಯೂ ಒಂದು ಕಾರಣವೆನ್ನಬಹುದು.

2 ಗ್ರಾಮೀಣ ಗ್ರಂಥಾಲಯಗಳ ಗ್ರಂಥ ಸಂಗ್ರಹ ಬಹಳ ಕಡಿಮೆಯಿದ್ದು, ಸದಾಕಾಲವೂ ಅವನ್ನೇ ಓದಬೇಕಾಗಿ ಬರುವ ಪ್ರಸಂಗಗಳನೇಕ. ಬರುವ ಕೆಲವು ಓದುಗರು ಗ್ರಂಥಾಲಯದಲ್ಲಿ ಇರುವ ಕೆಲವೇ ಗ್ರಂಥಗಳನ್ನು ಬಹುಬೇಗ ಓದಿಮುಗಿಸಿದರೆ ಆ ಪುಸ್ತಕಗಳು ಅನುಪಯುಕ್ತವಾಗಿ ಕೊಳೆಯುತ್ತಿರಬೇಕಾಗುತ್ತದೆ. ಅವರಿಗೆ ಬೇರೆ ಪುಸ್ತಕಗಳಿರುವುದಿಲ್ಲ.

3 ಪ್ರತಿ ಹಳ್ಳಿಗೂ ಗ್ರಂಥಾಲಯವಿರಬೇಕಾದರೆ ಕಟ್ಟಡಗಳಿಗಾಗಿ, ಸಿಬ್ಬಂದಿಯ ನೇಮಕಕ್ಕಾಗಿ, ಗ್ರಂಥಗಳನ್ನು ಕೊಳ್ಳುವುದಕ್ಕಾಗಿ ಬಹಳ ಹಣ ಬೇಕಾಗುತ್ತದೆ. ಗ್ರಂಥಾಲಯಕ್ಕಾಗಿ ಬಂದ ಗ್ರಂಥಗಳನ್ನು ವರ್ಗೀಕರಿಸಿ ಸೂಚೀಪತ್ರಗಳನ್ನು ತಯಾರಿಸುವುದರಲ್ಲೇ ತರಬೇತು ಪಡೆದ ಗ್ರಂಥಪಾಲಕನ ಸಮಯವೆಲ್ಲ ಕಳೆಯುತ್ತದೆ.

4 ಜ್ಞಾನದ ವಿಶಾಲವ್ಯಾಪ್ತಿಗೆ ಸಂಬಂಧಿಸಿದಂತೆ ಆಯಾ ವಿಷಯಗಳ ಮುಖ್ಯ ಗ್ರಂಥಗಳನ್ನಷ್ಟನ್ನೇ ಪ್ರತಿ ಗ್ರಾಮೀಣ ಗ್ರಂಥಾಲಯಕ್ಕೂ ಕೊಳ್ಳಬೇಕಾಗುತ್ತದೆ. ಹೀಗೆ ಒಂದೇ ಬಗೆಯ ಗ್ರಂಥಗಳನ್ನು ಒಂದು ಪ್ರದೇಶದ ಎಲ್ಲ ಹಳ್ಳಿಗಳ ಪುಸ್ತಕ ಭಂಡಾರಗಳಲ್ಲಿ ಇಡುವುದಾದರೆ ಹಣದ ಅಪವ್ಯಯವಾಗುತ್ತದೆ.

ಗಾತ್ರದಲ್ಲೂ ಸೇವಾವೈವಿಧ್ಯಗಳಲ್ಲೂ ಕಿರಿದಾದ ಈ ಗ್ರಂಥಭಂಡಾರಗಳು ಓದುಗರ ಪ್ರಶ್ನೆಗಳಿಗೆ ಮಾಹಿತಿಯನ್ನು ನೀಡಲು ಸಮರ್ಥವಾಗಲಾರವು.

ಮೇಲಿನ ಎಲ್ಲ ಸಮಸ್ಯೆಗಳಿಗೆ ಪರಿಹಾರೋಪಾಯವಾಗಿ, ಒಂದು ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ಗ್ರಂಥಾಲಯಗಳು ಪರಸ್ಪರ ಸೌಹಾರ್ದವಿರಿಸಿಕೊಂಡು ತಮ್ಮ ಕಾರ್ಯ ವಿಧಾನ ಗಳನ್ನು ಕೇಂದ್ರೀಕರಿಸಿ, ಆ ಕೇಂದ್ರದ ನಿಯಂತ್ರಣಕ್ಕೊಳಪಟ್ಟು ತಮ್ಮ ಚಟುವಟಿಕೆಗಳನ್ನು ನಡೆಸಿದರೆ ಪ್ರಯೋಜನವಿದೆ. ಷಾರ್ ಅವರ ಸಲಹೆಯಂತೆ ಗ್ರಾಮೀಣ ಗ್ರಂಥಾಲಯಗಳ ಸೌಲಭ್ಯಗಳು ಫಲ ಕಾರಿಯಾಗಬೇಕಾದರೆ ಅವು ತಮ್ಮೊಳಗೆ ಸಂಪರ್ಕಜಾಲವೊಂದನ್ನು ನಿರ್ಮಿಸಿಕೊಳ್ಳಬೇಕು. ಪ್ರತಿ ಯೊಂದು ಗ್ರಂಥಭಂಡಾರವೂ ತನ್ನ ಸ್ವಂತಿಕೆಯ ನೆಲೆಯಲ್ಲಿ ಏಕಾಏಕಿ ನಿಲ್ಲಲಾರದು. ಪರಂತು ಸಂಪರ್ಕ ಜಾಲದ ಇನ್ನಿತರ ಗ್ರಂಥಾಲಯಗಳ ಮೇಲೆ ಅವಲಂಬಿಸಿಕೊಂಡಿದ್ದು ತಾನು ಈ ವ್ಯವಸ್ಥೆಯ ಅಂಗವಾಗಿ ಸೌಹಾರ್ದದಿಂದ ಪುಷ್ಟವಾಗಿ ಬೆಳೆದು ನಿಲ್ಲುತ್ತದೆ.[1] ಈ ಬಗೆಯ ವ್ಯವಸ್ಥೆಯಿಂದ ಗ್ರಂಥ ಭಂಡಾರಗಳಲ್ಲಿ ಒಂದೇ ಬಗೆಯ ಗ್ರಂಥಗಳ ಆಯ್ಕೆ ತಪ್ಪಿ, ಹಣದ ಅಪವ್ಯಯ ಕಡಿಮೆ ಆಗುವುದಲ್ಲದೆ, ಗ್ರಂಥಗಳ ವರ್ಗೀಕರಣ, ಸೂಚಿಪತ್ರ ತಯಾರಿಕೆ ಇತ್ಯಾದಿ ತಾಂತ್ರಿಕ ಕೆಲಸಗಳು ಕೇಂದ್ರದಿಂದಲೇ ಪೂರೈಸಲ್ಪಟ್ಟು ಗ್ರಾಮಗ್ರಂಥ ಭಂಡಾರದಲ್ಲಿ ಕೆಲಸಮಾಡುವ ಸಿಬ್ಬಂದಿಗಳು ಓದುಗರ ಅವಶ್ಯಕತೆಯ ಕಡೆಗೆ ಹೆಚ್ಚು ಗಮನ ನೀಡಲು ಅನುವಾಗುತ್ತದೆ.

## ಸಂಪರ್ಕ ಜಾಲದ ಕೇಂದ್ರ ಕಾರ್ಯಾಲಯದ ಮುಖ್ಯ ಕೆಲಸಗಳು

ಗ್ರಾಮೀಣ ಗ್ರಂಥಾಲಯಗಳ ಸಂಪರ್ಕ ಜಾಲದ ಕೇಂದ್ರವೊಂದನ್ನು ಸ್ಥಾಪಿಸುವುದರಿಂದ ಅನೇಕ ಪ್ರಯೋಜನಗಳಿವೆ.[2]

1 ಈ ಕೇಂದ್ರ ತನ್ನ ವ್ಯಾಪ್ತಿಗೆ ಒಳಪಡುವ ಪ್ರದೇಶದಲ್ಲಿ ಗ್ರಾಮೀಣ ಜನರಿಗೆ ಗ್ರಂಥಾಲಯ ಸೌಲಭ್ಯಗಳು ಯೋಗ್ಯರೀತಿಯಲ್ಲಿ ದೊರಕುವಂತಾಗಲು ನಾನಾ ಕಾರ್ಯಕ್ರಮಗಳನ್ನು ಯೋಜಿಸುತ್ತದೆ.

2 ಈ ಯೋಜನೆಗಳ ಕಾರ್ಯಸಿದ್ಧಿಗೆ ಗ್ರಂಥಪಾಲಕರು ಉತ್ಸಾಹಿಗಳಾಗಿ ಮುಂದೆ ಬಂದು ನೇತೃತ್ವ ವಹಿಸುವಂತೆ ಮಾಡುತ್ತದೆ.

3 ಕೇಂದ್ರ ತನ್ನ ಸಂಪನ್ಮೂಲಗಳನ್ನು ವಿವಿಧ ಉದ್ದೇಶಗಳಿಗಾಗಿ ತನ್ನ ಶಾಖೆಗಳಿಗೆ ಯಥೋಚಿತ ವಾಗಿ ಹಂಚುವುದು.

4 ಗ್ರಂಥ ಸಂಗ್ರಹ, ಸೂಚೀಕರಣ ಸಿದ್ಧತೆ, ಅಂತರ ಗ್ರಂಥಾಲಯ ಎರವಲು ಮೊದಲಾದ ಸೌಲಭ್ಯಗಳನ್ನು ಸಂಪರ್ಕ ಜಾಲದ ಅಂಗಸಂಸ್ಥೆಗಳಿಗಾಗಿ ಕೇಂದ್ರವೇ ಏರ್ಪಡಿಸುವುದು.

5 ನೂತನ ಸೇವಾ ವಿಧಾನಗಳನ್ನು ಕುರಿತು ಸ್ಥಳೀಯ ಗ್ರಂಥಪಾಲಕರಿಗೆ ತಿಳಿವಳಿಕೆ ನೀಡುವುದಕ್ಕಾಗಿ ಕಾಲಕಾಲಕ್ಕೆ ಅವರಿಗೆ ಶಿಕ್ಷಣ ನೀಡುತ್ತದೆ.

6 ಅವಶ್ಯ ಬಂದರೆ ಓದುಗರ ಪ್ರಯೋಜನಕ್ಕಾಗಿ ವಿಶ್ವವಿದ್ಯಾನಿಲಯ ಗ್ರಂಥಾಲಯಗಳು, ವಿಶಿಷ್ಟ ಗ್ರಂಥಾಲಯಗಳು ಹಾಗೂ ವಿದೇಶದ ಗ್ರಂಥಾಲಯಗಳೊಂದಿಗೆ ನೇರ ಸಂಪರ್ಕ ಇರಿಸಿಕೊಂಡು ಗ್ರಂಥಗಳನ್ನಾಗಲಿ ಇತರ ಮಾಹಿತಿಗಳನ್ನಾಗಲಿ ಶೀಘ್ರವಾಗಿ ಒದಗಿಸಿಕೊಡುತ್ತದೆ. ಗ್ರಾಮೀಣ ಗ್ರಂಥಾ ಲಯಗಳಲ್ಲಿ ಜನತೆಗೆ ಭರವಸೆ ಹುಟ್ಟುತ್ತದೆ. ಅದರ ಚಟುವಟಿಕೆಗಳಲ್ಲಿ ಭಾಗಿಗಳಾಗಲು ಹಳ್ಳಿಗರು

---

[1] Sharr, F. A : *Functions and organization of a Rural Library System*, Unesco Bull. 26, Jan.–Feb. 1972, p. 4

[2] Ibid., p. 5

ಮುಂದೆ ಬರುತ್ತಾರೆ. ಕ್ರಮೇಣ ಸ್ಥಳೀಯ ಪ್ರಾಧಿಕಾರಿ ವರ್ಗಗಳು ಗ್ರಂಥಾಲಯಕ್ಕಾಗಿ ನಿವೇಶನ, ಕಟ್ಟಡಗಳನ್ನು ಒದಗಿಸಲು ಮುಂದೆ ಬರಬಹುದು.

7 ಗ್ರಾಮೀಣ ಪ್ರದೇಶಗಳಲ್ಲಿ ವ್ಯವಸಾಯೋತ್ಪಾದನೆಯನ್ನು ಹೆಚ್ಚಿಸಬೇಕಾದ್ದು ಮುಖ್ಯ. ಆದ್ದರಿಂದ ಗ್ರಂಥಾಲಯಗಳು ಗ್ರಾಮಸ್ಥರ ಅಭಿರುಚಿ. ಆಸಕ್ತಿಗಳಿಗೆ ತಕ್ಕಂಥ ಪುಸ್ತಕಗಳನ್ನು ಸಂಗ್ರಹಿಸಬೇಕು. ಎಷ್ಟೋ ವೇಳೆ ಗ್ರಾಮಸ್ಥರು ಗ್ರಂಥಾಲಯಗಳ ಪ್ರಯೋಜನ ಪಡೆಯಲು ಮುಂದೆ ಬರುತ್ತಿಲ್ಲ. ಇದಕ್ಕೆ ಮುಖ್ಯ ಕಾರಣವಿದೆ. ಅವರಿಗೆ ತಮ್ಮ ಸ್ಥಳೀಯ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳು ಲಭ್ಯವಿರುವುದಿಲ್ಲ. ಬೇರೆ ಭಾಷೆಗಳಲ್ಲಿ ವಿವರಿಸಲಾದ ವಿಷಯಗಳು ಬಹುತೇಕ ಜನರಿಗೆ ಅರ್ಥವಾಗುವಂತಿಲ್ಲ. ಅನೇಕ ಹಳ್ಳಿಗಳಲ್ಲಿ ಕೃಷಿಕರು ನೂತನ ಕೃಷಿ ವಿಧಾನದ ಬಗ್ಗೆ ಮಾಹಿತಿಗಳನ್ನು ಪುಸ್ತಕಗಳಿಂದ ಓದಿ ತಿಳಿಯುವಷ್ಟು ವಿದ್ಯಾವಂತರಾಗಿರುವುದಿಲ್ಲ. ಇಂಥ ವೇಳೆ ಗ್ರಾಮೀಣ ಗ್ರಂಥಾಲಯಗಳ ಸಂಪರ್ಕ ಜಾಲದ ಕೇಂದ್ರ ಕಾರ್ಯಾಲಯ ಪ್ರಾದೇಶಿಕ ಭಾಷೆಗಳಲ್ಲಿ ಅಂಥ ಪುಸ್ತಕಗಳನ್ನು ಪ್ರಕಟಿಸಬೇಕು. ಕೃಷಿಕರಿಗೆ ಯೋಗ್ಯ ಸಲಹೆ. ಉಪದೇಶಗಳನ್ನಿತ್ತು ಅವರನ್ನು ಓದುವ ಹವ್ಯಾಸದಲ್ಲಿ ತೊಡಗಿಸಲು ಮಾಡುವ ನಾನಾ ಪ್ರೇರಣೆ ಕ್ರಮಗಳನ್ನು ಅನುಸರಿಸಬೇಕು.

8 ಗ್ರಾಮಸ್ಥರ ಹಿತಾಸಕ್ತಿಗಳನ್ನು ಅರಿತ ನಾವು ಅವರನ್ನು ಪಟ್ಟಣಿಗರಿಗಿಂತ ಯಾವ ವಿಧದಲ್ಲೂ ಕಡಿಮೆಯೆಂದು ಭಾವಿಸಬಾರದು. ಜ್ಞಾನಾಭಿವೃದ್ಧಿ ಮಾಡಿಕೊಳ್ಳಲು ನಗರವಾಸಿಗಳಂತೆಯೇ ಗ್ರಾಮವಾಸಿಗಳಿಗೂ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕು. ಸಮಾನ ಅಭಿರುಚಿಯ ಜನರು ಗ್ರಾಮಗಳಲ್ಲಿ ಒಂದೇ ಕಡೆ ಇರುವುದು ತೀರ ಅಪರೂಪ. ಹಳ್ಳಿಗಳಲ್ಲಿ ಮೂಲೆಮೂಲೆಗಳಲ್ಲಿ ಜನರು ವಿರಳವಾಗಿ ಹರಡಿಕೊಂಡಿರುತ್ತಾರೆ. ಪುಸ್ತಕದ ಬದನೆಕಾಯಿಗಿಂತ ಸ್ವಂತ ಅನುಭವದ ಮೇಲೆ ನಂಬಿಗೆ ಹೆಚ್ಚು. ಇಂಥ ಸಂದರ್ಭಗಳಲ್ಲಿ ಗ್ರಾಮೀಣ ಗ್ರಂಥಾಲಯಗಳು ತಮ್ಮ ಪುಸ್ತಕ ಸಂಗ್ರಹವನ್ನೂ. ಸೇವಾ ವಿಧಾನಗಳನ್ನೂ. ಅವರ ಆಸಕ್ತಿಗೆ ತಕ್ಕಂತೆ ಸಜ್ಜುಗೊಳಿಸಬೇಕಾಗುತ್ತದೆ. ಗ್ರಾಮೀಣ ಗ್ರಂಥಾಲಯಕ್ಕಾಗಲಿ ಬಂದು ಹೋಗಲು ಎಲ್ಲ ಹಳ್ಳಿಗರಿಗೂ ಅನುಕೂಲವಿರುವುದಿಲ್ಲ. ಆದ್ದರಿಂದ ಗ್ರಂಥಾಲಯ ಸೌಕರ್ಯಗಳು ಓದಲು ಅಭಿಲಾಷೆಯುಳ್ಳ ಜನರನ್ನು ಹುಡುಕಿ ಅವರ ಮನೆ ಬಾಗಿಲಿಗೆ ಹೋಗುವಂತೆ ಆಗಬೇಕು. ಸಂಚಾರಿ ಗ್ರಂಥಾಲಯಗಳ ಮೂಲಕ ವಾಹನಗಳಲ್ಲಿ ಗ್ರಂಥಗಳನ್ನು ಹೇರಿಕೊಂಡು ನಿಗದಿಯಾದ ಸ್ಥಳಗಳಲ್ಲಿ ಪುಸ್ತಕಗಳ ವಿತರಣೆ ಮಾಡಬಹುದು. ಈ ವ್ಯವಸ್ಥೆ ಹಳ್ಳಿಯ ಮೂಲೆಮೂಲೆಯ ಜನರಿಗೂ ತಪ್ಪದೆ ಕ್ಲುಪ್ತಕಾಲದಲ್ಲಿ ದೊರಕುವಂತಾಗಬೇಕು. ಬೇರಾವ ಕಾರಣಗಳಿಗೂ ಸಂಚಾರಿ ವಾಹನವನ್ನು ಉಪಯೋಗಿಸಬಾರದು. ಸಂಚಾರಿ ವಾಹನಗಳ ಮೂಲಕ ಗ್ರಂಥಾಲಯಗಳ ಸೇವೆಯನ್ನು ಗ್ರಾಮಸ್ಥರಿಗೆ ಒದಗಿಸುವ ಹೊಣೆಯನ್ನು ಕೇಂದ್ರವೇ ವಹಿಸಿಕೊಳ್ಳಬೇಕು.

ಹಳ್ಳಿಗಳಲ್ಲಿ ಅನಕ್ಷರಸ್ಥರೇ ಬಹುಮಂದಿ. ಅನೇಕ ಮಂದಿ ಓದುಬರಹ ತಿಳಿದವರಾಗಿದ್ದರೂ ಓದುವುದರಿಂದ ಸಂತೋಷ ಪಡುವಷ್ಟು. ಗ್ರಂಥಗಳಿಂದ ಪ್ರಯೋಜನ ಪಡೆಯುವಷ್ಟು ಅವರು ವಿದ್ಯಾವಂತರಿಲ್ಲದಿರಬಹುದು. ಗ್ರಂಥಪಾಲಕ ಇವೆಲ್ಲ ಸಮಸ್ಯೆಗಳನ್ನು ತಿಳಿದೂ ನಿರ್ಲಿಪ್ತನಾಗಿರಬಾರದು. ಸಮಾಜದಲ್ಲಿಯ ವಿವಿಧ ವರ್ಗಗಳನ್ನು ಕಂಡುಕೊಂಡು ಅವರೊಡನೆ ಸ್ನೇಹ ಬೆಳೆಸಿ ಅವರಲ್ಲಿ ಆಸಕ್ತಿ ಹುಟ್ಟಿಸಬಹುದಾದ ವಿಷಯಗಳ ಕಡೆಗೆ ಗಮನ ಹರಿಸಿ ಗ್ರಂಥಾಲಯದ ಸಮಗ್ರ ಚಟುವಟಿಕೆಗಳನ್ನು ಅವರ ಪ್ರಯೋಜನಕ್ಕಾಗಿ ಅಳವಡಿಸಿಕೊಳ್ಳುವ ಚತುರತೆ. ಅವನಲ್ಲಿರಬೇಕು. ಹಳ್ಳಿಗರನ್ನು ಅನಕ್ಷರಸ್ಥರನ್ನಾಗಿ ಪರಿವರ್ತಿಸಲು ಸರ್ಕಾರದಿಂದ ನಿಯುಕ್ತರಾದ ಅಧಿಕಾರಿಗಳಿಗೆ ಯೋಗ್ಯ ಸಲಹೆ ನೀಡಬೇಕಲ್ಲದೆ ತಾನೂ ತನ್ನ ಗ್ರಂಥಾಲಯವೂ ಈ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು.

9 ಗ್ರಾಮೀಣ ಗ್ರಂಥಾಲಯಗಳು ಕೇವಲ ಪುಸ್ತಕವಿನಿಮಯ ಕೇಂದ್ರಗಳಾಗಿರದೆ ಆ ಪ್ರದೇಶದ ಸಾಂಸ್ಕೃತಿಕ ಹಾಗೂ ಬೌದ್ಧಿಕ ಜೀವನದ ವಿಕಾಸಕ್ಕೆ ಸಹಕಾರಿಯಾಗಬಲ್ಲ ಕೇಂದ್ರಗಳಾಗಿಯೂ ಕೆಲಸ ಮಾಡುತ್ತಿರಬೇಕು. ಗ್ರಾಮೀಣ ಗ್ರಂಥಾಲಯಗಳು ದೃಕ್–ಶ್ರವಣ ಸಾಧನಗಳನ್ನು ಬಳಸಿಕೊಳ್ಳುವುದರ ಮೂಲಕವೂ ಗ್ರಾಮಸ್ಥರ ಜ್ಞಾನ ಸಂವರ್ಧನೆಗೆ ನೆರವಾಗಬಹುದು. ದೃಕ್–ಶ್ರವಣ ಸಾಧನಗಳಲ್ಲಿ ಮುಖ್ಯವಾಗಿ ಸ್ಲೈಡುಗಳು. ಫಿಲ್ಮ್‌ಪಟ್ಟಿಗಳು. ಗ್ರಾಮೋಫೋನ್ ಧ್ವನಿಮುದ್ರಿಕೆಗಳು. ಕಾಂತ

ಟೇಪುಗಳು ಮುಖ್ಯವಾಗಿವೆ. ಗ್ರಂಥಾಲಯಗಳಿಗೆ ಉಪಯುಕ್ತವಾಗುವ ಸಾಧನಗಳನ್ನು ಆರಿಸುವ ಕೆಲಸ ಕಠಿಣ. ಫಿಲ್ಮ್ ಅಥವಾ ಫಿಲ್ಮ್ ಪಟ್ಟಿಕೆಗಳನ್ನು ಉಪಯೋಗಿಸಲು ಪ್ರಕ್ಷೇಪಿಗಳು ಬೇಕಾಗುತ್ತವೆ. ಧ್ವನಿಮುದ್ರಿಕೆಗಳು ಮತ್ತು ಗ್ರಾಮೋಫೋನ್ ತಟ್ಟೆಗಳನ್ನು ಬಳಸಲು ಉತ್ತಮ ಧ್ವನಿ ವ್ಯವಸ್ಥೆಯ ಅಗತ್ಯವಿದೆ. ಇತ್ತೀಚೆಗೆ ಬಳಕೆಯಲ್ಲಿರುವ ಸಾಮಗ್ರಿ ವಿಡಿಯೋಟೇಪು(videotape)ಗಳನ್ನು ಬಳಸಲು ವೀಕ್ಷಣ ಹಾಗೂ ಧ್ವನಿ ಸಾಧನಗಳು ಅಗತ್ಯವಾಗಿವೆ. ತಮ್ಮ ಸೀಮಿತ ಆರ್ಥಿಕಾನುಕೂಲತೆಯೊಳಗೆ ಗ್ರಾಮೀಣ ಗ್ರಂಥಾಲಯಗಳು ಪುಸ್ತಕಗಳ ಜೊತೆಗೆ ಈ ಸಾಧನಗಳನ್ನು ಕೊಂಡುಕೊಳ್ಳಲಾರವು. ಆದ್ದರಿಂದ ದೃಕ್-ಶ್ರವಣ ಸಾಧನಗಳನ್ನು ಕೊಂಡುಕೊಳ್ಳುವ ಮೊದಲು ತಮ್ಮ ಗ್ರಂಥಾಲಯದಲ್ಲಿ ಬಳಸಲು ಯಾವುದು ಯೋಗ್ಯ. ಅದಕ್ಕೆ ಸಾಕಷ್ಟು ಸ್ಥಳಾವಕಾಶ ಇದೆಯೇ? ಅಥವಾ ವಿಶೇಷ ವ್ಯವಸ್ಥೆ ಕೈಗೊಳ್ಳಲು ಸಾಧ್ಯವೇ? ಎಷ್ಟರಮಟ್ಟಿಗೆ ಓದುಗರ ಜ್ಞಾನ ವಿಕಸನಕ್ಕೆ ಇದನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಬಹುದು? ಹೇಗೆ ಮತ್ತು ಯಾವ ರೀತಿಯಲ್ಲಿ ಇದನ್ನು ಬಳಸಲು ಸಾಧ್ಯ? ಮಾರುಕಟ್ಟೆಯಲ್ಲಿ ಇವರ ಪೂರೈಕೆಯಿದೆಯೆ? ಅಂಥ ಮಾಧ್ಯಮ ಸದ್ಯಕ್ಕೆ ಮಾತ್ರವೇ ಗ್ರಂಥಾಲಯದಲ್ಲಿ ಉಪಯುಕ್ತವೇ ಅಥವಾ ಭವಿಷ್ಯದಲ್ಲಿ ಆ ಉಪಕರಣಗಳು ಉಪಯುಕ್ತವಾಗಬಲ್ಲುವೆ? ಈ ಸಾಧನಗಳನ್ನು ಎಚ್ಚರಿಕೆಯಿಂದ ನಿರ್ವಹಿಸಲು ಸರಿಯಾದ ತರಬೇತು ಪಡೆದ ಕೆಲಸಗಾರರಿದ್ದಾರೆಯೆ? ಇಂಥ ನಾನಾ ಸಮಸ್ಯೆಗಳನ್ನು ಮುಂದಾಲೋಚಿಸಿ ಯೋಗ್ಯವಾದುವನ್ನು ತರಿಸಿಕೊಳ್ಳಬೇಕು.

ಪ್ರಕ್ಷೇಪಿ (projector) ಸಾಮಗ್ರಿಗಳಿಲ್ಲದೆಯೇ ಕೆಲಸಮಾಡಬಲ್ಲ ಸಾಧನಗಳೆಂದರೆ ರೇಡಿಯೋ ಮತ್ತು ಟೆಲಿವಿಷನ್. ಜನರು ಒಂದೆಡೆ ಕಲೆತು ಆಲಿಸಲು. ವೀಕ್ಷಿಸಲು ಪ್ರತ್ಯೇಕವಾದ ಕೊಠಡಿಯೊಂದಿದ್ದರೆ ಸಾಕು. ಸ್ಪೇನಿನ ಶಾಲೆಗಳಲ್ಲಿ ಈಗಲೂ ಅವುಗಳ ಪಾಠಕ್ರಮದಲ್ಲಿ ರೇಡಿಯೋ ಅಭ್ಯಾಸ ಶಿಕ್ಷಣಕ್ಕೆ ಅವಕಾಶವಿದೆ. ಜಗತ್ತಿನ ನಾನಾ ಆಕಾಶವಾಣಿ ನಿಲಯಗಳು ನಿತ್ಯವೂ ಅನೇಕ ಉಪಯುಕ್ತ ಕಾರ್ಯಕ್ರಮಗಳನ್ನಿರಿಸಿಕೊಂಡಿರುವುದರಿಂದ ಕ್ರಮಬದ್ಧ ರೀತಿಯಲ್ಲಿ ಅವುಗಳ ಉಪಯೋಗವಾಗುವಂತೆ ಕಾರ್ಯಕ್ರಮಗಳನ್ನು ಧ್ವನಿಮುದ್ರಿಕೆಗಳ ಮೂಲಕ ಪಡೆದು ವಿದ್ಯಾರ್ಥಿಗಳಿಗೆ ತರಗತಿಗಳಲ್ಲಿ ನಿಯಮಿತ ವೇಳೆಗಳಲ್ಲಿ ಶಿಕ್ಷಕರ ಮೇಲ್ವಿಚಾರಣೆಯಲ್ಲಿ ಕೇಳಿಸಲಾಗುತ್ತದೆ.[3]

ಗ್ರಾಮೀಣ ಗ್ರಂಥಾಲಯಗಳು ತಮ್ಮ ಸಂಪರ್ಕ ಜಾಲದ ಕೇಂದ್ರ ಕಾರ್ಯಾಲಯದಿಂದ ದೃಕ್-ಶ್ರವಣ ಸಾಧನಗಳನ್ನು ತಾತ್ಕಾಲಿಕವಾಗಿಯೋ ಶಾಶ್ವತವಾಗಿಯೋ ಎರವಲು ಪಡೆದು ಅವುಗಳ ಪ್ರಯೋಜನ ಪಡೆಯಬಹುದು. ಈ ಸಾಧನಗಳನ್ನು ಕೊಳ್ಳುವುದು; ಸೂಚೀಕರಣ, ವರ್ಗೀಕರಣ ಮೊದಲಾದ ತಾಂತ್ರಿಕ ಕೆಲಸಗಳನ್ನು ನಿರ್ವಹಿಸುವುದು; ಅವುಗಳ ಚಾಲನೆಗೆ ಸರಿಯಾದ ತರಬೇತು ಪಡೆದವರನ್ನು ಕಳುಹಿಸುವುದು–ಮೊದಲಾದ ಎಲ್ಲ ಹೊಣೆಯೂ ಕೇಂದ್ರ ಕಾರ್ಯಾಲಯದ್ದಾಗಿರಬೇಕು.

10 ಹಳ್ಳಿಗಳಲ್ಲಿ ಶಿಕ್ಷಣ ಮಟ್ಟ ಕಡಿಮೆಯಿರುತ್ತದೆ. ಅವರ ಅಭಿರುಚಿಗೆ ಒಪ್ಪುವ ಪುಸ್ತಕಗಳನ್ನೇ ತರಿಸಿಕೊಟ್ಟರೂ ಅನೇಕ ವೇಳೆ ಹಳ್ಳಿಗರಿಗೆ ಓದಲು ನಿರಾಸಕ್ತಿಯಿರುತ್ತದೆ. ದಿನವಿಡೀ ದುಡಿದು ಬಳಲಿ ಕಣ್ಣು ಮಬ್ಬಾಗಿರುತ್ತದೆ. ಅದೂ ಅಲ್ಲದೆ ಪುಸ್ತಕದಲ್ಲಿ ಅಡಕವಾಗಿರುವ ವಿಷಯವನ್ನು ಗ್ರಹಿಸುವ ಸಾಮರ್ಥ್ಯ ಹೆಚ್ಚಿನವರಿಗೆ ಇರುವುದಿಲ್ಲ. ತಮ್ಮ ಜೀವನೋಪಾಯದ ದೈನಂದಿನ ಚಟುವಟಿಕೆಗಳಲ್ಲಿ ಎದುರಿಸುವ ಸಮಸ್ಯೆಗಳಿಗೆ ಪರಿಹಾರಗಳನ್ನು ಪುಸ್ತಕಗಳಿಂದ ಓದಿ ತಿಳಿದುಕೊಳ್ಳುವ ಅಭ್ಯಾಸ ಅವರಿಗಿರುವುದಿಲ್ಲ. ಒಂದು ವೇಳೆ ಆಸಕ್ತಿಯಿದ್ದರೂ ಸರಿಯಾದ ಪುಸ್ತಕಗಳು ಸಕಾಲಕ್ಕೆ ದೊರಕುವುದು ಅಪರೂಪ. ಹಳ್ಳಿಗರಿಗಾಗಿ. ಅವರಲ್ಲೂ ಮುಖ್ಯವಾಗಿ ವಯಸ್ಕರಿಗಾಗಿ ಅನೇಕ ಕಾರ್ಯಕ್ರಮಗಳನ್ನು ನಡೆಸುವ ಸಂಸ್ಥೆಗಳು ಹಲವಾರಿವೆ. ಉದಾ: ವಯಸ್ಕರ ಶಿಕ್ಷಣ ಸಮಿತಿ. ಸಮಾಜ ಕಲ್ಯಾಣಾಭಿವೃದ್ಧಿ ಮಂಡಲಿಗಳು ಇತ್ಯಾದಿ. ಇಂಥ ಸಂಸ್ಥೆಗಳು ತಮ್ಮ ಚಟುವಟಿಕೆಗಳನ್ನು ಕಾರ್ಯಗತಗೊಳಿಸಲು ಸಭಾಮಂದಿರ. ಧ್ವನಿವ್ಯವಸ್ಥೆ ಮತ್ತು ಶೀತೋಪಕರಣಗಳ ಅಗತ್ಯ

[3] Hipolito Escolar-Sobrino : *Audio-visual materials and rural libraries*, Unesco Bull. 26, Jan.-Feb. 1972, p. 11

ವಿರುತ್ತದೆ. ಗ್ರಾಮೀಣ ಗ್ರಂಥಾಲಯ ಅಥವಾ ನಗರ ಗ್ರಂಥಾಲಯಗಳಲ್ಲಿ ಈ ಸೌಕರ್ಯಗಳು ಲಭ್ಯವಾಗುವುದಾದರೆ ಆ ಸಂಸ್ಥೆಗಳು ತಮ್ಮ ಕಾರ್ಯಕ್ರಮಗಳನ್ನು ಗ್ರಂಥಾಲಯಗಳಲ್ಲೇ ಏರ್ಪಡಿಸುವುದು ಸೂಕ್ತವೆನಿಸುತ್ತದೆ. ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಮನೋರಂಜನೆಯ ಕಾರ್ಯಕ್ರಮಗಳು ಗ್ರಂಥಾಲಯಗಳಲ್ಲೇ ಒದಗುವುದಾದರೆ ಅವು ಜನರಿಗೆ ಸಂದೇಶಗಳನ್ನು ತಿಳಿಯಪಡಿಸುವ ಮುಖ್ಯ ಮಾಧ್ಯಮಗಳೆಂಬುದನ್ನು ಅನ್ವರ್ಥಗೊಳಿಸಿದಂತಾಗುತ್ತದೆ. ಗ್ರಾಮೀಣ ಗ್ರಂಥಾಲಯ ಸಮುದಾಯದ ಕೇಂದ್ರ ಕಾರ್ಯಾಲಯ ಮೇಲೆ ಹೇಳಿದ ಸಂಸ್ಥೆಗಳೊಂದಿಗೆ ಸಂಪರ್ಕ ಇರಿಸಿಕೊಂಡು ಯೋಗ್ಯ ಕಾರ್ಯಕ್ರಮಗಳನ್ನು ಹಳ್ಳಿಗರಿಗಾಗಿ ಗ್ರಂಥಾಲಯಗಳಲ್ಲಿ ನಡೆಸಬೇಕು. ಅದಕ್ಕಾಗಿ ಸಾಕಷ್ಟು ಆರ್ಥಿಕ ನೆರವನ್ನು ನೀಡಬೇಕು. ಮತ್ತು ಅಂಥ ಕಾರ್ಯಕ್ರಮಗಳನ್ನು ಏರ್ಪಡಿಸಲು ಗ್ರಾಮಗ್ರಂಥಾಲಯಗಳಿಗೆ ಮಾರ್ಗದರ್ಶನ ನೀಡಬೇಕಲ್ಲದೆ ದೃಕ್–ಶ್ರವಣ ಸಾಧನಗಳನ್ನಳವಡಿಸಿರುವ ಸಂಚಾರಿ ವಾಹನವನ್ನು ಊರಿನಿಂದ ಊರಿಗೆ. ಶಾಲೆಗಳಿಗೆ ಕಳುಹಿಸಿ ಪ್ರದರ್ಶಿಸುತ್ತಿರಬೇಕು.

ಸ್ಪೇನಿನಲ್ಲಿ ಅನೇಕ ಗ್ರಾಮ ಗ್ರಂಥಾಲಯಗಳು ತಮ್ಮ ಓದುಗರಿಗೆ ಪುಸ್ತಕಗಳನ್ನು ಒದಗಿಸುವುದು ಮಾತ್ರವಲ್ಲದೆ ವಿಶೇಷ ಉಪನ್ಯಾಸಗಳಿಗೆ. ಚಲನಚಿತ್ರ ಪ್ರದರ್ಶನಗಳಿಗೆ. ಪ್ರತ್ಯೇಕ ಸಭಾಭವನಗಳನ್ನೂ ಧ್ವನಿಯಂತ್ರಗಳು. ಪ್ರಕ್ಷೇಪಿಗಳು. ಪರದೆ. ಕಪ್ಪುಹಲಗೆ ಪ್ರೇಕ್ಷಕರಿಗೆ ಪೀಠೋಪಕರಣಗಳು ಮತ್ತು ದೃಕ್–ಶ್ರವಣ ಸಾಧನಗಳನ್ನೂ ಹೊಂದಿವೆ.[4]

ದೃಕ್–ಶ್ರವಣ ಸಾಧನಗಳನ್ನು ಬಹುವಾಗಿ ಬಳಸಿಕೊಳ್ಳುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಮೇಲೆ ಹೇಳಿದ ಚಟುವಟಿಕೆಗಳನ್ನು ದೊಡ್ಡ ಪ್ರಮಾಣದಲ್ಲಿ ಏರ್ಪಡಿಸಲು ಸಾಧ್ಯವಾಗುತ್ತದೆ. ಇವುಗಳ ಮೂಲಕ ಜನತೆಗೆ ಸಾದರ ಪಡಿಸಿದ ಸಂದೇಶಗಳು ಪುಸ್ತಕ ಮಾಧ್ಯಮಕ್ಕಿಂತಲೂ ತ್ವರಿತವಾಗಿ ಮತ್ತು ಸುಲಭವಾಗಿ ಮನದಟ್ಟಾಗುತ್ತವೆ. ಗ್ರಾಮೀಣ ಗ್ರಂಥಾಲಯಗಳು ಜನತೆಯ ಅಗತ್ಯಗಳನ್ನು ಕಂಡುಕೊಂಡು ಅವನ್ನು ಪೂರೈಸಲು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳುತ್ತವೆ. ಗ್ರಂಥಾಲಯಗಳು ಸಾಂಸ್ಕೃತಿಕ ಕೇಂದ್ರಗಳಾಗಿ ಮಾರ್ಪಟ್ಟು ನಗರವಾಸಿಗಳಿಗೂ ಗ್ರಾಮವಾಸಿಗಳಿಗೂ ಇರುವ ಸಾಂಸ್ಕೃತಿಕ ಅಂತರವನ್ನು ಕಡಿಮೆ ಮಾಡುವಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಬಲ್ಲುವು.

## ಭಾರತದಲ್ಲಿ ಗ್ರಾಮ ಗ್ರಂಥಾಲಯಗಳು

ನಮ್ಮ ದೇಶದಲ್ಲಿ ಸಾರ್ವಜನಿಕ ಗ್ರಂಥಾಲಯಗಳನ್ನು ಪ್ರಾರಂಭಿಸುವ ಕಾರ್ಯ ಮುಖ್ಯವಾಗಿ ನಗರ ಹಾಗೂ ಹಳ್ಳಿಗಳ ಸ್ಥಳೀಯ ಪ್ರಾಧಿಕಾರ ವರ್ಗಗಳ ಹೊಣೆಯಾಗಿತ್ತು. ಸ್ಥಳೀಯ ಸರ್ಕಾರಗಳ ಅಧಿನಿಯಮಗಳು ಈ ಜವಾಬ್ದಾರಿಯನ್ನು ಅವುಗಳ ಮೇಲೆ ಕಡ್ಡಾಯವಾಗಿ ಹೇರದಿದ್ದುದರಿಂದ ಪುರಸಭಾ ಕ್ಷೇತ್ರಗಳಲ್ಲಿ ಸಾರ್ವಜನಿಕ ಗ್ರಂಥಾಲಯ ಸೌಲಭ್ಯಗಳು ಹೆಚ್ಚಿನಂಶ ಇದ್ದಿರಲಿಲ್ಲವೆನ್ನಬೇಕು. ಜಿಲ್ಲಾ ಮಂಡಳಿಗಳು ಕೂಡ ಆರ್ಥಿಕವಾಗಿ ದುರ್ಬಲವಾದ್ದರಿಂದ ಹಳ್ಳಿಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸುವ ಗೋಜಿಗೆ ಹೋಗುತ್ತಿರಲಿಲ್ಲ.

ಸುಮಾರು 19ನೆಯ ಶತಮಾನದ ಮಧ್ಯಭಾಗದಲ್ಲಿ ಬ್ರಿಟಿಷ್ ಸರ್ಕಾರ ಪ್ರಾಂತೀಯ ಮುಖ್ಯ ನಗರಗಳಾದ ಬೊಂಬಾಯಿ. ಕಲ್ಕತ್ತ ಮತ್ತು ಮದ್ರಾಸುಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳನ್ನು ತೆರೆಯಿತು. ಆ ಶತಮಾನದ ಕೊನೆಗೆ ಕೆಲವು ಪ್ರಾಂತ್ಯ ಸರ್ಕಾರಗಳ ರಾಜಧಾನಿಗಳಲ್ಲೂ ಜಿಲ್ಲೆಗಳಲ್ಲೂ ನಗರಗಳಲ್ಲೂ ದೇಶೀಯ ಸಂಸ್ಥಾನಗಳ ಪ್ರಧಾನ ನಗರಗಳಲ್ಲೂ ಸಾರ್ವಜನಿಕ ಗ್ರಂಥಾಲಯಗಳು ಪ್ರಾರಂಭಿಸಲ್ಪಟ್ಟುವು. ಇದೇ ವೇಳೆಗೆ ಕೆಲವು ಖಾಸಗಿ ಸಂಸ್ಥೆಗಳು ನಗರಗಳಲ್ಲೂ ದೊಡ್ಡ ದೊಡ್ಡ ಪಟ್ಟಣಗಳಲ್ಲೂ ಗ್ರಂಥಾಲಯಗಳನ್ನು ಪ್ರಾರಂಭಿಸಿದುವು. ಇವುಗಳಲ್ಲಿ ಮುಖ್ಯವಾಗಿ ಲಾಹೋರಿನ

---

[4] Ibid, p. 11

ದಯಾಲ್‌ಸಿಂಗ್ ಸಾರ್ವಜನಿಕ ಗ್ರಂಥಾಲಯ, ದ್ವಾರಕಾ ದಾಸ್ ಗ್ರಂಥಾಲಯ, ಸರ್ ಗಂಗಾರಾಮ್ ಗ್ರಂಥಾಲಯಗಳು ಮುಖ್ಯವಾಗಿವೆ.[4]

ಈ ಗ್ರಂಥಾಲಯಗಳಿಗೆ ಪ್ರವೇಶ ದೊರಕಿಸಿಕೊಳ್ಳಲು ಜನರು ಚಂದಾಹಣವನ್ನೂ ಭದ್ರತಾ ಠೇವಣಿಯನ್ನೂ ನೀಡಬೇಕಾಗಿತ್ತು. ಗ್ರಾಮೀಣ ಗ್ರಂಥಾಲಯಗಳು ಪ್ರಾಯಶಃ ಎಲ್ಲೂ ಪ್ರಚುರವಾಗಿರಲಿಲ್ಲ.

1910ರಲ್ಲಿ ಬರೋಡದ ಮಹಾರಾಜ ಮೂರನೆಯ ಸಯಾಜಿರಾವ್‌ಗಾಯಕ್‌ವಾಡ್ ಗ್ರಂಥಾಲಯಗಳ ಮಹತ್ವವನ್ನರಿತು ತಮ್ಮ ಸಂಸ್ಥಾನದಲ್ಲಿ ಸುಸಂಘಟಿತ ಗ್ರಂಥಾಲಯ ವ್ಯವಸ್ಥೆಯನ್ನು ಏರ್ಪಡಿಸಿದರು. ಈ ವ್ಯವಸ್ಥೆಗೊಳಪಟ್ಟು ಸಂಸ್ಥಾನದ ಕೇಂದ್ರ ಗ್ರಂಥಾಲಯದಿಂದ ಹಿಡಿದು ತಾಲ್ಲೂಕು ಮತ್ತು ಗ್ರಾಮಗಳ ವರೆಗೂ ಮಾತ್ರವಲ್ಲದೆ, ದೂರದ ಪ್ರದೇಶಗಳಿಗೂ ಗ್ರಂಥಾಲಯ ಸೌಲಭ್ಯವನ್ನು ನೀಡುವ ಸಲುವಾಗಿ ಸಂಚಾರಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಯಿತು. ಈ ಮಹಾರಾಜರು ಬದುಕಿರುವವರೆಗೆ ಎಂದರೆ ಮುಂದಿನ ಮೂವತ್ತು ವರ್ಷಗಳ ಕಾಲ ಅಲ್ಲಿ ಗ್ರಂಥಾಲಯ ವ್ಯವಸ್ಥೆ ಸುಗಮವಾಗಿ ನಡೆದು ಬಂದಿತು. ಅನಂತರ ಕ್ರಮೇಣ ಗ್ರಂಥಾಲಯಗಳು ಮರೆಯಾದುವು. ಗ್ರಂಥಾಲಯ ವ್ಯವಸ್ಥೆಯಲ್ಲಿ ವಿಶ್ವಾಸವಿದ್ದ ಅನೇಕ ಉತ್ಸಾಹಿಗಳಿಗೆ ಬರೋಡದ ಮಹಾರಾಜರು ಹಾಕಿಕೊಟ್ಟ ಮಾರ್ಗದಿಂದ ಗ್ರಂಥಾಲಯ ಸೇವೆಯನ್ನು ವ್ಯಾಪಕವಾಗಿ ಸಂಘಟಿಸುವ ಕ್ರಮವೇದ್ಯವಾಯಿತು.

1937ರಲ್ಲಿ ವಿವಿಧ ಪ್ರಾಂತ್ಯಗಳಲ್ಲಿ ಪ್ರಾತಿನಿಧಿಕ ಸರ್ಕಾರಗಳು ಅಸ್ತಿತ್ವಕ್ಕೆ ಬಂದುವು. ರಾಷ್ಟ್ರೀಯ ಭಾವನೆಯಿಂದ ಉತ್ಸುಕವಾಗಿದ್ದ ಈ ಸರಕಾರಗಳು ವಯಸ್ಕರ ಶಿಕ್ಷಣಕ್ಕೆ ಆದ್ಯ ಗಮನ ನೀಡಿದುವು. ಈ ಭಾವನೆ ದೇಶಾದ್ಯಂತ ಚಳುವಳಿಯ ರೂಪದಲ್ಲಿ ಹಬ್ಬಿಕೊಂಡಿತು. ಈ ಕಾರ್ಯದಲ್ಲಿ ನೆರವಾಗಲು ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮೀಣ ಗ್ರಂಥಾಲಯಗಳನ್ನು ತೆರೆಯಬೇಕಾಯಿತು. 1942ರ ಸುಮಾರಿಗೆ ಭಾರತಾದ್ಯಂತ 13,000 ಗ್ರಂಥಾಲಯಗಳಿದ್ದುವೆಂದು ಅಂದಾಜು ಮಾಡಲಾಗಿದೆ.

1939–1940ರಲ್ಲಿ ಗ್ರಂಥಾಲಯ ಅಭಿವೃದ್ಧಿ ಸಮಿತಿಯ ಶಿಫಾರಸುಗಳ ಪ್ರಕಾರ ಮುಂಬಯಿಯ ಪ್ರಾಂತ್ಯ ಸರ್ಕಾರ ಆರು ಹಂತಗಳಲ್ಲಿ ಗ್ರಂಥಾಲಯಗಳನ್ನು ತೆರೆಯಲು ಯೋಚಿಸಿತು.

1 ಕೇಂದ್ರ ಗ್ರಂಥಾಲಯ ಹಾಗೂ ಮೂರು ಪ್ರಾದೇಶಿಕ ಗ್ರಂಥಾಲಯಗಳು,

2 ಪ್ರಾಂತ್ಯದ ಅಧೀನಕ್ಕೊಳಪಟ್ಟಿದ್ದ 15 ಜಿಲ್ಲೆಗಳಿಗೂ ಒಂದೊಂದು ಜಿಲ್ಲಾ ಗ್ರಂಥಾಲಯ,

3 167 ತಾಲ್ಲೂಕುಗಳಲ್ಲಿ ಗ್ರಂಥಾಲಯಗಳು ಮತ್ತು ನಗರಗಳಲ್ಲಿ ಜನ ಸಾಂದ್ರತೆಯನ್ನನುಸರಿಸಿ ನೂರು ನಗರ ಗ್ರಂಥಾಲಯಗಳು,

4 ಎರಡು ಸಾವಿರಕ್ಕೂ ಮೇಲ್ಪಟ್ಟ ಜನಸಂಖ್ಯೆಯ ಗ್ರಾಮಗಳಲ್ಲಿ ಸುಮಾರು 979 ಗ್ರಾಮೀಣ ಗ್ರಂಥಾಲಯಗಳು,

5 ಎರಡು ಸಾವಿರಕ್ಕಿಂತ ಕಡಿಮೆ ಮತ್ತು ಒಂದು ಸಾವಿರಕ್ಕಿಂತ ಮೇಲ್ಪಟ್ಟು ಜನಸಂಖ್ಯೆಯಿರುವ ಸುಮಾರು 2,696 ಹಳ್ಳಿಗಳಿಗೆ ಗ್ರಂಥಾಲಯ ಸೌಲಭ್ಯ,

6 ಒಂದು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯಿದ್ದ ಸುಮಾರು 17,753 ಹಳ್ಳಿಗಳಿಗೆ ಗ್ರಂಥಾಲಯ ಸೌಲಭ್ಯ ವಿಸ್ತರಣೆ, ಇವೇ ಆ ಸಮಿತಿಯ ಶಿಫಾರಸುಗಳು.[5] ಆದರೆ ಮೇಲಿನ ಮೊದಲ ಎರಡು ಹಂತಗಳಲ್ಲಿ ಮಾತ್ರ ಪ್ರಾಂತೀಯ ಸರಕಾರ ಗ್ರಂಥಾಲಯಗಳನ್ನು ಸ್ಥಾಪಿಸಿತು.

---

[4] Mehta, J. C., *Rural libraries in India*, Unesco Bull. 26, Jan.-Feb. 1972, p. 25

[5] Ibid., p. 26

ಹೀಗೆ ಸ್ವಾತಂತ್ರ್ಯಪೂರ್ವದಿನಗಳಲ್ಲಿ ಗ್ರಾಮೀಣ ಗ್ರಂಥಾಲಯಗಳ ಬೆಳವಣಿಗೆಗೆ ಯಾವ ಸಂಘಟಿತ ಪ್ರಯತ್ನಗಳೂ ನಡೆಯಲಿಲ್ಲವೆನ್ನಬಹುದು. ವಯಸ್ಕರ ಶಿಕ್ಷಣ ಇಲಾಖೆ. ಗ್ರಾಮಾಭಿವೃದ್ಧಿ ಮಂಡಲಿ. ಜನತಾ ಸಂಪರ್ಕ ವಿಭಾಗ. ಸಹಕಾರಿ ಸಂಘಗಳು. ಮೊದಲಾದ ಕೆಲವು ಸರಕಾರೀ ಇಲಾಖೆಗಳಿಗೆ ಸೇರಿ ಅಲ್ಲಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಗ್ರಾಮ ಗ್ರಂಥಾಲಯಗಳು ತೆರೆಯಲ್ಪಟ್ಟಿದ್ದುವು. ಕ್ರಮೇಣ ಈ ಪ್ರಯತ್ನಗಳು ಮರೆಯಾದುವು.

## ಗ್ರಂಥಾಲಯ ಅಧಿನಿಯಮ

ಭಾರತದಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆಯ ಇತಿಹಾಸದಲ್ಲಿ ಮದ್ರಾಸ್ ಸರಕಾರ 1948ರಲ್ಲಿ ಜಾರಿಗೆ ತಂದ ಸಾರ್ವಜನಿಕ ಗ್ರಂಥಾಲಯ ಅಧಿನಿಯಮ ಒಂದು ದಿಟ್ಟ ಹೆಜ್ಜೆಯೆನ್ನಬೇಕು. ರಾಜ್ಯಮಟ್ಟ ಹಾಗೂ ಜಿಲ್ಲಾ ತಾಲ್ಲೂಕು ಗ್ರಾಮೀಣ ಮಟ್ಟಗಳಲ್ಲಿ ಸುಸಂಘಟಿತ ವ್ಯವಸ್ಥೆಗೊಳಪಟ್ಟ ಗ್ರಂಥಾಲಯಗಳನ್ನು ಸ್ಥಾಪಿಸಲು ಈ ಕಾಯಿದೆ ಅವಕಾಶವಿತ್ತಿತು. ಸ್ವತ್ತು ತೆರಿಗೆಯ ಮೇಲೆ ಪ್ರತ್ಯೇಕವಾದ ಕರವೊಂದನ್ನು ಹೇರಿ ತನ್ಮೂಲಕ ಸಾಕಷ್ಟು ಧನಸಂಗ್ರಹಣೆಗೂ ಕಾಯಿದೆ ಅವಕಾಶವಿತ್ತಿತು. ಮದ್ರಾಸಿನ ಅಧಿನಿಯಮದ ಮಾದರಿಯಲ್ಲಿ ಆಂಧ್ರಪ್ರದೇಶ (1955). ಕರ್ನಾಟಕ (1965). ಮಹಾರಾಷ್ಟ್ರ (1967) ಸರ್ಕಾರಗಳು ಸಾರ್ವಜನಿಕ ಗ್ರಂಥಾಲಯ ಅಧಿನಿಯಮವನ್ನು ತಂದಿವೆ. ಕೇರಳ ಸರ್ಕಾರವೂ ಈಗಾಗಲೇ ಸಾರ್ವಜನಿಕ ಗ್ರಂಥಾಲಯ ವಿಧೇಯಕವನ್ನು ತಯಾರಿಸಿದ್ದು ಸದ್ಯದಲ್ಲೇ ಕಾಯಿದೆ ಜಾರಿಯಾಗುವ ಹಂತದಲ್ಲಿದೆ.

## ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗ್ರಾಮೀಣ ಗ್ರಂಥಾಲಯಗಳು

ಸಂಸದೀಯ ಪ್ರಜಾಸತ್ತೆ ಭಾರತದಲ್ಲಿ ಭದ್ರವಾಗಿ ತಳವೂರಿದೆ. ಕೋಟಿಗಟ್ಟಲೆ ಅನಕ್ಷರಸ್ಥ ಮತದಾರರ ಬೆಂಬಲ ಇದಕ್ಕಿದೆ. ದೇಶದ ಆರ್ಥಿಕ. ರಾಜಕೀಯ ಹಾಗೂ ಸಾಮಾಜಿಕ ನೀತಿಗಳ ನೈಜ ಅರಿವು ಈ ಜನತೆಗಿದೆಯೆ ಎನ್ನುವುದು ಸಂಶಯಾಸ್ಪದ. ಒಟ್ಟು ಜನಸಂಖ್ಯೆಯಲ್ಲಿ ಶೇಕಡ 5 ಮಂದಿ ಮಾತ್ರ ವಿದ್ಯಾವಂತರಾಗಿದ್ದು ದೇಶದ ಸಾರ್ವಜನಿಕ ರಂಗದಲ್ಲಿ ಪ್ರಭಾವಶಾಲಿಗಳಾಗಿ ಮೆರೆದಾಡುತ್ತಿದ್ದಾರೆ. ಸಂಪೂರ್ಣ ಸಾಕ್ಷರತೆಯ ಸಾಧನೆಯ ಗುರಿ ಮಣ್ಣು ಪಾಲಾಗುತ್ತಿದೆ. ಜನತೆಯಲ್ಲಿ ಸಾಮಾಜಿಕ ಪ್ರಜ್ಞೆ ಜಾಗೃತವಾಗಿ ಅವರು ವಿದ್ಯಾವಂತರಾಗಬೇಕೆಂಬ ಉದ್ದೇಶವಿರಿಸಿಕೊಂಡು ನಮ್ಮ ಸರ್ಕಾರ ನಾನಾ ಯೋಜನೆಗಳನ್ನು ರೂಪಿಸಿಕೊಂಡರೂ ಬಡತನ. ಆಹಾರ ಸಮಸ್ಯೆ. ಯಂತ್ರ ಸಾಧನಗಳ ಅಭಾವ. ರಕ್ಷಣೆ. ನೀರಾವರಿ ಮೊದಲಾದ ಬೃಹತ್ ಸಮಸ್ಯೆಗಳು ದೇಶವನ್ನು ಕಾಡುತ್ತಿರುವುದರಿಂದ ನಮ್ಮ ದೇಶದ ಸಂಪತ್ತಿನ ಸಿಂಹಪಾಲು ಅನೇಕ ಶಿಕ್ಷಣೇತರ ಸಮಸ್ಯೆಗಳಿಗಾಗಿ ವ್ಯಯವಾಗುತ್ತಿದೆ. ಪರಿಣಾಮವಾಗಿ ಸ್ವಯಂ ಶಿಕ್ಷಣದ ಪ್ರಧಾನ ಮಾಧ್ಯಮಗಳಲ್ಲಿ ಒಂದಾದ ಸಾರ್ವಜನಿಕ ಗ್ರಂಥಾಲಯಗಳಿಗೆ ಹೆಚ್ಚಿನ ಆದ್ಯತೆ ದೊರಕದೆ ಅವು ಕ್ಷೀಣಿಸುತ್ತಿವೆ. ಸ್ವಾತಂತ್ರ್ಯ ಗಳಿಸಿ ಇಪ್ಪತ್ತೈದು ವರ್ಷಗಳಿಗೂ ಹೆಚ್ಚು ಕಾಲ ಸಂದರೂ ಶೇಕಡ 70 ಮಂದಿ ಇನ್ನೂ ಅನಕ್ಷರಸ್ಥರಾಗಿಯೇ ಉಳಿದಿದ್ದಾರೆ. ಮಾತ್ರವಲ್ಲದೆ ಸುಶಿಕ್ಷಿತ ವರ್ಗದಲ್ಲಿ ಶೇಕಡ 3 ಮಂದಿ ಮಾತ್ರ ಸಾರ್ವಜನಿಕ ಗ್ರಂಥಾಲಯಗಳ ಉಪಯೋಗ ಪಡೆಯುತ್ತಿದ್ದಾರೆಂಬುದು ದುರದೃಷ್ಟಕರ ವಿಷಯ.[6] ವಿದ್ಯಾವಂತ ಜನರಲ್ಲಿ ಕೆಲವರು ಗ್ರಾಮಗಳಲ್ಲಿ ವಾಸ

---

6 ಸ್ವಾತಂತ್ರ್ಯಾನಂತರ ನಮ್ಮ ದೇಶದಲ್ಲಿ ಅಕ್ಷರಸ್ಥರ ಸಂಖ್ಯೆ ಶೇಕಡ 15ರಿಂದ 30ಕ್ಕೆ ಏರಿದರೂ ನಿಜವಾದ ಸಂಖ್ಯೆಯಲ್ಲಿ ತಿಳಿಸಬೇಕೆಂದರೆ ಒಟ್ಟು ಅನಕ್ಷರಸ್ಥರ ಸಂಖ್ಯೆ ಕಡಿಮೆಯಾಗುವುದರ ಬದಲು ಹೆಚ್ಚಾಗಿದೆ. ಇದೊಂದು ವೈಪರೀತ್ಯ ಎನ್ನಬೇಕು. ಕಾರಣವಿಷ್ಟೆ: ಹೊಸದಾಗಿ ಓದುಬರಹ ಕಲಿತವರು ಸಾಕಷ್ಟು ಓದುವ ಸಾಮಗ್ರಿಗಳಿಲ್ಲದೆಯೊ ಗ್ರಂಥ ಭಂಡಾರಗಳಿಲ್ಲದೆಯೊ ಮತ್ತೆ ಅನಕ್ಷರಸ್ಥರಾಗುತ್ತಿದ್ದಾರೆ.

ಮಾಡಲು ಮುಂದೆ ಬಂದರೂ ತಮ್ಮ ಉದ್ಯೋಗ ಪ್ರಧಾನವಾದ ವಿಷಯಗಳಲ್ಲಿ ಅಭಿರುಚಿ ಬೆಳೆಸಿ ಕೊಳ್ಳಲು ತಕ್ಕ ಗ್ರಂಥಾಲಯಗಳು ಇರುವುದಿಲ್ಲ.

## ಪಂಚವಾರ್ಷಿಕ ಯೋಜನೆಗಳು

### ಪ್ರಥಮ ಪಂಚವಾರ್ಷಿಕ ಯೋಜನೆ

ಪ್ರಥಮ ಪಂಚವಾರ್ಷಿಕ ಯೋಜನಾವಧಿಯಲ್ಲಿ (1951–56) ಗ್ರಂಥಾಲಯ ಸೌಲಭ್ಯಗಳ ಸುಧಾರಣೆಗಾಗಿ ಪ್ರತ್ಯೇಕ ಕಾರ್ಯಕ್ರಮವನ್ನು ಭಾರತ ಸರ್ಕಾರ ತಯಾರಿಸಿತು. ಈ ಅಂದಾಜಿನ ಪ್ರಕಾರ ಸುಸಂಘಟಿತವಾದ ಗ್ರಂಥಾಲಯ ಸೇವೆಯನ್ನು ರಾಜ್ಯ ಕೇಂದ್ರ ಗ್ರಂಥಾಲಯದ ಸಹಕಾರದೊಂದಿಗೆ ಪ್ರತಿರಾಜ್ಯದಲ್ಲೂ ಜಿಲ್ಲಾವಾರು ಗ್ರಂಥಾಲಯಗಳನ್ನು ಪ್ರಾರಂಭಿಸಿ ತನ್ಮೂಲಕ ಗ್ರಾಮಾಂತರ ಪ್ರದೇಶ ಗಳಿಗೂ ಪುಸ್ತಕ ವಿತರಣೆ ಮಾಡುವ ಕಾರ್ಯಕ್ರಮವನ್ನು ಇರಿಸಿಕೊಂಡಿತು.

1952ರಲ್ಲಿ ಭಾರತ ಸರ್ಕಾರ ಸಮಾಜಾಭಿವೃದ್ಧಿ ಕಾರ್ಯಕ್ರಮವೊಂದನ್ನು ರೂಪಿಸಿ ತನ್ಮೂಲಕ ಗ್ರಾಮವಾಸಿಗಳ ಅಭ್ಯುದಯ, ಸಾಮಾಜಿಕ ಪರಿವರ್ತನೆಗಳನ್ನು ಗ್ರಾಮೀಣ ಗ್ರಂಥಾಲಯಗಳನ್ನು ಪ್ರಾರಂಭಿಸುವುದರೊಂದಿಗೆ ಸಾಧಿಸಲು ಯೋಜಿಸಿತು. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಮೊದಲು ಕೆಲವು ಆರಿಸಿದ ಪ್ರದೇಶಗಳಲ್ಲಿ ಐದು ಮಾದರಿಯ ಸಾಮೂಹಿಕ ಅಭಿವೃದ್ಧಿ ಕೇಂದ್ರ ಗಳನ್ನು ಸ್ಥಾಪಿಸಿತು. ಪ್ರತಿ ಪ್ರದೇಶದಲ್ಲೂ ಒಂದು ಪ್ರಧಾನ ಗ್ರಂಥಾಲಯವನ್ನು ಸ್ಥಾಪಿಸಿ 'ಮಾದರಿ ಸಾಮೂಹಿಕ ಅಭಿವೃದ್ಧಿ ಕೇಂದ್ರ'ದಲ್ಲಿ ಗ್ರಂಥಾಲಯದ ಶಾಖೆಗಳನ್ನು ತೆರೆದು ಅಲ್ಲಿಂದ ಇಪ್ಪತ್ತು ಹಳ್ಳಿಗಳಿಗೆ ಪುಸ್ತಕಗಳನ್ನು ವಿತರಣೆ ಮಾಡುವಂತೆ ಕಲ್ಪಿಸಲಾಯಿತು. ಈ ಉದ್ದೇಶಕ್ಕಾಗಿಯೇ ಪುಸ್ತಕ ಜೋಪಾನ ಕೇಂದ್ರಗಳನ್ನೂ ವಾಹನಗಳ ಮೂಲಕ ಗ್ರಂಥವಿತರಣೆ ಮಾಡುವ ಸಂಚಾರಿ ವಾಹನಗಳನ್ನೂ ಒದಗಿಸಲಾಯಿತು.[7] ಪ್ರಥಮ ಪಂಚವಾರ್ಷಿಕ ಯೋಜನಾವಧಿಯಲ್ಲಿ ದೇಶದ 29 ಕಡೆಗಳಲ್ಲಿ ಕೇಂದ್ರ ಗಳನ್ನು ಸ್ಥಾಪಿಸಲಾಯಿತು.

### ದ್ವಿತೀಯ ಪಂಚವಾರ್ಷಿಕ ಯೋಜನೆ

ದ್ವಿತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ (1956–61) ದೇಶದಾದ್ಯಂತ ರಾಜ್ಯ ಕೇಂದ್ರ ಗ್ರಂಥಾಲಯಗಳು ಹಾಗೂ ಜಿಲ್ಲಾ ಗ್ರಂಥಾಲಯಗಳ ಸಮುದಾಯ ಜಾಲವನ್ನು ನಿರ್ಮಿಸಲಾಯಿತು. ಪ್ರತ್ಯೇಕವಾದ ಗ್ರಂಥ ಭಂಡಾರ ಕಾಯಿದೆಯ ಮೂಲಕ ಜಿಲ್ಲಾ ಗ್ರಂಥಾಲಯಗಳು ಪ್ರಾದೇಶಿಕ ಹಾಗೂ ರಾಷ್ಟ್ರೀಯ ಕೇಂದ್ರ ಗ್ರಂಥಾಲಯಗಳೊಂದಿಗೆ ಸಂಪರ್ಕವಿರಿಸಿಕೊಳ್ಳುವಂತೆಯೂ ಹಳ್ಳಿಗಳಿಗೂ ಗ್ರಂಥಾಲಯ ಸೌಲಭ್ಯ ವಿಸ್ತರಣೆ ಕೈಗೊಳ್ಳುವಂತೆಯೂ ಯೋಜಿಸಲಾಯಿತು.

### ತೃತೀಯ ಪಂಚವಾರ್ಷಿಕ ಯೋಜನೆ

ಈ ಅವಧಿಯಲ್ಲಿ (1961–66) ದೆಹಲಿ, ಕಲ್ಕತ್ತ, ಮುಂಬಯಿ, ಮದ್ರಾಸುಗಳಲ್ಲಿಯ ರಾಷ್ಟ್ರೀಯ ಗ್ರಂಥಾಲಯಗಳನ್ನು ಮತ್ತಷ್ಟು ಅಭಿವೃದ್ಧಿಗೊಳಿಸಲಾಯಿತು. ಅವುಗಳ ಮೂಲಕ ರಾಜ್ಯ ಗ್ರಂಥಾಲಯ ಗಳನ್ನು ಬಲಪಡಿಸಬೇಕೆಂದೂ ಜಿಲ್ಲೆ ಹಾಗೂ ತಾಲ್ಲೂಕು ಗ್ರಂಥಾಲಯಗಳನ್ನು ತೆರೆಯುವುದೆಂದೂ ನಿಶ್ಚಯಿಸಲಾಯಿತು. ಆದರೆ ಈ ಯೋಜನೆಗಳು ಕಾರ್ಯಗತವಾಗಲು ರಾಜ್ಯಗಳ ಸಹಕಾರ ಅಗತ್ಯ ವಾಗಿದೆ. ಒಂದಲ್ಲ ಒಂದು ಕಾರಣದಿಂದ ಯೋಜಿತ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಈ ಅವಧಿ ಯಲ್ಲಿ ಸಾಧ್ಯವಾಗಲಿಲ್ಲ.

---

[7] Mehta, J.C., op. cit., p. 27

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಂಥಾಲಯಗಳ ಅಭಿವೃದ್ಧಿಗಾಗಿ ಮೀಸಲಾದ ಒಟ್ಟು ಹಣದಲ್ಲಿ ಶೇಕಡ 51.4 ಮಾತ್ರ ವಿನಿಯೋಗವಾಯಿತೆಂಬುದು ಆಶ್ಚರ್ಯವೇ ಸರಿ. ನಮ್ಮ ದೇಶದ ಬಹುತೇಕ ರಾಜ್ಯಗಳಲ್ಲಿ ಗ್ರಂಥಾಲಯ ಅಧಿನಿಯಮ ಇನ್ನೂ ಜಾರಿಗೆ ಬಂದಿಲ್ಲದಿದ್ದುದೇ ಇದಕ್ಕೆ ಮುಖ್ಯ ಕಾರಣ.

ಗ್ರಂಥಾಲಯಗಳ ಸೇವಾ ವಿಧಾನಗಳಲ್ಲಿ ಲೋಪದೋಷಗಳೇನಿವೆ ಎಂಬುದನ್ನು ತಿಳಿದು ವ್ಯಾಪಕವಾಗಿ ದೇಶದ ಗ್ರಂಥಾಲಯಗಳ ಅಭಿವೃದ್ಧಿಗೆ ಮಾರ್ಗಗಳನ್ನು ಶಿಫಾರಸು ಮಾಡಲು ಭಾರತ ಸರ್ಕಾರ 1957ರಲ್ಲೇ ಸಲಹಾ ಆಯೋಗವೊಂದನ್ನು ರಚಿಸಿತ್ತು. ಈ ಆಯೋಗ 1959ರಲ್ಲಿ ವರದಿ ಸಲ್ಲಿಸಿತು. ರಾಷ್ಟ್ರಾದ್ಯಂತ ಉಚಿತ ಗ್ರಂಥಾಲಯಗಳು ಅಧಿನಿಯಮದ ಮೂಲಕ ಸ್ಥಾಪಿಸಲ್ಪಡಬೇಕಲ್ಲದೆ ಸರ್ಕಾರವೇ ಅವುಗಳ ನಿರ್ವಹಣಾ ವೆಚ್ಚವನ್ನು ಭರಿಸಬೇಕೆಂಬುದು ಇದರ ಶಿಫಾರಸು. ದೇಶಾದ್ಯಂತ ಒಂದು ಲಕ್ಷ ಗ್ರಾಮೀಣ ಗ್ರಂಥಾಲಯಗಳನ್ನೂ, ಸಾಕಷ್ಟು ಸಂಖ್ಯೆಯಲ್ಲಿ ತಾಲ್ಲೂಕು ಹಾಗೂ ಜಿಲ್ಲಾ ಗ್ರಂಥಾಲಯಗಳನ್ನೂ, ಸಂಚಾರಿ ಗ್ರಂಥಾಲಯಗಳನ್ನೂ ಸ್ಥಾಪಿಸಬೇಕೆಂಬುದೂ ಅದರ ಸಲಹೆ. ತೃತೀಯ ಯೋಜನೆಯಲ್ಲಿ ಕಾರ್ಯಗತವಾಗಬೇಕಿದ್ದ ಈ ಶಿಫಾರಸುಗಳನ್ನು 1962ರ ಚೀನಾ–ಭಾರತ ಸಮರದಿಂದಾಗಿ ಕೈಬಿಡಬೇಕಾಗಿ ಬಂತು.

1964ರಲ್ಲಿ ಭಾರತ ಸರ್ಕಾರ ಯೋಜನಾ ಆಯೋಗದ ಕೈಕೆಳಗೆ ಕಾರ್ಯತಂಡವೊಂದನ್ನು ನೇಮಿಸಿತು. ಇದರ ಉದ್ದೇಶ ಮುಖ್ಯವಾಗಿ ಪಟ್ಟಣಿಗರಿಗೂ ಗ್ರಾಮಸ್ಥರಿಗೂ ವ್ಯವಸ್ಥಿತ ಗ್ರಂಥಾಲಯ ಸೌಕರ್ಯಗಳನ್ನು ಕಲ್ಪಿಸುವುದು. 2.000–5.000 ಜನಸಂಖ್ಯೆಯುಳ್ಳ ಸುಮಾರು 25.000 ಹಳ್ಳಿಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳನ್ನು 5ನೆಯ ಪಂಚವಾರ್ಷಿಕ ಯೋಜನೆ ಪೂರ್ತಿಗೊಳ್ಳುವಷ್ಟರಲ್ಲಿ ಪ್ರಾರಂಭಿಸಬೇಕೆಂದು ಈ ಸಮಿತಿ ಸಲಹೆ ಮಾಡಿತು. ಇವುಗಳಿಗೆ ಪೂರಕವಾಗಿ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿಯ ಗ್ರಂಥಾಲಯಗಳನ್ನು ಅಭಿವೃದ್ಧಿಗೊಳಿಸಬೇಕೆಂದೂ ಸೂಚಿಸಿತು.[8]

1965ರ ಜನವರಿ 1ರ ವೇಳೆಗೆ ಭಾರತದ 5.66.878 ಹಳ್ಳಿಗಳ ಪೈಕಿ ಕೇವಲ 28.317 ಗ್ರಾಮಗಳಿಗೆ ಮಾತ್ರ ಗ್ರಂಥಾಲಯಗಳನ್ನು ಒದಗಿಸಲಾಗಿತ್ತು. ಅಂದರೆ ದೇಶದ ಒಟ್ಟು ಹಳ್ಳಿಗಳ ಪೈಕಿ ಕೇವಲ ಶೇಕಡ 5 ಹಳ್ಳಿಗಳಲ್ಲಿ ಗ್ರಂಥಾಲಯ ಸೌಲಭ್ಯ ಇತ್ತೆನ್ನಬಹುದು. ಪ್ರತಿ ಜಿಲ್ಲೆಗೆ ಒಳಪಟ್ಟ ಹಾಗೆ ಕೆಲವು ಗ್ರಾಮೀಣ ಪ್ರದೇಶಗಳನ್ನು (ಪ್ರಾಯಶಃ ಜನಸಂಖ್ಯೆಯ ಆಧಾರದ ಮೇಲೆ) ಒಟ್ಟು ಸೇರಿಸಿ ಹಲವು ಬ್ಲಾಕುಗಳನ್ನಾಗಿ ವಿಂಗಡಿಸಿ ಪ್ರತಿಬ್ಲಾಕಿಗೂ ಬ್ಲಾಕ್ ಗ್ರಂಥಾಲಯವನ್ನು ಸ್ಥಾಪಿಸಬೇಕೆಂದು 1957ರಲ್ಲಿ ಕೆ.ಪಿ. ಸಿನ್ಹಾ ಅವರ ನೇತೃತ್ವದಲ್ಲಿ ಶಿಕ್ಷಣ ಸಚಿವಾಲಯ ನೇಮಿಸಿದ ಸಲಹಾ ಸಮಿತಿ ಶಿಫಾರಸು ಮಾಡಿತ್ತು. ಈ ಶಿಫಾರಸಿನನ್ವಯ 1965ರ ಹೊತ್ತಿಗೆ ದೇಶದ ಒಟ್ಟು 5.223 ಬ್ಲಾಕುಗಳ ಪೈಕಿ 1.394 ಬ್ಲಾಕುಗಳಲ್ಲಿ (ಶೇಕಡ 27) ಗ್ರಂಥಾಲಯಗಳು ಪ್ರಾರಂಭವಾಗಿದ್ದವು.

## ನಾಲ್ಕನೆಯ ಪಂಚವಾರ್ಷಿಕ ಯೋಜನೆ

ದೇಶದ ಗ್ರಂಥಾಲಯಗಳ ಸದ್ಯದ ಮತ್ತು ಭವಿಷ್ಯದಲ್ಲಿ ಅವುಗಳ ಸರ್ವತೋಮುಖ ಬೆಳವಣಿಗೆಯ ಅಗತ್ಯಗಳನ್ನು ಮನವರಿಕೆ ಮಾಡಿಕೊಂಡ ಕಾಲಿಯಾರವರ ನೇತೃತ್ವದ ಕಾರ್ಯಾಚರಣ ತಂಡವು ಒಟ್ಟು 30.99 ಕೋಟಿ ರೂಪಾಯಿ ವೆಚ್ಚದ ಸಮಗ್ರ ಗ್ರಂಥಾಲಯ ಅಭಿವೃದ್ಧಿ ಯೋಜನೆಯನ್ನು

---

[8] Kalia, D. R. : *A Survey of Public Library Services in India*, 1965. Delhi : Indian Library Association

ಸರಕಾರದ ಮುಂದಿಟ್ಟಿತು. ಸಮಿತಿಯ ಸಲಹೆಯಂತೆ ಬೇರೆ ಬೇರೆ ವರ್ಗದ ಸಾರ್ವಜನಿಕ ಗ್ರಂಥಾಲಯಗಳಿಗೆ ನಾಲ್ಕನೆಯ ಯೋಜನೆಯಲ್ಲಿ ವ್ಯಯಿಸಬೇಕಾಗಿದ್ದ ಹಣದ ಅಂದಾಜು ಕೆಳಗಿನಂತಿದೆ:9–10

| | | ರೂಪಾಯಿಗಳು |
|---|---|---|
| 1 | ರಾಜ್ಯ ಕೇಂದ್ರ ಗ್ರಂಥಾಲಯಗಳು | 3,10,00,000 |
| 2 | ಜಿಲ್ಲಾ ಗ್ರಂಥಾಲಯಗಳು | 10,00,00,000 |
| 3 | ಬ್ಲಾಕ್ ಗ್ರಂಥಾಲಯಗಳು | 13,75,00,000 |
| 4 | ಶಾಖಾ ಗ್ರಂಥಾಲಯಗಳು ಮತ್ತು ಠೇವಣಿ ಗ್ರಂಥಾಲಯಗಳು | 1,00,00,000 |
| 5 | ಮಾದರಿ ಸಾರ್ವಜನಿಕ ಗ್ರಂಥಾಲಯಗಳು | 60,00,000 |
| 6 | ಕೇಂದ್ರಾಡಳಿತ ಪ್ರದೇಶಗಳು/ಇತರ ರಾಜ್ಯಗಳು | 1,60,00,000 |
| 7 | ಗ್ರಂಥಾಲಯ ಸಿಬ್ಬಂದಿ ಪ್ರಶಿಕ್ಷಣ | 40,00,000 |
| 8 | ಗ್ರಂಥಾಲಯ ಸಂಘಗಳಿಗೆ ಸಹಾಯಕ ಅನುದಾನ | 10,00,000 |
| 9 | ಕೇಂದ್ರ ಸರಕಾರದ ಶಿಕ್ಷಣ ಸಚಿವಾಲಯ ಮತ್ತು ರಾಜ್ಯಗಳ ಗ್ರಂಥಾಲಯ ಸಂಚಾಲಕಾಲಯಗಳು | 44,00,000 |
| | ಒಟ್ಟು ರೂ. | 30,99,00,000 |

ಗ್ರಾಮಪ್ರದೇಶದಲ್ಲಿ ಗ್ರಂಥಾಲಯ ವಿಸ್ತರಣೆಗೆ ಪೂರಕ ಕೇಂದ್ರಗಳಾಗಿ 2,500 ಹೊಸ ಬ್ಲಾಕ್ ಗ್ರಂಥಾಲಯಗಳನ್ನು (ಅಂದರೆ ಒಟ್ಟು ಬ್ಲಾಕ್‌ಗಳ ಸೇಕಡ 75ರಷ್ಟು) ತೆರೆಯಬೇಕೆಂಬುದು ಕಾರ್ಯತಂಡದ ಪ್ರಮುಖ ಸಲಹೆಗಳಲ್ಲೊಂದು. ಕಾರ್ಯತಂಡದ ಶಿಫಾರಸುಗಳನ್ನೆಲ್ಲ ಅಕ್ಷರಶಃ ಕಾರ್ಯರೂಪಕ್ಕೆ ತಂದಿದ್ದರೆ ನಾಲ್ಕನೆಯ ಯೋಜನೆಯ ಅಂತ್ಯದೊಳಗೇ ನಮ್ಮ ದೇಶದಲ್ಲಿ ಅತ್ಯುತ್ಕೃಷ್ಟವಾದ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ಹುಟ್ಟಿಕೊಂಡು ಅಭಿವೃದ್ಧಿ ಹೊಂದಿದ ದೇಶಗಳಿಗೆ ಭಾರತವೂ ಸಾಟಿಯಾಗಬಹುದಿತ್ತು. ಆದರೆ ನಮ್ಮ ರಾಜ್ಯಗಳು ಈ ಯೋಜನೆಗೆ ಪೂರ್ಣ ಬೆಂಬಲ ನೀಡಲಿಲ್ಲ. ಪಶ್ಚಿಮ ಬಂಗಾಳ, ತಮಿಳುನಾಡು, ಆಂಧ್ರ ಈ ಮೂರು ರಾಜ್ಯಗಳು ಮಾತ್ರ ಚತುರ್ಥ ಪಂಚವಾರ್ಷಿಕ ಯೋಜನಾವಧಿಯಲ್ಲಿ (1969–74) 2 ಕೋಟಿ ರೂಪಾಯಿಗಳನ್ನು ಸಾರ್ವಜನಿಕ ಗ್ರಂಥಾಲಯಗಳ ಅಭಿವೃದ್ಧಿ ಕಾರ್ಯಗಳಿಗಾಗಿ ತೆಗೆದಿರಿಸಿದವು. ಆರ್ಥಿಕ ಬೆಂಬಲವಿಲ್ಲದೆ ನಾಲ್ಕನೆಯ ಯೋಜನೆಯಲ್ಲಿ ಗ್ರಂಥಾಲಯ ಪೂರ್ವಯೋಜಿತ ಸ್ವರೂಪದಲ್ಲಿ ಬೆಳೆಯಲಿಲ್ಲ. 1966ರಲ್ಲಿ ಪ್ರಾರಂಭಗೊಳ್ಳಬೇಕಾಗಿದ್ದ ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಅನೇಕ ಕಾರಣಗಳಿಂದಾಗಿ 1969–70ರ ತನಕ ಮುಂದೂಡಬೇಕಾಯಿತು. ಈ ಮೂರು ವರ್ಷಗಳ ಅಂತರದಲ್ಲಿ ಮೂರು ಪ್ರತ್ಯೇಕ ವಾರ್ಷಿಕ ಯೋಜನೆಗಳನ್ನು ಸರಕಾರ ಕೈಗೊಂಡಿತು.

ಭಾರತದ ಯೋಜಿತ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ಕೆಳಗೆ ಹೇಳಿರುವಂತೆ ಇದೆ:

ಒಂದು ರಾಷ್ಟ್ರೀಯ ಗ್ರಂಥಾಲಯ, ದೇಶದ ಆರು ಆಡಳಿತ ವಲಯಗಳಲ್ಲಿ ಪ್ರತಿಯೊಂದಕ್ಕೂ ಪ್ರಾದೇಶಿಕ ಕೇಂದ್ರ ಗ್ರಂಥಾಲಯ, ಪ್ರತಿಯೊಂದು ರಾಜ್ಯಕ್ಕೂ ರಾಜ್ಯ ಕೇಂದ್ರ ಗ್ರಂಥಾಲಯ, ಪ್ರತಿ

---

[9] India, Planning Commission, *Draft Report*, 1965

[10] Chakravarthy, N. C. : *Public Library Development*, I L A Bull. 6, 1970, p. 138

ಜಿಲ್ಲೆಯಲ್ಲೂ ಜಿಲ್ಲಾ ಗ್ರಂಥಾಲಯ. ಹೀಗೆ ಬೇರೆ ಬೇರೆ ಹಂತದಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸಿ ಪ್ರತಿಯೊಬ್ಬ ಪ್ರಜೆಯೂ ಆ ಸೌಲಭ್ಯವನ್ನು ಪಡೆಯಬೇಕೆಂಬುದು ಈ ವ್ಯವಸ್ಥೆಯ ಉದ್ದೇಶ. ಜಿಲ್ಲಾ ಗ್ರಂಥಾಲಯ ತನ್ನ ವ್ಯಾಪ್ತಿಯೊಳಗೆ ಬರುವ ಪಟ್ಟಣಗಳಿಗೂ ಹಳ್ಳಿಗಳಿಗೂ ಗ್ರಂಥಾಲಯ ಸೌಲಭ್ಯಗಳನ್ನು ನೀಡಬೇಕು. ನಮ್ಮ ದೇಶದ ರಾಷ್ಟ್ರೀಯ ಗ್ರಂಥಾಲಯ ಕಲ್ಕತ್ತದಲ್ಲಿದೆ. ಆರು ಆಡಳಿತ ವಲಯಗಳ ಪೈಕಿ ಪಶ್ಚಿಮ ವಲಯದ ಮುಂಬಯಿ ಹಾಗೂ ದಕ್ಷಿಣ ವಲಯದ ಮದ್ರಾಸುಗಳಲ್ಲಿ ಪ್ರಾದೇಶಿಕ ಕೇಂದ್ರ ಗ್ರಂಥಾಲಯಗಳಿವೆ. ದೇಶದ 21 ರಾಜ್ಯಗಳ ಪೈಕಿ 17 ರಾಜ್ಯಗಳಲ್ಲಿ (84%) ರಾಜ್ಯಮಟ್ಟದ ಕೇಂದ್ರ ಗ್ರಂಥಾಲಯಗಳೂ: 5500 ಅಭಿವೃದ್ಧಿಕ್ಷೇತ್ರಗಳ ಪೈಕಿ 1.500 ಕ್ಷೇತ್ರಗಳಲ್ಲಿ (27%) ಕ್ಷೇತ್ರ ಗ್ರಂಥಾಲಯಗಳೂ. 371 ಜಿಲ್ಲೆಗಳ ಪೈಕಿ 359 ಜಿಲ್ಲೆಗಳಲ್ಲಿ (91%) ಜಿಲ್ಲಾ ಗ್ರಂಥಾಲಯಗಳೂ: 5.66.878 ಗ್ರಾಮಗಳ ಪೈಕಿ 40.000 ಹಳ್ಳಿಗಳಲ್ಲಿ (7%) ಗ್ರಾಮೀಣ ಗ್ರಂಥಾಲಯಗಳೂ ಇವೆ".[11]

## ರಾಜಾರಾಮ್ ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನ

ಭಾರತದಲ್ಲಿ ಗ್ರಂಥಾಲಯ ಬೆಳವಣಿಗೆಗೆ ಉತ್ತೇಜನ ನೀಡುವುದಕ್ಕೋಸ್ಕರ ರಾಜಾರಾಮ್ ಮೋಹನ ರಾಯ್ ಗ್ರಂಥಾಲಯ ಪ್ರತಿಷ್ಠಾನ ಎಂಬ ಸ್ವಾಯತ್ತ ಸಂಸ್ಥೆಯೊಂದನ್ನು 1972ರಲ್ಲಿ ಸ್ಥಾಪಿಸಲಾಯಿತು. ಕೇಂದ್ರ ಸರ್ಕಾರದ ಶಿಕ್ಷಣಮಂತ್ರಿಯವರು ಈ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದಾರೆ. ಜಿಲ್ಲಾ ಗ್ರಂಥಾಲಯಗಳನ್ನು ಕೇಂದ್ರವಾಗಿರಿಸಿಕೊಂಡು ಗ್ರಂಥಾಲಯ ಜಾಲಗಳನ್ನು ನಿರ್ಮಿಸಿ ತನ್ಮೂಲಕ ಪ್ರತಿಯೊಬ್ಬರಿಗೂ ಗ್ರಂಥಾಲಯ ಸೌಲಭ್ಯ ದೊರಕಿಸಿಕೊಡುವುದು ಇದರ ಮುಖ್ಯ ಉದ್ದೇಶಗಳಲ್ಲೊಂದಾಗಿದೆ. ದೇಶದ ಎಲ್ಲ ಜಿಲ್ಲೆಗಳೂ ಈ ಯೋಜನೆಯ ವ್ಯಾಪ್ತಿಯಲ್ಲಿ ಬರುತ್ತವೆ. ಕ್ರಮೇಣ 1.500ಕ್ಕಿಂತ ಮೇಲ್ಪಟ್ಟು ಜನಸಂಖ್ಯೆಯಿರುವ ಪ್ರಾಥಮಿಕ ಶಾಲೆ ಹೊಂದಿರುವ ಪ್ರತಿಯೊಂದು ಹಳ್ಳಿಗೂ ಗ್ರಂಥಾಲಯ ಸೌಲಭ್ಯಗಳನ್ನು ನೀಡುವ ಉದ್ದೇಶವಿರಿಸಿಕೊಂಡಿದೆ. ದೂರದ ಹಳ್ಳಿಗಳಿಗೆ ಸಂಚಾರಿ ಗ್ರಂಥಾಲಯಗಳ ಮೂಲಕ ಪುಸ್ತಕಗಳನ್ನು ವಿತರಣೆ ಮಾಡಲಾಗುತ್ತದೆ. ಮಕ್ಕಳು ಮತ್ತು ಅಂಗವಿಕಲರ ಅಗತ್ಯಗಳಿಗೂ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತದೆ. ಜಿಲ್ಲಾಮಟ್ಟದಲ್ಲಿ ಗ್ರಂಥಾಲಯ ಸೌಲಭ್ಯಗಳನ್ನು ಕುರಿತು ಸರ್ವೇಕ್ಷಣೆ ನಡೆಸಲಾಗುತ್ತಿದೆ. ಗ್ರಂಥಾಲಯ ಸೌಕರ್ಯಗಳು ಅಸಮರ್ಪಕವಾಗಿರುವ ಜಿಲ್ಲೆಯಲ್ಲಿ ಮಾದರಿ ಗ್ರಂಥಾಲಯ ಕೇಂದ್ರಗಳನ್ನು ಆ ಜಿಲ್ಲೆಯ ಮಾದರಿ ಮಾಧ್ಯಮಿಕ ಶಾಲೆಯಲ್ಲಿ ಅಥವಾ ನೆಹರೂ ಯುವಕ ಕೇಂದ್ರದಲ್ಲಿ ಸ್ಥಾಪಿಸಲಾಗುವುದು. ಜಿಲ್ಲಾ ಗ್ರಂಥಾಲಯಗಳನ್ನು ಬಲಪಡಿಸಿ ಅವುಗಳ ಮೂಲಕ ಗ್ರಾಮಾಂತರ ಪ್ರದೇಶಗಳಿಗೆ ಗ್ರಂಥಾಲಯ ಸೌಲಭ್ಯಗಳನ್ನು ವಿಸ್ತರಿಸುವುದು ಈ ಯೋಜನೆಯ ಗುರಿಯಾಗಿದೆ. 1972ರಲ್ಲಿ ಕೇಂದ್ರ ಸರ್ಕಾರ ಈ ಯೋಜನೆಗಾಗಿ 50 ಲಕ್ಷ ರೂಪಾಯಿಗಳನ್ನೊದಗಿಸಿದೆಯಲ್ಲದೆ ಅನೇಕ ರಾಜ್ಯ ಸರ್ಕಾರಗಳು ಕೂಡ ಹೆಚ್ಚು ಕಡಿಮೆ 50.000ದಿಂದ 2.00.000 ರೂಪಾಯಿಗಳವರೆಗೆ ಆರ್ಥಿಕ ನೆರವನ್ನಿತ್ತಿದೆ.[12]

## ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ಗ್ರಂಥಾಲಯಗಳು

ರಾಜ್ಯ ಪುನರ್ವಿಂಗಡಣೆಯ ಮೊದಲು ನಮ್ಮ ರಾಜ್ಯದಲ್ಲಿ. ಮುಖ್ಯವಾಗಿ ಹಳೆ ಮೈಸೂರಿನಲ್ಲಿ. ವಯಸ್ಕರ ಶಿಕ್ಷಣ ಸಮಿತಿ ಗ್ರಂಥಾಲಯಗಳನ್ನು ನಡೆಸುತ್ತಿತ್ತು. ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿ ತಾಲ್ಲೂಕು ಅಭಿವೃದ್ಧಿ ಕೇಂದ್ರಗಳ ಜಿಲ್ಲಾ ಶಿಕ್ಷಣಾಧಿಕಾರಿಗಳ ಮೇಲ್ವಿಚಾರಣೆಯಲ್ಲೂ ಗ್ರಂಥಾಲಯಗಳು ನಡೆ

---

[11] Kalia, D. R. *Libraries for the Public* : I L A Bull. 8, 1972 : p. 84–85

[12] Sahai, S N : *Library and Community*, New Delhi, Today and Tomorrow's Printers and Publishers, p. 52

ಸಲ್ಪಡುತ್ತಿದ್ದವು. ಮದ್ರಾಸ್ ಕರ್ನಾಟಕ ವಿಭಾಗದಲ್ಲಿ 1948ರ ಮದ್ರಾಸ್ ಸಾರ್ವಜನಿಕ ಗ್ರಂಥಾಲಯ ಅಧಿನಿಯಮದ ಪ್ರಕಾರ ಪ್ರತ್ಯೇಕ ನಿರ್ದೇಶಕರೊಬ್ಬರ ಅಧೀನದಲ್ಲಿ. ಹೈದರಾಬಾದ್ ಕರ್ನಾಟಕ ಭಾಗದಲ್ಲಿ 1955ರ ಸಾರ್ವಜನಿಕ ಗ್ರಂಥಾಲಯ ಅಧಿನಿಯಮದ ಪ್ರಕಾರ ಗ್ರಂಥಾಲಯಗಳು ಸ್ಥಾಪನೆಗೊಳ್ಳುತ್ತಿದ್ದವು.

1965ರ ಮೈಸೂರು ಸಾರ್ವಜನಿಕ ಗ್ರಂಥಾಲಯ ಅಧಿನಿಯಮದ ಪ್ರಕಾರ ರಾಜ್ಯಕೇಂದ್ರ ಗ್ರಂಥಾಲಯದ ಪ್ರಧಾನ ಗ್ರಂಥಪಾಲರ ನಿರ್ದೇಶನದಲ್ಲಿ ರಾಜ್ಯಾದ್ಯಂತ ಸಾರ್ವಜನಿಕ ಗ್ರಂಥಾಲಯಗಳು ರೂಪುಗೊಳ್ಳುತ್ತಿವೆ. ಬೆಂಗಳೂರು. ಮಂಗಳೂರು, ಮೈಸೂರು, ಬೆಳಗಾಂವಿ, ಹುಬ್ಬಳ್ಳಿ, ಧಾರವಾಡಗಳಲ್ಲಿ ನಗರ ಕೇಂದ್ರ ಗ್ರಂಥಾಲಯಗಳೂ ರಾಜ್ಯದ 19 ಜಿಲ್ಲೆಗಳಲ್ಲಿ ಜಿಲ್ಲಾ ಗ್ರಂಥಾಲಯಗಳೂ ಸ್ಥಾಪಿಸಲ್ಪಟ್ಟಿವೆ. ಆದರೆ ಸಾರ್ವಜನಿಕ ಗ್ರಂಥಾಲಯ ಅಧಿನಿಯಮ ಜಾರಿಯಾಗಿ ಎಂಟು ವರ್ಷಗಳು ಸಂದರೂ ಗ್ರಾಮ ಪ್ರದೇಶಗಳಲ್ಲಿ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ತೃಪ್ತಿಕರವಾಗಿ ನಡೆಯುತ್ತಿಲ್ಲವೆನ್ನುವುದು ವಿಷಾದಕರ.

### ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಪ್ರಾರಂಭವಾದ ವಿದ್ಯಾರ್ಥಿಗಳ ಸಂಘ 1941ರಲ್ಲಿ ವಯಸ್ಕರ ಅಕ್ಷರ ಪ್ರಚಾರ ಸಮಿತಿಯನ್ನು ಸ್ಥಾಪಿಸಿತು. ಗ್ರಾಮಸ್ಥರಿಗೆ ಅಕ್ಷರಾಭ್ಯಾಸ ಮಾಡಿಸುವುದು, ಗ್ರಂಥಾಲಯಗಳನ್ನು ಸ್ಥಾಪಿಸುವುದು, ವಾಚನಾಲಯಗಳನ್ನು ತೆರೆಯುವುದು, ವಿದ್ಯಾರ್ಥಿ ಗ್ರಾಮ ಸೇವಾ ಶಿಬಿರಗಳನ್ನು ನಡೆಸುವುದು ಇವೇ ಮೊದಲಾದ ಸದುದ್ದೇಶಗಳಿಂದ ಸ್ಥಾಪಿಸಲಾದ ಈ ಸಮಿತಿಗೆ ಸಾಕಷ್ಟು ಜನಬೆಂಬಲ. ಸರ್ಕಾರದ ಆರ್ಥಿಕ ಸಹಾಯ ದೊರೆತು ಈ ಸಂಸ್ಥೆ ಬೆಳೆದು ಈಗ 'ರಾಜ್ಯ ವಯಸ್ಕರ ಶಿಕ್ಷಣ ಸಮಿತಿ' ಎಂಬ ಅಭಿಧಾನದಿಂದ ಮಹತ್ವಪೂರ್ಣ ಕೆಲಸಗಳನ್ನು ಮಾಡುತ್ತಿದೆ. ಸರ್ಕಾರದಿಂದ ಸುಮಾರು ರೂ. 20 ಲಕ್ಷಕ್ಕಿಂತ ಹೆಚ್ಚು ಅನುದಾನ ಸ್ವೀಕರಿಸುವ ಈ ಸಂಸ್ಥೆ ವಯಸ್ಕರಿಗಾಗಿ ಅಕ್ಷರ ಪ್ರಚಾರ ತರಗತಿಗಳನ್ನು. ಅಕ್ಷರಸ್ಥರಾದವರು ನಿರಕ್ಷರತೆಗೆ ಬಾರದಂತೆ ಮತ್ತೆ ಶಿಕ್ಷಣ ಮುಂದುವರಿಸಲು ವಿದ್ಯಾಮಂದಿರಗಳನ್ನು. ಗ್ರಾಮಸ್ಥರಲ್ಲಿ ಸ್ವಸಹಾಯ ಮನೋಧರ್ಮ ಬೆಳೆಯಲು ಸಹಕಾರಿಯಾಗುವಂತೆ ಜನತಾ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿ ಆ ಕೇಂದ್ರಗಳಲ್ಲಿ ಗ್ರಾಮಗಳ ಆರ್ಥಿಕ ಪರಿಸ್ಥಿತಿ. ಸಾಂಸ್ಕೃತಿಕ ಬೆಳವಣಿಗೆ ಮುಂತಾದ ವಿಷಯಗಳ ಕಡೆಗೆ ನಿರಂತರ ಗಮನ ಹರಿಸಿ ಕಾರ್ಯ ಚಟುವಟಿಕೆಗಳನ್ನು ರೂಪಿಸುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾವಂತರು ಮತ್ತು ಅಲ್ಪ ಸ್ವಲ್ಪ ಓದುಬರಹ ಕಲಿತವರು ತಮ್ಮ ಜ್ಞಾನಾಸಕ್ತಿಯನ್ನು ಮುಂದುವರಿಸಲು ಸಾಧ್ಯವಾಗುವಂತೆ ಗ್ರಂಥಾಲಯಗಳನ್ನೂ ಜಿಲ್ಲೆಗೊಂದು ಕೇಂದ್ರ ಗ್ರಂಥಾಲಯ ಮತ್ತು ಉಚಿತ ವಾಚನಾಲಯವನ್ನೂ ಇತರ ಕ್ಷೇತ್ರಗಳಲ್ಲಿ ಬ್ಲಾಕ್ ಪುಸ್ತಕ ಭಂಡಾರಗಳನ್ನೂ ಗ್ರಾಮೀಣ ಹಾಗೂ ನಗರವಾಸಿಗಳಿಗೆ ಮನೋರಂಜನೆ ಹಾಗೂ ನೀತಿ ಪ್ರಬೋಧಕವಾದ ಶೈಕ್ಷಣಿಕ ಚಲನಚಿತ್ರ ಪ್ರದರ್ಶನಗಳನ್ನೂ ಏರ್ಪಡಿಸುವುದು, ಗ್ರಾಮಾಂತರ ಪ್ರದೇಶದ ಕಲೆಗಳಿಗೆ ಪ್ರೋತ್ಸಾಹ ನೀಡುವುದು ಆಗಾಗ್ಗೆ ಪ್ರದರ್ಶನಗಳನ್ನೇರ್ಪಡಿಸುವುದು. ವಿದ್ಯಾಪೀಠಗಳನ್ನು ಸ್ಥಾಪಿಸುವುದು. ಅಲ್ಪಾವಧಿ ಶಿಕ್ಷಣ ಶಿಬಿರಗಳನ್ನು, ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ರೈತಾಪಿ ಜನರಿಗಾಗಿ. ನಡೆಸುವುದು ಇವೇ ಮುಂತಾದ ಚಟುವಟಿಕೆಗಳಿಂದ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಈಗಾಗಲೇ ಸಾಕಷ್ಟು ಜನಮೆಚ್ಚುಗೆ ಗಳಿಸಿ ಖ್ಯಾತಿ ಪಡೆದಿದೆ. ಗ್ರಾಮ ಪ್ರದೇಶಗಳಲ್ಲಿ ಪುಸ್ತಕ ಭಂಡಾರಗಳನ್ನು ಸ್ಥಾಪಿಸಿರುವ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ರಾಜ್ಯದ ಗ್ರಾಮ ಗ್ರಂಥಾಲಯ ಬೆಳವಣಿಗೆಗೆ ನಾಂದಿ ಹಾಕಿತು.

1941ರಲ್ಲಿ ಮಂಡ್ಯ ಜಿಲ್ಲೆಯ ಸಂತೆಬಾಚಹಳ್ಳಿಯಲ್ಲಿ ಮೊದಲ ಗ್ರಾಮ ಗ್ರಂಥಾಲಯ ಪ್ರಾರಂಭವಾಯಿತು. ಅಲ್ಲಿಂದೀಚೆಗೆ ಅನೇಕ ಗ್ರಾಮ ಗ್ರಂಥಾಲಯಗಳು ಸ್ಥಾಪಿಸಲ್ಪಟ್ಟಿವೆ. 1954ರ ಹೊತ್ತಿಗೆ ರಾಜ್ಯಾದ್ಯಂತ 2156 ಗ್ರಾಮ ಗ್ರಂಥಾಲಯಗಳೂ. 10 ಕೇಂದ್ರ ಗ್ರಂಥಾಲಯಗಳೂ ಕೆಲಸ ಮಾಡುತ್ತಿದ್ದು 1972ರಲ್ಲಿ 2654 ಗ್ರಾಮ ಗ್ರಂಥಾಲಯಗಳೂ. 12 ಕೇಂದ್ರ ಗ್ರಂಥಾಲಯಗಳೂ. 17 ಕ್ಷೇತ್ರೀಯ

ಗ್ರಂಥಾಲಯಗಳೂ ಕೆಲಸಮಾಡುತ್ತಿದ್ದವು.[13] 1954ರಲ್ಲಿ ಸುಮಾರು 16.115 ರೂಪಾಯಿ ವೆಚ್ಚದಲ್ಲಿ ಒಟ್ಟು 2.47.900 ಪುಸ್ತಕಗಳಿದ್ದವೆ[14] 1971–72ರ ಸಾಲಿನಲ್ಲಿ ಗ್ರಾಮ ಗ್ರಂಥಾಲಯಗಳಿಗಾಗಿ ರೂ. 1.15.815 ಖರ್ಚು ಮಾಡಿದೆ. ವಯಸ್ಕರಿಗಾಗಿ ಪತ್ರ್ಯಪುಸ್ತಕಗಳ ಪ್ರಕಟಣೆ. ವಿವಿಧ ವಿಷಯಗಳ ಮೇಲೆ ಲೇಖನಗಳನ್ನೊಳಗೊಂಡು ಹೊಸದಾಗಿ ಅಕ್ಷರ ಕಲಿತ ವಯಸ್ಕರಿಗೆ ಅಭ್ಯಾಸ ಮುಂದುವರಿಸಲು ಉಪಯುಕ್ತವಾದ ಜನಪ್ರಿಯ 'ಬೆಳಕು' ವಾರಪತ್ರಿಕೆಯ ಪ್ರಕಾಶನ. ಕನ್ನಡ ಸಾಹಿತ್ಯದಲ್ಲಿ ಹೊಸದಾಗಿ ಪ್ರಕಟವಾದ ಪುಸ್ತಕಗಳ ಪರಿಚಯ ಮಾಡಿಕೊಡುವ. ಹಾಗೂ ಅನ್ಯ ಭಾಷೆಗಳಲ್ಲಿ ಪ್ರಕಟವಾದ ಲೇಖನಗಳ ಕನ್ನಡ ಅನುವಾದವನ್ನೂ ಒಳಗೊಂಡ 'ಪುಸ್ತಕ ಪ್ರಪಂಚ' ಎಂಬ ಮಾಸಪತ್ರಿಕೆಯ ಪ್ರಕಟಣೆ. ಗ್ರಾಮೀಣ ಶಿಕ್ಷಣ ಶಿಬಿರಗಳಿಗೆ ಪುಸ್ತಕಗಳ ವಿತರಣೆ ಇತ್ಯಾದಿ ಇನ್ನಿತರ ಚಟುವಟಿಕೆಗಳ ಮೂಲಕ ಕರ್ನಾಟಕ ರಾಜ್ಯದಲ್ಲಿ ಸಾಕ್ಷರತಾ ಪ್ರಚಾರದಲ್ಲಿ ಈ ಸಮಿತಿ ತನ್ನ ಪ್ರಗತಿಪರ ಚಟುವಟಿಕೆಗಳಿಂದ ಸಾಕಷ್ಟು ಯಶಸ್ಸುಗಳಿಸಿದೆ.[15]

**ಕರ್ನಾಟಕ ರಾಜ್ಯದಲ್ಲಿ ರಾಜಾರಾಂ ಮೋಹನರಾಯ್ ಗ್ರಂಥಾಲಯ ಪ್ರತಿಷ್ಠಾನದ ಯೋಜನೆ**

ಸುಮಾರು 5.000ದಿಂದ 10.000 ಜನಸಂಖ್ಯೆ ಇರುವ ಗ್ರಾಮಪ್ರದೇಶಗಳಲ್ಲಿ ಗ್ರಾಮಗ್ರಂಥಾಲಯ ಸ್ಥಾಪನೆಗೆ ಉತ್ತೇಜನ ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರಗಳಿಗೆ ಆರ್ಥಿಕ ಸಹಾಯ ನೀಡಲು 'ರಾಜಾರಾಂ ಮೋಹನರಾಯ್ ಗ್ರಂಥಾಲಯ ಪ್ರತಿಷ್ಠಾನ' ಮುಂದೆ ಬಂದಿದೆ. ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಗ್ರಂಥಾಲಯ ಅಧಿನಿಯಮದ ರೀತ್ಯ ಗ್ರಂಥಾಲಯಗಳು ಕ್ರಿಯಾತ್ಮಕವಾಗಿ ಕೆಲಸ ಮಾಡುತ್ತಿರುವುದನ್ನು ಗಮನಿಸಿ ಕೇಂದ್ರ ಸರ್ಕಾರ ಡಿ. ಆರ್. ಕಾಲಿಯಾರವರನ್ನು ರಾಜ್ಯದಲ್ಲಿ ಗ್ರಾಮ ಗ್ರಂಥಾಲಯಗಳ ಅಭಿವೃದ್ಧಿ ಯೋಜನೆಯೊಂದನ್ನು ಸಿದ್ಧಪಡಿಸಲು ನೇಮಿಸಿತು. ಈಗಾಗಲೇ ಕಾಲಿಯಾರವರು ಯೋಜನೆಯನ್ನು ಸಿದ್ಧಗೊಳಿಸಿದ್ದಾರೆ. ಪ್ರಾಯೋಗಿಕವಾಗಿ ಕರ್ನಾಟಕ ರಾಜ್ಯದಲ್ಲಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತಂದು ಕ್ರಮೇಣ ಮಿಕ್ಕ ರಾಜ್ಯಗಳಿಗೂ ಇದನ್ನು ವಿಸ್ತರಿಸುವ ಉದ್ದೇಶ ಕೇಂದ್ರ ಸರ್ಕಾರಕ್ಕಿದೆ.

1971ರ ಜನಗಣತಿಯ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆ 2.92.63.334. ಈ ಪೈಕಿ ಸೇಕಡ 75.69 ಮಂದಿ ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ರಾಜ್ಯದ ಅಕ್ಷರಸ್ಥರ ಪ್ರಮಾಣ ಸೇಕಡ 31.52 ಆಗಿದ್ದು ಅನಕ್ಷರಸ್ಥರ ಪೈಕಿ ಸೇಕಡ 25.13 ಮಂದಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ರಾಜ್ಯದ ಒಟ್ಟು 26.377 ಹಳ್ಳಿಗಳ ಪೈಕಿ ಪ್ರತಿಷ್ಠಾನದ ಅನುದಾನಕ್ಕೊಳಗಾಗುವ (ಅಂದರೆ 5.000 ದಿಂದ 10.000ಕ್ಕೊಳಪಟ್ಟು ಜನಸಂಖ್ಯೆಯಿರುವ) ಹಳ್ಳಿಗಳು 172 (0.65%). ಈ ಎಲ್ಲ ಹಳ್ಳಿಗಳಿಗೂ ಪಟ್ಟಣಗಳೊಂದಿಗೆ ಸಾರಿಗೆ ಸಂಪರ್ಕಾನುಕೂಲತೆಯಿದೆ. ಕನಿಷ್ಠ ಎಂಟನೆಯ ತರಗತಿಯವರೆಗೆ ಶಿಕ್ಷಣ. ವಿದ್ಯುಚ್ಛಕ್ತಿ. ರಸ್ತೆಗಳೇ ಮೊದಲಾದ ಅಗತ್ಯ ಸೌಲಭ್ಯಗಳಿರುತ್ತವೆ. ಈ ಕಾರಣಗಳಿಂದ ನಗರ ಘಟಕಗಳ ಮೂಲಕ ನೇರವಾಗಿ ಹಳ್ಳಿಗಳಿಗೆ ಗ್ರಂಥಾಲಯ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುತ್ತದೆ. ಮೇಲಿನ ಜನಸಂಖ್ಯೆಯ ಮಿತಿಯೊಳಗೆ ರಾಜ್ಯದ ಸುಮಾರು ಇನ್ನೂರು ನಗರ ಹಾಗೂ

---

13 ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಕಾರ್ಯವರದಿ 1971–72 ಪು. 3

14 ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಚಟುವಟಿಕೆಗಳು, 1955. ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು. ಪು.9.

15 ಮುನಿಸ್ವಾಮಿ ಕೆ. ಎಸ್. ಮೈಸೂರು. ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ. ಕನ್ನಡ ವಿಶ್ವಕೋಶ, ಸಂಪುಟ 6, ಪು. 662

ಗ್ರಾಮ ಘಟಕಗಳಿಗೆ ಗ್ರಂಥಾಲಯಗಳನ್ನೊದಗಿಸಲು ಪ್ರತಿಷ್ಠಾನ ಆರ್ಥಿಕ ನೆರವನ್ನೀಯುತ್ತದೆ. ಕರ್ನಾಟಕ ರಾಜ್ಯದ ಸಾರ್ವಜನಿಕ ಗ್ರಂಥಾಲಯದ ವ್ಯವಸ್ಥೆ ಹೀಗಿದೆ:

ರಾಜ್ಯ ಕೇಂದ್ರ ಗ್ರಂಥಾಲಯ
↓
ನಗರ ಕೇಂದ್ರ ಗ್ರಂಥಾಲಯ
↓
ಜಿಲ್ಲಾ ಕೇಂದ್ರ ಗ್ರಂಥಾಲಯ
↓
ತಾಲ್ಲೂಕು ಗ್ರಂಥಾಲಯ
↓
ಗ್ರಾಮ ಗ್ರಂಥಾಲಯ

ಪ್ರತಿಯೊಂದು ಜಿಲ್ಲಾ ಗ್ರಂಥಾಲಯಕ್ಕೂ ಅದರದೇ ಕಾರ್ಯವ್ಯವಸ್ಥೆಯಿದ್ದು ಗ್ರಂಥಾಲಯ ಕಾಯಿದೆ ಯನ್ವಯ ಅದು ಪ್ರತ್ಯೇಕವಾದ ಗ್ರಂಥಾಲಯ ಪ್ರಾಧಿಕಾರದ ಆಡಳಿತಕ್ಕೊಳಪಟ್ಟಿರುತ್ತದೆ. ಪ್ರತಿ ಯೊಂದು ಜಿಲ್ಲೆಗೂ ಅವರ ಕೇಂದ್ರ ಕಾರ್ಯಪ್ರದೇಶದಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯವಿರಬೇಕು. ಈ ಗ್ರಂಥಾಲಯ ತನ್ನ ಪ್ರಾದೇಶಿಕ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ಹಾಗೂ ಗ್ರಾಮಗಳಿಗೆ ಗ್ರಂಥಾಲಯ ಗಳನ್ನೊದಗಿಸಬೇಕೆಂದು ಕಾಲಿಯಾರವರ ಯೋಜನೆಯಲ್ಲಿ ಸೂಚಿಸಲಾಗಿದೆ.[15] ಗ್ರಂಥಾಲಯದ ಸ್ಥಾಪನೆಗಾಗಿ ಪ್ರತಿಯೊಂದು ಘಟಕವೂ ಪ್ರತಿಷ್ಠಾನದಿಂದ ವಾರ್ಷಿಕ 5,000 ರೂಪಾಯಿಗಳ ಅನುದಾನ ವನ್ನು ಪಡೆಯುತ್ತದೆ. ರಾಜ್ಯದ 200 ಘಟಕಗಳ ಗ್ರಂಥಾಲಯಗಳ ನಿರ್ವಹಣೆಗಾಗಿ ಒಟ್ಟು 10 ಲಕ್ಷ ರೂಪಾಯಿಗಳ ವೆಚ್ಚವನ್ನು ಅಂದಾಜು ಮಾಡಲಾಗಿದೆ. ಕರ್ನಾಟಕ ರಾಜ್ಯ ಈಗಾಗಲೇ 2,00,000 ರೂಪಾಯಿಗಳನ್ನು ತನ್ನ ಪಾಲಿನ ಕೊಡುಗೆಯಾಗಿ ನೀಡಿದೆ. ಬಾಕಿ ಹಣವನ್ನು ಪ್ರತಿಷ್ಠಾನ ತನ್ನ ನಿಧಿ ಯಿಂದಲೇ ಕೊಡಬೇಕೆಂದು ಯೋಜನೆಯಲ್ಲಿ ಸೂಚಿಸಲಾಗಿದೆ. ಪ್ರತಿ ಜಿಲ್ಲೆಗೂ 10,000 ರೂಪಾಯಿ ಗಳ ಪ್ರತ್ಯೇಕ ಅನುದಾನವನ್ನು ನೀಡಲು ಪ್ರತಿಷ್ಠಾನ ಒಪ್ಪಿದೆ. ರಾಜ್ಯದಲ್ಲಿ ಒಟ್ಟು 19 ಜಿಲ್ಲೆಗಳಿವೆ. ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಆಯ್ಕೆ ಮಾಡಲು ರಾಜ್ಯ ಸರ್ಕಾರದೊಂದಿಗೆ ಪ್ರತಿಷ್ಠಾನ ಸಮಾ ಲೋಚಿಸಿ ಪ್ರತ್ಯೇಕ ಸಮಿತಿಯನ್ನು ನೇಮಿಸುತ್ತದೆ. ರಾಜ್ಯ ಸರ್ಕಾರ ಈಗಾಗಲೇ ಪ್ರತಿಷ್ಠಾನದ ನೆರವಿ ನಿಂದ ಗ್ರಾಮೀಣ ಗ್ರಂಥಾಲಯಗಳ ಬೆಳವಣಿಗೆಯತ್ತ ಹೆಜ್ಜೆಯಿಡುತ್ತಿದೆ. ಮುಂದಿನ ಹದಿನೈದು ವರ್ಷಗಳೊಳಗೆ ರಾಜ್ಯದಲ್ಲಿ ಗ್ರಂಥಾಲಯ ವ್ಯವಸ್ಥೆ ಅತ್ಯಂತ ತೃಪ್ತಿಕರವಾಗಿದ್ದು ಸಾಮಾಜಿಕ ಆರ್ಥಿಕ, ಶೈಕ್ಷಣಿಕ ರಂಗಗಳಲ್ಲಿ ಪ್ರತಿಯೊಬ್ಬ ಪ್ರಜೆಯೂ ಪ್ರಗತಿ ಪಡೆಯಬೇಕೆಂಬುದೇ ಇವರ ಗುರಿಯಾಗಿದೆ.

**ಮೌಲ್ಯೀಕರಣ**

ಒಂದೆ ಹೇಳಿರುವ ಅಂಕ ಅಂಶಗಳ ಆಧಾರದ ಮೇಲೆ ಹಾಗೂ ಸರ್ಕಾರದಿಂದ ನಿಯುಕ್ತವಾದ ವಿವಿಧ ಆಯೋಗಗಳ ಸರ್ವೇಕ್ಷಣಾ ವರದಿಗಳಿಂದಲೂ ದೇಶದಲ್ಲಿ ಗ್ರಾಮೀಣ ಗ್ರಂಥಾಲಯಗಳೂ ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿರುವುದೂ, ಇವರ ಕೆಲವೇ ಗ್ರಂಥಾಲಯಗಳೂ ಸಮರ್ಪಕವಾಗಿ ಕೆಲಸ ಮಾಡ ದಿರುವುದೂ ವ್ಯಕ್ತವಾಗುತ್ತದೆ. ಮಾತ್ರವಲ್ಲದೆ ದೇಶದಾದ್ಯಂತ ಗ್ರಾಮಗ್ರಂಥಾಲಯಗಳು ಒಂದೇ ರೀತಿಯಲ್ಲಿ ಹರಡಿಕೊಂಡಿಲ್ಲ. ಉದಾ: ಚಿಕ್ಕ ರಾಜ್ಯವಾದ ಕೇರಳದಲ್ಲಿ (38,868 ಚ. ಕಿಮೀ.) ಮೂರು

[15] Kalia, D. R.: *Note on Rural Library Development Plan* for the State of Mysore (Mimeographed), p. 21

ಸಾವಿರಕ್ಕೂ ಮೇಲ್ಪಟ್ಟು ಗ್ರಾಮಗ್ರಂಥಾಲಯಗಳಿದ್ದರೆ ಅತಿ ವಿಶಾಲ ರಾಜ್ಯವಾದ ಉತ್ತರ ಪ್ರದೇಶದಲ್ಲಿ (2.94.365 ಚ. ಕಿಮೀ.) ಕೇವಲ 1.332 ಗ್ರಾಮ ಗ್ರಂಥಾಲಯಗಳಿವೆ. ಗ್ರಂಥಾಲಯ ಅಧಿನಿಯಮ ಜಾರಿಗೆ ಬಂದಿರುವ ನಾಲ್ಕು ರಾಜ್ಯಗಳನ್ನುಳಿದು ಮಿಕ್ಕೆಲ್ಲ ರಾಜ್ಯಗಳಲ್ಲೂ ಗ್ರಾಮೀಣ ಗ್ರಂಥಾಲಯಗಳನ್ನು ಒಂದು ಸುಸಂಘಟಿತ ರೀತಿಯಲ್ಲಿ ವ್ಯವಸ್ಥೆಗೊಳಿಸಲು ರಾಷ್ಟ್ರಮಟ್ಟದಲ್ಲಾಗಲಿ, ರಾಜ್ಯಮಟ್ಟದಲ್ಲಾಗಲಿ ಅಂಥವೇನೂ ಪ್ರಯತ್ನಗಳು ನಡೆದಿಲ್ಲ.

## ಕೆಲವು ಸಲಹೆಗಳು

1 ದೇಶದ ಎಲ್ಲ ರಾಜ್ಯಗಳೂ ಸಾರ್ವಜನಿಕ ಗ್ರಂಥಾಲಯ ಕಾನೂನನ್ನು ಜಾರಿಗೆ ತರುವಂತೆ ಕೇಂದ್ರ ತನ್ನ ಪ್ರಭಾವ ಬೀರಬೇಕು.

2 ರಾಜ್ಯಗಳು ತಮ್ಮ ವಾರ್ಷಿಕ ಆಯವ್ಯಯದಲ್ಲಿ ಸಾಕಷ್ಟು ಹಣವನ್ನು ಗ್ರಂಥಾಲಯಗಳಿಗಾಗಿ ವಿನಿಯೋಗಿಸಬೇಕು.

3 ಪ್ರಾದೇಶಿಕ ಭಾಷೆಗಳಲ್ಲಿ ಉತ್ತಮ ಗ್ರಂಥಗಳ ಪ್ರಕಾಶನಕ್ಕೆ ಪ್ರೋತ್ಸಾಹ ನೀಡಬೇಕು.

4 ಕೃಷಿ. ಕೈಗಾರಿಕೆಗಳಲ್ಲಿ ನವೀನರೀತಿಯ ಸಲಕರಣೆಗಳನ್ನು ಬಳಸಿ ದೇಶದ ಆಹಾರ ಹಾಗೂ ಕೈಗಾರಿಕೋತ್ಪನ್ನಗಳು ಹೆಚ್ಚಾಗುವಂತೆ ಮಾಡಲು ಗ್ರಾಮಗ್ರಂಥಾಲಯಗಳು ಚಿತ್ರಪ್ರದರ್ಶನ. ಉಪನ್ಯಾಸ ಕಾರ್ಯಕ್ರಮಗಳು. ಉಚಿತ ಗ್ರಂಥ ವಿತರಣೆ ಮತ್ತು ವಿಸ್ತರಣ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು.

5 ಈ ಕಾರ್ಯಕ್ರಮಗಳಿಗೆ ಬೇಕಾಗುವಷ್ಟು ಆಧುನಿಕ ಸಲಕರಣೆಗಳು. ಕಟ್ಟಡ ಹಾಗೂ ತರಬೇತಾದ ಸಿಬ್ಬಂದಿಗಳನ್ನು ಒದಗಿಸಬೇಕು.

6 ಗ್ರಾಮೀಣ ಜನರಿಗೆ ಗ್ರಂಥಾಲಯ ಸೌಕರ್ಯಗಳನ್ನು ಸಂಚಾರೀ ವಾಹನಗಳ (ಚರ ಗ್ರಂಥಾಲಯ) ಮೂಲಕವಾಗಲಿ ಜಮೈಕಾದಲ್ಲಿರುವಂತೆ ಪುಸ್ತಕಗಳನ್ನು ಉಚಿತವಾಗಿ ಅಂಚೆ ಮೂಲಕವಾಗಲಿ ಕಳುಹಿಸುವ ಏರ್ಪಾಡನ್ನು ರಾಜ್ಯದ ಜಿಲ್ಲಾ ಗ್ರಂಥಾಲಯಗಳು ಕೈಗೊಳ್ಳಬೇಕು.[16]

7 ಜನಸಂಖ್ಯೆ ಹೆಚ್ಚಿರುವ ಅಥವಾ ಪಕ್ಕದ ಗ್ರಾಮಗಳಿಂದ ಬೇರೆ ಬೇರೆ ಕಾರಣಗಳಿಗಾಗಿ ಇನ್ನೊಂದು ಗ್ರಾಮಕ್ಕೆ ಜನ ಆಗಾಗ್ಗೆ ಬರುತ್ತಿದ್ದರೆ. ಆ ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ಅಲ್ಲಿ ಸುವ್ಯವಸ್ಥಿತ ಗ್ರಂಥಾಲಯವನ್ನು ಕಟ್ಟಿ. ತನ್ಮೂಲಕ ದೂರದ ಹಳ್ಳಿಗಳಿಗೂ ಗ್ರಂಥಾಲಯಸೌಲಭ್ಯ ದೊರಕುವಂತೆ ಸಂಪರ್ಕ ಜಾಲಗಳನ್ನು ಅಥವಾ ಹಂಗೇರಿಯಲ್ಲಿರುವಂತೆ[17] ಗ್ರಾಮ ಪ್ರಾದೇಶಿಕಗ್ರಂಥಾಲಯಗಳನ್ನು ತೆರೆಯಬೇಕು.

---

[16] Robinson, Joyce L : *Rural Library Development in Jamaica* ; Unesco Bull. 17, July-Aug 1973 ; p. 217

[17] Takacas, Miklor : *Work and Organisation of Village Libraries in Hungary* ; Unesco Bull. 16, Jan,-Feb 1972 ; p. 32

**ಡಾ. ಪಿ. ಗುರುರಾಜ ಭಟ್**

# ಮೂಡಬಿದುರೆಯ ಎರಡು ಜೈನ ಶಿಲ್ಪಗಳು

ಶಿಲ್ಪ ಹಾಗೂ ವಾಸ್ತುವೈಶಿಷ್ಟ್ಯಕ್ಕೆ ಕರ್ನಾಟಕ ಖ್ಯಾತಿವೆತ್ತಿದ್ದೆಂಬುದು ವಿದ್ಯಾವಂತರಿಗೆ ತಿಳಿದ ಸಂಗತಿ. ಆದರೆ ಈ ನೆಲದ ಹಲವಾರು ಶಿಲ್ಪಗಳ ವೈಖರಿಯನ್ನು ಇನ್ನೂ ಜೈನ ಇತಿಹಾಸದ ನೆಲೆಯಲ್ಲಿ ತಿಳಿಯದ್ದು ವಿಷಾದಕರ. ಪ್ರಮುಖವಾದ ಚಾರಿತ್ರಿಕ ಅವಶೇಷಗಳ ಬಗ್ಗೆ ತಕ್ಕಮಟ್ಟಿನ ಕಲ್ಪನೆ ಇದೆ. ಆದರೆ ಸುದೂರ ಪ್ರದೇಶದಲ್ಲಿ ಮೂಲೆ ಮೂಲೆಯಲ್ಲಿ ಕಂಡುಬರುವ ಶಿಲ್ಪ ವಿಶೇಷತೆಗಳ ಬಗ್ಗೆ ಅಜ್ಞಾನವೇ ನಮ್ಮಲ್ಲಿರುವುದು ಬೇಸರದ ಸಂಗತಿ. ಇದನ್ನು ಎರಡು ದೃಷ್ಟಾಂತಗಳಿಂದ ಉದಾಹರಿಸುವುದು ಪ್ರಕೃತ ಈ ಲೇಖನದ ಉದ್ದೇಶವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲ್ಲೂಕಿಗೆ ಸೇರಿದ ಇತಿಹಾಸ ಪ್ರಸಿದ್ಧ ಸ್ಥಳ ಮೂಡಬಿದುರೆ. ಶಾಸನಗಳಲ್ಲಿ ಇದನ್ನು ಬಿದುರೆ, ಅಥವಾ ವಂಶಪುರವೆಂಬುದಾಗಿ ಕರೆಯಲಾಗಿದೆ. ಬಿದುರೆಯಲ್ಲಿ ಮಧ್ಯಕಾಲೀನ 18 ಜೈನ ದೇವಾಲಯಗಳಿವೆ (ಬಸದಿಗಳು). ಇವುಗಳಲ್ಲಿ ಅಖಿಲ ಕರ್ನಾಟಕ ನಿಟ್ಟಿನಲ್ಲಿ ಪ್ರಾಮುಖ್ಯವುಳ್ಳದ್ದು 'ತ್ರಿಭುವನ ತಿಲಕ ಚೂಡಾಮಣಿ' ಎಂಬ. ಸಾಮಾನ್ಯರಿಂದ 'ಸಾವಿರ ಕಂಬದ ಬಸದಿ' ಎಂಬ ಹೆಸರಾಂತ. ಜೈನ ದೇವಗೃಹ. ಈ ಬಸದಿಯ ಮೂಲಸ್ಥಾನ ದೇವತೆ ಶ್ರೀ ಚಂದ್ರಪ್ರಭ ತೀರ್ಥಂಕರ (ಚಂದ್ರನಾಥ). ಈ ಮೂರ್ತಿ ಪ್ರಾಯಶಃ ದಕ್ಷಿಣ ಭಾರತದಲ್ಲೇ ಅತಿ ಎತ್ತರದ ಪಂಚಲೋಹದ ಬಿಂಬವಾಗಿದೆ. ಅಡಿಯಿಂದ ಮುಡಿಯ ತನಕ ಈ ಬಿಂಬ 8½ ಅಡಿ ಎತ್ತರವಾಗಿದೆ. ಕ್ರಿ.ಶ. 1429ರಲ್ಲಿ ಇದರ ಪ್ರತಿಷ್ಠೆಯಾಯಿತೆಂದು ಸಾವಿರ ಕಂಬದ ಬಸದಿಯ ಶಾಸನದಿಂದ ತಿಳಿದುಬರುತ್ತದೆ. ಈ ಬಿಂಬ ನಿರಂತರವಾಗಿ ಶುಭ್ರವಾಗಿರುವುದು ಅತ್ಯಾಶ್ಚರ್ಯ. ಮುಖ ಸ್ವಲ್ಪ ದುಂಡಗಿದೆ. ಇಷ್ಟು ಘನವಾದ ಬಿಂಬವನ್ನು ಸ್ವಲ್ಪವೂ ನ್ಯೂನತೆಯಿಲ್ಲದೆ ಎರಕ ಹೊಯ್ದ ಶಿಲ್ಪಿಯ ಕೌಶಲ ಶ್ಲಾಘನೀಯ.

ಮೂಡಬಿದುರೆಯ ಇನ್ನೊಂದು ಬಸದಿ ಗುರುಗಳ ಬಸದಿ. ಇದು ವಿಜಯನಗರ ಕಾಲದ ರಚನೆ. ಆದರೆ ಮೂರ್ತಿಯನ್ನು ಕಂಡು ಪರಿಶೀಲಿಸಿದರೆ ಯಾರಿಗೂ ಆಶ್ಚರ್ಯವಾಗದಿರದು. ಇದು ಪಾರ್ಶ್ವನಾಥ ತೀರ್ಥಂಕರನ ಭವ್ಯವಾದ ಶಿಲಾ ಬಿಂಬ. ಹನ್ನೆರಡು ಅಡಿ ಎತ್ತರದ ಈ ಮೂರ್ತಿಯ ಲಾವಣ್ಯ ಅವರ್ಣನೀಯ. ಇದು ಶೈಲಿಯಲ್ಲಿ ಬಾದಾಮಿ ಚಾಳುಕ್ಯರ ಶಿಲ್ಪ ವೈಖರಿಯನ್ನು ನಿರ್ದೇಶಿಸುತ್ತದೆ. ಪದ್ಮಪೀಠದ ಮೇಲೆ ಆಜಾನುಬಾಹುವಾಗಿ ನಿಂತಿರುವ ಈ ಬಿಂಬದ ಹಿಂದುಗಡೆ ಎರಡು ಸರ್ಪಗಳಿಂದ ಪ್ರಾರಂಭವಾಗಿ ಒಂಬತ್ತು ಹೆಡೆಗಳಲ್ಲಿ ಅಂತ್ಯವಾಗಿ ಶ್ರೀಪಾರ್ಶ್ವನಾಥಸ್ವಾಮಿಗೆ ರಕ್ಷಣೆಯನ್ನೀಯುವ ಶಿಲ್ಪ ವೈಖರಿ ಹೃದಯವನ್ನರಳಿಸುವಂಥದು. ಸರ್ಪ ಸುರುಳಿಯ ಮಧ್ಯೆ ಹೂವಿನ ವಿನ್ಯಾಸಗಳಿವೆ. ಪಾದದ ಇಕ್ಕೆಲಗಳಲ್ಲಿ ಯಕ್ಷರ ಉಬ್ಬು ಶಿಲ್ಪವಿದೆ. ಪರಿಪೀಠದಲ್ಲಿ ಮಾಸಿಹೋದ ಶಾಸನದ ನಾಲ್ಕೈದು ಅಕ್ಷರಗಳು ಕಂಡುಬರುತ್ತವೆ. ಲಿಪಿಯನ್ನಾಧರಿಸಿ. ಈ ಅಕ್ಷರಗಳನ್ನು ಕ್ರಿ.ಶ. 9ನೆಯ ಶತಮಾನಕ್ಕೆ ಅನ್ವಯಿಸಬಹುದು. ಈ ಬಸದಿಯ ಬಗ್ಗೆ ಒಂದು ಕಥೆ ಇದೆ. ಒಂದೆ ಒಬ್ಬ ಜೈನ ಮುನಿ ಈ ಕ್ಷೇತ್ರಕ್ಕೆ ಬಂದಾಗ ದನ ಮತ್ತು ಹುಲಿ ಸೌಹಾರ್ದದಿಂದಿರುವುದನ್ನು ಕಂಡನೆಂದೂ. ಪರಿಶೀಲಿಸಿದಾಗ ಇಲ್ಲಿ ಕಾಡಿನಿಂದ ಆವರಿಸಲ್ಪಟ್ಟ ಹುತ್ತದೊಳಗೆ ತೀರ್ಥಂಕರ ಬಿಂಬವಿತ್ತೆಂದೂ ಇಲ್ಲಿಯೇ ಬಸದಿಯನ್ನು ಈ ಮುನಿ ನಿರ್ಮಾಣ ಮಾಡಿದನೆಂದೂ ಹೇಳಿಕೆ. ಈ ಜಿನಬಿಂಬಕ್ಕೆ ತಾಗಿಯೇ ಕಟ್ಟಡದ ರಚನೆಯಾಗಿದೆ. ಮಾತ್ರ

ವಲ್ಲದೆ ಸರಿಯಾದ ರಕ್ಷಣೆ ಇಲ್ಲವೆ. ಪ್ರಾಚೀನತೆಯಿಂದಾಗಿ ಎಷ್ಟೋ ದೇವಾಲಯಗಳೂ ಗುಡಿಗಳೂ ಬಿದ್ದು ಹೋಗಿ ಮೂರ್ತಿ ನೆಲದಡಿ ಸೇರಿಕೊಂಡ ದೃಷ್ಟಾಂತಗಳಿವೆ. ಪಾರ್ಶ್ವನಾಥ ಸ್ವಾಮಿಯ ಪ್ರತಿಮೆ ಕ್ರಿ.ಶ. ಸು. 9ನೆಯ ಶತಕದಷ್ಟು ಪ್ರಾಚೀನ. ಬಸದಿಯ ವಾಸ್ತು ವಿಜಯನಗರದ ನಿರ್ಮಾಣ. ಇದರಿಂದ ಮೂರ್ತಿ ಹಳೆಯ ಕಾಲದ್ದೆಂಬುದು ಸ್ವಯಂವೇದ್ಯ. ಈ ಬಿಂಬವನ್ನು ಕರ್ನಾಟಕದ ಶ್ರೇಷ್ಠ ಶಿಲ್ಪಗಳಲ್ಲಿ ಒಂದೆನ್ನಬಹುದು. ಹೊರಗಿನಿಂದ ಈ ಮೂರ್ತಿಯನ್ನು ವೀಕ್ಷಿಸಿದಾಗ ಇದರ ಭವ್ಯತೆಯ ಅರಿವಾಗದು.

ಎನ್. ಪ್ರಭುಸ್ವಾಮಿ

# ಭಾರತದ ಚಹ ಕೈಗಾರಿಕೆಗೆ ಹೊಸ ಆತಂಕ

ಚಹ ಬೆಳೆಯುವುದರಲ್ಲಿ ಮತ್ತು ರಫ್ತು ಮಾಡುವುದರಲ್ಲಿ ಭಾರತದ್ದು ಗಣ್ಯಸ್ಥಾನ. ಚಹ ಬೆಳೆಯಲ್ಲಿ ಮತ್ತು ರಫ್ತು ವ್ಯಾಪಾರದಲ್ಲಿ ಆಗಿಂದಾಗ್ಗೆ ಏರಿಳಿತಗಳು ಉಂಟಾಗಿದ್ದರೂ ಇದುವರೆಗೆ ಭಾರತ ಅಂತರರಾಷ್ಟ್ರೀಯ ಚಹ ವ್ಯಾಪಾರದಲ್ಲಿ ತನ್ನ ಸ್ಥಾನಮಾನವನ್ನು ಕಾಪಾಡಿಕೊಂಡು ಬಂದಿದೆ. ಆದರೆ ಈಗ ಹೊಸದೊಂದು ಆತಂಕ ಭಾರತದ ಚಹ ಕೈಗಾರಿಕೆಗೆ ಒದಗಿದೆ. ಆ ಆತಂಕ ಯಾವುದು ಮತ್ತು ಅದರಿಂದ ಉಂಟಾಗಬಹುದಾದ ಸಮಸ್ಯೆಗಳಾವುವು ಎಂಬುದನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಭಾರತವ ಜನರಿಗೆ ಮತ್ತು ಪ್ರಪಂಚದ ಇತರ ಭಾಗಗಳಲ್ಲಿರುವ ಅನೇಕರಿಗೆ ಚಹ ಭಾರತ ಮತ್ತು ಶ್ರೀ ಲಂಕಾ ದೇಶಗಳಲ್ಲಿ ಬೆಳೆಯುತ್ತದೆ ಎಂದು ಗೊತ್ತು. ಆದರೆ ಅನೇಕರಿಗೆ ಆಫ್ರಿಕದಲ್ಲಿ ಕೂಡ ಚಹ ಬೆಳೆಯುವುದೆಂಬುದು ಗೊತ್ತಿಲ್ಲ. ಈಗ ಪೂರ್ವ ಆಫ್ರಿಕ ಚಹ ಬೆಳೆಯುವ ಪ್ರದೇಶಗಳ ಪೈಕಿ ಪ್ರಪಂಚದಲ್ಲಿ ಮೂರನೆಯ ಸ್ಥಾನ ಪಡೆದಿದೆ. ಭಾರತದಲ್ಲಿ ಬೆಳೆಯುವ ಚಹದೊಡನೆ ಪೂರ್ವ ಆಫ್ರಿಕದಲ್ಲಿ ಬೆಳೆಯುವ ಚಹವನ್ನು ಹೋಲಿಸಿದರೆ ಸದ್ಯದಲ್ಲಿ ಇವೆರಡರ ಉತ್ಪಾದನೆಯಲ್ಲಿ ಅಜಗಜಾಂತರ ವಿದೆ.

ಪೂರ್ವ ಆಫ್ರಿಕದ ಮೂರು ದೇಶಗಳಲ್ಲಿ, ಟಾಂಜನೀಯ, ಕೀನ್ಯ ಮತ್ತು ಉಗಾಂಡಗಳಲ್ಲಿ, 1969ರಲ್ಲಿ ಉತ್ಪಾದಿಸಿದ ಚಹ 14 ಕೋಟಿ ಪೌಂಡ್. ಭಾರತದಲ್ಲಿ 1969ರಲ್ಲಿ ಉತ್ಪಾದಿಸಿದ ಚಹ 37.8 ಕೋಟಿ ಕೆ. ಜಿ. (ಸುಮಾರು 83.16 ಕೋಟಿ ಪೌಂಡ್.)[1] ಆಫ್ರಿಕದಲ್ಲಿ ಚಹ ಬೆಳೆ 10 ವರ್ಷಗಳ ಅವಧಿಯಲ್ಲಿ ಎಷ್ಟರ ಮಟ್ಟಿಗೆ ಅಭಿವೃದ್ಧಿ ಹೊಂದಿದೆ ಎಂಬುದನ್ನು ಮುಂದಿನ ಅಂಕಿ ಅಂಶಗಳು ತೋರಿಸುತ್ತವೆ. 1959ರಲ್ಲಿ ಆಫ್ರಿಕದ ಒಟ್ಟು ಚಹ ಉತ್ಪಾದನೆ 4.6 ಕೋಟಿ ಪೌಂಡ್ ಇದ್ದದ್ದು 1969ರ ವೇಳೆಗೆ 14.0 ಕೋಟಿ ಪೌಂಡ್‌ಗಳಷ್ಟಾಯಿತು.[2] 1969ರಲ್ಲಿ ಪೂರ್ವ ಆಫ್ರಿಕ ದೇಶಗಳು 12.6 ಕೋಟಿ ಪೌಂಡುಗಳಷ್ಟು ಚಹವನ್ನು ರಫ್ತು ಮಾಡಿದುವು. ಭಾರತ 1969ರಲ್ಲಿ 20.93 ಕೋಟಿ ಕೆ. ಜಿ. (ಸುಮಾರು 45.046 ಕೋಟಿ ಪೌಂಡ್) ಚಹವನ್ನು ರಫ್ತು ಮಾಡಿತು. ಮುಂದಿನ ವರ್ಷಗಳಲ್ಲಿ ಪೂರ್ವ ಆಫ್ರಿಕದ ಚಹ ಉತ್ಪಾದನೆ ಅಧಿಕಗೊಳ್ಳುವ ಅವಕಾಶವಿದೆ. ಇದರಿಂದ ಅವರ ರಫ್ತು ವ್ಯಾಪಾರವೂ ಅಧಿಕಗೊಂಡು ಭಾರತದ ರಫ್ತು ವ್ಯಾಪಾರಕ್ಕೆ ಬೆದರಿಕೆಯನ್ನುಂಟುಮಾಡುವ ಪರಿಸ್ಥಿತಿ ಇದೆ.

---

[1] ಇಂಡಿಯ, 1969 ಪು. 320

[2] The East African Tea Industry ; *New Commonwealth*, No 9, 1970, p. 23

1971ರ ಜನವರಿಯಲ್ಲಿ ಪೂರ್ವ ಆಫ್ರಿಕನ್ ದೇಶಗಳು ತಮ್ಮಲ್ಲಿಯ ಪ್ರಮುಖ ಚಹ ಉತ್ಪಾದಕರ ಮತ್ತು ಚಹ ಕೊಳ್ಳುವ ಪ್ರಮುಖ ದೇಶಗಳ ಒಂದು ಸಮ್ಮೇಳನವನ್ನು ಏರ್ಪಡಿಸಿದುವು. ಈ ಸಮ್ಮೇಳನವನ್ನು ಟಾಂಜನೀಯ ಚಹ ಸಂಸ್ಥೆ. ಉಗಾಂಡದ ಚಹ ಬೋರ್ಡ್ ಮತ್ತು ಕೀನ್ಯದ ಚಹ ಬೋರ್ಡ್‌ಗಳು ಒಟ್ಟಾಗಿ ಸೇರಿ. ವ್ಯವಸ್ಥೆ ಮಾಡಿದ್ದುವು. ಈ ಸಮ್ಮೇಳನಕ್ಕೆ ಪ್ರಪಂಚದಲ್ಲಿ ಅಧಿಕ ಚಹಕೊಳ್ಳುವ ದೇಶಗಳ ಪೈಕಿ ಸುಮಾರು 20 ದೇಶಗಳ ಪ್ರತಿನಿಧಿಗಳು ಬಂದಿದ್ದರು. ಇಂಗ್ಲೆಂಡ್. ಅಮೆರಿಕ ಸಂಯುಕ್ತ ಸಂಸ್ಥಾನಗಳು. ಕೆನಡ. ಹಾಲೆಂಡ್. ಜರ್ಮನಿ. ಡೆನ್‌ಮಾರ್ಕ್. ಫ್ರಾನ್ಸ್. ಬೆಲ್ಜಿಯಂ. ಸ್ವೀಡನ್. ಇಟಲಿ. ರಷ್ಯ. ಪಾಕಿಸ್ತಾನ. ಜಪಾನ್. ಆಸ್ಟ್ರೇಲಿಯ ಮತ್ತು ಅರೇಬಿಯ ದೇಶಗಳ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಮೇಲ್ಕಂಡ ಪ್ರಮುಖ ದೇಶಗಳ ಪ್ರತಿನಿಧಿಗಳನ್ನು ಆಹ್ವಾನಿಸಿ ತನ್ಮೂಲಕ ತಮ್ಮ ದೇಶದ ಚಹ ವ್ಯಾಪಾರಕ್ಕೆ ಪ್ರೋತ್ಸಾಹ ಪಡೆಯುವುದೇ ಈ ಸಮ್ಮೇಳನದ ಮುಖ್ಯ ಉದ್ದೇಶವಾಗಿತ್ತು. ಹೀಗೆ ಪ್ರಪಂಚದ ಮಾರುಕಟ್ಟೆಗಳಲ್ಲಿ ತಮ್ಮ ಚಹಕ್ಕೆ ಪ್ರೋತ್ಸಾಹ ದೊರಕಿಸಿಕೊಂಡು ತಮ್ಮ ವ್ಯಾಪಾರವನ್ನು ಅಭಿವೃದ್ಧಿಪಡಿಸಿಕೊಳ್ಳುವ ಗುರಿಯನ್ನು ಪೂರ್ವ ಆಫ್ರಿಕನ್ ದೇಶಗಳು ಹೊಂದಿವೆ. ಆಫ್ರಿಕದ ದೇಶಗಳು ತಮ್ಮ ಯತ್ನದಲ್ಲಿ ಯಶಸ್ಸು ಸಾಧಿಸಿದರೆ. ಭಾರತದ ಚಹ ಕೈಗಾರಿಕೆ ಪ್ರಬಲ ಪೈಪೋಟಿ ಎದುರಿಸಬೇಕಾಗುತ್ತದೆ.

ಆಫ್ರಿಕನ್ ದೇಶಗಳು ಅಲ್ಪ ಅವಧಿಯಲ್ಲಿ (ಕಳೆದ 20 ವರ್ಷಗಳಲ್ಲಿ: 1950–1970) ತಮ್ಮ ಚಹ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಒಂದು ಪ್ರಮುಖ ಕಾರಣವಿದೆ. ಅದನ್ನು ಕುರಿತು ಈಗ ಪರಿಶೀಲಿಸೋಣ.

ಭಾರತದಲ್ಲಿ ಚಹ ಉತ್ಪಾದನೆ 1834ರಲ್ಲಿ ಆರಂಭವಾಯಿತು. 1834–1865ರಲ್ಲಿ ಸರ್ಕಾರ ಚಹ ತೋಟಗಳನ್ನು ನಡೆಸುತ್ತಿತ್ತು. 1865ರಿಂದ ಈಚೆಗೆ ಚಹ ತೋಟಗಳನ್ನು ಯೂರೋಪಿಯನ್ ಬಂಡವಾಳಗಾರರು ಏರ್ಪಡಿಸಿ ನಡೆಸಿಕೊಂಡು ಹೋಗುತ್ತಿದ್ದಾರೆ. ಚಹ ತೋಟಗಳನ್ನು ಬೃಹದ್ಗಾತ್ರ ವ್ಯವಸಾಯವಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಆದರೆ ಆಫ್ರಿಕದಲ್ಲಿ ಇದಕ್ಕೆ ವ್ಯತಿರಿಕ್ತವಾದ ಸಣ್ಣ ಹಿಡುವಳಿದಾರರ ಅಭಿವೃದ್ಧಿ ಯೋಜನೆಯನ್ನು ಜಾರಿಗೆ ತಂದು ಚಹ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಲಾಗಿದೆ. ಈ ನೂತನ ಪದ್ಧತಿಯೇ ಆಫ್ರಿಕದ ಚಹ ಉತ್ಪಾದನೆಯ ಯಶಸ್ಸಿನ ಗುಟ್ಟು ಎಂದು ಪರಿಗಣಿಸಲ್ಪಟ್ಟಿದೆ. ಈ ಪದ್ಧತಿಯ ಮುಖ್ಯ ಲಕ್ಷಣಗಳನ್ನು ಮುಂದೆ ಪರಿಶೀಲಿಸಲಾಗಿದೆ. ಅದಕ್ಕೆ ಮೊದಲು ಚಹ ಉತ್ಪಾದನೆ ಹೇಗೆ ಬೆಳೆದಿದೆ ಎಂಬುದನ್ನು ತಿಳಿಯಬೇಕಾಗುತ್ತದೆ. ಪೂರ್ವ ಆಫ್ರಿಕದ ದೇಶವಾದ ಉಗಾಂಡದಲ್ಲಿ ಮೊದಲನೆಯ ಚಹ ತೋಟ ಆರಂಭವಾಯಿತು. ಉಗಾಂಡದಲ್ಲಿ 1900ರಲ್ಲಿ ವ್ಯವಸಾಯದ ಇಲಾಖೆ ಪ್ರಾರಂಭವಾಯಿತು. ಆಗ ವ್ಯವಸಾಯ ಇಲಾಖಾಧಿಕಾರಿಗಳು ಭಾರತದಿಂದ ಕೆಲವು ಚಹ ಗಿಡಗಳನ್ನು ತಂದು ಉಗಾಂಡದಲ್ಲಿ ತಮ್ಮ ವ್ಯವಸಾಯ ಅಭಿವೃದ್ಧಿ ಕೇಂದ್ರಕ್ಕೆ ಸೇರಿದ ತೋಟದಲ್ಲಿ ನೆಟ್ಟರು. ಇದೇ ಆಫ್ರಿಕದಲ್ಲಿ ಚಹ ಬೆಳೆಗೆ ನಾಂದಿಯಾಯಿತು ಎನ್ನಬಹುದು.

1903ರಲ್ಲಿ ಕೀನ್ಯದಲ್ಲಿ ಜೆ. ಡಬ್ಲ್ಯು. ಕೈನಿ ಎಂಬ ಒಬ್ಬ ಖಾಸಗಿ ವ್ಯಕ್ತಿ ಚಹ ತೋಟ ಪ್ರಾರಂಭಿಸಿದ. 1904ರಲ್ಲಿ ಕೈಂಬಿಲಾ ಎಂಬ ಒಂದು ಖಾಸಗಿ ಸಂಸ್ಥೆ ಟಾಂಜನೀಯದಲ್ಲಿ ಮೊದಲನೆಯ ಚಹ ತೋಟ ಸ್ಥಾಪಿಸಿತು.

1916ರಲ್ಲಿ ಮೊದಲ ಬಾರಿಗೆ ಆಫ್ರಿಕದ ದೇಶಗಳಲ್ಲಿ 68 ಪೌಂಡ್‌ಗಳಷ್ಟು ಚಹ ಉತ್ಪಾದಿತವಾಯಿತು. ಆರಂಭದಲ್ಲಿ ಚಹ ಬೆಳೆ ಆಫ್ರಿಕದಲ್ಲಿ ಯಶಸ್ವಿಯಾಗಲಿಲ್ಲವೆನ್ನಬಹುದು. ಆಗಿಂದಾಗ್ಗೆ ಅಸ್ಸಾಮಿನಿಂದ ಚಹ ಗಿಡಗಳನ್ನು ತರಿಸಿಕೊಂಡು ಪೂರ್ವ ಆಫ್ರಿಕನ್ ದೇಶಗಳಲ್ಲಿ ತೋಟಗಳನ್ನು ಏರ್ಪಡಿಸಲು ಪ್ರಯತ್ನ ಕೈಗೊಂಡರೂ ಬಹಳ ಕಾಲದ ವರೆಗೆ ಚಹ ಬೆಳೆ ಆಫ್ರಿಕದಲ್ಲಿ ಅಭಿವೃದ್ಧಿಯಾಗಲಿಲ್ಲ.

1930ರ ದಶಕದಲ್ಲಿ ಚಹ ಬೆಳೆಯಲ್ಲಿ ಯಶಸ್ಸು ಸಾಧಿಸಲು ತೀವ್ರ ಕ್ರಮಗಳನ್ನು ಕೈಗೊಳ್ಳಲಾಯಿತು. ಉಗಾಂಡದ ಒಂದು ಕಂಪನಿ 300 ಎಕರೆ ಪ್ರದೇಶದಲ್ಲಿ ಚಹ ತೋಟ ಏರ್ಪಡಿಸಿತು. ಇದು ತಕ್ಕಮಟ್ಟಿಗೆ ಯಶಸ್ಸು ಪಡೆಯಿತು. ಇದನ್ನು ನೋಡಿ ಅಲ್ಲಿದ್ದ ಚಹ ಬೆಳೆಗಾರರೆಲ್ಲರೂ ಒಟ್ಟಾಗಿ ಸೇರಿ ಟೋರೋ ಟೀ ಕಂಪನಿ ಎಂಬ ಒಂದು ಸಹಕಾರಿ ಸಂಸ್ಥೆಯನ್ನು ಏರ್ಪಡಿಸಿಕೊಂಡು ಚಹ ಬೆಳೆ

ಯಲ್ಲಿ ಮತ್ತಷ್ಟು ಪ್ರಗತಿ ಸಾಧಿಸಲು ಯತ್ನಿಸಿದರು. ಅದರ ಪರಿಣಾಮವಾಗಿ ಉಗಾಂಡದಲ್ಲಿ ಚಹ ಬೆಳೆಯುತ್ತಿದ್ದ ಪ್ರದೇಶದ ವಿಸ್ತೀರ್ಣ 1924ರಲ್ಲಿ 118 ಎಕರೆಗಳಷ್ಟು ಇದ್ದದ್ದು 1934ರ ವೇಳೆಗೆ 1.689 ಎಕರೆಗಳಷ್ಟಾಯಿತು.

ಚಹ ಉತ್ಪಾದನೆ ಉಗಾಂಡದ ಒಂದು ಪ್ರಮುಖ ಕೈಗಾರಿಕೆ ಎಂದು 1950ರಲ್ಲಿ ಉಗಾಂಡ ಸರ್ಕಾರದಿಂದ ಪರಿಗಣಿಸಲ್ಪಟ್ಟಿತ್ತು. 1950ರಲ್ಲಿ ಚಹ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಉಗಾಂಡ ಟೀ ಬೋರ್ಡನ್ನು ಅಲ್ಲಿಯ ಸರ್ಕಾರ ಸ್ಥಾಪಿಸಿತು. 1966ರಲ್ಲಿ ಉಗಾಂಡ ಚಹ ಬೆಳೆಗಾರರ ಕಾರ್ಪೊರೇಷನನ್ನು ಸ್ಥಾಪಿಸಿತು. ಇದರ ಮೂಲಕ ಸಣ್ಣ ಬೆಳೆಗಾರರಿಗೆ ಪ್ರೋತ್ಸಾಹ ಕೊಡಲು ಏರ್ಪಾಡಾಯಿತು.

ಕೀನ್ಯದಲ್ಲಿ ಬ್ರೂಕ್ ಬಾಂಡ್ ಟೀ ಕಂಪನಿಯ ಪರಿಶ್ರಮದಿಂದ ಚಹ ಕೈಗಾರಿಕೆ ತಲೆ ಎತ್ತಿಕೊಂಡಿತು, 1924ರಲ್ಲಿ 1,000 ಎಕರೆ ಭೂಮಿಯನ್ನು ಕೀನ್ಯದಲ್ಲಿ ಕೊಂಡು ಅಲ್ಲಿ ಬ್ರೂಕ್ ಬಾಂಡ್ ಚಹ ಕಂಪನಿ. ಚಹ ತೋಟ ಏರ್ಪಡಿಸಲಾರಂಭಿಸಿತು. 1925ರಲ್ಲಿ ಬ್ಯೂರೆಟ್ ಚಹ ಕಂಪನಿ ಎಂಬ ಮತ್ತೊಂದು ಖಾಸಗಿ ಕಂಪನಿ ಕೀನ್ಯದಲ್ಲಿ ಚಹ ತೋಟಗಳನ್ನು ಪ್ರಾರಂಭಿಸಿತು. ಇದರ ಪರಿಣಾಮವಾಗಿ ಚಹ ತೋಟಗಳ ವಿಸ್ತೀರ್ಣ 1924ರಲ್ಲಿ ಕೀನ್ಯದಲ್ಲಿ 382 ಎಕರೆ ಇದ್ದದ್ದು 1934ರ ವೇಳೆಗೆ 10.662 ಎಕರೆಗಳಷ್ಟಾಯಿತು. ಕೀನ್ಯದಲ್ಲಿ 1939ರ ವೇಳೆಗೆ ಚಹ ಉತ್ಪಾದನೆ ಸುಮಾರು 1.1 ಕೋಟಿ ಪೌಂಡ್‌ಗಳನ್ನು ಮುಟ್ಟಿತು. 1950ರಲ್ಲಿ ಚಹ ಬೆಳೆಯನ್ನು ಪ್ರೋತ್ಸಾಹಿಸಲು ಕೀನ್ಯದಲ್ಲೂ ಸಣ್ಣ ಬೆಳೆಗಾರರಿಗೆ ಪ್ರೋತ್ಸಾಹ ಕೊಡುವ ಪದ್ಧತಿಯನ್ನು ಜಾರಿಗೆ ತರಲಾಯಿತು.

ಟಾಂಜನೀಯದಲ್ಲಿ 1926ರ ತನಕ ಗಮನಾರ್ಹ ಪ್ರಮಾಣದಲ್ಲಿ ಚಹ ಬೆಳೆಯುತ್ತಿರಲಿಲ್ಲ. ಜರ್ಮನಿಯ ಕೆಲವು ಸಂಸ್ಥೆಗಳು 1926 ಆದ ಮೇಲೆ ಅಲ್ಲಲ್ಲಿ ಚಹ ತೋಟಗಳನ್ನು ಸ್ಥಾಪಿಸಲಾರಂಭಿಸಿದುವು. 1939ರಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾದಾಗ ಜರ್ಮನಿ ತನ್ನ ಚಹ ತೋಟಗಳನ್ನು ಬಿಟ್ಟುಕೊಡಬೇಕಾಗಿ ಬಂತು. ಇದರ ಪರಿಣಾಮವಾಗಿ 1940ರಲ್ಲಿ ಜರ್ಮನರ ಕೈಯಲ್ಲಿದ್ದ ಚಹ ತೋಟಗಳು ಬ್ರೂಕ್ ಬಾಂಡ್ ಕಂಪನಿಯ ಕೈ ಸೇರಿದುವು. ಇದು ಚಹ ಉತ್ಪಾದನೆಯಲ್ಲಿ ಒಂದು ಪ್ರಮುಖ ಘಟನೆ. ಬ್ರೂಕ್ ಬಾಂಡ್ ಕಂಪನಿಯ ಪರಿಶ್ರಮದ ಫಲವಾಗಿ 1945ರಲ್ಲಿ ಚಹ ಉತ್ಪಾದನೆ ಟಾಂಜನೀಯದಲ್ಲಿ 20 ಲಕ್ಷ ಪೌಂಡುಗಳನ್ನು ಮುಟ್ಟಿತು.

1950 ಆದ ಮೇಲೆ ಟಾಂಜನೀಯ, ಉಗಾಂಡ ಮತ್ತು ಕೀನ್ಯ ದೇಶಗಳು ಒಟ್ಟುಗೂಡಿ ತಮ್ಮ ಪರಿಶ್ರಮದಿಂದ ಚಹ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಲು ಕಾರ್ಯಕ್ರಮ ಕೈಗೊಂಡುವು. ಅಂದಿನಿಂದ ಆಫ್ರಿಕದ ಚಹ ಕೈಗಾರಿಕೆಯ ಶೀಘ್ರ ಅಭಿವೃದ್ಧಿ ಆರಂಭವಾಯಿತೆನ್ನಬಹುದು. ಪೂರ್ವ ಆಫ್ರಿಕದ ಚಹ ವ್ಯಾಪಾರಿಗಳ ಸಂಘ ಎಂಬ ಒಂದು ಸಂಸ್ಥೆಯನ್ನು ಈ ಮೂರು ದೇಶಗಳೂ ಸೇರಿ ಸ್ಥಾಪಿಸಿಕೊಂಡಿವೆ. ಈ ಸಂಘದ ಅಧೀನದಲ್ಲಿ ಚಹ ಸಂಶೋಧನ ಸಂಸ್ಥೆಯೊಂದು ಸ್ಥಾಪಿತವಾಗಿದೆ. ಚಹ ಬೆಳೆ ಅಭಿವೃದ್ಧಿಪಡಿಸುವ ವಿಷಯದಲ್ಲಿ ಮೂರು ದೇಶಗಳಿಗೂ ಈ ಸಂಸ್ಥೆ ಸಂಶೋಧನೆಯ ಮೂಲಕ ಸಲಹೆ ನೀಡುತ್ತದೆ. ವೈಜ್ಞಾನಿಕ ತಿಳಿವಳಿಕೆಯ ಮೂಲಕ ಉತ್ತಮ ಮಟ್ಟದ ಚಹ ಎಲೆಯನ್ನು ಬೆಳೆಯಲು ಸಾಧ್ಯವಾಗಿದೆ. ಆದರೆ ಆರ್ಥಿಕವಾಗಿ ಚಹ ಉತ್ಪಾದನೆಯನ್ನು ಹೆಚ್ಚು ಆಕರ್ಷಕವಾಗಿ ಮಾಡಲು ಸಣ್ಣ ಚಹ ಬೆಳೆಗಾರರ ಅಭಿವೃದ್ಧಿ ಯೋಜನೆಯನ್ನು ಜಾರಿಗೆ ತರಲಾಗಿದೆ.

ಸಣ್ಣ ಚಹ ಬೆಳೆಗಾರರ ಅಭಿವೃದ್ಧಿ ಯೋಜನೆ ಮೊದಲು ಕೀನ್ಯದಲ್ಲಿ ಆರಂಭವಾಯಿತು. 1950ರ ದಶಕದಲ್ಲಿ ಆರಂಭವಾದ ಯೋಜನೆ ಸ್ವಲ್ಪಮಟ್ಟಿಗೆ ಯಶಸ್ಸು ಪಡೆದದ್ದರಿಂದ ಈ ಯೋಜನೆಯನ್ನು ವಿಸ್ತರಿಸುವ ಸಲುವಾಗಿ 1964ರಲ್ಲಿ ಕೀನ್ಯ ಚಹ ಅಭಿವೃದ್ಧಿ ಸಂಸ್ಥೆ ಸ್ಥಾಪಿಸಲ್ಪಟ್ಟಿತು.

ಈ ಸಂಸ್ಥೆಯ ಆಶ್ರಯದಲ್ಲಿ 40 ಸಾವಿರ ಎಕರೆ ಪ್ರದೇಶದಲ್ಲಿ ಸುಮಾರು 50 ಸಾವಿರ ಹಿಡುವಳಿದಾರರು ಚಹ ಬೆಳೆಯಲು ಆರಂಭಿಸಿದ್ದಾರೆ. 1969–70ರ ಅವಧಿಯಲ್ಲಿ ಈ ಹಿಡುವಳಿದಾರರು 6.1 ಕೋಟಿ ಪೌಂಡ್‌ಗಳಷ್ಟು ಚಹವನ್ನು ಉತ್ಪಾದಿಸಿದರು.

ಸಣ್ಣ ಹಿಡುವಳಿದಾರರಿಗೆ ವಿಸ್ತರಣಾ ಯೋಜನೆಯ ಮೂಲಕ ಅನೇಕ ಸೌಕರ್ಯಗಳನ್ನು ಒದಗಿಸಲಾಗಿದೆ. ಚಹ ಬೆಳೆಯುವ ರೀತಿಯನ್ನು ಕಲಿಸಿಕೊಡಲು ರೈತರುಗಳಿಗೆ ತರಬೇತಿ ಕೊಡಲಾಗುತ್ತದೆ. ಪ್ರಾಯೋಗಿಕ ಕೇಂದ್ರಗಳಿಗೆ ರೈತರನ್ನು ಕರೆತಂದು ಅಲ್ಲಿ ಅವರು ಕೆಲಸ ಮಾಡುವಂತೆ

ಮಾಡಿ ಹೇಗೆ ಚಹ ಬೆಳೆಸಬೇಕೆಂಬುದನ್ನು ಕಲಿಸುತ್ತಾರೆ. ಇದಾದ ಮೇಲೆ ರೈತರು ತಮ್ಮ ಹಿಡುವಳಿಗಳಲ್ಲೇ ಚಹ ಬೆಳೆಯಲಾರಂಭಿಸುತ್ತಾರೆ. ಪ್ರತಿಯೊಂದು ಜಿಲ್ಲೆಯಲ್ಲೂ ಒಬ್ಬ ಚಹ ಅಭಿವೃದ್ಧಿ ಅಧಿಕಾರಿ ಇರುತ್ತಾನೆ. ಈತ ತಿಂಗಳಿಗೊಂದು ಸಲವಾದರೂ ಪ್ರತಿ ರೈತನ ಜಮೀನಿಗೆ ಹೋಗುತ್ತಾನೆ. ರೈತ ಬೆಳೆದಿರುವ ಚಹ ಗಿಡಗಳನ್ನು ಪರೀಕ್ಷಿಸಿ ತಕ್ಕ ಸಲಹೆ ಕೊಡುತ್ತಾನೆ. ಚಹ ಸಂಪೂರ್ಣವಾಗಿ ಎಲೆಯ ರೂಪದಲ್ಲಿ ಕಾರ್ಖಾನೆಗೆ ಒದಗಿಸಲ್ಪಡುವ ತನಕ ರೈತ ಹಣಕ್ಕಾಗಿ ಕಾಯಬೇಕಾಗಿಲ್ಲ. ಪ್ರತಿಯೊಬ್ಬ ರೈತ ಎಷ್ಟು ಪೌಂಡು ಚಹ ಬೆಳೆಯಬಲ್ಲ ಎಂಬ ಅಂದಾಜಿನ ಮೇಲೆ ಪ್ರತಿ ತಿಂಗಳೂ ಅವನಿಗೆ ಸ್ವಲ್ಪ ಹಣವನ್ನು ಮುಂಗಡವಾಗಿ ಕೊಡಲಾಗುತ್ತದೆ. ಅವನು ಚಹ ಬೆಳೆದು ಎಲೆಯನ್ನು ಕಾರ್ಖಾನೆಗೆ ಕೊಟ್ಟ ಮೇಲೆ ಅವನಿಗೆ ಸಲ್ಲಬೇಕಾದ ಪೂರ್ಣ ಹಣ ಕೊಡಲಾಗುತ್ತದೆ. ಜಮೀನಿನ ಹತ್ತಿರವೇ ಕಾರ್ಖಾನೆಯ ಅಧಿಕಾರಿಗಳು ಬಂದು ಚಹ ಎಲೆಯನ್ನು ಶೇಖರಿಸುತ್ತಾರೆ. ಚಹ ಎಲೆಯನ್ನು ಪರಿಷ್ಕರಿಸಿ ಅದನ್ನು ಮಾರುವ ಜವಾಬ್ದಾರಿಯನ್ನು ಕಾರ್ಖಾನೆಯವರೇ ವಹಿಸಿಕೊಳ್ಳುತ್ತಾರೆ. ನಾಟಿ ಮಾಡಲು ಬೇಕಾಗುವ ಉತ್ತಮ ತಳಿಯ ಚಹ ಗಿಡಗಳನ್ನೂ ಕಾರ್ಖಾನೆಯವರೇ ರೈತರಿಗೆ ಒದಗಿಸುತ್ತಾರೆ. ಚಹವನ್ನು ಪರಿಷ್ಕರಿಸುವ ಕಾರ್ಖಾನೆಗಳ ಬಂಡವಾಳಕ್ಕೆ ರೈತರೂ ಹಣ ಒದಗಿಸುತ್ತಾರೆ. ಕಾರ್ಖಾನೆಯ ಒಟ್ಟು ಷೇರುಗಳ ಪೈಕಿ ಸ್ವಲ್ಪ ಭಾಗವನ್ನು ರೈತರಿಗೂ ಹಂಚಲಾಗುತ್ತದೆ. ಇದರಿಂದ ಕಾರ್ಖಾನೆಯ ಆಡಳಿತ ವ್ಯವಸ್ಥೆಯ ಮೇಲೆ ರೈತರ ಹತೋಟಿ ಇರುತ್ತದೆ. ಕ್ರಮೇಣ ಕಾರ್ಖಾನೆಯ ಸಂಪೂರ್ಣ ಮಾಲೀಕತ್ವವನ್ನು ರೈತರೇ ಬೇಕಾದರೆ ವಹಿಸಿಕೊಳ್ಳಬಹುದು.

ಮೇಲ್ಕಂಡ ಪದ್ಧತಿಯನ್ನು ಉಗಾಂಡದಲ್ಲೂ 1966ರಿಂದ ಜಾರಿಗೆ ತರಲಾಗಿದೆ. ಟಾಂಜಾನಿಯದಲ್ಲಿ 1969ರಿಂದ ಈ ಯೋಜನೆ ಜಾರಿಗೆ ಬಂದಿದೆ.

ಪೂರ್ವ ಆಫ್ರಿಕದಲ್ಲಿ ಜಾರಿಗೆ ಬಂದಿರುವ ಈ ಯೋಜನೆಗೆ ಅಲ್ಲಿಯ ಸರ್ಕಾರಗಳ ಸಹಾಯದೊಂದಿಗೆ ಕಾಮನ್‌ವೆಲ್ತ್ ಅಭಿವೃದ್ಧಿ ಕಾರ್ಪೋರೇಶನ್ ಸಹಾಯವೂ ದೊರೆತಿದೆ. ಈ ರೀತಿ ಚಹ ಬೆಳೆಗಾರರಲ್ಲಿ ಉತ್ಸಾಹವನ್ನುಂಟುಮಾಡಿರುವುದರಿಂದ ಮುಂದಿನ ವರ್ಷಗಳಲ್ಲಿ ಚಹ ಉತ್ಪಾದನೆಯನ್ನು ಅಧಿಕಗೊಳಿಸುವ ಸಾಧ್ಯತೆ ಇದೆ. ಆಫ್ರಿಕದಲ್ಲಿ ಉತ್ಪಾದಿಸಿದ ಚಹವನ್ನು ಕೊಳ್ಳುವುದರಲ್ಲಿ ಬ್ರಿಟನ್ ವಿಶೇಷ ಆಸಕ್ತಿ ತೋರಿಸುತ್ತಿದೆ. ಬ್ರಿಟನ್ನಿನ ಪ್ರಮುಖ ಚಹ ವ್ಯಾಪಾರಿ ಸಂಸ್ಥೆಗಳು ತಮ್ಮ ಪ್ರತಿನಿಧಿಗಳನ್ನು ಆಫ್ರಿಕದ ಟೀ ತೋಟಗಳಿಗೆ ಕಳುಹಿಸಿಕೊಡುತ್ತಿವೆ. ಅಲ್ಲಿ ಅವರು ಚಹವನ್ನು ಶೇಖರಿಸಲು ಉಗ್ರಾಣದ ವ್ಯವಸ್ಥೆ ಮಾಡುತ್ತಿದ್ದಾರೆ. ಅನಂತರ ಯಾವ ತೊಂದರೆಯೂ ಇಲ್ಲದೆ ಚಹವನ್ನು ಆಫ್ರಿಕದಿಂದ ಲಂಡನ್, ಅಮೆರಿಕ ಮತ್ತು ಕೆನಡ ಮಾರುಕಟ್ಟೆಗಳಿಗೆ ಸಾಗಿಸುವ ಏರ್ಪಾಡು ಮಾಡುತ್ತಿದ್ದಾರೆ. ಹೀಗೆ ಪ್ರಮುಖ ದೇಶಗಳಾದ ಬ್ರಿಟನ್, ಅಮೆರಿಕ ಮತ್ತು ಕೆನಡದ ವರ್ತಕರು ಆಫ್ರಿಕದ ಚಹದಲ್ಲಿ ಆಸಕ್ತಿ ತೋರಿಸುತ್ತಿರುವುದರಿಂದ ಮುಂದಿನ ವರ್ಷಗಳಲ್ಲಿ ಭಾರತದ ಚಹ ವ್ಯಾಪಾರಕ್ಕೆ ಧಕ್ಕೆ ಒದಗುವ ಸಂಭವವಿದೆ.

ಭಾರತ ಈ ಹೊಸ ಆತಂಕವನ್ನು ಎದುರಿಸಬೇಕಾದರೆ ತನ್ನ ಚಹ ಬೆಲೆಯನ್ನು ತಗ್ಗಿಸಿ ಪೈಪೋಟಿ ದರದಲ್ಲಿ ಚಹ ವಿಕ್ರಯಿಸುವ ಶಕ್ತಿ ಪಡೆಯಬೇಕಾಗುತ್ತದೆ.

ಸೀತಾರಾಮ ಜಾಗೀರ್‌ದಾರ್

# ಪಂಚಮಹಾಶಬ್ದ

ಪುರಾತನಕಾಲದ ರಾಜಮಹಾರಾಜರ, ಮಾಂಡಲಿಕರ, ಸಾಮಂತರ, ಮಂತ್ರಿಗಳ, ದಂಡನಾಯಕರ ಚರಿತ್ರೆಗಳು ಕೇವಲ ಅವರ ವೈಭವವನ್ನಷ್ಟೇ ಅಲ್ಲದೆ ಆಗಿನ ಕಾಲದ ಸಂಸ್ಕೃತಿಯ ಸ್ವರೂಪವನ್ನೂ ಸಾಮಾಜಿಕ ರೀತಿನೀತಿಗಳನ್ನೂ ತಿಳಿಸಿಕೊಡುವ ಸಾಧನಗಳಾಗಿವೆ. ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ ದೊರೆಯುವ ನೂರಾರು ಶಾಸನಗಳಲ್ಲಿ 'ಪಂಚಮಹಾಶಬ್ದ' ಎಂಬ ಪದಪುಂಜ ಅಭ್ಯಾಸಿಗಳಿಗೆ ದೊರೆಯುವ ಅತಿ ಪರಿಚಿತವಾದ ಪ್ರಯೋಗ. ಈ ರಾಜಮಹಾರಾಜರ ವರ್ಣನೆಯಲ್ಲಿ 'ಪಂಚ ಮಹಾಶಬ್ದ'ಕ್ಕೊಂದು ವಿಶಿಷ್ಟ ಸ್ಥಾನ. ಆದರೂ ಅರ್ಥದೃಷ್ಟಿಯಿಂದ ಅದರ ವ್ಯಾಪ್ತಿ ವಿವಿಧ ರೂಪದ್ದಾಗಿವೆ. ಉತ್ತರಾಪಥದಲ್ಲಿ ಅಧಿಕಾರಿಗಳನ್ನು ಸೂಚಿಸಿದರೆ ದಕ್ಷಿಣಾಪಥದಲ್ಲಿ ಅದು ವಾದ್ಯವೃಂದವನ್ನು ಸೂಚಿಸುತ್ತದೆ. ಮತ್ತೆ 'ಪಾಳಿಧ್ವಜ'ದಂತೆಯೇ ರಾಜಪದವಿ ಸೂಚಕ.[1] ಅಶೇಷ ಮಹಾಶಬ್ದ'[2] 'ಮಹಾಶಬ್ದ'[3] 'ಸಮಧಿಗತ ಪಂಚಮಹಾಶಬ್ದ'[4*] 'ಪ್ರಾಪ್ತ ಪಂಚಮಹಾಶಬ್ದ'[5] ಎಂದು ವಿವಿಧ ರೂಪಗಳಿಂದ ಅದು ಶಾಸನ ಹಾಗೂ ಕಾವ್ಯಪ್ರಪಂಚದಲ್ಲಿ ಅಸ್ತಿತ್ವವನ್ನು ಪಡೆದಿದೆ. 'ಮಹಾಶಬ್ದ–5' ಮೂಲತಃ ಅರಮನೆಗಳಲ್ಲಿ ಕೇಳಿ ಬರುತ್ತಿದ್ದ ಐದು ಶಬ್ದಗಳೆಂದು ಅರ್ಥ. ಈ ಐದು ಶಬ್ದಗಳ ಸಂಪ್ರದಾಯ ರಾಜತ್ವದ ಹಾಗೂ ರಾಜವೈಭವದ ಚಿಹ್ನೆಯಾಗಿ ಶಾಸನಗಳಲ್ಲಿಯೂ ಗ್ರಂಥಗಳಲ್ಲಿಯೂ ಸಾಂಕೇತಿಕವಾಗಿ ಉಳಿದುಕೊಂಡುಬಂದಿತಾದರೂ, ಯಾವ ಐದು ಧ್ವನಿಗಳೆಂಬುದು ಕಾಲಕ್ರಮೇಣ ಮರೆತಂತಾಯಿತು. ಇದರ ಪರಿಣಾಮವಾಗಿ ವಿಭಿನ್ನ ಕಾಲಗಳಲ್ಲಿ ಮತ್ತು ವಿಭಿನ್ನ ಸ್ಥಳಗಳಲ್ಲಿ ಈ ಸಂಜ್ಞೆಗೆ ವಿಭಿನ್ನ ವಿವರಣೆಗಳನ್ನು ಕೊಡುವುದು ರೂಢಿಯಾಯಿತು—ಎಂದು ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿಗಳು 'ಶ್ರೀವತ್ಸ ನಿಘಂಟು' ಗ್ರಂಥದಲ್ಲಿ ವಿವರಿಸಿದ್ದಾರೆ; ಹಲವು ವಿವರಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ.[6] ಪಂಚ ಮಹಾಶಬ್ದದ ಬಗ್ಗೆ ಡಾ. ವಿ. ರಾಘವನ್ ಅವರು ಒಂದು ಉತ್ತಮ ಲೇಖನವನ್ನು ಬರೆದಿದ್ದಾರೆ.[7] ಶ್ರೀಯುತರು ಕೋಲ್‌ಬ್ರುಕ್, ಫೂರ್ಬರ್ ಬೂಚ್, ಎಸ್.ಪಿ. ಪಂಡಿತ, ವಾಲ್ಟರ್ ಎಲಿಯಟ್ ಎಫ್.ಎಸ್. ಗೂಸ್. ಜೆ.ಎಫ್. ಫ್ಲೀಟ್,ಕೆ.ಬಿ. ಪಾಠಕ, ಎಸ್.ಕೆ. ಐಯ್ಯಂಗಾರ್–ಮೊದಲಾದವರ ವಿವರಣೆ

---

1 ಡಾ. ಎಂ. ಚಿದಾನಂದಮೂರ್ತಿ, ಕ.ಸಾ.ಪ. ಸಂ–54, ಸಂ.–1, ಅ. ಟಿ. 10, ಪು.4

2–5 *Dr. D.C. Sircar, Indian Epigraphical Glossary,* P. 30, 186, 230, 256, 288

*4(a) ಪಂಪ, ವಿಕ್ರಮಾರ್ಜುನವಿಜಯ, ಪು. 9 (ಆ.1–49)

(b) ವಡ್ಡಾರಾಧನೆ, ಪು. 131, 133, 147 (ನಾಲ್ಕನೆಯ ಮುದ್ರಣ)

6 ಶ್ರೀವತ್ಸ ನಿಘಂಟು, ಪು. 334–5

7 Dr. V. Raghavan, '*Pañcha mahāśabda*' (Indian linguistics, Turner Jubilee Volume), 1958

ಗಳನ್ನು ಕೊಟ್ಟು 'ವಾತುಲ' ಆಗಮದ ಆಧಾರದ ಮೇಲೆ ಹೊಸ ವಿವರಣೆಯನ್ನು ಕೊಟ್ಟರು: Vātula says that (in the temple) at the day-break it is auspicious to sound the pañcha mahāśabda ; and in that connection defines the five great sounds as those emanating from the instruments of wood, metal, hole, conch and from the human voice :

ಅರುಣೋದಯ ಪೂರ್ವೇ ತು ತ್ರಿಪಾಟೀನ ತ್ರಿಣಾಡಿಕಾ
ಕುರ್ಯಾತ್ ಪಂಚ ಮಹಾಶಬ್ದಮ್ ತದಾಽಶುಭಾ ನಿವೃತ್ತಯೇ॥

*   *   *   *   *

ದಾರುಜಮ್ ಚೈವ ಶಂಖಮ್ ಚ ಲೋಹಮ್ ಸುಷಿರಮೇವ ಚ
ಗೇಯಮ್ ಸರ್ವೈಸ್ಸಮಾಯುಕ್ತಃ ಶಬ್ದಃ ಪಂಚವಿದಃ ಸ್ಮೃತಃ॥

ಮತ್ತೆ ತಮಿಳು ಗ್ರಂಥ 'ಭರತ ಸಂಗ್ರಹ' ಕೂಡ ಅವರ ಬೆಂಬಲಕ್ಕಿದೆ. ಆ ಲೇಖನದಲ್ಲಿ ಶ್ರೀಯುತರು 'five great sounds (Pañchmahāśabda) are equated to the five sources of music as in Tamil Lexicons : strings, hole, percussion, metal and the fifth the human voice. These show the completion, of the process of the generalisation of the meaning of this expression ಎಂದೂ ಹೇಳಿದ್ದಾರೆ.[8] ಡಾ. ರಾಘವನ್ ಅವರ ವಿವರಣೆ ಈ ಪದಗುಂಫನದ ಅರ್ಥ ಬೆಳವಣಿಗೆಯಲ್ಲಿ ಸರಿಯಾಗಿದೆ; ಆದರೂ ಅದು ಪಂಚ ಮಹಾಶಬ್ದದ ಮೂಲ ಸ್ವರೂಪವನ್ನು ತಿಳಿಸಿ ಕೊಡುವಲ್ಲಿ ಅಸಮರ್ಥವಾಗಿದೆ. ಇದಕ್ಕೆ ಎರಡು ಕಾರಣಗಳಿವೆ:

1 ಡಾ. ರಾಘವನ್ ಅವರ ಲೇಖನದಲ್ಲಿ ಶ್ರೀಯುತರ ವಿವರಣೆಯನ್ನುಳ್ಳ ಒಂದಾದರೂ ಉದಾಹರಣೆಯಿಲ್ಲ. ಅರ್ಥಾತ್ ರಾಜ ಮಹಾರಾಜರೆದುರು ಅಂತಹ ಪಂಚ ಮಹಾಶಬ್ದ – ಎಲ್ಲಿ ಮನುಷ್ಯನ ಸ್ವರವನ್ನು ಕೂಡ ಒಂದು ಮಹಾಶಬ್ದವೆಂದು ಪರಿಗಣಿಸಿದ್ದರು– ಎಂಬ ಉಲ್ಲೇಖನೆಯ ಆಧಾರ.

2 ಪಾಳಿಧ್ವಜದ[9] ಹಾಗೆ ಪಂಚಮಹಾಶಬ್ದವೂ ಧಾರ್ಮಿಕ ವಲಯದಲ್ಲಿ (ವಾತುಲಾಗಮ –ಇತ್ಯಾದಿ) ಭಿನ್ನ ಸ್ವರೂಪದ್ದಾಗಿರಬಹುದೆಂಬುದನ್ನು ಗಮನಿಸದೆ ಇರುವುದು.

ಉತ್ತರಾಪಥದ ವಿವರಣೆಯಲ್ಲೂ 'ಪಂಚಮಹಾಶಬ್ದ' ಒಂದು ಬಗೆಯ ಅರ್ಥವನ್ನೇ ಹೊಂದಿಲ್ಲ. ಕಲ್ಹಣನ 'ರಾಜತರಂಗಿಣಿ' ಗ್ರಂಥದಲ್ಲಿ ಅದು ಮಹಾ ಪ್ರತಿಹಾರಪೀಡಾ, ಮಹಾಸಂಧಿವಿಗ್ರಹಃ, ಮಹಾಶ್ವಾಸಾಲಾಪಿ, ಮಹಾಭಾಂಡಾಗಾರ, ಮಹಾಸಾಧನ ಭಾಗ[10] ಎಂದಿದ್ದರೆ, ಮೈತ್ರಕ 1 ನೆಯ ಧ್ರುವಸೇನನ ಶಾಸನದಲ್ಲಿ ಮಹಾದಂಡನಾಯಕ, ಮಹಾಸಾಮಂತ, ಮಹಾಪ್ರತಿಹಾರ, ಮಹಾಕಾರ್ತಾಕೃತಿಕ ಮತ್ತು ಮಹಾರಾಜ ಎಂದಿದೆ.[11] ಇವುಗಳಿಂದ ಅದು ಅಧಿಕಾರವನ್ನು ಸೂಚಿಸುವ ಚಿಹ್ನವಾಗಿದೆ

---

8 ಅದೇ, ಪು. 308

9 ಬಾದಾಮಿ ಚಾಳುಕ್ಯ, ರಾಷ್ಟ್ರಕೂಟರ ಲೌಕಿಕ ಪಾಳಿಧ್ವಜಕ್ಕೂ ಜಿನಸೇನರ ಪೂರ್ವಪುರಾಣದ ಪಾಳಿಧ್ವಜ (ಕೇತನ)ಕ್ಕೂ ಸ್ವರೂಪದಲ್ಲಿ ವ್ಯತ್ಯಾಸವಿದ್ದಿತು. ನೋಡಿ–ಡಾ. ಎಮ್. ಚಿದಾನಂದಮೂರ್ತಿಗಳ ಉಪರ್ಯುಕ್ತ ಲೇಖನ–ಅ. ಟಿ. 1

10 ಶ್ರೀವತ್ಸ ನಿಘಂಟು, ಪುಟ–335–? ನೋಡಿ I.E.G.–D.C. Sircar

11 EP. Ind., Vol. XX. P.7 (IEG–P. 175)

ಯೆಂಬುದು ಸುವ್ಯಕ್ತ. ಆದರೆ 'ರಾಮಚರಿತ ಮಾನಸ' ತಂತ್ರಿ, ತಾಲ, ಜಾಂಝ, ನಗಾರಿ ಮತ್ತು ಕಹಳೆ ಎಂಬ ಐದು ವಾದ್ಯಗಳನ್ನೇ ಸೂಚಿಸುತ್ತದೆ.[11a]

ದಕ್ಷಿಣಾಪಥದಲ್ಲಿ ಅದು ರಾಷ್ಟ್ರಕೂಟರ ಶಾಸನಗಳಲ್ಲಿ ಮೊದಲು ಕಾಣಿಸಿಕೊಂಡಿದ್ದುದು "ಸಮಧಿಗತ ಪಂಚ ಮಹಾಶಬ್ದ ಕರ್ಕರಾಜ" ಎಂದು ದಂತಿದುರ್ಗನ ಎಲ್ಲೋರಾ ಶಾಸನದಲ್ಲಿ.[12] ಅಂದಿನಿಂದ ಅದು ದಕ್ಷಿಣ ಭಾರತದಲ್ಲಿ ಐದು ವಾದ್ಯಗಳನ್ನೇ ಸೂಚಿಸುತ್ತದೆ. ಆದರೆ ಅವು ಯಾವುವು ಎಂಬುದು. ಇನ್ನೂ ಅವಿದಿತ ವಿಷಯವೇ. ಉತ್ತರದಲ್ಲಿ 'ಪಂಚಮಹಾಶಬ್ದ' ವಿಶೇಷ ಕೆಲಸವನ್ನೇ ಸೂಚಿಸಿದರೆ ದಕ್ಷಿಣದಲ್ಲಿ ಕೇವಲ ರಾಜಪದವಿಸೂಚಕ ಚಿಹ್ನವಾಗಿದೆ; ಮತ್ತು ಒಬ್ಬ ರಾಜ್ಯಾಧಿಕಾರ ವನ್ನು ಹೊಂದಿದ ವ್ಯಕ್ತಿ ಮಾತ್ರ ಪ್ರಾರಂಭದಲ್ಲಿ ಅದನ್ನು ಹೊಂದಿರಬಹುದಾಗಿದ್ದ ಮೇಳವಾಗಿತ್ತು. ನಂಜನಗೂಡು (ಸುತ್ತೂರಿನ) ಶಾಸನವೊಂದರಲ್ಲಿ[13] ತಿವರಿ, ದಟ್ಟ, ಖಂಡಿಕೆ, ಜಯಘಂಟೆ ಹಾಗೂ ಕಹಳೆಗಳ ಪ್ರಸ್ತಾಪವಿದ್ದು ದೇವಾಲಯದಲ್ಲಿ ಈ ಪಂಚಮಹಾಶಬ್ದವನ್ನು ದೇವರ ಪೂಜೆಯ ಸಮಯ ದಲ್ಲಿ ಮೂರುಸಾರಿ ಬಾರಿಸಲಾಗುತ್ತಿತ್ತೆಂದು ತಿಳಿದು ಬರುತ್ತದೆ. ಇವು ತಮಿಳುನಾಡಿನ ದೇವಾಲಯ ಗಳಲ್ಲಿ ಬಳಸಲಾಗುತ್ತಿದ್ದ (1) ಚೆಣ್ಡೈ, ತಿಮಿಳೈ, ಶೆಗಣ್ಡೆ, ಜಾಗಟೆ ಅಥವಾ ಝಾಯಿ (cymbals) ಮತ್ತು ಕಾಹಳಮ್ ಇಲ್ಲವೆ (2) ತಟ್ಟಳಿ, ಮದ್ದಳಿ, ಕರಟಿಕೈ, ಜಯಘಂಟೆ ಅಥವಾ ಝಾಯಿ (cymbals) ಮತ್ತು ಕಾಹಳಮ್[14] ಇವುಗಳಲ್ಲಿಯೇ ಹೊಂದುತ್ತವೆ. ತಿವರಿ–ತಿವಟಿ ಆಗಿರ ಬಹುದು; ದಟ್ಟ–ತಟ್ಟಳಿ ಆಗಿರಬಹುದು; ಖಂಡಿಕೆ–ಸೆಗಣ್ಡೆ ಆಗಿರಬಹುದು. ಜಯಘಂಟೆ ಹಾಗೂ ಕಾಳೆ ಇವು ಎರಡೂ ಭಾಷೆಗಳಿಗೆ ಸಮಾನವೇ ಆಗಿವೆ. ಈ ಶಾಸನ ಚೋಳರ ಕಾಲಾನಂತರದಲ್ಲಿ ಹುಟ್ಟಿರು ವುದರಿಂದ ಅವರಾಳಿದ ಪ್ರದೇಶದ್ದೇ ಆಗಿರುವದರಿಂದ ಆ ಭಾಷೆಯ ಪ್ರಭಾವ ಅಲ್ಲಿದೆಯೆಂದರೆ ತಪ್ಪಾಗದು. ಇವುಗಳೇ ರಾಜ ಮಹಾರಾಜರ ಮುಂದೆ ಕೂಡ ಇರುತ್ತಿದ್ದುವೆ?–ಎಂಬ ಪ್ರಶ್ನೆಗೆ ಹೌದು ಎಂದು ಹೇಳಲು ಒಂದಾದರೂ ಉದಾಹರಣೆ ನಮ್ಮ ಮುಂದೆ ಇಲ್ಲ. ಕೆಲವು ಸಲ ಅದು ಮಹಾ ವಾದ್ಯ ಗಳಿಂದಲೂ ಭಿನ್ನವಾಗಿರಬಹುದು; ರಾಷ್ಟ್ರಕೂಟ ರಣಾವಲೋಕಕಂಬಯ್ಯನ ಶ್ರವಣಬೆಳ್ಗೊಳದ ಶಾಸನದಿಂದ ಇದು ಸುಸ್ಪಷ್ಟ:

1 ಸ್ವಸ್ತಿ ಸಮಗಧಿ[ಗ]ತ ಪಞ್ಚಮಹಾಶಬ್ದ ಪಡಡಕ್ಕೆ

2 [ಪಾ]ಳಿಧ್ವಜಸಾಮ್ಯಾ............[15]–ಇಲ್ಲಿನ 'ಪಞ್ಚಮಹಾಶಬ್ದ' ಹಾಗೂ 'ಪಡಡಕ್ಕೆ' ಇವುಗಳನ್ನು ಲಕ್ಷಿಸಬೇಕು. ಪಟಢಕ್ಕೆಗಳನ್ನು ರಾಷ್ಟ್ರಕೂಟರು ಬಾದಾಮಿಯ ಚಾಳುಕ್ಯರಿಂದ ಪಾಳಿಧ್ವಜದೊಂದಿಗೆ ಕಿತ್ತುಕೊಂಡರೆಂಬುದನ್ನು ಜ್ಞಾಪಕಕ್ಕೆ ತಂದುಕೊಂಡರೆ[16] ಅವರ 'ಪಂಚಮಹಾ ಶಬ್ದ' ರಾಜ ಚಿಹ್ನ, ಒಂದು ವಿಶೇಷ ಬಗೆಯದ್ದಾಗಿದ್ದಿತ್ತು–ಎಂದು ವ್ಯಕ್ತವಾಗುತ್ತದೆ.

---

11a T.J. Vol , P. 703

12 ಕರ್ನಾಟಕ ಇತಿಹಾಸ (ಆರ್. ಎಸ್. ಪಂಚಮುಖಿ), ಪು. 284

13 E.C. Vol. III. NJ. No. 164. 1092 A.D.

14 *South Indian Temple' Inscriptions*–Glossary ; I.E.G.-P.231 ನೋಡಿ: ಪಂಚಮಾಸತ್ತಮ್

15 *E.C.* vol. II (3rd Edition), No. 38. P. 14

16 *EP.Ind.*, Vol. XXII. ಜೆಟ್ಟಾಯಿಯ ತಾಮ್ರಶಾಸನ. ಪಟಢಕ್ಕಾ→ಪಡಡಕ್ಕೆ ಆಗು ವುದರಿಂದ ಶ. ದರ್ಪಣದ ಸೂತ್ರ 281ರ ಕೆಳಗೆ ಬರುವ ಉದಾಹರಣೆ ಪದಢಕ್ಕೆ→ಪಡಢಕ್ಕೆ (ಶಬ್ದ ಮಣಿದರ್ಪಣ–ಪ್ರೊ. ಡಿ. ಎಲ್. ಎನ್. ಅವರ 3ನೆಯ ಮುದ್ರಣ–ಪು. 318) ಎನ್ನುವುದು ಸರಿಯಾದ ಉದಾಹರಣೆಯಲ್ಲ. ಕ್ರಿ.ಶ. ಸು. 13ನೆಯ ಶತಮಾನದ ವರೆಗೂ ದ ಡ ಗಳಿಗೆ ವ್ಯತ್ಯಾಸವೇ ಇದ್ದಿಲ್ಲ– ಕ.ಸಾ.ಪ. ಪತ್ರಿಕೆ, ಸಂ. 57, ಸಂ. 2. ಇದು ಲಿಪಿ ಸ್ಖಾಲಿತ್ಯ.

ಡಿ. ಕಿಟ್ಟೆಲ್ ಅವರು 'ವಿವೇಕ ಚಿಂತಾಮಣಿ'ಯನ್ನು ಆಧರಿಸಿ ಪಂಚ ಮಹಾವಾದ್ಯಗಳನ್ನು ವಿವರಿಸಿದ್ದಾರೆ: ತನ್ತ್ರಿಯಿಂ ಕಟ್ಟಿ ನುಡಿಸುವ ವೀಣಾದಿಕ ವೇತತವೆನಿಸುವುದು. ಚರ್ಮವ ಕಟ್ಟಿ ನುಡಿಸುವ ಮುರುಜಾದಿಕವೇ ಆನದ್ಧವೆನಿಸುವುದು, ಕಂಚಿನ ತಾಳಾದಿಕವೇ ಘನವೆನಿಸುವುದು, ಊದಿ ಬಾರಿಸುವ ನುಡಿಮೇಳ ಮೊದಲಾದುದೇ ಸುಷಿರವೆನಿಸುವುದು. ಇನ್ನು ಚತುರ್ವಿಧ ವಾದ್ಯಂಗಳಂ ಅವುಗಳಲ್ಲಿ ಅವಾನ್ತರ ಭೇದಗಳಾದ ಶೃಂಗವಾದ್ಯವೆಂಬ ಕೊಂಬು. ತಮ್ಮಟವೆಂಬ ಹಲಗೆ, ಶಂಖವೆಂಬ ಧವಳ, ಭೇರಿಯೆಂಬ ಬಾಜಾ. ಜಯಘಂಟೆಯೆಂಬ ಜಾಗಟೆ–ಇತ್ತೆಱದ ಪಂಚಮಹಾವಾದ್ಯಂಗಳಂ–ಭದ್ರವೆಮ್ಬ ಕರಡೆ. ಶಾಸಕವೆಮ್ಬ ನಗಾರಿ. ಘೀಷಣವೆಮ್ಬ ತ್ರಾಸಾ. ಘೋಷಣವೆಮ್ಬ ಹುಡುಕ್ಕಾ. ಡಿಣ್ಡಿಮವೆಮ್ಬ ಡಿಕ್ಕಿ. ಡಮರುವೆಮ್ಬ ಡೋಲು. ಝರ್ಝರವೆಮ್ಬಾ ಝಾಯಿ. ಕಾಹಲವೆಮ್ಬ ಗವುರಿಕಾಳೆ, ದುನ್ದುಭಿಯೆಮ್ಬ ಥೋರ. ಘಣ್ಟೆಯೆಮ್ಬ ಗಣ್ಟೆ–ಇತ್ತೆರ ದಶವಾದ್ಯಂಗಳಂ ಬಾಜಿಸಲುಳ್ಳ ವಿಚಕ್ಷಣರ್[17]–ಇತ್ಯಾದಿ. ಈ ಇತ್ತೆರ ದಶವಾದ್ಯಂಗಳಲ್ಲಿ "ಘೋಷಣವೆಮ್ಬ ಹುಡುಕ್ಕಾ" ಇದನ್ನು ರಾಜ ಮಹಾರಾಜರ ಮುಂದೆ ಹೇಳುತ್ತಿದ್ದರೆನ್ನುವದಕ್ಕೆ ಆಧಾರವಿಲ್ಲ. ಮೇಲಾಗಿ 'ಹುಡುಕ್ಕಾರ' ಅಥವಾ 'ಡುಣ್ಣುಮ್ಮಾರ' ಭಕ್ತನು ಈಶ್ವರನ ಮುಂದೆ ಮಾಡುವ ಧ್ವನಿವಿಶೇಷ.[18] ಆದುದರಿಂದ ಅದು ರಾಜಚಿಹ್ನ ಸೂಚಕ. 'ಪಞ್ಚ ಮಹಾಶಬ್ದ'ದಲ್ಲಿ ಇದ್ದಿತೆಂದು ಹೇಳಲು ಬರುವದಿಲ್ಲ. ಇದೇ ಕಾರಣಕ್ಕಾಗಿ ಡಾ. ರಾಘವನ್ ಅವರ 'Human Voice' (ಮನುಷ್ಯನ ಧ್ವನಿ) ಇದನ್ನು ಕೂಡ ಸೇರಿಸಬಾರದು. ಇನ್ನು ವಾತುಲಾಗಮವು ಶೈವಧರ್ಮದ ತಂತ್ರವನ್ನು ನಿರೂಪಿಸುವ ಕೃತಿಯಾಗಿದ್ದು ಅದು ರಾಜಚಿಹ್ನೆ ಸೂಚಕ ಪಂಚಮಹಾಶಬ್ದವನ್ನು ಸೂಚಿಸದು ಕೂಡ. ಆದುದರಿಂದ 'ಸಮಧಿಗತ ಪಞ್ಚ ಮಹಾಶಬ್ದ' ಇದನ್ನು ವಿವರಿಸುವಲ್ಲಿ ಇನ್ನೂ ಬೇರೆ ಆಧಾರಗಳನ್ನೇ ಹುಡುಕಬೇಕಾಗಿದೆ.

ಡಿ. ಕೆ.ಬಿ. ಪಾಠಕರು ವಿವೇಕ ಚಿಂತಾಮಣಿಯನ್ನೇ ಆಧರಿಸಿ ಶೃಂಗ. ಭೇರಿ. ತಮ್ಮಟೆ. ಶಂಖ ಮತ್ತು ಜಯಘಂಟೆ–ಇವುಗಳೇ ಪಂಚಮಹಾಶಬ್ದಗಳೆಂದು ವಿವರಿಸಿದುದು[19] ಸೂಕ್ತವೆಂದು ತೋರಿದರೂ ಇನ್ನೂ ವಿಚಾರಣೀಯವಾದ ಅಂಶವೇ. ಜಯಘಂಟೆ ಎಂಬಲ್ಲಿ ಜಾಗಟೆ. ಗಂಟೆ. ಮತ್ತು ಝಾಯಿ ಇವುಗಳಲ್ಲಿ ಯಾವುದು–ಇದಮಿತ್ಥಂ ಎಂದು ಹೇಳಲು ಬರುವದಿಲ್ಲ. ಬಿ. ಸಿ. ಭಟ್ಟಾಚಾರ್ಯರು ದುಂದುಭಿಯನ್ನು ವಿವರಿಸುತ್ತ ಹೀಗೆ ಬರೆದಿದ್ದಾರೆ: The Heavenly Dundubhis consist of five musical instruments. These are the 'Pañchamahāśabda', viz., 1 'śringa, the horn, 2 tammata, the drum, 3 śaṃkha, the conch shell, 4 bheri, the trumpet and 5 Jayaghāt, the cymbal[20]. ಕಾರಣ ಶ್ರೀ ಪಾಠಕರ ವಿವರಣೆ ಧಾರ್ಮಿಕ ವಲಯವನ್ನೇ ಸೂಚಿಸುತ್ತದೆಯೆಂದು ನಮಗೆ ತೋರುತ್ತದೆ. ಪಂಚಮಹಾಶಬ್ದ ಹಾಗೂ ಪಂಚಮಹಾನಿನದ ಇವರ ಏಕೀಕರಣದ ಬಗೆಗೆ ಡಾ. ಡಿ. ಸಿ. ಸರ್ಕಾರರೂ ಕಿಂಚಿದ್ ಸಂಶಯ ವ್ಯಕ್ತಪಡಿಸಿದಂತೆ ನಮಗೆ ತೋರುತ್ತದೆ.[21] ರಾಜಚಿಹ್ನ ಸೂಚಕ 'ಸಮಧಿಗತ ಪಂಚಮಹಾಶಬ್ದ' ಇದರ ಅರ್ಥದ ಅಸ್ಪಷ್ಟತೆಯನ್ನು ದೂರ ಮಾಡುವ ಸಾಧನವೊಂದು ಇತ್ತೀಚೆಗೆ ಪ್ರಕಾಶಕ್ಕೆ ಬಂದಿದೆ. ಅದೆಂದರೆ ಅರ್ಥಾಪುರದಲ್ಲಿ ದೊರೆತ ರಟ್ಟವಂಶದ ಬಲ್ಲಾಳ ಭೂಪನ ಶಿಲಾಶಾಸನ. ಆ ಭಾಗವಿಂತಿದೆ:

[17] F. Kittel, *Kannada English Dictionary*, vol. 3, P. 976

[18] Prof.K.K. Handiqui, *Yasastilaka and Indian Culture*,p.202

[19] *Ind. Ant. vol.* XII. Jan. 1883, PP. 95–6

[20] *Jain Iconography*, p. 190. ಶ್ರೀಯುತರ ಹೇಳಿಕೆಗೆ ಆಧಾರ. ಪ್ರೊ. ಭಂಡಾರ್ಕರ್ ಅವರ ಹೇಳಿಕೆಯೆಂದಿದ್ದಾರೆ.

[21] I.E.G. P. 230

ಸ್ವಸ್ತಿ ಸಮಸ್ತಪ್ರಶಸ್ತಿಸಮವೇತ ಭೇರಿ ನಿಸ್ಸಾಣ ಮೃದಂಗ ಕಾಹಲ ಶಂಖಾದಿ ಸಮಧಿಗತ ಪಂಚಮಹಾಶಬ್ದಾಲಂಕಾರಾಲಂಕೃತಾಗಣ್ಯ ಪುಣ್ಯ 'ಸಂಭವಃ॥ ಸಕಲ ಭುವನ ಸಾಮ್ರಾಜ್ಯೋನ್ನತಿ ಲಕ್ಷಣ ಸಹಸ್ರ ಫಲಭೋಗ ಭಾಗಯುಕ್ತಾಃ॥ ರಟ್ಟಕುಲ ಕಮಲ ಮಾರ್ತಂಡಃ... ಶ್ರೀ ಬಲ್ಲಾಳ ಭೂಪಃ...... ಇತ್ಯಾದಿ.[22] ಮೂಲತಃ ರಾಜಚಿಹ್ನಗಳಾವ ಪಾಳಿಧ್ವಜ ಪಂಚಮಹಾಶಬ್ದಗಳು, ಕಾಲಕ್ರಮದಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಮಾರ್ಪಟ್ಟುದೂ ಸ್ಪಷ್ಟವಿದೆ. ಧಾರ್ಮಿಕ ವಲಯದಲ್ಲಿ ಹೊಸ ರೂಪವನ್ನೂ ತಳೆದಿವೆ. ಪಂಚ ಮಹಾಶಬ್ದವನ್ನು ರೇಖೆಯ ಮೂಲಕ ಹೀಗೆ ಗುರುತಿಸಬಹುದು:

**ಪಂಚ ಮಹಾಶಬ್ದ**

- ಲೌಕಿಕ
  - ಉತ್ತರಾಪಥ: ಐದು ಅಧಿಕಾರಗಳು ; ಇವು 'ಮಹಾ' ಶಬ್ದದಿಂದ ಕೂಡಿರುತ್ತವೆ.
  - ದಕ್ಷಿಣಾಪಥ: ಐದು ವಾದ್ಯಗಳ ಒಂದು ಮೇಳ: ಭೇರಿ, ನಿಸ್ಸಾಣ, ಮೃದಂಗ, ಕಹಳೆ, ಶಂಖ
- ಧಾರ್ಮಿಕ
  - ವಾತುಲ: ದಾರುಜ, ಶಂಖ, ಲೋಹ, ಸುಷಿರ, ಗೇಯ
  - ವಿವೇಕ ಚಿಂತಾಮಣಿ: ಶೃಂಗ, ಭೇರಿ, ಶಂಖ ಹಾಗೂ ಜಯ ಘಂಟೆ—ಅನಿರ್ದಿಷ್ಟವೆಂದರೂ ನಡೆಯುತ್ತದೆ.[23]
  - ರಾಮಚರಿತ ಮಾನಸ: ತಂತ್ರೀ, ತಮ್ಮಟೆ, ತಾಲ, ಜಾಂರಝು, ನಗಾರಿ, ಕಹಳೆ

---

22 Dr. S.H. Ritti and Sri G.C. Shelke, *Inscriptions from Nanded District*, INS. No. 40· P.86

23 ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ 338

ಇತಿಹಾಸ ಪ್ರಗತಿಪರವಾಗಬೇಕಾದರೆ, ಮಾನವನ ಜೀವನ ಉತ್ತಮವಾಗಬೇಕಾದರೆ, ಸಂಸ್ಕೃತಿ, ಕಲೆ, ಸಾಹಿತ್ಯ ಎಷ್ಟು ಪರಿಣಾಮಕಾರಿ ಎಂಬ ಅರಿವು ಪ್ರಬಲವಾಗುತ್ತಾ ಬರಬೇಕು. ಕಾರ್ಯಕಾರಣ ಜಗತ್ತಿನಲ್ಲಿ ಜರುಗುವ ಅಂಶಗಳ ತಿಳಿವಳಿಕೆ ಉಂಟಾದರೆ, ಮೆಟ್ಟಿಲು ಮೆಟ್ಟಿಲಾಗಿ ವಿಕಾಸಗೊಂಡು ಬಂದ ಮಾನವನ ನಾಗರಿಕತೆಯು ಸತ್ಯದರ್ಶನವಾಗುತ್ತದೆ. ಘಟನಾವಳಿಗಳು ಬಿಡಿ ಬಿಡಿಯಾಗಿ ಆಕಸ್ಮಿಕವಾಗಿ ಸಂಭವಿಸುವುದಿಲ್ಲ. ಪ್ರತಿಯೊಂದು ಘಟನೆಗೂ ಕಾರಣಗಳಿವೆ. ಕಾರ್ಯಕಾರಣ ಸಮಂಜಸವಾದ ಅಂಶಗಳು ಭೂಮಿ ಜಗತ್ತಿನಲ್ಲಿ ಜರುಗುವ ವಿಷಯಗಳ ರೀತಿನೀತಿ ರೂಪರೇಖೆಗಳನ್ನು ಸೂಚಿಸುತ್ತವೆ. ಇದು ವೈಜ್ಞಾನಿಕವಾಗಿಯೇ ಇದೆ. ನಿರ್ಜೀವ ವಸ್ತುಗಳ ವಿಮರ್ಶೆಯಲ್ಲಿ ಫಲಿತಾಂಶಗಳು ಏಕರೀತಿಯಾಗಿ ಸಂಶಯಕ್ಕೆ ಆಸ್ಪದವಿಲ್ಲದ ರೀತಿಯಲ್ಲಿ ಜರುಗುವುವು ಎಂದು ಘಂಟಾಘೋಷವಾಗಿ ಹೇಳಬಹುದು. ಆದರೆ ಮಾನವನ ನಡೆವಳಿಕೆ ಹಾಗಲ್ಲ. ನಭೋ ಮಂಡಲವನ್ನು ಭೇದಿಸಿ ಅದರಲ್ಲಿ ಅಡಗಿದ ಮೂಲಭೂತ ತತ್ತ್ವವನ್ನು ನಿರ್ದಿಷ್ಟವಾಗಿ ವಿವರಿಸುವುದು ಹೇಗೆ ಸಾಧ್ಯವಿಲ್ಲವೋ ಹಾಗೆ ಮಾನವನ ಸ್ವಭಾವವನ್ನೂ ನಡೆನುಡಿಗಳನ್ನೂ ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. ಗೊಂದಲಮಯ ಜಗತ್ತಿನಲ್ಲಿ ದಾರುಣಕರ ಸನ್ನಿವೇಶದಲ್ಲಿ ಸ್ವಯಂಪ್ರೇರಣೆಯಿಂದ ವರ್ತಿಸುವ ಮಾನವ ಹೇಗೆ ನಡೆದುಕೊಳ್ಳುತ್ತಾನೆಂಬುದು ಕುತೂಹಲಕರ. ಯುದ್ಧ, ಶಾಂತಿ, ಆಂದೋಲನ, ವಿಪ್ಲವ ಇಂಥ ನಾನಾ ಸನ್ನಿವೇಶಗಳಲ್ಲಿ ಮಾನವನ ಚಂಚಲ ಮನಸ್ಸು ನಡೆದುಕೊಳ್ಳುವ ರೀತಿಯಿಂದ ಇತಿಹಾಸ ವಿಸ್ಮಯಕಾರಿಯಾಗಿದೆ. ಆದ್ದರಿಂದಲೇ ಕಾರ್ಯಕಾರಣ ಸಮಂಜಸವಾಗಿ ವ್ಯಕ್ತಿಯ ಮತ್ತು ಮಾನವ ಸಮಾಜದ ವಿಮರ್ಶೆಯೂ ನಿರ್ಧಾರಗಳೂ ಮಸಕುಮಸಕಾಗಿವೆ. ದೈವ ಮತ್ತು ಆಸುರೀ ಪ್ರವೃತ್ತಿಗಳ ನಡುವೆ ಹೊಯ್ದಾಡುವ ಮಾನವನ ಮನಸ್ಸು ಇದಕ್ಕೆ ಕಾರಣ. ಮನಶ್ಶಾಸ್ತ್ರ, ಭೌತಶಾಸ್ತ್ರ ಮತ್ತು ಇತರ ಶಾಸ್ತ್ರಗಳನ್ನು ಅಭ್ಯಾಸ ಮಾಡಿದವರು ಆ ಚರಾಚರ ವಸ್ತುಗಳಂತೆಯೇ ಮಾನವನ ವರ್ತನೆಯೂ ಇಲ್ಲವೆಂಬುದನ್ನು ಅರಿಯಬಲ್ಲರು. ಬಾಹ್ಯ ಪ್ರಪಂಚದಲ್ಲಿ ಜರುಗುವ ವಿಚಿತ್ರ ವ್ಯಾಪಾರಗಳನ್ನು ನಿಯಂತ್ರಿಸಲು ಮಾನವನಿಗೆ ಸಂಪೂರ್ಣ ಶಕ್ತಿಯಿಲ್ಲ. ಸಮುದ್ರದಲ್ಲಿ ಅಲೆಗಳ ಮೇಲೆ ಅಲೆಗಳು ಬಂದು ಬಡಿಯುವಂತೆ, ಅಗೋಚರವಾದ ಅಗಮ್ಯವಾದ ಅಂಶಗಳು ಮಾನವನ ಇತಿಹಾಸವನ್ನು ತಿದ್ದುತ್ತಿರುತ್ತವೆ.[1]

—ಕನ್ನಡ ವಿಶ್ವಕೋಶ

1 'ಇತಿಹಾಸ ದೃಷ್ಟಿ', ಕನ್ನಡ ವಿಶ್ವಕೋಶ, ಸಂ. 2, ಪು. 364

'ರಘುಸುತ'

# ಭಾರತದಲ್ಲಿ ಭೂಪಟಗಳ ನಿರ್ಮಾಣ

ಪ್ರಾಚೀನ ಭಾರತದಲ್ಲಿ ಭೂಪಟಗಳಿದ್ದುವು ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರೆತಿಲ್ಲ. ಅಲ್ಲದೆ ಭೂಪಟಗಳ ಬಗ್ಗೆ, ಅವುಗಳ ನಿರ್ಮಾಣದ ಬಗ್ಗೆ ಸ್ಥಳಜನ್ಯ ಸಂಪ್ರದಾಯವಿದ್ದಂತೆಯೂ ಕಂಡು ಬರುವುದಿಲ್ಲ. ಆದರೆ ಪ್ರಾಚೀನ ಭಾರತೀಯ ಗ್ರಂಥಗಳಲ್ಲಿ ಅನೇಕ ಭೌಗೋಳಿಕ ವಿವರಗಳಿರುವುದನ್ನು ಕಾಣಬಹುದು. ವೇದ ಹಾಗೂ ಪುರಾಣಗಳ ಮುಖಾಂತರ ವಿಶ್ವ ಹಾಗೂ ಅದರ ಸೃಷ್ಟಿಯ ಬಗ್ಗೆ ಅನೇಕ ಹೇಳಿಕೆಗಳಿವೆ.

ಮಹಾಭಾರತದಲ್ಲಿಯ ಕಥನದಂತೆ ಭಾರತ ಸಮಕೋನ ತ್ರಿಭುಜವಾಗಿತ್ತು. ಇದನ್ನು ಮತ್ತೆ ನಾಲ್ಕು ಸಮಾನ ತ್ರಿಭುಜಗಳಾಗಿ ವಿಂಗಡಿಸಲಾಗಿತ್ತು. ಈ ತ್ರಿಭುಜದ ಶೃಂಗಭಾಗ ಕನ್ಯಾಕುಮಾರಿಯ ಬಳಿಯಲ್ಲಿದ್ದು, ಪಾದ ಹಿಮಾಲಯ ಪರ್ವತ ಶ್ರೇಣಿಗಳಿಗೆ ಸಮಾನವಾಗಿ ಹರಡಿತ್ತು. ಆಗ ಪರಿಚಯವಿದ್ದ ಪ್ರಪಂಚವನ್ನು ಭಾರತೀಯರ ಕ್ರೌಂಚದ್ವೀಪ, ಘಾಲಾಕ್ಷದ್ವೀಪ, ಕುಶದ್ವೀಪ, ಶಲ್ಮಲೀದ್ವೀಪ, ಜಂಬೂದ್ವೀಪ, ಪುಷ್ಕರದ್ವೀಪ, ಶಕದ್ವೀಪ–ಎಂಬ ಏಳು ದ್ವೀಪಗಳಾಗಿ ವಿಭಾಗಿಸಿದ್ದರು. ಇವುಗಳಲ್ಲಿಯ ಜಂಬೂದ್ವೀಪದಲ್ಲಿ ಭಾರತ ಇದೆಯೆಂದು ಅವರು ತಿಳಿದಿದ್ದರು. ಭೂಮಿ ಗುಂಡಾಗಿದ್ದು ನೀರಿನಿಂದ ಆವೃತವಾಗಿತ್ತೆಂದು ಭಾವಿಸಲಾಗಿತ್ತು. ಮೇರು ಪರ್ವತ ಭಾರತದ ಕೇಂದ್ರವಾಗಿತ್ತೆಂಬುದನ್ನು ಗಮನಿಸಬಹುದಾಗಿದೆ.

ಇದಕ್ಕೆ ಭಿನ್ನವಾದ ಭಾವನೆ ಅನಂತರ ಬೆಳೆಯಿತು. ಭಾರತದ ಪ್ರಾಚೀನತಮ ಭೂಪಟಗಳನ್ನು ಗ್ರೀಕರು ನಿರ್ಮಿಸಿದರು. ಕ್ರಿ.ಪೂ. 4ನೆಯ ಶತಮಾನದಲ್ಲಿ ನಡೆದ ಅಲೆಗ್ಝಾಂಡರನ ದಂಡಯಾತ್ರೆ ಹಾಗೂ ಹೀರೊಡೊಟಸ್ ಮತ್ತಿತರರು ಒದಗಿಸಿದ ವಿವರಗಳ ಆಧಾರದ ಮೇಲೆ ಎರಟಾಸ್ತನೀಸ್ ತನ್ನ ಭೂಪಟಗಳಲ್ಲಿ ಕ್ರಿ.ಪೂ. 200ರಲ್ಲೆ ಭಾರತವನ್ನು ಚಿತ್ರಿಸಿದ. ಇದು ವಜ್ರದ ಆಕಾರ ಹೊಂದಿತ್ತು. ಇದರಲ್ಲಿ ಸಿಂಧೂನದಿ ಪಶ್ಚಿಮದಲ್ಲೂ ಪರ್ವತಗಳು ಉತ್ತರದಲ್ಲೂ ಇದ್ದುವು. ಪೂರ್ವ ಮತ್ತು ದಕ್ಷಿಣಗಳಲ್ಲಿ ಸಮುದ್ರವಿತ್ತು.

ಅನಂತರದ ಗ್ರೀಕ್ ಭೂಗೋಳಜ್ಞರಾದ ಹೀರೊಡೊಟಸ್ ಮತ್ತು ಟಾಲಿಮಿ ಇವರು ಭಾರತದ ಭೂಪಟವನ್ನು ನಿರ್ಮಿಸಿದರು. ಕ್ರಿ.ಶ. 150ರಲ್ಲಿ ಟಾಲಿಮಿ ರಚಿಸಿದ ಭೂಪಟದಲ್ಲಿ ಭಾರತದ ಆಕಾರ ವಕ್ರಗೊಂಡಿದೆ. ದಖನ್ ಪೀಠಭೂಮಿ ಇರುವುದಕ್ಕಿಂತ ಕುಬ್ಜವಾಗಿದೆ. ದಕ್ಷಿಣ ಭಾರತದ ದಕ್ಷಿಣ ತುದಿಯನ್ನು ಸುಮಾರಾಗಿ ಸರಳರೇಖೆಯನ್ನಾಗಿ ಮಾಡಿ. ಸಿಂಧೂನದಿಯ ಮುಖಜಭೂಮಿಯನ್ನು ಗಂಗಾನದಿಯ ಮುಖಜಭೂಮಿಗೆ ಸೇರಿಸಲಾಗಿದೆ. ದುರದೃಷ್ಟವಶಾತ್ ಭಾರತದ ಈ ಆಕಾರ ಸುಮಾರು ಒಂದೂವರೆ ಸಹಸ್ರ ವರ್ಷಗಳ ವರೆಗೂ ಭೂಪಟಗಳಲ್ಲಿ ಮುಂದುವರಿಯಿತು. ಟಾಲಿಮಿಯ ಭೂಪಟವನ್ನು ಕ್ರಿ.ಶ. 18ನೆಯ ಶತಮಾನದ ವರೆಗೂ ಆಧಾರಪೂರ್ಣವಾದ ಭೂಪಟ ಎಂದು ಭೂಗೋಳಶಾಸ್ತ್ರಜ್ಞರು ನಂಬಿದ್ದರು.

ಆರ್ಯಭಟ ತನ್ನ 'ಆರ್ಯಭಟೀಯ'ದಲ್ಲಿ ಭೂಮಿ ಮತ್ತು ಸೂರ್ಯನ ಚಲನೆಯ ಸಂಬಂಧವನ್ನು ವಿವರಿಸಿದ್ದಾನೆ. ಇವನ ಲೆಕ್ಕಾಚಾರದ ಪ್ರಕಾರ ಭೂಮಿಯ ಸುತ್ತಳತೆ 33.177 ಮೈಲಿಗಳು. ಭೂಮಿ ಹಾಗೂ ಸೂರ್ಯನ ಸಂಬಂಧವನ್ನು ವಿವರಿಸುವ ಭೌತಿಕ ಸೂತ್ರಗಳಲ್ಲಿ ಭೂಮಿ ಮೊಟ್ಟೆ

ಯಂತೆ ಗುಂಡಾಗಿದೆಯೆಂದು ಹೇಳಲಾಗಿದೆ. ಭೂಮಿಗೂ ಸೂರ್ಯನಿಗೂ ಇರುವ ದೂರವನ್ನು ಶೌನಕ ಲೆಕ್ಕಹಾಕಿದ್ದಾನೆ. ಬ್ರಹ್ಮಗುಪ್ತ ತನ್ನ 'ಸಿದ್ಧಾಂತ' ಎಂಬ ಗ್ರಂಥದಲ್ಲಿ ಭೂಮಿಯ ಸುತ್ತಳತೆಯನ್ನು 50.936 ಮೈಲಿಗಳೆಂದು ತಿಳಿಸಿದ್ದಾನೆ. ಭೂಮಿಯ ಸುತ್ತಳತೆ 24.385 ಮೈಲಿಗಳು, ವ್ಯಾಸ 7.905 ಮೈಲಿಗಳು, ಭೂಮಿಯ ಮೇಲ್ಮೈ 39.63.25.850 ಚ.ಮೈ.ಗಳು ಎಂದೂ ಭೂಮಿಯ ಮೇಲಿನ ವಾಯುಮಂಡಲ 60 ಮೈಲಿಗಳಿಗಿಂತ ಹೆಚ್ಚಿನ ಎತ್ತರದ ವರೆಗೂ ವ್ಯಾಪಿಸಿದೆಯೆಂದೂ ಭಾಸ್ಕರ ತಿಳಿಸುತ್ತಾನೆ. ಪ್ರಾಚೀನ ಭಾರತೀಯರು ಆಫ್ರಿಕದ ಪೂರ್ವತೀರ ಪ್ರದೇಶಗಳು, ಗ್ರೀಕ್ ಹಾಗೂ ರೋಮನ್ ಚಕ್ರಾಧಿಪತ್ಯಗಳೊಂದಿಗೆ ವ್ಯಾಪಾರ ಸಂಬಂಧ ಹೊಂದಿದ್ದರು; ಅಲ್ಲದೆ ಆಗಾಗ್ಗೆ ಪ್ರವಾಸಗಳನ್ನೂ ಕೈಗೊಳ್ಳುತ್ತಿದ್ದರು. ಗ್ರೀಕ್ ನಾಟಕಗಳಲ್ಲಿ ಕನ್ನಡ ಪದಗಳ ಬಳಕೆ ಇರುವುದೇ ಇದಕ್ಕೆ ಉದಾಹರಣೆ.

ಪುರಾಣಗಳಲ್ಲಿ, ಸಂಸ್ಕೃತ ಕಾವ್ಯ ನಾಟಕಗಳಲ್ಲಿ, ಶಾಸನಗಳಲ್ಲಿ ಕಂಡುಬರುವ ಅನೇಕ ಭೌಗೋಳಿಕ ವಿವರಗಳನ್ನು ಗಮನಿಸಿದರೆ ದಕ್ಷಿಣ ಭಾರತದ ಸಾಮ್ರಾಜ್ಯಗಳು ಪೂರ್ವ ಹಿಂದ್ ದ್ವೀಪಸ್ತೋಮ, ಕಾಂಬೋಡಿಯ, ಮಲಯ, ಬರ್ಮ, ಶ್ರೀ ಲಂಕಾದ್ವೀಪ—ಇತ್ಯಾದಿ ದೇಶಗಳಲ್ಲಿ ತಮ್ಮ ಚಕ್ರಾಧಿಪತ್ಯಗಳನ್ನು ಹರಡಿರುವುದನ್ನು ಗಮನಿಸಿದರೆ, ಬಹು ಹಿಂದೆಯೇ ಭಾರತೀಯರು ಅಮೆರಿಕಗಳ ವರೆಗೂ ಪ್ರವಾಸ ಮಾಡಿ ಅಲ್ಲಿ ಭಾರತದ ಸಂಸ್ಕೃತಿಯನ್ನು (ಅಜ್ಟೆಕ್ ಮತ್ತು ಇನ್ಕ ಸಂಸ್ಕೃತಿ) ಹರಡಿರುವುದನ್ನು ಗಮನಿಸಿದರೆ, ಭೂಪಟಗಳಿಲ್ಲದೆ, ಮಾರ್ಗದರ್ಶಕ ಜಲಪಟಗಳಿಲ್ಲದೆ ಅವರು ಸಮುದ್ರಯಾನ ಮಾಡುತ್ತಿದ್ದರೆಂದರೆ ನಂಬಲಸಾಧ್ಯವಾದ ಮಾತು. ಅವರು ಗ್ರೀಕರು ಹಾಗೂ ಅರಬ್ಬರನ್ನು ಸಂಧಿಸಿದಾಗ, ಜ್ಞಾನದ ವಿನಿಮಯ ಆದಾಗ, ತಾತ್ತ್ವಿಕ ಹಾಗೂ ವಾಸ್ತುಶಿಲ್ಪದ ಪರಸ್ಪರ ಪ್ರಭಾವ ಉಂಟಾದಾಗ, ಅಲ್ಲಿಯ ಭೌಗೋಳಿಕ ಪ್ರಗತಿಯಿಂದ ಭಾರತೀಯರು ಪ್ರಭಾವಿತರಾಗಲಿಲ್ಲವೆನ್ನಲಾಗುವುದಿಲ್ಲ. ಅದೂ ಅಲ್ಲದೆ ಪ್ರವಾಸ ಆಗಿನ ಜೀವನದ ಒಂದು ಅಂಗವಾಗಿತ್ತು. (ಉದಾ: ಮದುವೆಗಳಲ್ಲಿ ಕಾಶೀಯಾತ್ರೆ ಇತ್ಯಾದಿಗಳು). ಈ ತರಹದ ಭೂಪಟದ ದಾಖಲೆಗಳು ನಮ್ಮಲ್ಲಿ ಇದ್ದು ಕಾಲದ ಹಾಗೂ ಪರಕೀಯರ ದಾಳಿಗಳಿಂದ ನಮ್ಮ ನಗರಗಳು, ದೇವಾಲಯಗಳು, ಅರಮನೆಗಳು, ಕೋಟೆಗಳು, ಸಂಸ್ಕೃತಿ, ಗ್ರಂಥ ಭಂಡಾರಗಳು ನಿರ್ನಾಮವಾದಾಗ ಅವೂ ನಾಶವಾಗಿರಬೇಕು. ಅಥವಾ ಕಾಲಗರ್ಭದಲ್ಲಿ ಅಡಗಿದ್ದು ಮುಂದೆ ಎಂದಾದರೊಂದು ದಿನ ಬೆಳಕಿಗೆ ಬರಬಹುದೆಂದು ಊಹಿಸಬಹುದು. 12, 13ನೆಯ ಶತಮಾನದಷ್ಟು ಹೊತ್ತಿಗೆ ಭಾರತದಲ್ಲಿ ಖಗೋಳಾತ್ಮಕ ವೀಕ್ಷಣಾಲಯಗಳು ನಿರ್ಮಾಣವಾಗಿ ಅಕ್ಷಾಂಶ, ರೇಖಾಂಶಗಳ ಲೆಕ್ಕಾಚಾರವನ್ನೂ ಮಾಡಿದ್ದರು. ಆದರೆ ಇವರ ಬಗ್ಗೆ ಆಧಾರಪೂರ್ವಕ ವಿವರಗಳು ದೊರೆತಿಲ್ಲ.

ಮಧ್ಯಯುಗಕ್ಕೆ ಸಂಬಂಧಪಟ್ಟ ಹಾಗೆ ನಮಗೆ ವಿವರಗಳನ್ನು ಒದಗಿಸಬಲ್ಲವರು ಅರಬ್ ಭೂಪಟಶಾಸ್ತ್ರಜ್ಞರು. ಇವರಲ್ಲಿ ಭಾರತದ ಬಗೆಗಿನ ಭೂಗೋಳಜ್ಞಾನ ಅಪಾರವಾಗಿದ್ದರೂ, ಇವರು ಉತ್ತಮ ಭೂಪಟ ನಿರ್ಮಾಪಕರಾಗಿರಲಿಲ್ಲ. ಇವರಿಗೆ ತಿಳಿದಿದ್ದ ವಿವರಗಳನ್ನು ತುಂಬಿಸುವ ಭೂಪಟಗಳನ್ನೂ ಇವರು ನಿರ್ಮಿಸಲಾಗಲಿಲ್ಲ. ಇಬ್ನ್-ಹೌಕಲ್‌ನ ಸಿಂಧೂದೇಶದ ನಕ್ಷಾಚಿತ್ರಣ ನಮ್ಮ ಗಮನವನ್ನು ಸೆಳೆಯುತ್ತದೆ.

1822ರಲ್ಲಿ ಒಂದು ಪ್ರಬಂಧ ಪ್ರಕಟವಾಯಿತು. ಇದು ಅನೇಕರ ಗಮನ ಸೆಳೆಯಿತು. ಎಫ್. ಎಲ್. ಫೋರ್ಡ್ ಎಂಬಾತ 'ಭಾರತದ ಪ್ರಾಚೀನ ಭೂಗೋಳಶಾಸ್ತ್ರ' ಎಂಬ ಪ್ರಬಂಧದಲ್ಲಿ ಪುರಾಣಗಳ ಆಧಾರದ ಮೇಲೆ ರಚಿತವಾದ ಒರಟಾದ ಕೆಲವೊಂದು ಭೂಪಟಗಳನ್ನು ಭಾರತದಲ್ಲಿಯ ಜನರು ಉಪಯೋಗಿಸುತ್ತಿದ್ದುದನ್ನು ತಾನು ನೋಡಿದುದಾಗಿಯೂ, ಆದರೆ ಅವು ಭೂಪಟಶಾಸ್ತ್ರೀಯ ನಿಯಮಗಳಿಗೆ ಅನುಸಾರವಾಗಿರಲಿಲ್ಲವೆಂದೂ ವಿವರಿಸಿದ್ದಾನೆ. ಅವು ಅಂದಿನ ಪುರಾಣ ಜ್ಞಾನದ ರೇಖಾತ್ಮಕ ಚಿತ್ರಗಳೆಂದು ಕರೆಯಬಹುದಾಗಿದೆ.

ಡಚ್ ಮತ್ತು ಇಟಾಲಿಯನ್ ಭೂಪಟಶಾಸ್ತ್ರಜ್ಞರು ನಿರ್ಮಿಸಿದ ಭೂಪಟಗಳಲ್ಲಿ ಭಾರತ ಪ್ರಮುಖ ಸ್ಥಾನವನ್ನು ಪಡೆಯಿತು. 16 ಮತ್ತು 17ನೆಯ ಶತಮಾನಗಳಿಗೆ ಸಂಬಂಧಪಟ್ಟಂಥ ಭಾರತದ ಭೌಗೋಳಿಕ ಸನ್ನಿವೇಶಗಳಿಗೆ ಅನುಗುಣವಾಗಿ ಇವು ರಚಿತವಾಗಿವೆ. ಮರ್ಕೆಟರ್ ಮತ್ತು ವಿಗ್ನೋಲರ ಭೂಪಟಗಳು ಇಂಥವಕ್ಕೆ ಉದಾಹರಣೆಗಳಾಗಿವೆ. 1508ರಲ್ಲಿ ರೀಚ್ ತಯಾರಿಸಿದ 'ಪ್ರಪಂಚದ ಭೂಪಟ'ದಲ್ಲಿ

ಭಾರತದ ಆಕಾರವನ್ನು ತಕ್ಕಮಟ್ಟಿಗೆ ಸುಧಾರಿಸಿದ. ಬರ್ಟೆಲ್ಲಿ 1565ರಲ್ಲಿ ಭಾರತ ಚಕ್ರಾಧಿಪತ್ಯದ ಒಂದು ಭೂಪಟವನ್ನು ನಿರ್ಮಿಸಿದ. ಇದು ವೆನಿಸ್ ನಗರದಲ್ಲಿ ಸಿದ್ಧವಾಯಿತು. ಗೋಳಗಳನ್ನು ನಿರ್ಮಿಸಿ ದವನೆಂದು ಹೆಸರಾದ ಟಿ. ಸ್ಪೆರ್ನೆ ಎಂಬಾತ ಭಾರತಕ್ಕೆ ಬ್ರಿಟಿಷ್ ರಾಯಭಾರಿಯಾಗಿ ಬಂದಿದ್ದ ಸರ್ ಥಾಮಸ್ ರೋನಿಂದ ವಿವರಗಳನ್ನು ಪಡೆದು, 1619ರಲ್ಲಿ 'ಮೊಗಲ್ ಸಾಮ್ರಾಜ್ಯದ ಭೂಪಟ'ವನ್ನು ನಿರ್ಮಿಸಿದ.

ಹಾಲೆಂಡ್, ಫ್ರಾನ್ಸ್, ಇಂಗ್ಲೆಂಡ್ ಇತ್ಯಾದಿ ಐರೋಪ್ಯ ದೇಶಗಳು ಭಾರತದ ಆಂತರಿಕ ವ್ಯವಹಾರ ಹಾಗೂ ವ್ಯವಹಾರಗಳಲ್ಲಿ ಹೆಚ್ಚು ಆಸಕ್ತಿ ವಹಿಸಿದ್ದರಿಂದ, 17ನೆಯ ಶತಮಾನದಲ್ಲಿ ಭಾರತವನ್ನು ಕುರಿತಾದ ಅನೇಕ ಭೂಪಟಗಳು ನಿರ್ಮಾಣವಾಗಿ, ಬೆಳಕಿಗೆ ಬಂದುವು. ಜನ್ಸೂನ್ ಮತ್ತು ಬ್ಲ್ಯೂ; ಫ್ರಾನ್ಸ್ ದೇಶದಲ್ಲಿ ಸ್ಯಾನ್ಸನ್, ಡೆ ಲಿಸ್ಲೆ ಮತ್ತು ಡಿ'ಆನ್‌ವಿಲ್ಲೆ; ಜರ್ಮನಿಯಲ್ಲಿ ಸ್ಕೂಟರ್ ಮತ್ತು ಹೋಮನ್ಗ್ನ್; ಇಂಗ್ಲೆಂಡಿನಲ್ಲಿ ಮೋಲ್, ಬೋವೆನ್ ಇತ್ಯಾದಿಯವರುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾರತದ ಭೂಪಟಗಳನ್ನು ನಿರ್ಮಿಸಿದರು. ಇವುಗಳಲ್ಲಿ ಡೆ ಲಿಸ್ಲೆ (1723) ಮತ್ತು ಡಿ'ಆನ್‌ವಿಲ್ಲೆ (1737) ಇವರ ಭೂಪಟಗಳು ಹಿಂದಿನವುಗಳಿಗಿಂತ ಉತ್ತಮಗೊಂಡ ಭೂಪಟಗಳಾಗಿದ್ದುವು. ಕಾರಣ, ಇವುಗಳಿಗೆ ಸಹಾಯಕವಾದವುಗಳು (1) ನೌಕಾ ದಿಕ್‌ಸೂಚಿಯಿಂದ ಮಾಡಿದ ಸರ್ವೇಗಳು (2) ಜೆಸುಯಿಟ್ ಮತ ಪ್ರಚಾರಕರ ಅವಲೋಕನಗಳ ಆಧಾರ. ಅದರಲ್ಲೂ ಡಿ'ಆನ್‌ವಿಲ್ಲೆಯ 'ಕಾರ್ಟೆ ಡಿ ಇಂಡಿ' ಎನ್ನುವ ಭೂಪಟ ಹೆಸರಿಸುವಂಥದು. ಕಾರಣ, ಈ ಭೂಪಟದಲ್ಲಿ ಅದುವರೆಗೆ ದೊರೆತಿದ್ದ ಯಾವ ಭೌಗೋಳಿಕ ವಿವರಗಳನ್ನೂ ಸೇರಿಸದೆ ಬಿಟ್ಟಿರಲಿಲ್ಲ. 1752ರಲ್ಲಿ ನಿರ್ಮಾಣವಾದ ಈ ಭೂಪಟ ಅದುವರೆಗೆ ನಿರ್ಮಾಣವಾದ ಭೂಪಟಗಳಲ್ಲಿ ಅತ್ಯಂತ ಅಚ್ಚುಕಟ್ಟಾದ್ದೂ ಕರಾರುವಾಕ್ಕಾದ್ದೂ ಆಗಿತ್ತು. ಇದನ್ನು ಭಾರತದ ಮೊಟ್ಟಮೊದಲ 'ಆಧಾರಪೂರ್ವಕ ಭೂಪಟ'ವೆಂದು ನಿರ್ಧರಿಸಲಾಗಿದೆ.

ಮುಂದೆ ಭೂಗೋಳಜ್ಞಾನದ ವಿಸ್ತಾರ ಹೆಚ್ಚಾದಂತೆಲ್ಲ, ಅದನ್ನು ಭೂಪಟದಲ್ಲಿ ನಕ್ಷೀಕರಿಸುವ ಕಾರ್ಯವೂ ಹೆಚ್ಚಾಯಿತು. ಈ ದೃಷ್ಟಿಯಿಂದ ಜೆಫ್ರೀಸ್ (1768), ರಾಬರ್ಟ್ ಓರ್ಮೆ (1778), ರೆನ್ನೆಲ್ (1782–93) ಮತ್ತು ಥಾಮಸ್ ಕಾಲ್ (1793–1807) ಇವರ ಭೂಪಟಗಳು ಮುಖ್ಯವಾದವು.

1769ರಲ್ಲಿ ರಾಬರ್ಟ್ ಕ್ಲೈವನಿಂದ ಭಾರತದಲ್ಲಿ ಮೊಟ್ಟಮೊದಲನೆಯ ಬಾರಿಗೆ ಸರ್ವೇ ಆಫ್ ಇಂಡಿಯ ಸಂಸ್ಥೆ ಸ್ಥಾಪಿಸಲ್ಪಟ್ಟಿತು. ಜೇಮ್ಸ್ ರೆನ್ನೆಲ್ ಬಂಗಾಳದ ಸರ್ವೇಯರ್ ಜನರಲ್ ಆಗಿ ನಿಯುಕ್ತನಾದ. ಅನೇಕ ಕಷ್ಟನಷ್ಟಗಳನ್ನು ಎದುರಿಸಿ, ಸಾಹಸದಿಂದ ಈತ 1783ರಲ್ಲಿ ಭಾರತದ ಪ್ರಪ್ರಥಮ ಭೂಪಟವನ್ನು ರೂಪಿಸಿದ. ಈ ಭೂಪಟ 1 ಮೈ.=1 ಇಂಚು ಪ್ರಮಾಣದಲ್ಲಿತ್ತು. ಇದರ ಎರಡು ಮತ್ತು ಮೂರನೆಯ ಆವೃತ್ತಿಗಳು ಕ್ರಮವಾಗಿ 1788 ಮತ್ತು 1793ರಲ್ಲಿ ಪ್ರಕಟಗೊಂಡವು. ತ್ರಿಕೋನಕಲ್ಪ ಸರ್ವೆ ಕಾರ್ಯ ಅಂದಿನ ಮದ್ರಾಸ್ ಪ್ರಾಂತ್ಯದಲ್ಲಿ 1802ರಲ್ಲಿ ಪ್ರಾರಂಭವಾಗಿ ಅನಂತರ ಭಾರತಾದ್ಯಂತ ಹರಡಿತು. ಇದು ಭಾರತದ ಭೂಪಟಶಾಸ್ತ್ರ ಕಾರ್ಯಕ್ಕೆ ಬುನಾದಿಯಾಯಿತು.

ಡಿ'ಆನ್‌ವಿಲ್ಲೆ ರಚಿಸಿದ ಭೂಪಟದ ಎರಡು ದೋಷಗಳನ್ನು ರೆನ್ನೆಲ್ ತಿದ್ದಿದ: (1) ಮಗಧ ಸಾಮ್ರಾಜ್ಯದ ರಾಜಧಾನಿಯಾದ ಪಾಲಿಬೋತ್ರ (ಪಾಟಲೀಪುತ್ರ). ಇದನ್ನು ಗಂಗಾ ಯಮುನಾ ನದಿಗಳ ಸಂಗಮಸ್ಥಳದಲ್ಲಿ, ಅಲಹಾಬಾದ್ ಇರುವ ಕಡೆ ಡಿ'ಆನ್‌ವಿಲ್ಲೆ ಗುರ್ತಿಸಿದ್ದ. ವ್ಯಾಡೆಲ್ ಎಂಬಾತ ಈ ತಪ್ಪನ್ನು ತೋರಿಸಿದ. ಹೀಗೆ ತೋರಿಸಿದ ತಪ್ಪನ್ನು ರೆನ್ನೆಲ್ ತಿದ್ದಿದ. (2) ಸಂಪೂ ನದಿಯ ಪಾತ್ರ. ಡಿ'ಆನ್‌ವಿಲ್ಲೆ ಸಂಪೂ ನದಿಯನ್ನು ಇರವಾಡೀ ನದಿಯ ಉಪನದಿಯೆಂದು ನಂಬಿದ್ದ. ಆದರೆ ಹೆಚ್ಚಿನ ಭೌಗೋಳಿಕ ಜ್ಞಾನ ಹೊಂದಿದ್ದ ರೆನ್ನೆಲ್ 'ಸಂಪೂ ನದಿ ಹಿಮಾಲಯ ಪರ್ವತಗಳನ್ನು ದಾಟಿ ದಿಹಾಂಗ್ ಮುಖಾಂತರ ಬ್ರಹ್ಮಪುತ್ರಾ ನದಿಯನ್ನು ಸೇರುತ್ತದೆ' ಎಂದು ತಿಳಿಸಿದ.

ರೆನ್ನೆಲನ ಮತ್ತೊಂದು ಸಾಧನೆಯೆಂದರೆ ಪ್ರಾದೇಶಿಕತೆಯ ಆಧಾರದ ಮೇಲೆ ಭಾರತದ ಭೂಪಟವನ್ನು ರಚಿಸಿದ್ದು. ಈ ದೃಷ್ಟಿಯಿಂದ 'ಹಿಂದೂಸ್ತಾನ್' ಭೂಪಟವಲ್ಲದೆ ಈ ಕೆಳಗಿನ ವಿಷಯಗಳಲ್ಲೂ ಅವನು ಮಾಡಿದ ಸಾಧನೆ ಅಸಾಧಾರಣವಾದುದು :

1 ಬಂಗಾಳ, ಬಿಹಾರ, ಅಯೋಧ್ಯೆ, ಅಲಹಾಬಾದ್, ದೆಹಲಿ ಮತ್ತು ಆಗ್ರ ಭಾಗಗಳಿಗೆ 1776ರಲ್ಲಿ ನಿರ್ಮಿಸಿದ ಭೂಪಟಗಳು. ಇವು 1786, 1794 ಮತ್ತು 1824ರಲ್ಲಿ ಪುನರ್‌ಮುದ್ರಣಗೊಂಡವು.

2 ಬಂಗಾಳ, ಬಿಹಾರ ಇತ್ಯಾದಿ ಪ್ರಾಂತ್ಯಗಳ ವಾಸ್ತವವಾದ ಸರ್ವೇ ಕಾರ್ಯ ನಡೆಸಿದ.

3 ದೆಹಲಿ, ಆಗ್ರ, ಅಯೋಧ್ಯೆ ಮತ್ತು ಅಲಹಾಬಾದ್ ಪ್ರದೇಶಗಳ ವಿಶೇಷ ಭೂಪಟ ಗಳನ್ನು ನಿರ್ಮಿಸಿದ.

ಈ ರೀತಿಯಾಗಿ 1779–1783ರಲ್ಲಿ ನಿರ್ಮಾಣಗೊಂಡ 'ಬಂಗಾಳ ಮತ್ತು ಬಿಹಾರ ಭೂಪಟ ಸಂಪುಟ' ಎನ್ನುವ ಅಟ್ಲಾಸ್ ಹೆಸರಿಸುವಂಥದು. ಇದೇ ರೀತಿ 1800ರಲ್ಲಿ ವಿಲ್‌ಫರ್ಡ್ ಉತ್ತರ ಪ್ರಾಂತ್ಯಗಳ ಪ್ರಾರಂಭಿಕ ಭೂಪಟವನ್ನು ನಿರ್ಮಿಸಿದ. ಅನಂತರ ಈತನೇ 1804ರಲ್ಲಿ 'ಕಾಬೂಲ್ ಮತ್ತು ಮುಲ್ತಾನ್ ವರೆಗಿರುವ, ದೆಹಲಿಯ ಪಶ್ಚಿಮದ, ದೇಶಗಳು' ಎಂಬ ಭೂಪಟವನ್ನು ಬೆಳಕಿಗೆ ತಂದ. ಇದೇ ಸಮಯದಲ್ಲಿ ಇನ್ನೂ ಕೆಲವು ಭೂಪಟಗಳು ಬೆಳಕಿಗೆ ಬಂದುವು. ಅವುಗಳಲ್ಲಿ ಮುಖ್ಯ ವಾದವೆಂದರೆ: 1782ರಲ್ಲಿ ನಿರ್ಮಾಣವಾದ, ಕೆಲ್ಲಿ ಎಂಬಾತನ, 'ದಕ್ಷಿಣ ಭಾರತದ ಅಟ್ಲಾಸ್', 1800 ರಲ್ಲಿ ಬೆಳಕಿಗೆ ಬಂದ ಕೋಲ್‌ಬ್ರೂಕ್ ಎಂಬಾತನ 'ದಕ್ಷಿಣ ಪರ್ಯಾಯ ದ್ವೀಪದ ಭೂಪಟ' ಮತ್ತು ರೆನಾಲ್ಡ್ ರಚಿಸಿದ 'ಪಾಶ್ಚಾತ್ಯ ಭಾರತ'.

ಈ ಭೂಪಟಗಳು ಭಾರತದ ಸೂಕ್ಷ್ಮ ಭೂಗೋಳಶಾಸ್ತ್ರ ಹೇಗೆ ಪ್ರವರ್ಧಮಾನವಾಯಿತು ಎಂಬುದರ ವಿವರಗಳನ್ನು ನೀಡುವುದೇ ಅಲ್ಲದೆ, ಅಂದು ನೆಲೆಸಿದ್ದ ಕಾಡುಗಳು, ಹುಲ್ಲುಗಾವಲು, ಜೌಗು ಪ್ರದೇಶಗಳು ಇತ್ಯಾದಿಗಳ ವಿವರಗಳನ್ನೂ ನೀಡುತ್ತವೆ. ಆದ್ದರಿಂದ ಇವು ಹೆಚ್ಚು ಪ್ರಾಮುಖ್ಯ ಪಡೆದಿವೆ. ಅಂದಿನಿಂದ ಇಂದಿನ ವರೆಗೆ ಯಾವಯಾವ ವಿಭಾಗಗಳಲ್ಲಿ ಯಾವಯಾವ ರೀತಿಯ ಬದಲಾವಣೆ ಗಳಾಗಿವೆ ಎಂಬುದನ್ನು ಇವು ತೋರಿಸುತ್ತವೆ.

ಅನಂತರದ ವರ್ಷಗಳಲ್ಲಿ ಭೂ ಮೇಲ್ಮೈಯ ಸರ್ವೇ ಕಾರ್ಯವನ್ನು ನಿರ್ವಹಿಸುವಂಥ ಪ್ರಧಾನ ಹಾಗೂ ಜವಾಬ್ದಾರಿಯುತ ಸಂಸ್ಥೆಯಾಗಿ ಸರ್ವೇ ಆಫ್ ಇಂಡಿಯ ಸಂಸ್ಥೆ ರೂಪುಗೊಂಡಿತು. ದಕ್ಷಿಣ ಏಷ್ಯದ ಅನೇಕ ಪ್ರದೇಶಗಳ ಸರ್ವೇಕಾರ್ಯ, ಪ್ರವಾಸಕಾರ್ಯ, ಅನ್ವೇಷಣ ಕಾರ್ಯಗಳನ್ನಲ್ಲದೆ ಆ ಪ್ರದೇಶಗಳ ಭೌಗೋಳಿಕ ಭೂಪಟಗಳ ನಿರ್ಮಾಣ ಕಾರ್ಯವನ್ನೂ ಕೈಗೊಂಡಿತು. ಇಷ್ಟೇ ಅಲ್ಲದೆ, ಭಾರತದ ಭೂಗಣಿತಾತ್ಮಕ ಸರ್ವೆ ಕಾರ್ಯದ ಜವಾಬ್ದಾರಿಯನ್ನೂ ಈ ಸಂಸ್ಥೆಯೇ ನಿರ್ವಹಿಸ ಬೇಕಾಯಿತು.

20ನೆಯ ಶತಮಾನದ ಪ್ರಾರಂಭದಲ್ಲಿ ಭಾರತ ಸರ್ಕಾರದಿಂದ ಸರ್ವೇ ಸಮಿತಿಯೊಂದು ನಿಯಮಿಸಲ್ಪಟ್ಟಿತು. ಇದರ ಶಿಫಾರಸುಗಳ ಆಧಾರದ ಮೇಲೆ, 1905ರಿಂದ ಈ ಸಂಸ್ಥೆ ಭೂ ಮೇಲ್ಮೈಯ ಆಧುನಿಕ ಭೂಪಟಗಳನ್ನು ವಿವಿಧ ವರ್ಣಗಳಲ್ಲಿ ಪ್ರಕಟಿಸುವ ಕಾರ್ಯದಲ್ಲಿ ತೊಡಗಿತು. ಈ ಭೂಪಟ ಗಳ ಪ್ರಮಾಣ 1 ಇಂಚು = 1 ಮೈ. ಆಗಿತ್ತು.

ಸರ್ವೇ ಆಫ್ ಇಂಡಿಯ ಸಂಸ್ಥೆ ಎಲ್ಲ ಕಷ್ಟಗಳನ್ನೂ ಎದುರಿಸಿ, ಭಾರತದ ಎಲ್ಲ ಪ್ರದೇಶ ಗಳಿಗೂ ಭೂಪಟ ರೂಪಿಸಿತು. ಭೂಮೇಲ್ಮೈ ಸರ್ವೆ ಕಾರ್ಯದೊಂದಿಗೆ ಅಂತರರಾಷ್ಟ್ರೀಯ, ರಾಷ್ಟ್ರೀಯ, ಪ್ರಾಂತೀಯ ಹಾಗೂ ಜಿಲ್ಲಾ ಸೀಮಾರೇಖೆಗಳನ್ನುಳ್ಳ ಸರ್ವೇಕಾರ್ಯ ಹಾಗೂ ದಾಖಲಾತಿ ಗಳನ್ನು ನಿರ್ವಹಿಸುವ ಕಾರ್ಯವನ್ನೂ ಮುಂದುವರಿಸಿತು. ಇತ್ತೀಚಿನ ವರ್ಷಗಳಲ್ಲಿ ಸೈನಿಕ ಕೇಂದ್ರಗಳ ಹಾಗೂ ಮುಖ್ಯ ನಗರಗಳ ಮಾರ್ಗದರ್ಶಕ ನಕ್ಷೆಗಳನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟಿಸಿತು.

ಭಾರತ 1947ರಲ್ಲಿ ಸ್ವತಂತ್ರವಾದ ಮೇಲೆ ಸರ್ವೇ ಆಫ್ ಇಂಡಿಯ ಸಂಸ್ಥೆ ಹೊಸ ರೂಪ ಪಡೆ ಯಿತು. ಇದರೊಂದಿಗೆ ನೂತನ ರೀತಿಯ ಭೂಪಟಗಳ ನಿರ್ಮಾಣವೂ ಪ್ರಾರಂಭವಾಯಿತು. ಇದೇ 'ವಿಷಯಾತ್ಮಕ ಭೂಪಟೀಕರಣ'. ಇದರೊಂದಿಗೆ ಭೂಪಟರಚನಾ ಕಾರ್ಯವನ್ನು ಕೈಗೊಳ್ಳುವ ಸಂಸ್ಥೆಗಳೂ ಹೆಚ್ಚಾಗತೊಡಗಿದುವು. ಇವುಗಳಲ್ಲಿ ಮುಖ್ಯವಾದವೆಂದರೆ ಹಿಂದಿನಿಂದಲೂ ಇದ್ದು ಮುಂದುವರಿಯುತ್ತಿರುವ ಸರ್ವೇ ಆಫ್ ಇಂಡಿಯ ಸಂಸ್ಥೆ; ರಾಷ್ಟ್ರೀಯ ಭೂಪಟ ಸಂಪುಟ ಸಂಸ್ಥೆ

(National Atlas Organisation); ಭಾರತದ ರಿಜಿಸ್ಟ್ರಾರ್ ಜನರಲರ ಭೂಪಟ ವಿಭಾಗ; ದಾಮೋದರ ಕಣವೆಯ ಸ್ವಭಾವವರ್ಗೀಕರಣ ಸರ್ವೇ (Damodar Valley Diagnostic Survey); ಭಾರತೀಯ ಸಂಖ್ಯಾಕಲನೀಯ ಸಂಸ್ಥೆಯ ಪ್ರಾದೇಶಿಕ ಸರ್ವೇ ವಿಭಾಗ (Regional Survey Unit of the Statistical Institute); ಕೇಂದ್ರ ಶುಷ್ಕವಲಯ ಸಂಶೋಧನ ಸಂಸ್ಥೆ (Central Arid Zone Research Institute) ಮುಂತಾದವು.

## ಸರ್ವೇ ಆಫ್ ಇಂಡಿಯ ಸಂಸ್ಥೆ

ಈ ಸಂಸ್ಥೆ ಭೂಮೇಲ್ಮೈ ಪಟಗಳನ್ನು 1:63,360, 1:126,720 ಮತ್ತು 1:2,63,440 (ಅಂದರೆ 1 ಇಂಚು = 1 ಮೈ., 1 ಇಂಚು = 2 ಮೈ., ಮತ್ತು 1 ಇಂಚು = 4 ಮೈ.) ಪ್ರಮಾಣದಲ್ಲಿ ನಿರ್ಮಿಸುತ್ತಿದೆ. ಈ ಪ್ರಮಾಣಗಳ ಆಧಾರದ ಮೇಲೆ ಇದುವರೆಗೆ 30 ಲಕ್ಷಕ್ಕಿಂತಲೂ ಹೆಚ್ಚು ಚ.ಕಿಮೀ.ಗಳ ಪ್ರದೇಶವನ್ನು ನಕ್ಷೀಕರಿಸಿರುವುದೇ ಅಲ್ಲದೆ ಉಳಿದ ಪ್ರದೇಶಗಳನ್ನು ಇದೇ ರೀತಿ ನಕ್ಷೀಕರಿಸುವ ಕಾರ್ಯದಲ್ಲಿ ಈ ಸಂಸ್ಥೆ ಮುಂದುವರಿಯುತ್ತಿದೆ. ಮೆಟ್ರಿಕ್ ಪದ್ಧತಿಯ ಬಳಕೆಯ ಅನಂತರ ಇವನ್ನು 1:25,000, 1:50.000 ಮತ್ತು 1:2.50,000 (ಅಂದರೆ 1 ಮಿಮೀ. = 25 ಮೀ., 1 ಮಿಮೀ. = 50 ಮೀ. ಮತ್ತು 1 ಮಿಮೀ. = 250 ಮೀ.) ಪ್ರಮಾಣಕ್ಕೆ ಅನುಗುಣವಾಗಿ ಪರಿವರ್ತಿಸಲಾಯಿತು. ಈ ಭೂಪಟಗಳು ಭೂ–ಮೇಲ್ಮೈ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡುವುದಲ್ಲದೆ ಅದಕ್ಕಿಂತಲೂ ಹೆಚ್ಚಿನ ವಿವರಗಳನ್ನು ಒದಗಿಸುವ 'ಭೌಗೋಳಿಕ ಕೋಶ'ಗಳಾಗಿವೆ. ವಿದ್ಯಾರ್ಥಿಗಳ ಉಪಯೋಗಕ್ಕಾಗಿ ವಿಷಯಾತ್ಮಕ ಭೂಪಟಗಳನ್ನು ಒಳಗೊಂಡ ಒಂದು 'ಶಾಲಾ ಅಟ್ಲಾಸ'ನ್ನು ಪ್ರಕಟಿಸಿತು. ಭೂ–ಮೇಲ್ಮೈ ಪಟಗಳನ್ನು ಪ್ರಕಟಿಸುವುದೇ ಈ ಸಂಸ್ಥೆಯ ಮುಖ್ಯಕಾರ್ಯ. ಆದರೂ ರಾಷ್ಟ್ರೀಯ ಅಟ್ಲಾಸ್ ಸಂಸ್ಥೆ ಮತ್ತು ಭಾರತ ಭೂವೈಜ್ಞಾನಿಕ ಸರ್ವೇ ಇತ್ಯಾದಿ ಸರ್ಕಾರಿ ಸಂಸ್ಥೆಗಳ ಭೂಪಟಗಳನ್ನೂ ಇದು ಮುದ್ರಿಸುತ್ತದೆ. ಈ ಸಂಸ್ಥೆ ಗಗನ ಛಾಯಾಚಿತ್ರಗಳ ದಾಖಲಾತಿಯನ್ನೂ ವ್ಯವಸ್ಥಿತಗೊಳಿಸುತ್ತದೆ. ಇತ್ತೀಚೆಗೆ ಡೆಹರಾಡೂನ್‌ನಲ್ಲಿ ಛಾಯಾಚಿತ್ರಗಳ ಅರ್ಥವಿವರಣೆಗಳನ್ನು ನೀಡುವ ಒಂದು ಹೊಸ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಆಕಾಶದ ಛಾಯಾಚಿತ್ರಗಳನ್ನೂ ಆಯಾ ಪ್ರದೇಶಗಳಲ್ಲಿಯ ಮಣ್ಣು, ಕಾಡುಗಳು ಇತ್ಯಾದಿಗಳ ವಿವರಗಳನ್ನೂ ಸ್ಪಷ್ಟಪಡಿಸುವ ಕಾರ್ಯವನ್ನು ನಡೆಸುತ್ತಿದೆ.

## ರಾಷ್ಟ್ರೀಯ ಭೂಪಟಸಂಪುಟ ಸಂಸ್ಥೆ

ಭಾರತ ಸರ್ಕಾರ 1956ರಲ್ಲಿ ರಾಷ್ಟ್ರೀಯ ಭೂಪಟ ಸಂಪುಟ ಸಂಸ್ಥೆಯನ್ನು ಸ್ಥಾಪಿಸಿತು. ಕಲ್ಕತ್ತ ವಿಶ್ವವಿದ್ಯಾನಿಲಯದ ಪ್ರೊ. ಎಸ್. ಪಿ. ಚಟರ್ಜಿ ಇದರ ನಿರ್ದೇಶಕರಾಗಿ ನಿಯುಕ್ತರಾದರು. ಇದರ ಮುಖ್ಯ ಕಾರ್ಯವೆಂದರೆ ಪ್ರಾಕೃತಿಕ, ಆರ್ಥಿಕ ಹಾಗೂ ಸಾಮಾಜಿಕ ಹಿನ್ನೆಲೆಯುಳ್ಳ ಭೂಪಟಗಳನ್ನು ಅಖಿಲ ಭಾರತ ಮಟ್ಟದಲ್ಲಿ ತಯಾರಿಸುವುದು. 1957ರಲ್ಲಿ ಮೊಟ್ಟಮೊದಲ ರಾಷ್ಟ್ರೀಯ ಅಟ್ಲಾಸನ್ನು ಈ ಸಂಸ್ಥೆ ಪ್ರಕಟಿಸಿತು. ಇದು 27 ಫಲಕಗಳಿರುವ ಹಿಂದೀ ಅಟ್ಲಾಸ್. ಇದರಲ್ಲಿಯ ಭೂಪಟಗಳು 1:5,000.000 ಮತ್ತು 1:10,000,000 ಪ್ರಮಾಣದಲ್ಲಿವೆ. ಇದರಲ್ಲಿಯ ಪ್ರಪಂಚ ಭೂಪಟಗಳು 1:50,000,000 ಮತ್ತು 1:60,000.000 ಪ್ರಮಾಣದವು. ಭಾರತದ ಪುಟ್ಟ ಭೂಪಟಗಳು 1:15,000,000 (18) ಮತ್ತು 1:30,000.000 (20) ಪ್ರಮಾಣದವು.

ಭಾರತದ ರಾಷ್ಟ್ರೀಯ ಅಟ್ಲಾಸಿನ ಪ್ರಧಾನ ಮುದ್ರಣ ಇಂಗ್ಲಿಷ್ ಭಾಷೆಯಲ್ಲಿದೆ. ಎಲ್ಲ ದೃಷ್ಟಿಗಳಿಂದಲೂ ಸಂಪೂರ್ಣವಾದ 300 ಫಲಕಗಳನ್ನು ತಯಾರಿಸಲು ಈ ಸಂಸೆ ನಿಯೋಜಿಸಿದೆ. ಹೆಚ್ಚು ಪಾಲಿನ ಫಲಕಗಳು 1:1,000.000 ಮತ್ತು 1:20.000.000 ಪ್ರಮಾಣದವಾದರೂ ಜನಸಂಖ್ಯೆ, ಭೂಬಳಕೆ ಮುಂತಾದವುಗಳ ಮುಖ್ಯ ಭೂಪಟಗಳು ಪ್ರಸ್ತುತ ಅಂತರರಾಷ್ಟ್ರೀಯ ಮಟ್ಟಕ್ಕೆ ಅನುಗುಣವಾಗಿ 1:1.000,000 ಪ್ರಮಾಣದವು. ಸಾರಿಗೆ, ಪ್ರವಾಸ, ಆಡಳಿತ ಹಾಗೂ ರಾಜ್ಯ ಭೂಪಟಗಳನ್ನು ದಶಲಕ್ಷಾಂಶೀಯ ಪ್ರಮಾಣದಲ್ಲಿ ನಿರ್ಮಿಸಲಾಗಿದೆ. ಉಳಿದ 11 ಭೂಪಟಗಳು ಸಾಮಾನ್ಯ

ಲಕ್ಷಣ, ಮಣ್ಣು, ಜಲಹಂಚಿಕೆ, ಜನಸಾಂದ್ರತೆ ಇತ್ಯಾದಿಯವು. ಇವು ಭಾರತಕ್ಕೆಲ್ಲ ಅನ್ವಯಿಸುವಂತೆ 1:2,000,000 ಪ್ರಮಾಣದಲ್ಲಿ ರಚಿಸಲ್ಪಟ್ಟಿವೆ. ಉಳಿದ ಭೂಪಟಗಳು 1:6,000,000 ಪ್ರಮಾಣದಲ್ಲಿವೆ. ವಿಷಯಾತ್ಮಕ ಭೂಪಟಗಳ ವಿವರಣ ಪಟ್ಟಿಯನ್ನು ಚಟರ್ಜಿಯವರು ನೀಡಿದ್ದಾರೆ.

ಅಖಿಲ ಭಾರತ ನೀರಾವರಿ ಮಂಡಲಿಗಾಗಿ ಏಕವಿಷಯಾತ್ಮಕ ಅಟ್ಲಾಸ್ ಒಂದನ್ನು ಈ ಸಂಸ್ಥೆ ತಯಾರಿಸತೊಡಗಿದೆ. ಇದೇ ರೀತಿಯಲ್ಲಿ 1970–71ರಲ್ಲಿ ನಾಲ್ಕನೆಯ ಯೋಜನೆಯ ಅಂಗವಾಗಿ ಭಾರತದ ಪ್ರವಾಸಿ ಅಟ್ಲಾಸನ್ನು ಈ ಸಂಸ್ಥೆ ಸಿದ್ಧಗೊಳಿಸುತ್ತಿದೆ. ನ್ಯಾಷನಲ್ ಬುಕ್ ಟ್ರಸ್ಟ್‌ಗಾಗಿ ಭಾರತದ ಬಹುವಿಷಯಾತ್ಮಕ ಅಟ್ಲಾಸೊಂದನ್ನು ಸಿದ್ಧಗೊಳಿಸುವ ಕಾರ್ಯ ಕೈಗೊಂಡಿದೆ.

## ರಿಜಿಸ್ಟ್ರಾರ್–ಜನರಲ್‌ರವರ ಕಚೇರಿ

ಭಾರತದ ರಿಜಿಸ್ಟ್ರಾರ್ ಜನರಲ್‌ರವರ ಕಚೇರಿಯಲ್ಲಿ ಬೇರೆಯಾದ ಭೌಗೋಳಿಕ ಹಾಗೂ ಭೂಪಟ ವಿಭಾಗಗಳಿವೆ. ಪ್ರತಿಯೊಂದು ರಾಜ್ಯಕ್ಕೂ ಅನ್ವಯಿಸುವಂತೆ ಬೇರೆಬೇರೆಯಾದ ಜನಗಣತಿ ಅಟ್ಲಾಸನ್ನು ನಿರ್ಮಿಸಲು ಭೂಪಟ ವಿಭಾಗ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. 1961ರ ಜನಗಣತಿಗೆ ಅನುಗುಣವಾಗಿ ಆಂಧ್ರಪ್ರದೇಶ, ಬಿಹಾರ, ಗುಜರಾತ್, ಕೇರಳ, ಜಮ್ಮು ಮತ್ತು ಕಾಶ್ಮೀರ, ತಮಿಳು ನಾಡು, ಒರಿಸ್ಸ, ಪಂಜಾಬ್, ರಾಜಸ್ಥಾನ ಮತ್ತು ಉತ್ತರ ಪ್ರದೇಶಗಳ ರಾಜ್ಯ ಜನಗಣತಿ ಅಟ್ಲಾಸುಗಳು ಪ್ರಕಟವಾಗಿವೆ. ಉಳಿದ ಪ್ರದೇಶಗಳವು ಸಿದ್ಧವಾಗುತ್ತಿವೆ. ಒರಿಸ್ಸ ಮತ್ತು ರಾಜಸ್ಥಾನದ ಆಡಳಿತ ಅಟ್ಲಾಸುಗಳು ಸಿದ್ಧವಾಗಿವೆ. ಇವು ಆಡಳಿತ ವಿಭಾಗಗಳು ಹಾಗೂ ಉಪವಿಭಾಗಗಳ ಬಗ್ಗೆ ಉಪಯುಕ್ತ ವಿವರಗಳನ್ನು ನೀಡುತ್ತವೆ. 1961ರ ಅಖಿಲ ಭಾರತ ಜನಗಣತಿ ಅಟ್ಲಾಸಿನಲ್ಲಿ 191 ಫಲಕಗಳಿವೆ. ಭೂಪಟಶಾಸ್ತ್ರೀಯವಾದ ಅನೇಕ ತಾಂತ್ರಿಕ ವಿನ್ಯಾಸಗಳ ಸಹಾಯದಿಂದ ಇವನ್ನು ನಿರ್ಮಿಸಲಾಗಿದೆ. ಇವು ಜನಸಂಖ್ಯಾಶಾಸ್ತ್ರ ಹಾಗೂ ಆರ್ಥಿಕ ವಿವರಣೆಗಳನ್ನು ಸ್ಪಷ್ಟಗೊಳಿಸುತ್ತವೆ. ಈ ಅಟ್ಲಾಸುಗಳಲ್ಲದೆ 1961 ಮತ್ತು 1971ರ ಜನಗಣತಿಯ ದತ್ತಾಂಶಗಳ ಆಧಾರದ ಮೇಲೆ ಬೆಂಗಳೂರು, ಹೈದರಾಬಾದ್, ಮದ್ರಾಸ್, ಕಲ್ಕತ್ತ, ದೆಹಲಿ, ಅಹಮದಾಬಾದ್ ಮುಂತಾದ ದೊಡ್ಡ ನಗರಗಳ ಜನಸಂಖ್ಯಾ ಭೂಪಟಗಳನ್ನು ನಿರ್ಮಿಸುವ ಕಾರ್ಯ ಪ್ರಾರಂಭಿಸಿದೆ.

1971ರ ಜನಗಣತಿಯ ಆಧಾರದ ಮೇಲೆ ನಿರ್ಮಾಣವಾಗುವ ಅಟ್ಲಾಸುಗಳನ್ನು ಪ್ರಾಕೃತಿಕ, ಉದ್ಯೋಗವ್ಯವಸ್ಥೆ, ವಲಸೆ ಹಾಗೂ ಸಾಮಾಜಿಕಾರ್ಥಿಕ ವ್ಯವಸ್ಥೆಗಳ ದೃಷ್ಟಿಯಿಂದ ನಿರ್ಮಿಸಲಾಗುತ್ತಿದೆ. ಮಾದರಿ ನಗರ ಪ್ರದೇಶಗಳಿಗಾಗಿ ಕೆಲವೊಂದು ವಿಶಿಷ್ಟ ಭೂಪಟಗಳನ್ನು ನಿರ್ಮಿಸಲಾಗುವುದು 1 ಮಿಮೀ.=4.5 ಮೀ; 1 ಮಿಮೀ.=2.5 ಮೀ. ಮತ್ತು 1:200,000 ಪ್ರಮಾಣಗಳಿಗೆ ಅನುಗುಣವಾಗಿ 1971ರ ಭಾರತದ ಅಟ್ಲಾಸನ್ನು ನಿರ್ಮಿಸುವುದಕ್ಕಾಗಿ ಭೂಪಟಗಳ ಸಂಗ್ರಹಣ ಕಾರ್ಯವನ್ನು ಮಾಡಿ, ಅನಂತರ ಅವನ್ನು ಗೊತ್ತಾದ ಅಳತೆಗೆ ಕುಗ್ಗಿಸಲಾಗುವುದು. ಈ ರೀತಿ ಭಾರತಕ್ಕೆಲ್ಲ ಅನ್ವಯಿಸುವಂಥ ಅಟ್ಲಾಸ್ ಸರಣಿಯನ್ನು ಪ್ರತಿ ರಾಜ್ಯದ ಅತ್ಯಂತ ಸಣ್ಣ ಘಟಕವಾದ ತಾಲ್ಲೂಕಿನಿಂದ ಹಿಡಿದು ಜಿಲ್ಲಾಮಟ್ಟದವರೆಗೂ ಅನ್ವಯಿಸುವಂತೆ ನಿರ್ಮಿಸಲಾಗುತ್ತಿದೆ. ಇದಲ್ಲದೆ ಅಂತರ ಜನಗಣತೀಯ ಯೋಜನೆಗೆ ಅನುಗುಣವಾಗಿ ಭಾರತವನ್ನು ಭೌಗೋಳಿಕ ಹಾಗೂ ಭೂಪಟ ವಿಭಾಗಗಳನ್ನಾಗಿ ವಿಭಾಗಿಸಿ, ಭೂ ಸಂಪತ್ತು ಮತ್ತು ಜನಸಂಖ್ಯಾ ಭೂಪಟಗಳನ್ನು ನಿರ್ಮಿಸಲಾಗುತ್ತಿದೆ.

ಇವಲ್ಲದೆ ಪ್ರಾದೇಶಿಕ ಮಟ್ಟದ ನಗರ ಭೂಪಟಗಳು, ತಾಲ್ಲೂಕು, ಉಪವಿಭಾಗ ಮಟ್ಟದ ಅಧಿಕಾರ ವ್ಯಾಪ್ತಿಯ ರಾಜ್ಯಭೂಪಟಗಳನ್ನು ತಿದ್ದಿ, ಕ್ರೋಢೀಕರಿಸಿ, ನವೀನಗೊಳಿಸಲಾಯಿತು. ಇವುಗಳಲ್ಲಿ ಹಳ್ಳಿಗಳು, ಅವುಗಳ ಜನಸಂಖ್ಯೆ, ರಸ್ತೆಗಳು, ರೈಲುಮಾರ್ಗಗಳು ಪ್ರಮುಖ ಮಾರುಕಟ್ಟೆಗಳು–ಇತ್ಯಾದಿಗಳನ್ನು ಗುರ್ತುಮಾಡಲಾಗಿದೆ. ಬೇರೆಬೇರೆಯಾದ ಜಿಲ್ಲಾ ಭೂಪಟಗಳನ್ನೂ ನಿರ್ಮಿಸಲಾಗುವುದು. ಇವು ನಗರ ಕೇಂದ್ರಗಳು, ರೈಲುಮಾರ್ಗಗಳು, ಆಡಳಿತ ವಿಭಾಗ ಹಾಗೂ ಉಪವಿಭಾಗಗಳನ್ನು ತೋರಿಸುತ್ತವೆ. ಇವನ್ನೆಲ್ಲ 1971ರ ಜಿಲ್ಲಾ ಜನಗಣತಿ ಕೈಪಿಡಿಯಲ್ಲಿ ಸೇರಿಸಲಾಗುವುದು.

## ಇತರ ಭೂಪಟ ರಚನಾ ಸಂಸ್ಥೆಗಳು

ಮೇಲೆ ತಿಳಿಸಿದ ಸಂಸ್ಥೆಗಳಲ್ಲದೆ, ಭಾರತದಲ್ಲಿಯ ಇತರ ಸಂಸ್ಥೆಗಳೂ ಭೂಪಟಗಳನ್ನು ನಿರ್ಮಿಸುತ್ತಿವೆ. ಇವುಗಳಲ್ಲಿ ಮುಖ್ಯವಾದವುಗಳ ವಿವರ ಈ ರೀತಿ ಇದೆ:

ಎಸ್. ಪಿ. ಚಟರ್ಜಿಯವರ ನೇತೃತ್ವದಲ್ಲಿ ದಾಮೋದರ್ ಕಣಿವೆ ಪ್ರದೇಶದ 'ಯೋಜನಾತ್ಮಕ ಅಟ್ಲಾಟ'ಸನ್ನು 1969ರಲ್ಲಿ ಪ್ರಕಟಿಸಲಾಯಿತು. ಇದರಲ್ಲಿ 30 ಫಲಕಗಳಿವೆ; ಕಣಿವೆ ಪ್ರದೇಶದ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳನ್ನು ವಿವರಿಸಲಾಗಿದೆ.

ಕಲ್ಕತ್ತ ನಗರದಲ್ಲಿ ಅದರ 'ಬೃಹತ್ ನಗರ ಯೋಜನಾ ಸಂಸ್ಥೆ' ಇದೆ. ಇದು ಕಲ್ಕತ್ತ ಬೃಹತ್ ನಗರ ಮತ್ತು ಪಶ್ಚಿಮ ಬಂಗಾಳದ ಇನ್ನಿತರ ಪ್ರದೇಶಗಳ ವಿವಿಧ ಸಮಸ್ಯೆಗಳನ್ನು ಭೂಪಟ್ಟಿಸಲು ಪ್ರಯತ್ನಿಸುತ್ತಿದೆ. ಈ ಸಂಸ್ಥೆ 1959ರಲ್ಲಿ ಬರ್ದ್ವಾನ್ ಜಿಲ್ಲೆಯ ಒಂದು ಅಟ್ಲಾಸನ್ನು ಪ್ರಕಟಿಸಿತು. ಈ ಸಂಪುಟದಲ್ಲಿ 27 ಭೂಪಟಗಳಿವೆ. ಮೇಲ್ಮೈ ಲಕ್ಷಣ, ಮಣ್ಣುಗಳು, ಮಳೆ, ನೀರಾವರಿ, ಸಾರಿಗೆ ಸಂಪರ್ಕ, ಕೈಗಾರಿಕೆಗಳು—ಇತ್ಯಾದಿ ವಿವರಗಳಿವೆ.

ಕೇಂದ್ರ ಶುಷ್ಕವಲಯ ಸಂಶೋಧನ ಸಂಸ್ಥೆಯಲ್ಲಿ ಭೂಪಟಶಾಸ್ತ್ರ ಮತ್ತು ಭೂರಚನಾಶಾಸ್ತ್ರ ವಿಭಾಗಗಳಿವೆ. ಈ ವಿಭಾಗಗಳು ರಾಜಸ್ಥಾನ ಮರುಭೂಮಿಯಲ್ಲಿ ಭೂರಚನಾಶಾಸ್ತ್ರೀಯ ಅನ್ವೇಷಣೆ ಹಾಗೂ ವಿಷಯಾತ್ಮಕ ಭೂಪಟ ರಚನಾ ಕಾರ್ಯಗಳನ್ನು ನಡೆಸುತಿ ವೆ. ಲೂನಿ ನದೀಪಾತ್ರದ ಸರ್ವೇ ಕಾರ್ಯವನ್ನೂ ಮುಗಿಸಿದೆ. ಅಂತೆಯೇ ರಾಜಸ್ಥಾನದ ವಿಷಯಾತ್ಮಕ ಅಟ್ಲಾಸ್ ಒಂದನ್ನು ಇಷ್ಟರಲ್ಲೇ ಪ್ರಕಟಿಸಲಿದೆ.

ಭಾರತದ ಸಂಖ್ಯಾಕಲನೀಯ ಸಂಸ್ಥೆಯ ಪ್ರಾದೇಶಿಕ ಸರ್ವೇ ವಿಭಾಗ ಸಮಗ್ರ ವಿಷಯಾತ್ಮಕ ಸರ್ವೇ ಕಾರ್ಯವನ್ನು ನಡೆಸಿದ್ದರ ಫಲವಾಗಿ ಕರ್ನಾಟಕದ 'ಸಂಪನ್ಮೂಲಗಳ ಅಟ್ಲಾಸ್' ಒಂದನ್ನು ಪ್ರಕಟಿಸಿದೆ. ಉಳಿದ ರಾಜ್ಯಗಳಿಗೆ ಸಂಬಂಧಪಟ್ಟ ಈ ರೀತಿಯ ಭೂಪಟಗಳೂ ಹೊರಬೀಳುವುದರಲ್ಲಿದೆ.

ಭಾರತದ ಭೂವಿಜ್ಞಾನ ಸರ್ವೇ ಸಂಸ್ಥೆ ಭಾರತದಾದ್ಯಂತ ಸುವ್ಯವಸ್ಥಿತ ಭೂವಿಜ್ಞಾನ ಭೂಪಟ ವ್ಯವಸ್ಥೆ ಮಾಡಿದೆ. ಶಿಲಾನಿರ್ಮಾಣಗಳು, ಆರ್ಥಿಕ ಖನಿಜಗಳು ಮತ್ತು ಅಂತರ್ಜಲ ಸಂಪನ್ಮೂಲಗಳ ವಿತರಣೆಯನ್ನು ತೋರಿಸುವ ಬೃಹತ್ ಪ್ರಮಾಣದ ಭೂಪಟಗಳನ್ನು ಇದು ನಿರ್ಮಿಸುತ್ತಿದೆ. 1962ರಲ್ಲಿ ಈ ಸಂಸ್ಥೆ 1:2,000,000 ಪ್ರಮಾಣದ ಭಾರತ ಭೂವಿಜ್ಞಾನ ಭೂಪಟದ ಆರನೆಯ ಮುದ್ರಣವನ್ನು ಪ್ರಕಟಿಸಿತು. ಇದೇ ಪ್ರಮಾಣದ ಭೂಗರ್ಭರಚನಾ ಸಂಬಂಧದ ಭೂಪಟ ಮತ್ತು ಲೋಹಜನ್ಯ ಹಾಗೂ ಖನಿಜಜನ್ಯ ಭೂಪಟವನ್ನೂ 1963ರಲ್ಲಿ ಪ್ರಕಟಿಸಿತು. ಇದಕ್ಕೂ ಮೊದಲೇ ಅಂತರರಾಷ್ಟ್ರೀಯ ಭೂವಿಜ್ಞಾನ ಸಮ್ಮೇಳನದ ಅಂಗವಾಗಿ ಹಾಗೂ ಪ್ರಪಂಚದ ಭೂವಿಜ್ಞಾನ ಭೂಪಟ ಮಂಡಲಿಯ ಪರವಾಗಿ 1947ರಲ್ಲಿ ಏಷ್ಯಾ ಮತ್ತು ದೂರಪ್ರಾಚ್ಯಗಳ ಭೂವಿಜ್ಞಾನ ನಕ್ಷೆಯನ್ನು ಈ ಸಂಸ್ಥೆ ನಿರ್ಮಿಸಿತ್ತು. ಇದು ಇಕಾಫೆ ಪ್ರದೇಶವನ್ನು ಒಳಗೊಂಡಿದ್ದು, 1:5,000,000 ಪ್ರಮಾಣದಲ್ಲಿದೆ. ಇದರಲ್ಲಿ ಆರು ಹಾಳೆಗಳಿವೆ. ಇದನ್ನು ವಿಶ್ವಸಂಸ್ಥೆಯ ಆರ್ಥಿಕ ಮಂಡಲಿಯ ಆಶ್ರಯದಲ್ಲಿ ರಚಿಸಲಾಯಿತು.

ಭಾರತದ ಪವನಶಾಸ್ತ್ರ ಇಲಾಖೆ ಭಾರತ ಮತ್ತು ಇತರ ದೇಶಗಳ ದೈನಿಕ ಹವಾಪಟಗಳನ್ನು (Daily Weather Charts) ಪ್ರಕಟಿಸುತ್ತಿದೆ. 1905ರಲ್ಲಿ ಇಲಿಯಟ್ ಎನ್ನುವ ಹವಾಮಾನ ತಜ್ಞ ಈ ಇಲಾಖೆಗಾಗಿ ವಾಯುಗುಣಾತ್ಮಕ ಅಟ್ಲಾಸ್ ಒಂದನ್ನು ನಿರ್ಮಿಸಿದ. ಅದು ಈಗ ದೊರೆಯುತ್ತಿಲ್ಲ. ಅಲ್ಲದೆ ಈ ಇಲಾಖೆ ರಾಷ್ಟ್ರೀಯ ಅಟ್ಲಾಸ್ ಸಂಸ್ಥೆಯ ಸಹಾಯದಿಂದ ಹೊಸದಾದ ರಾಷ್ಟ್ರೀಯ ವಾಯುಗುಣಾತ್ಮಕ ಅಟ್ಲಾಸ್ ಒಂದನ್ನು ಸಿದ್ಧಗೊಳಿಸುವ ಪ್ರಯತ್ನದಲ್ಲಿದೆ. 1943ರಲ್ಲಿ ವೈಮಾನಿಕರಿಗಾಗಿ ಒಂದು ವಾಯುಗುಣಾತ್ಮಕ ಅಟ್ಲಾಸನ್ನು ಈ ಇಲಾಖೆ ಸಿದ್ಧಗೊಳಿಸಿತು.

ಪ್ರಮುಖವಾದ ಫ್ರೆಂಚ್ ಸಂಸ್ಥೆಯೊಂದು 1:1,000,000 ಪ್ರಮಾಣದ ಭಾರತದ ಸ್ವಾಭಾವಿಕ ಸಸ್ಯವರ್ಗ ಭೂಪಟಗಳನ್ನು ನಿರ್ಮಿಸಿತು. ವಾಯುಗುಣ, ಮಣ್ಣು, ಪ್ರಾಕೃತಿಕ ಲಕ್ಷಣಗಳನ್ನು ಒಳಗೊಂಡ, ವಿಷಯ ವಿವರಗಳಿಂದ ಕೂಡಿದ ಸುಮಾರು ಏಳು ಫಲಕಗಳನ್ನು ಇದು ನಿರ್ಮಿಸಿದೆ.

ಭೂಪಟ ರಚನಾ ಕಾರ್ಯದಲ್ಲಿ ವಿವಿಧ ವಿಶ್ವವಿದ್ಯಾನಿಲಯಗಳು ಭಾಗವಹಿಸಬೇಕಾದ್ದು ಅಗತ್ಯ. ಆದರೆ ಭಾರತದ ವಿಶ್ವವಿದ್ಯಾನಿಲಯಗಳು ಅಂಥ ಆಸಕ್ತಿಯೇನನ್ನೂ ತೋರುತ್ತಿಲ್ಲ. ಆದಾಗ್ಯೂ ಒಂದೆರಡು ವಿಶ್ವವಿದ್ಯಾನಿಲಯಗಳು ಈ ನಿಟ್ಟಿನಲ್ಲಿ ಸಾಕಷ್ಟು ಕೆಲಸ ಮಾಡಿವೆ. ಕಲ್ಕತ್ತ ವಿಶವಿದ್ಯಾನಿಲಯದ ಭೂಗೋಳ ವಿಭಾಗ 1947ರಲ್ಲಿ ಪ್ರೊ. ಎಸ್. ಪಿ. ಚಟರ್ಜಿಯವರ ನೇತೃತ್ವದಲ್ಲಿ ಬಂಗಾಳದ ಒಂದು ವರ್ಣಭೂಪಟ ರಚಿಸಿತು. ಈ ಭೂಪಟದ ಸಹಾಯದಿಂದಲೇ ಅನಂತರದ ದಿನಗಳಲ್ಲಿ ಪಶ್ಚಿಮ ಬಂಗಾಳ ಮತ್ತು ಪೂರ್ವ ಪಾಕಿಸ್ತಾನಗಳ ಗಡಿ ನಿರ್ಧಾರಣ ಕಾರ್ಯ ಸುಲಭಸಾಧ್ಯವಾಯಿತೆನ್ನಬಹುದು. 1950ರಲ್ಲಿ ಹೌರಾ ಜಿಲ್ಲೆಯ ಭೂಬಳಕೆ ಸರ್ವೇ ಕಾರ್ಯವನ್ನು ಇದು ಕೈಗೊಂಡಿತು. ಅಂತೆಯೇ ಕರ್ನಾಟಕ ವಿಶ್ವವಿದ್ಯಾನಿಲಯದ ಭೂಗೋಳ ವಿಭಾಗ 1 ಅಂ = 12 ಮೈ. ಪ್ರಮಾಣದ, ಕರ್ನಾಟಕದ ಒಂದು ಪ್ರಾದೇಶಿಕ ಅಟ್ಲಾಸನ್ನು ನಿರ್ಮಿಸಿತು. ಇದರಲ್ಲಿ 30 ಭೂಪಟಗಳಿವೆ.

ಭೂಪಟಗಳ ನಿರ್ಮಾಣದಲ್ಲಿ ಸರ್ಕಾರ ಮತ್ತು ಅದರ ಸಂಸ್ಥೆಗಳೇ ದುಡಿಯುತ್ತಿವೆ. ದುರದೃಷ್ಟದ ಅಂಶವೆಂದರೆ ಅಮೆರಿಕ. ಇಂಗ್ಲೆಂಡ್ ದೇಶಗಳಲ್ಲಿರುವಂತೆ `ಖಾಸಗಿ ಭೂಪಟ ಪ್ರಕಾಶಕರು' ನಮ್ಮ ದೇಶದಲ್ಲಿ ಇಲ್ಲವೇ ಇಲ್ಲವೆನ್ನಬಹುದು. ಸಾಹಸ, ಉದ್ಯಮ ಸ್ಥಾಪನೆ ಮತ್ತು ಉನ್ನತ ತಾಂತ್ರಿಕ ಮಟ್ಟಗಳ ಸಾಧನೆಯ ಗೋಜಿಗೇ ಇವರು ಹೋಗಿಲ್ಲ. ಇದರಿಂದ ಭಾರತದಲ್ಲಿ ಭೂಪಟರಚನಾ ಕಾರ್ಯ ಸಾಕಷ್ಟು ಮುಂದುವರಿದಿಲ್ಲ.

ಶುಭಚಂದ್ರ

# ಕರ್ನಾಟಕದ ಗೊಮ್ಮಟೇಶ್ವರ ವಿಗ್ರಹಗಳು

ಮೂರ್ತಿಶಿಲ್ಪ ಭಾರತದ ಪ್ರಾಚೀನ ಕಲೆಗಳಲ್ಲೊಂದು. ಮೂರ್ತಿಪೂಜೆ ಸಾಂಸ್ಕೃತಿಕವಾಗಿ ಪ್ರಾಮುಖ್ಯ ಪಡೆದುಕೊಂಡಂತೆಲ್ಲ ಮೂರ್ತಿಶಿಲ್ಪಕಲೆ ಅತಿಶಯವಾಗಿ ಬೆಳೆಯುತ್ತ ಬಂತು. ಭಾರತದಲ್ಲಿ ಮೂರ್ತಿ ಶಿಲ್ಪ ಜೈನಧರ್ಮದ ಆಶ್ರಯದಲ್ಲಿ ವಿಶೇಷವಾಗಿ ಬೆಳೆದಿದೆ. ಮೂರ್ತಿಪೂಜೆಯನ್ನು ಕುರಿತ ಹೇಳಿಕೆಗಳು ಜೈನಧರ್ಮದಲ್ಲಿ ಪ್ರಾಚೀನ ಕಾಲದಿಂದಲೂ ಕಂಡುಬರುತ್ತವೆ. ಕ್ರಿ.ಪೂ. 4–5ನೆಯ ಶತಮಾನದ ಕಾಲಕ್ಕಾಗಲೇ ಜೈನಮೂರ್ತಿಗಳು ಇದ್ದುದರ ಬಗ್ಗೆ ಕ್ರಿ.ಪೂ. 2ನೆಯ ಶತಮಾನದ ಹಾಥಿಗುಂಫಾದ ಖಾರವೇಲನ ಶಿಲಾಶಾಸನದಲ್ಲಿ ಉಲ್ಲೇಖವಿದೆ.

ಜೈನ ಮೂರ್ತಿಗಳೆಂದರೆ ಸಾಮಾನ್ಯವಾಗಿ ತೀರ್ಥಂಕರರ ಮತ್ತು ಬಾಹುಬಲಿಯ ಮೂರ್ತಿಗಳು. ಈ ಮೂರ್ತಿಗಳು ಸಾಮಾನ್ಯವಾಗಿ ಖಡ್ಗಾಸನದಲ್ಲಿ ಅಥವಾ ಪದ್ಮಾಸನದಲ್ಲಿರುತ್ತವೆ. ಸೌಮ್ಯ ಆಕಾರ, ಕಾಂತಿಯಿಂದ ಕೂಡಿದ ದೇಹ. ಶಾಂತ–ವಿರಕ್ತ ಮುಖಮುದ್ರೆ ಮತ್ತು ನಗ್ನತೆ—ಇವು ದಿಗಂಬರ ಜೈನ ವಿಗ್ರಹಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಲಕ್ಷಣಗಳು. ಇಲ್ಲಿ ವೈವಿಧ್ಯಕ್ಕೆ ಅವಕಾಶವಿಲ್ಲ.

ಕರ್ನಾಟಕದ ಶಿಲ್ಪಕಲೆಯಲ್ಲಿ ಗೊಮ್ಮಟೇಶ್ವರನ ವಿಗ್ರಹಗಳಿಗೆ ವಿಶೇಷಸ್ಥಾನವಿದೆ. ಗೊಮ್ಮಟೇಶ್ವರ ಎಂದರೆ ಜೈನಧರ್ಮ, ಜೈನಧರ್ಮವೆಂದರೆ ಗೊಮ್ಮಟೇಶ್ವರ ಎನ್ನುವಷ್ಟರ ಮಟ್ಟಿಗೆ ಗೊಮ್ಮಟೇಶ್ವರನ ಮತ್ತು ಗೊಮ್ಮಟೇಶ್ವರ ವಿಗ್ರಹಗಳ ಕೀರ್ತಿ ಹರಡಿದೆ. ದಿಗಂಬರ ಜೈನ ಸಂಪ್ರದಾಯದಲ್ಲಿ ಈ ಮೂರ್ತಿಗೆ ಹೆಚ್ಚಿನ ಪ್ರಾಮುಖ್ಯ ಬಂದಿದೆ. ಬೇರೆ ಜೈನ ವಿಗ್ರಹಗಳಿಗೂ ಗೊಮ್ಮಟೇಶ್ವರ ವಿಗ್ರಹಕ್ಕೂ ಒಂದು ಮುಖ್ಯವಾದ ವ್ಯತ್ಯಾಸವುಂಟು. ಬೇರಾವುವೇ ಜೈನವಿಗ್ರಹಗಳು ಪದ್ಮಾಸನದಲ್ಲಾಗಲಿ ಖಡ್ಗಾಸನ ದಲ್ಲಾಗಲಿ ಇರುವುದನ್ನು ಕಾಣಬಹುದು. ಆದರೆ ಗೊಮ್ಮಟೇಶ್ವರ ವಿಗ್ರಹ ಮಾತ್ರ ಖಡ್ಗಾಸನದಲ್ಲೇ ಇರುತ್ತದೆ. ಮತ್ತೊಂದು ವಿಶೇಷವೆಂದರೆ, ಬೇರೆ ಜೈನ ವಿಗ್ರಹಗಳಿಗಿಂತಲೂ ಗೊಮ್ಮಟೇಶ್ವರ ವಿಗ್ರಹ ವನ್ನು ಗುರ್ತಿಸುವುದು ಬಹಳ ಸುಲಭ. ವಿಗ್ರಹದ ಪಾದದ ಬಳಿ ಹಾವಿರುವ ಹುತ್ತಗಳು ಮತ್ತು/ ಅಥವಾ ಕಾಲು ಕೈಗಳ ಮೇಲೆ ಬಳ್ಳಿಗಳು ಇದ್ದರೆ ಆ ವಿಗ್ರಹ ನಿಶ್ಚಯವಾಗಿ ಗೊಮ್ಮಟೇಶ್ವರ.

ಬಾಹುಬಲಿಯನ್ನೇ ಗೊಮ್ಮಟೇಶ್ವರ ಎಂಬ ಹೆಸರಿನಿಂದ ಕರೆಯುವ ಪದ್ಧತಿ ಕುತೂಹಲಕಾರಿ ಯಾದ್ದು. ಶ್ರವಣಬೆಳ್ಗೊಳದ ಶಾಸನಗಳಲ್ಲಿ ಚಾಮುಂಡರಾಯನನ್ನು ಗೊಮ್ಮಟ ಎಂದೂ ಅವನು ಮಾಡಿಸಿದ ಬಾಹುಬಲಿ ವಿಗ್ರಹವನ್ನು ಗೊಮ್ಮಟೇಶ್ವರ ಎಂದೂ ಕರೆಯಲಾಗಿದೆ. ಗೊಮ್ಮಟ ಎಂದರೆ ಚೆಲುವ, ಸುಂದರ, ಮನ್ಮಥ ಎಂಬ ಅರ್ಥಗಳಿವೆ. ಚಾಮುಂಡರಾಯನನ್ನು ಅವನ ಆಪ್ತರು ಹಿರಿಯರು ಕರೆಯುತ್ತಿದ್ದುದು ಗೊಮ್ಮಟ ಎಂಬ ಹೆಸರಿನಿಂದ. ಆದ್ದರಿಂದ ಚಾಮುಂಡರಾಯ ಮಾಡಿಸಿದ ಅವನ ಆರಾಧ್ಯದೈವವಾದ ಬಾಹುಬಲಿ ಮೂರ್ತಿಗೆ ಗೊಮ್ಮಟೇಶ್ವರ ಎಂಬ ಹೆಸರು ಬಂದಿದೆ. ಅಲ್ಲಿಂದ ಮುಂದೆ ಬಾಹುಬಲಿಯ ವಿಗ್ರಹಗಳಿಗೆಲ್ಲ ಗೊಮ್ಮಟೇಶ್ವರ ಎಂಬ ಹೆಸರು ಸಾಮಾನ್ಯವಾಯಿತು, ಸ್ಥಿರವಾಯಿತು; ಮತ್ತು ಅದೇ ಪ್ರಸಿದ್ಧವೂ ಆಯಿತು.

ಮೊಟ್ಟಮೊದಲ ಬಾಹುಬಲಿ ವಿಗ್ರಹದ ನಿರ್ಮಾಣ ಎಲ್ಲಾಯಿತು? ಇದಕ್ಕೆ ಜೊಪ್ಪಣಕವಿಯ ಒಂದು ಉಲ್ಲೇಖವಿದೆ. ಭರತ ಚಕ್ರವರ್ತಿ 525 ಬಿಲ್ಲೆತ್ತರದ ಬಾಹುಬಲಿ ಪ್ರತಿಮೆಯನ್ನು

ಪೌದನಪುರದಲ್ಲಿ ಮಾಡಿಸಿದ. ಮುಂದೆ ಆ ಪ್ರದೇಶದಲ್ಲಿ ಕುಕ್ಕುಟ ಸರ್ಪಗಳು ಅಸಂಖ್ಯವಾಗಿ ಆವರಿಸಿಕೊಂಡದ್ದರಿಂದ ಸಾಮಾನ್ಯರಿಗೆ ಅದು ದುರ್ಗಮವಾಯಿತು. ಚಾಮುಂಡರಾಯ ಆ ಪ್ರತಿಮೆಯ ದರ್ಶನಾರ್ಥಿಯಾಗಿ ಹೊರಟಾಗ ಹಿರಿಯರು "ಪೌದನಪುರ ದೂರ, ದುರ್ಗಮ" ಎಂದು ಹೇಳಿದ್ದರಿಂದ ಇಲ್ಲೇ ಅದನ್ನು ಮಾಡಿಸುತ್ತೇನೆಂದು ಗೋಮಟ (=ಚಾಮುಂಡರಾಯ) ಅದನ್ನು ಮಾಡಿಸಿದ ಎಂದು ತಿಳಿಸುತ್ತಾನೆ. ಆದರೆ ಭರತನಿಂದ ನಿರ್ಮಾಣವಾದ ಬಾಹುಬಲಿ ವಿಗ್ರಹ ಪೌರಾಣಿಕ ಮಾತಾಯಿತು. ಚಾರಿತ್ರಿಕವಾಗಿ ಪ್ರಾಚೀನವಿಗ್ರಹ ನಮಗೆ ಮೊಟ್ಟಮೊದಲು ಕಂಡುಬರುವುದು ಕರ್ನಾಟಕದಲ್ಲಿ. ಉಪಲಬ್ಧ ವಿಗ್ರಹಗಳಲ್ಲಿ ಅತ್ಯಂತ ಪ್ರಾಚೀನವೆಂದು ತಿಳಿಯಲಾಗಿರುವ ಈ ವಿಗ್ರಹ ಬಾದಾಮಿ ಜೈನ ಗುಹೆಯಲ್ಲಿದೆ. ಕ್ರಿ.ಶ. ಸುಮಾರು ಏಳನೆಯ ಶತಮಾನದ ಆದಿಭಾಗಕ್ಕೆ ಸೇರುವ ಈ ಶಿಲ್ಪಕಲೆ ಬಾದಾಮಿ ಚಾಳುಕ್ಯರ ಕಾಲದ್ದು. ಗುಹೆಯ ಪಡಸಾಲೆಯಲ್ಲಿ ಎಡಗಡೆ ಗೊಮ್ಮಟೇಶ್ವರನ, ಬಲಗಡೆ ಪಾರ್ಶ್ವನಾಥ ತೀರ್ಥಂಕರನ ವಿಗ್ರಹವನ್ನು ಕೆತ್ತಲಾಗಿದೆ. ಈ ಗೊಮ್ಮಟೇಶ್ವರನ ಎತ್ತರ ಸುಮಾರು ಏಳೂವರೆ ಅಡಿಗಳು. ಮಾಧವೀಲತೆಗಳು ಕೈಕಾಲುಗಳನ್ನು ಸುತ್ತಿಕೊಂಡಿವೆ. ಈ ವಿಗ್ರಹದಲ್ಲಿ ಅತ್ಯಂತ ಗಮನಾರ್ಹ ಅಂಶವೆಂದರೆ ಭುಜದ ವರೆಗೂ ತಲೆಗೂದಲು ಇಳಿದಿರುವುದು.

ಐಹೊಳೆಯಲ್ಲಿ ಮೇಗುತಿ ಗುಡ್ಡದ ಹತ್ತಿರ ಮೀಣಬಸದಿ ಎಂದು ಕರೆಯಲಾಗುತ್ತಿರುವ ಒಂದು ಜೈನ ಗುಹಾಂತರ ದೇವಾಲಯವಿದೆ. ಈ ಗುಹೆಯ ಬಲಗಡೆ ತುದಿಯಲ್ಲಿ ಕಾಯೋತ್ಸರ್ಗದಲ್ಲಿರುವ (=ಖಡ್ಗಾಸನ) ಒಂದು ಗೊಮ್ಮಟೇಶ್ವರ ವಿಗ್ರಹವಿದೆ. ವಿಗ್ರಹದ ಕೈಕಾಲುಗಳು ಬಳ್ಳಿಗಳಿಂದ ಸುತ್ತುವರಿಯಲ್ಪಟ್ಟು ಪಾದಗಳ ಬಳಿಯಲ್ಲಿ ಸರ್ಪಗಳಿವೆ. ಅಕ್ಕಪಕ್ಕದಲ್ಲಿ ಸರ್ವಾಲಂಕಾರ ಭೂಷಿತೆಯರಾದ ಸ್ತ್ರೀಯರಿಬ್ಬರು ಬಳ್ಳಿಗಳನ್ನು ಹಿಡಿದುಕೊಂಡಿದ್ದಾರೆ. ಇವರನ್ನು ಬಾಹುಬಲಿಯ ಸೋದರಿಯರೆಂದು ಅರ್ಥಮಾಡಲಾಗಿದೆ. ಈ ಗುಹೆ ಕ್ರಿ.ಶ.ಸು. ಏಳನೆಯ ಶತಮಾನದ ಮಧ್ಯಭಾಗದಲ್ಲಿ ಇಮ್ಮಡಿ ಪುಲಿಕೇಶಿ ಮತ್ತು ರವಿಕೀರ್ತಿ–ಇವರ ಕಾಲದಲ್ಲಿ ನಿರ್ಮಾಣವಾಗಿದೆಯೆಂದು ಊಹಿಸಬಹುದು. ರವಿಕೀರ್ತಿ ಕಟ್ಟಿಸಿದ ಜಿನಾಲಯ ಮತ್ತು ಅವನ ಶಾಸನ ಇರುವುದು ಈ ಮೀಣಬಸದಿಯ ಹತ್ತಿರವೇ ಇರುವ ಮೇಗುತಿ ಗುಡ್ಡದ ಮೇಲೆ. ಇವನ ಕಾಲದಲ್ಲೇ ಮೀಣಬಸದಿಯು ನಿರ್ಮಾಣವಾಗಿರಬಹುದು.

ರಾಷ್ಟ್ರಕೂಟರ ರಾಜ್ಯಭಾರಕಾಲ ಕರ್ನಾಟಕ ಇತಿಹಾಸದಲ್ಲಿ ಮಹತ್ವಪೂರ್ಣವಾಗಿರುವಂತೆಯೆ ಶಿಲ್ಪಕಲೆಯಲ್ಲೂ ಉಜ್ವಲಯುಗವಾಗಿದೆ. ಅಂದು ಕರ್ನಾಟಕದ ಅರಸರು ಆಳಿದ, ಇಂದು ಮಹಾರಾಷ್ಟ್ರದಲ್ಲಿರುವ ಪ್ರದೇಶದ ಎಲ್ಲೋರ ಗುಹಾಂತರ ದೇವಾಲಯಗಳು ಅಂದಿನ ಶಿಲ್ಪಕಲೆಯ ಉಚ್ಛ್ರಾಯ ಸ್ಥಿತಿಗೆ ಸಾಕ್ಷಿಗಳಾಗಿವೆ. ಗುಹಾಂತರ ದೇವಾಲಯಗಳ ನಿರ್ಮಾಣ ಕಲೆ ಎಲ್ಲೋರಾ ಗುಹೆಗಳಲ್ಲಿ ತನ್ನ ಸಾರ್ಥಕ್ಯ ಪಡೆದುಕೊಂಡಿದೆ. ಇಲ್ಲಿ ಐದು ಜೈನ ಗುಹಾಂತರ ದೇವಾಲಯಗಳಿವೆ. ಈ ಜೈನಗುಹೆಗಳು ಜೈನಧರ್ಮದ ಮಹಾಪೋಷಕನೂ ಜಿನಸೇನಾಚಾರ್ಯರ ಶಿಷ್ಯನೂ ಆಗಿದ್ದ ರಾಷ್ಟ್ರಕೂಟ ದೊರೆ ಅಮೋಘವರ್ಷ ನೃಪತುಂಗನ ಕಾಲದಲ್ಲಿ ಕೊರೆಯಲ್ಪಟ್ಟುವು. ಇವನ ಕಾಲ ಕ್ರಿ.ಶ. 9ನೆಯ ಶತಮಾನ. ಎಲ್ಲೋರದಲ್ಲಿರುವ ಎಲ್ಲ ಜೈನಗುಹೆಗಳಲ್ಲೂ ಗೊಮ್ಮಟೇಶ್ವರ ವಿಗ್ರಹಗಳು ಕಂಡುಬರುತ್ತವೆ. ಇಲ್ಲಿ ಒಂದು ವಿಶೇಷವೆಂದರೆ. ಒಂದು ಪಕ್ಕದಲ್ಲಿ ಗೊಮ್ಮಟೇಶ್ವರ ವಿಗ್ರಹವಿದ್ದರೆ ಇನ್ನೊಂದು ಪಕ್ಕದಲ್ಲಿ ಪಾರ್ಶ್ವನಾಥ ತೀರ್ಥಂಕರನ ವಿಗ್ರಹವಿರುತ್ತದೆ. ಇದು ಬಾದಾಮಿ ಗುಹೆಯ ಪ್ರಭಾವವಿರಬಹುದು.

ಎಲ್ಲೋರದಲ್ಲಿ ಚಿಕ್ಕ ಕೈಲಾಸವೆಂದು ಪ್ರಸಿದ್ಧವಾಗಿರುವ 30ನೆಯ ಗುಹೆಯಲ್ಲಿ ಎರಡು ಗೊಮ್ಮಟೇಶ್ವರ ವಿಗ್ರಹಗಳಿವೆ. 31ನೆಯ ಗುಹೆಯ ಪಡಸಾಲೆಯಲ್ಲಿ ಬಲಭಾಗದ ಗೋಡೆಯಲ್ಲಿ ಒಂದು ವಿಗ್ರಹವಿದೆ. ವಿಗ್ರಹದ ದೇಹ ಬಳ್ಳಿಗಳಿಂದ ಸುತ್ತುವರಿಯಲ್ಪಟ್ಟಿದೆ. ವಿಗ್ರಹದ ಬಲಕ್ಕೆ ಆಕಾಶದಲ್ಲಿ ಗಂಧರ್ವನೊಬ್ಬ ಹಾರವನ್ನು ಹಿಡಿದಿದ್ದಾನೆ; ಎಡಗಡೆ ಆಕಾಶದಲ್ಲಿ ಖೇಚರ ದಂಪತಿಗಳನ್ನೂ ಹಾರ ಹಿಡಿದಿರುವ ಗಂಧರ್ವರನ್ನೂ ಕೊರೆಯಲಾಗಿದೆ. ವಿಗ್ರಹದ ಸಮೀಪದಲ್ಲಿ ಸ್ತ್ರೀಯರಿಬ್ಬರು ನಮಸ್ಕಾರ ಮುದ್ರೆಯಲ್ಲಿ ಕಾಣುತ್ತಾರೆ.

ಎರಡು ಅಂತಸ್ತುಗಳಿಂದ ಕೂಡಿದ, 200 ಅಡಿ ಒಳಭಾಗಕ್ಕೆ ಕೊರೆದು ನಿರ್ಮಿಸಿರುವ 32ನೆಯ

ಗುಹೆ ಇಂದ್ರಸಭೆಯೆಂದು ಪ್ರಖ್ಯಾತವಾಗಿದೆ. ಈ ಗುಹೆಯಲ್ಲಿ ಒಟ್ಟು ಆರು ಗೊಮ್ಮಟೇಶ್ವರ ವಿಗ್ರಹಗಳು ಕಂಡುಬರುತ್ತವೆ. ಎಲ್ಲೋರದಲ್ಲಿರುವ ಗೊಮ್ಮಟೇಶ್ವರ ವಿಗ್ರಹಗಳಲ್ಲೆಲ್ಲ ಅತ್ಯಂತ ಗಮನಾರ್ಹವೂ ಸುಂದರವೂ ಆದ ವಿಗ್ರಹ ಈ ಗುಹೆಯಲ್ಲಿದೆ. ಬಳ್ಳಿಗಳಿಂದ ಸುತ್ತುವರಿಯಲ್ಪಟ್ಟಿರುವ ಈ ವಿಗ್ರಹದ ಸುತ್ತಮುತ್ತ ಸಕಲ ಜೀವರಾಶಿಗಳೂ ಕಂಡುಬರುತ್ತವೆ. ಜಿಂಕೆ, ಸರ್ಪ, ಇಲಿ, ಚೇಳುಗಳೇ ಅಲ್ಲದೆ ನಾಯಿಯೊಂದನ್ನು ಸ್ಪಷ್ಟವಾಗಿ ಗುರುತಿಸಬಹುದು. ಬಲಭಾಗದಲ್ಲಿ ಪುರುಷನೂ ಅಕ್ಕಪಕ್ಕದಲ್ಲಿ ಸ್ತ್ರೀಯರಿಬ್ಬರೂ ಇದ್ದಾರೆ. ಪುರುಷ ಅಣ್ಣನಾದ ಭರತನೆಂದೂ, ಸ್ತ್ರೀಯರು ಸಹೋದರಿಯರಾದ ಬ್ರಾಹ್ಮೀ ಮತ್ತು ಸುಂದರಿಯರೆಂದೂ ಹೇಳಲಾಗಿದೆ. ಮಾನ ಕಷಾಯವನ್ನು ಬಿಡು ಎಂದು ಭರತ ಬಾಹುಬಲಿಯನ್ನು ಪ್ರಾರ್ಥಿಸುತ್ತಿರುವ ಸಂದರ್ಭವನ್ನು ಇದು ಚೆನ್ನಾಗಿ ಹೋಲುತ್ತದೆ.

33ನೆಯ ಗುಹೆಯಲ್ಲಿ ಎರಡು, 34ನೆಯ ಗುಹೆಯಲ್ಲಿ ಒಂದು ಗೊಮ್ಮಟೇಶ್ವರ ವಿಗ್ರಹ ಕಂಡುಬರುತ್ತವೆ. ಎಲ್ಲೋರದಲ್ಲಿ ಒಟ್ಟು ಸುಮಾರು ಹನ್ನೆರಡು ಗೊಮ್ಮಟೇಶ್ವರ ವಿಗ್ರಹಗಳಿವೆ. ಈ ವಿಗ್ರಹಗಳಲ್ಲಿ ಕಂಡು ಬರುವ ವಿಶೇಷಗಳು ಇವು:

1 ಶಿಲಾಭಿತ್ತಿಯಲ್ಲಿ ವಿಗ್ರಹವನ್ನು ಬಿಡಿಸಿರುವುದರಿಂದ ಅದೇ ಭಿತ್ತಿಯಲ್ಲಿ ಆಕಾಶದಲ್ಲಿ ಗಂಧರ್ವರನ್ನು ಕೊರೆಯಲು ಸಾಧ್ಯವಾಯಿತು.

2 ಇಲ್ಲಿರುವ ವಿಗ್ರಹಗಳಲ್ಲಿ ಗುಂಗುರುಗುಂಗುರಾದ ತಲೆಗೂದಲು ಕೆಲವು ವಿಗ್ರಹಗಳಲ್ಲಿ ಭುಜದ ವರೆಗೆ ಇಳಿದಿದ್ದರೆ, ಇನ್ನು ಕೆಲವು ವಿಗ್ರಹಗಳಲ್ಲಿ ಮುಂಭಾಗದಲ್ಲಿ ಭುಜದಿಂದ ಇಳಿದು ಕಂಕುಳ ಹತ್ತಿರದ ವರೆಗೂ ಹರಡಿದೆ. ಬಹುಶಃ ಇದು ಬಾದಾಮಿ ಗುಹೆಯ ಗೊಮ್ಮಟೇಶ್ವರ ವಿಗ್ರಹದ ಪ್ರಭಾವವಿರಬಹುದು.

3 ಗೊಮ್ಮಟೇಶ್ವರನ ಅಕ್ಕಪಕ್ಕದಲ್ಲಿ ಸ್ತ್ರೀಯರಿಬ್ಬರು ಮತ್ತು ಮುಂಭಾಗದಲ್ಲಿ ಪುರುಷ ಇರುವಂತೆ ಕೆತ್ತಿರುವುದನ್ನು ಇಲ್ಲಿ ಬಿಟ್ಟರೆ ಬೇರೆಲ್ಲೂ ಕಾಣಲಾಗುವುದಿಲ್ಲ.

ಶ್ರವಣಬೆಳ್ಗೊಳದ ಗೊಮ್ಮಟೇಶ್ವರ ವಿಗ್ರಹ ವಿಶ್ವವಿಖ್ಯಾತವಾದ್ದು; ಜಗತ್ತಿನ ಆಶ್ಚರ್ಯಗಳಲ್ಲೊಂದರ ಸಾಲಿಗೆ ಸೇರುವಂಥದು. ಎಲ್ಲ ದೃಷ್ಟಿಯಿಂದಲೂ ಪೂರ್ಣತೆಗಳಿಸಿಕೊಂಡಿರುವ ಈ ವಿಗ್ರಹ ಭಾರತೀಯ ಶಿಲ್ಪಕಲೆಗೆ ಕರ್ನಾಟಕದ ಅದ್ವಿತೀಯ ಕಾಣಿಕೆ. ಕರ್ನಾಟಕದಲ್ಲಿ ವಾಸ್ತುಶಿಲ್ಪದ ಪ್ರಗತಿಗೆ ಕಾರಣರಾದ ಗಂಗರ ಕಾಲದಲ್ಲಿ ಇದರ ನಿರ್ಮಾಣವಾಯಿತು. ಈ ವಿಗ್ರಹದ ಪ್ರಾಚೀನತೆಯ ಬಗ್ಗೆ ಹಲವಾರು ಕಥೆಗಳಿವೆ. ಸೀತಾರಾಮರು ಇದನ್ನು ಲಂಕೆಯಿಂದ ತಂದು ಇಲ್ಲಿ ಪ್ರತಿಷ್ಠಾಪಿಸಿದರೆಂದು ದೇವಚಂದ್ರನ ರಾಜಾವಳಿ ಕಥೆಯಲ್ಲಿದೆ. ತಾಯಿ ಕಾಳಲಾದೇವಿ ಪೌದನಪುರದ ಬಾಹುಬಲಿಯನ್ನು ನೋಡಲು ಅಪೇಕ್ಷಿಪಟ್ಟು ಹೊರಟಾಗ ಅದು ಸಾಧ್ಯವಾಗದಿರಲು ಚಾಮುಂಡರಾಯ ಇದನ್ನು ಮಾಡಿಸಿದನೆಂದು ಐತಿಹ್ಯವಿದೆ. ಬಾಹುಬಲಿ ಶಿಲಾಮೂರ್ತಿಯಾಗಿ ಚಾಮುಂಡರಾಯನಿಗೆ ಕಾಣಿಸಿದನೆಂದೂ, ಚಾಮುಂಡರಾಯ ಕ್ರಿ.ಶ. 983ರಲ್ಲಿ ಈ ಮೂರ್ತಿಯನ್ನು ಪ್ರತಿಷ್ಠಾಪಿಸಿದನೆಂದೂ ಪಂಚಬಾಣನಿಂದ ರಚಿತವಾಗಿರುವ ಸ್ಥಳಪುರಾಣದಿಂದಲೂ ಭುಜಬಲಿ ಚರಿತೆಯಿಂದಲೂ ತಿಳಿದುಬರುತ್ತದೆ. ಈ ವಿಗ್ರಹ ನಿರ್ಮಾಣದ ಬಗ್ಗೆ ಚಾರಿತ್ರಿಕವಾಗಿ ದೊರೆಯುವ ದಾಖಲೆಗಳಿಂದ ತಿಳಿದುಬರುವಂತೆ ಇದನ್ನು ಚಾಮುಂಡರಾಯ ಪ್ರತಿಷ್ಠಾಪಿಸಿದ. ಹತ್ತನೆಯ ಶತಮಾನದ ಮೂರು ಶಾಸನಗಳು ಬಾಹುಬಲಿ ವಿಗ್ರಹವನ್ನು 'ಚಾಮುಂಡರಾಜಂ ಮಾಡಿಸಿದಂ' ಎಂದು ತಿಳಿಸುತ್ತವೆ. ಕ್ರಿ.ಶ. 1180ರ ಶಾಸನವೊಂದರಲ್ಲಿ ಸ್ಪಷ್ಟವಾಗಿ ಹೇಳಿರುವ ಪ್ರಕಾರ, ರಾಚಮಲ್ಲನ ಮಂತ್ರಿಯಾದ ಚಾಮುಂಡರಾಯ ಈ ಪ್ರತಿಮೆಯನ್ನು ಪ್ರತಿಷ್ಠಾಪಿಸಿದ. ಕ್ರಿ.ಶ. 978ರಲ್ಲಿ ಚಾಮುಂಡರಾಯನೇ ಬರೆದಿರುವ 'ಚಾಮುಂಡರಾಯ ಪುರಾಣ'ದಲ್ಲಿ ತನ್ನ ಜೀವನ, ಯುದ್ಧಕೌಶಲ, ಸಾಹಸಕಾರ್ಯ ಮೊದಲಾದ ಸ್ವಕೀಯ ವಿಚಾರಗಳನ್ನು ಹೇಳಿಕೊಂಡಿದ್ದಾನೆ. ಆದರೆ ಗೊಮ್ಮಟೇಶ್ವರ ವಿಗ್ರಹ ನಿರ್ಮಾಣದ ಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲ. ಆದ್ದರಿಂದ ಕ್ರಿ.ಶ. 978ಕ್ಕೆ ಮುಂಚೆ ಈ ವಿಗ್ರಹದ ನಿರ್ಮಾಣವಾಗಿಲ್ಲವೆಂದು ತಿಳಿಯಬಹುದು. ಈಗಿರುವ ಆಧಾರಗಳ ಮೇಲೆ ಇದನ್ನು ಕ್ರಿ.ಶ. 982ರಲ್ಲಿ ಕೆತ್ತಿಸಿ ಮುಗಿಸಿರಬೇಕೆಂದು ತಿಳಿಯಲಾಗಿದೆ. ಈ ವಿಗ್ರಹದ ಎತ್ತರದ ಬಗ್ಗೆ ಬೇರೆಬೇರೆ ಅಭಿಪ್ರಾಯಗಳಿದ್ದುವು. ಹಿಂದೆ ಮೈಸೂರಿನ ಚೀಫ್ ಕಮಿಷನರ್

ಆಗಿದ್ದ ಪ್ರೌಸಿಂಗ್ ಎಂಬವರು ಅಳತೆಮಾಡಿಸಿ ಪ್ರಕಟಿಸಿದ ಪ್ರಕಾರ ಈ ಬೃಹನ್ಮೂರ್ತಿಯ ಎತ್ತರ ಐವತ್ತೇಳು ಅಡಿಗಳು.

ಶ್ರವಣಬೆಳ್ಗೊಳದ ಈ ವಿಗ್ರಹದಲ್ಲಿ ಕೆಲವು ವಿಶೇಷಗಳಿವೆ. ಬೆಟ್ಟದ ತುದಿಯಲ್ಲಿ ಬೆಟ್ಟಕ್ಕೆ ಅಂಟಿಕೊಂಡೇ ಇದ್ದ ಕೋಡುಗಲ್ಲಿನಿಂದ ಈ ವಿಗ್ರಹವನ್ನು ನಿರ್ಮಿಸಲಾಗಿದೆ. ಪಾದಗಳ ಪಕ್ಕದಲ್ಲಿ ಮಂಡಿಯ ಎತ್ತರಕ್ಕೂ ಹುತ್ತ ಬೆಳೆದಂತೆ ಕೆತ್ತಲಾಗಿದೆ. ಹುತ್ತದ ಬಾಯಿಗಳಲ್ಲಿ ಸರ್ಪಗಳು ಓಡಾಡುತ್ತಿವೆ. ಬಳ್ಳಿಗಳು ಕಾಲನ್ನು ಸುತ್ತಿಕೊಂಡು ಹಬ್ಬಿ ತೋಳುಗಳಲ್ಲಿ ಬೆಳೆದು ಭುಜಗಳಲ್ಲಿ ಕೊನೆಗೊಂಡಿವೆ. ತಲೆಯ ಕೂದಲುಗಳು ಗುಂಗುರುಗುಂಗುರಾಗಿವೆ. ಆದರೆ ಇದು ಭುಜದ ವರೆಗೆ ಇಳಿದಿಲ್ಲ. ಪಾದದ ಕೆಳಗೆ ಸುತ್ತಲೂ ತಾವರೆಯ ದಳಗಳನ್ನು ಕೆತ್ತಿರುವುದರಿಂದ ತಾವರೆ ಹೂವಿನ ಪೀಠದ ಮೇಲೆ ವಿಗ್ರಹ ನಿಂತಂತೆ ಕಾಣುತ್ತದೆ. ಹುತ್ತ ಹಬ್ಬಿ ಹಾವುಗಳು ಹರಿದಾಡಿದರೂ, ಬಳ್ಳಿಗಳು ಬೆಳೆದು ತಬ್ಬಿಕೊಂಡರೂ ಅವಿಚಲವಾದ ಮನಸ್ಸನ್ನೂ ತಪಸ್ಸಿನ ದೃಢತೆಯನ್ನೂ ಮೂರ್ತಿಯ ಮುಖಭಾವದಲ್ಲಿ ಶಿಲ್ಪಿ ಈ ಬೃಹದಾಕಾರದಲ್ಲಿಯೂ ಹಿಡಿಸಿರುವುದು ಮಹತ್ತ್ವದ ಅಂಶ. ಈ ವಿಗ್ರಹದ ಔನ್ನತ್ಯ, ಸೌಂದರ್ಯ ಮತ್ತು ಅತಿಶಯಗಳನ್ನು ಕುರಿತು ಬೊಪ್ಪಣಕವಿ ಹೀಗೆ ಹೇಳಿದ್ದಾನೆ:

ಅತಿ ತುಂಗಾಕೃತಿಯಾದೊಡಾಗದದರೊಳ್ ಸೌಂದರ್ಯಮೌನ್ನತ್ಯಮುಂ
ನುತ ಸೌಂದರ್ಯಮುಮಾಗೆ ಮತ್ತತಿಶಯಂ ತಾನಾಗದೌನ್ನತ್ಯಮುಂ
ನುತ ಸೌಂದರ್ಯಮುಮೂರ್ಜಿತಾತಿಶಯಮುಂ ತನ್ನಲ್ಲಿ ನಿಂದಿರ್ದುವೇಂ
ಕ್ಷಿತಿ ಸಂಪೂಜ್ಯಮೋ ಗೊಮ್ಮಟೇಶ್ವರ ಜಿನ ಶ್ರೀರೂಪಮಾತ್ಮೋಪಮಂ

ದೊಡ್ಡಬೆಟ್ಟವೆಂದು ಪ್ರಸಿದ್ಧವಾದ ವಿಂಧ್ಯಗಿರಿಯ ಮೇಲಿರುವ ಈ ಗೊಮ್ಮಟೇಶ್ವರನ ದೊಡ್ಡ ಪೂಜೆಯೆಂದು ಜನಜನಿತವಾಗಿರುವ ಮಹಾಮಸ್ತಕಾಭಿಷೇಕವನ್ನು ನೋಡುವುದೆಂದರೆ ಬದುಕಿನ ಅನುಭವಗಳಲ್ಲೊಂದು ಎನ್ನುವಷ್ಟು ಚಿತ್ತಾಕರ್ಷಕವಾಗಿರುತ್ತದೆ. ಸಾಮಾನ್ಯವಾಗಿ ಹನ್ನೆರಡು ವರ್ಷಗಳಿಗೊಮ್ಮೆ ಈ ಮಹಾಮಸ್ತಕಾಭಿಷೇಕ ಪೂಜೆಯನ್ನು ಒಂದು ವಿಶೇಷ ಮುಹೂರ್ತದಲ್ಲಿ ನೆರವೇರಿಸುವ ಸಂಪ್ರದಾಯ ಬೆಳೆದುಬಂದಿದೆ.

ಶ್ರವಣಬೆಳ್ಗೊಳದ ಅನಂತರ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದ ಗೊಮ್ಮಟೇಶ್ವರ ವಿಗ್ರಹ ಗಮನಾರ್ಹವಾದುದು. ಕಾರ್ಕಳ ಊರಿನ ಬಳಿಯಲ್ಲೇ ಇರುವ ಬೆಟ್ಟದ ಮೇಲೆ ನಿಂತಿರುವ ಈ ವಿಗ್ರಹವನ್ನು ಪ್ರತಿಷ್ಠಾಪಿಸಿದವನು ಭೈರವರಸನ ಮಗ ವೀರಪಾಂಡ್ಯ. ಈ ವಿಗ್ರಹದ ಎತ್ತರ 41½ ಅಡಿಗಳು. ಈ ವಿಗ್ರಹ ನಿರ್ಮಾಣದ ಚರಿತ್ರೆಯನ್ನು ಚದುರ ಚಂದ್ರಮನೆಂಬ ಕವಿ 'ಕಾರ್ಕಳ ಗೊಮಟೇಶ್ವರ ಚರಿತ್ರೆ' ಎಂಬ ತನ್ನ ಸಾಂಗತ್ಯಕೃತಿಯಲ್ಲಿ ಸಂಪೂರ್ಣವಾಗಿ ಹೇಳಿದ್ದಾನೆ. ಶ್ರೀಗುರು ಲಲಿತಕೀರ್ತಿ ಭಟ್ಟಾರಕರ ಆಶೀರ್ವಾದದೊಡನೆ ವಜ್ರಶಿಲೆಯ ಅನ್ವೇಷಣೆಯಿಂದ ಹಿಡಿದು ವಿಗ್ರಹವನ್ನು ಬೆಟ್ಟದ ಮೇಲಕ್ಕೆ ಸಾಗಿಸುವ ವರೆಗಿನ ಕಥೆಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾನೆ. ಚಾರಿತ್ರಿಕ ದೃಷ್ಟಿಯಿಂದ ಚಂದ್ರಮನ ವಿವರಣೆಗಳು ಮಹತ್ತ್ವವನ್ನು ಪಡೆದುಕೊಳ್ಳುತ್ತವೆ. ವಿಗ್ರಹದ ಸ್ಥೂಲರೂಪ ಸಿದ್ಧವಾದ ಮೇಲೆ ಅದನ್ನು ಕಬ್ಬಿಣದ ದಪ್ಪ ಕೀಲುಗಳಿರುವ ಇಪ್ಪತ್ತು ಗಾಲಿಗಳಿಂದ ಕೂಡಿದ ಬಂಡಿಯೊಂದನ್ನು ಮಾಡಿಸಿ ಹತ್ತು ಸಾವಿರ ಸನ್ನೆಗಳಿಂದ ಮೂರ್ತಿಯನ್ನು ಬಂಡಿಗೆ ಸಾಗಿಸಿ ಸಾವಿರಾರು ಜನ ಎಳೆದರೂ ಅದು ಒಂದು ಮಾರು ಮಾತ್ರ ಸಾಗಿತಂತೆ. ಮಾರನೆ ದಿನ ಸಾವಿರ ರಾಟೆಗಳನ್ನು ಹೂಡಿಸಿ ದೇವನ ಬಂಡಿಯು ಬೆಟ್ಟವೇರುವಂತೆ ಮದ್ದಾನೆಗಳಿಂದ ನೂಕಿಸಿದಾಗ ಆ ದಿನ ಅದು ಏಳೆಂಟು ಮಾರು ಮಾತ್ರ ಸಾಗಿತಂತೆ. ಹೀಗೆ ಒಂದು ತಿಂಗಳ ಪರ್ಯಂತ ಸಾಗಿಸಿದ ಮೇಲೆ ವಿಗ್ರಹ ಬೆಟ್ಟದ ತುದಿಯನ್ನು ತಲುಪಿತು. ಅಲ್ಲಿ ಎಪ್ಪತ್ತೆರಡು ಕಂಬಗಳ ಸೊಗಸಾದ ಚಪ್ಪರದ ಮೇಲೆ ಮೂರ್ತಿಯನ್ನು ಮಲಗಿಸಿ ವಿಗ್ರಹದ ಸೂಕ್ಷ್ಮ ಕೆಲಸವನ್ನು ಮಾಡಲಾಯಿತು. ಇದಕ್ಕೆ ಒಂದು ವರ್ಷ ಹಿಡಿಯಿತು. ಅನಂತರ ವಿಗ್ರಹದ ಪ್ರತಿಷ್ಠೆಯಾಯಿತು.

ಮತ್ತೊಂದು ಗೊಮ್ಮಟೇಶ್ವರ ವಿಗ್ರಹ ಇದೇ ದಕ್ಷಿಣ ಕನ್ನಡ ಜಿಲ್ಲೆಯ ವೇಣೂರಿನಲ್ಲಿದೆ. 35 ಅಡಿಗಳ ಎತ್ತರದ ಈ ವಿಗ್ರಹವನ್ನು ತಿಮ್ಮಣ್ಣಾಜಿಲ 1604ರಲ್ಲಿ ಪ್ರತಿಷ್ಠಾಪಿಸಿದ. ಇವನ್ನು ಒಂದು ಸಮತಟ್ಟಾದ ಪ್ರದೇಶದಲ್ಲಿ ಸ್ಥಾಪಿಸಲಾಗಿದೆ. ವಿಗ್ರಹದ ಸುತ್ತಲೂ ಪ್ರಾಕಾರವಿದ್ದು ಮುಂದೆ ಮಾನಸ್ತಂಭವಿದೆ. ಈ ವಿಗ್ರಹದ ಪ್ರತಿಷ್ಠಾಪನೆಯ ಕಾಲಕ್ಕೆ ಉಂಟಾದ ತಕರಾರಿನ ಬಗ್ಗೆ ಒಂದು ಕುತೂಹಲದ ಕಥೆಯಿದೆ. ಚಾವುಂಡರಾಯನಂತೆ ತಾನೂ ತನ್ನ ರಾಜ್ಯದಲ್ಲಿ ಗೊಮ್ಮಟೇಶ್ವರನನ್ನು ಕೆತ್ತಿಸಿ ಕೀರ್ತಿಶೇಷನಾಗಬೇಕೆಂದು ತಿಮ್ಮಣ್ಣಾಜಿಲ ಈ ವಿಗ್ರಹವನ್ನು ಮಾಡಿಸಿದ. ಆದರೆ ಇದೇ ಸಮಯದಲ್ಲಿ ಕಾರ್ಕಳದಲ್ಲಿ ರಾಜ್ಯಭಾರ ಮಾಡುತ್ತಿದ್ದ ಇಮ್ಮಡಿ ಭೈರವರಾಯ ಕಾರ್ಕಳದಲ್ಲಿರುವಂತೆ ಬೇರೆಲ್ಲೂ ಗೊಮ್ಮಟೇಶ್ವರ ವಿಗ್ರಹಗಳು ಪ್ರತಿಷ್ಠೆಯಾಗಬಾರದೆಂದು ಭಾವಿಸಿ, ವೇಣೂರಿನಲ್ಲಿ ಸಿದ್ಧವಾದ ವಿಗ್ರಹವನ್ನು ಕಾರ್ಕಳಕ್ಕೆ ಒಪ್ಪಿಸಬೇಕೆಂದೂ ಇಲ್ಲವಾದರೆ ಯುದ್ಧವನ್ನು ಎದುರಿಸಬೇಕೆಂದೂ ತಿಳಿಸಿದನಂತೆ. ಆದರೆ ವೀರ ತಿಮ್ಮಣ್ಣಾಜಿಲ ಸಿದ್ಧವಾಗಿದ್ದ ವಿಗ್ರಹವನ್ನು ಮರಳಿನಲ್ಲಿ ಹೂತು ಯುದ್ಧಮಾಡಿ ವಿಜಯಿಯಾಗಿ ಅನಂತರವೇ ಪ್ರತಿಷ್ಠೆ ಮಾಡಿಸಿದನಂತೆ.

ಮೈಸೂರು ಜಿಲ್ಲೆಯಲ್ಲಿ ಮೈಸೂರಿಗೆ ಹದಿನಾರು ಮೈ. ದೂರದಲ್ಲಿ ಕಾವೇರಿ ನದಿಯ ದಕ್ಷಿಣಕ್ಕೆ ಶ್ರವಣಗುಡ್ಡ ಎಂದು ಕರೆಯಲಾಗುತ್ತಿದ್ದ ಗೋಮಟಗಿರಿ ಕ್ಷೇತ್ರದಲ್ಲಿ ಸು. 100 ಅಡಿ ಎತ್ತರದ ಬಂಡೆಯೊಂದರ ಮೇಲೆ 18 ಅಡಿ ಎತ್ತರದ ಗೊಮ್ಮಟೇಶ್ವರ ವಿಗ್ರಹವಿದೆ. ದೂರದಿಂದ ನೋಡಿದರೆ ಈ ಬೆಟ್ಟ ಒಂದು ದೊಡ್ಡ ರಥದಂತೆ ಕಾಣಿಸುತ್ತದೆ. ಈ ಬೆಟ್ಟದ ಮೇಲೆ ವಿಗ್ರಹವನ್ನು ಯಾವಾಗ ಯಾರು ಸ್ಥಾಪಿಸಿದರೆಂಬುದಕ್ಕೆ ಖಚಿತವಾದ ಯಾವುದೇ ಶಾಸನವಾಗಲಿ, ದಾಖಲೆಯಾಗಲಿ, ಉಲ್ಲೇಖಗಳಾಗಲಿ ಇದುವರೆಗೆ ಸಿಕ್ಕಿಲ್ಲ. ಆದರೆ ಚಾಮುಂಡರಾಯನ ವಂಶಸ್ಥರೂ ಈ ಪ್ರಾಂತದ ಒಡೆಯರೂ ಆಗಿದ್ದ ಚೆಂಗಾಳ್ವ ಮನೆತನದ ಅರಸರು ಈ ವಿಗ್ರಹವನ್ನು ಪ್ರತಿಷ್ಠಾಪಿಸಿರಬಹುದೆಂದು ತಿಳಿಯಲಾಗಿದೆ. ಗಂಭೀರಮುಖಮುದ್ರೆಯಿಂದ ಕೂಡಿ ಪೂರ್ವಾಭಿಮುಖವಾಗಿರುವ ಈ ಮೂರ್ತಿಯ ಕೈಗಳು ಸರ್ಪಗಳ ಬಿಚ್ಚಿದ ಹೆಡೆಗಳನ್ನು ಸೋಕುವಂತಿರುವುದು ಬೇರೆ ಯಾವ ಗೊಮ್ಮಟೇಶ್ವರನ ಮೂರ್ತಿಗಳಲ್ಲಿಯೂ ಇಲ್ಲದ ವೈಶಿಷ್ಟ್ಯ.

ಕೃಷ್ಣರಾಜಸಾಗರ ಜಲಾಶಯದ ಬಳಿ ಕಾವೇರಿ ನದಿಯ ಉತ್ತರಕ್ಕೆ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಮಾವಿನಕೆರೆ ಗ್ರಾಮಕ್ಕೆ ಹತ್ತಿರದ ಬಸ್ತಿ ಹೊಸಕೋಟೆಯಲ್ಲಿಯೂ 18 ಅಡಿ ಎತ್ತರದ ಒಂದು ಗೊಮ್ಮಟೇಶ್ವರ ವಿಗ್ರಹವಿದೆ. ಇದು ಬಳಪದ ಕಲ್ಲಿನ ವಿಗ್ರಹವೆಂದು ತಿಳಿಯಲಾಗಿದೆ. ಇತ್ತೀಚಿನ ಶತಮಾನದಲ್ಲಿ ಈ ವಿಗ್ರಹಕ್ಕೆ ಗೂಡಿನಂಥ ಒಂದು ಗುಡಿಯನ್ನು ಕಟ್ಟಿದ್ದಾರೆ. ಇದರ ಸುತ್ತಮುತ್ತ ಗಂಗರ ಕಾಲಕ್ಕೆ ಸೇರುವ ಶಿಥಿಲವಾದ ಬಸದಿಯೂ ವಿಷ್ಣುವರ್ಧನನ ಕಾಲದ ಬಸದಿಯ ಅವಶೇಷವೂ ಕಂಡು ಬರುತ್ತವೆ. ವಿಷ್ಣುವರ್ಧನನ ಅಧಿಕಾರಿಗಳಾಗಿದ್ದ ಸೋಮಯ್ಯ ಅಥವಾ ಪುಣಿಸಮಯ್ಯ ಇವರಿಂದ ಈ ವಿಗ್ರಹದ ನಿರ್ಮಾಣವಾಗಿರಬಹುದು.

ಮಂಡ್ಯ ಜಿಲ್ಲೆಯಲ್ಲಿ ಮದ್ದೂರು ತಾಲ್ಲೂಕಿನ ಬಸ್ತಿ ತಿಪ್ಪೂರಿನ ಬಳಿಯಿರುವ ದೊಡ್ಡಬೆಟ್ಟದ ಮೇಲೆ ಸು. 10 ಅಡಿ ಎತ್ತರದ ಗೊಮ್ಮಟೇಶ್ವರ ವಿಗ್ರಹವಿದೆ. ಇದರಲ್ಲಿ ಹೆಚ್ಚಿನ ವಿಶೇಷವೇನಿಲ್ಲ. ಈ ಪ್ರದೇಶ ಕ್ರಿ.ಶ. ಸು. 8ನೆಯ ಶತಮಾನದಿಂದಲೂ ಒಂದು ಜೈನಕೇಂದ್ರವಾಗಿತ್ತೆಂದು ತಿಳಿಯಲು ಶಾಸನಾಧಾರವಿದೆ.

ಮತ್ತೊಂದು ಗೊಮ್ಮಟೇಶ್ವರ ವಿಗ್ರಹದ ನಿರ್ಮಾಣ ನಮ್ಮ ಸಮಕಾಲೀನ ಸಮಯದಲ್ಲೇ ಆಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಕ್ಷೇತ್ರವಾದ ಧರ್ಮಸ್ಥಳದಲ್ಲಿ ಇದನ್ನು ಪ್ರತಿಷ್ಠಾಪಿಸಲು ನಿರ್ಮಾಣ ಮಾಡಿಸಿದವರು ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು. ಈ ವಿಗ್ರಹದ ಮುಖ್ಯಶಿಲ್ಪಿ ಎಂಬತ್ತರ ಹರೆಯದ ಶ್ರೀ ರಂಜಾಳ ಗೋಪಾಲ ಶೆಣೈ ಅವರು. 1967ರಲ್ಲಿ ಇದರ ನಿರ್ಮಾಣಕಾರ್ಯ ಪ್ರಾರಂಭವಾಗಿ 1973ರಲ್ಲಿ ಪೂರ್ಣವಾಯಿತು. ಈ ವಿಗ್ರಹದ ಶಿಲೆಯ ಒಟ್ಟು ಉದ್ದ 52 ಅಡಿಗಳು. ಇದರಲ್ಲಿ 6 ಅಡಿ ಭೂಮಿಯಲ್ಲಿ ಇಳಿಯುವ ಬೇರು, 7 ಅಡಿ ವಿಗ್ರಹದ ಪೀಠ. ಅಂಗುಷ್ಠದಿಂದ ನೆತ್ತಿಯ ವರೆಗೆ 39 ಅಡಿಗಳ ವಿಗ್ರಹ. ಈ ಶಿಲಾಮೂರ್ತಿಯನ್ನು ಕಾರ್ಕಳದಲ್ಲಿ ನಿರ್ಮಾಣಮಾಡಲಾಯಿತು. ದಕ್ಷಿಣ ಕನ್ನಡದ ಸಹ್ಯಾದ್ರಿಯ ಅಂಕುಡೊಂಕಾದ ರಸ್ತೆಯಲ್ಲಿ ಕಾರ್ಕಳ

ದಿಂದ ಧರ್ಮಸ್ಥಳದ ವರೆಗಿನ 80 ಕಿಮೀ. ದೂರವನ್ನು ಲೆಕ್ಕಿಸದೆ 170 ಟನ್ ತೂಕದ ಈ ಬೃಹತ್ ವಿಗ್ರಹವನ್ನು ಸಾಗಿಸಿಕೊಟ್ಟವರು ಮುಂಬಯಿಯ ಮಂಗತರಾಂ ಬ್ರದರ್ಸ್ ಸಂಸ್ಥೆಯವರು. 64 ಟೈರುಗಳ 20 ಟನ್ ತೂಕದ ವಿಶೇಷ ಟ್ರಾಲಿಯನ್ನು ನಿರ್ಮಾಣ ಮಾಡಿ ಎರಡು ಟ್ರಕ್ಕು ಮತ್ತು 80 ಅಶ್ವಶಕ್ತಿಯ ಒಂದು ಬುಲ್ಡೋಜರ್ ಬಳಸಿ ಈ ವಿಗ್ರಹವನ್ನು ಧರ್ಮಸ್ಥಳದ ಸುಮಾರು ಒಂದು ಸಾವಿರ ಅಡಿ ಎತ್ತರದ 'ಬಾಹುಬಲಿ ವಿಹಾರಕ್ಕೆ ತಂದಿದ್ದಾರೆ. ಈ ವಿಗ್ರಹದಲ್ಲಿ ಕೆಲವು ವಿಶೇಷಗಳು ಕಂಡುಬರುತ್ತವೆ. ಇಲ್ಲಿ ತಲೆಗೂದಲು ಭುಜದ ವರೆಗೂ ಇಳಿದಿದೆ. ಎರಡು ಪಾದಗಳ ಮೇಲೂ ಹಾವಿನ ಮರಿಗಳು ಹತ್ತುತ್ತಿವೆ. ವಿಗ್ರಹದ ಮೇಲೆ ಹಬ್ಬಿರುವ ಮಲ್ಲಿಗೆ ಬಳ್ಳಿಯ ಜೊತೆಗೆ ಹೂಗಳನ್ನೂ ಬಿಡಿಸಿದ್ದಾರೆ. ವಿಗ್ರಹದ ಎಡ–ಬಲಗಳಲ್ಲಿ ಕಾಲುಗಳ ಬಳಿ ಸೇರುವ ಎರಡು ಪ್ರತ್ಯೇಕ ಶಿಲೆಗಳಲ್ಲಿ ಮಾವಿನ ಮರ. ಗಿಡ. ಮಂಗ. ಜೇನುಗೂಡು ಇತ್ಯಾದಿಗಳನ್ನು ಕೆತ್ತಲಾಗಿದೆ.

ಉತ್ತರ ಭಾರತದಲ್ಲಿ ಪ್ರತಿಷ್ಠಾಪಿಸಲು ಭಕ್ತರೊಬ್ಬರಿಗಾಗಿ ಇದೇ ಗೋಪಾಲ ಶೆಣೈ ಅವರು ಮತ್ತೊಂದು ವಿಗ್ರಹವನ್ನು ನಿರ್ಮಿಸುತ್ತಿದ್ದಾರೆ. ಕನ್ನಡದ ಕಲ್ಲು, ಶಿಲ್ಪಿಯ ಚಾತುರ್ಯವನ್ನು ಕಲೆಯಲ್ಲಿ ಹೊತ್ತು, ಉತ್ತರ ಭಾರತದಲ್ಲಿ ನೆಲಸಲಿದೆ.

ಹೀಗೆ ಗೊಮ್ಮಟೇಶ್ವರ ವಿಗ್ರಹಗಳ ನಿರ್ಮಾಣ ಸು. 12 ಶತಮಾನಗಳಿಗಿಂತ ಹಿಂದಿನಿಂದಲೂ ನಿರಂತರವಾಗಿ ನಡೆಯುತ್ತ ಬಂದು ಕರ್ನಾಟಕದ ವೈಶಿಷ್ಟ್ಯಗಳಲ್ಲೊಂದಾಗಿ ಭಾರತೀಯ ಶಿಲ್ಪಕಲೆಗೆ ಕರ್ನಾಟಕದ ಮಹತ್ವಪೂರ್ಣ ಕೊಡುಗೆಯಾಗಿದೆ.

ಕರ್ನಾಟಕದಲ್ಲೇ ಇಷ್ಟೊಂದು ಸಂಖ್ಯೆಯಲ್ಲಿ ಗೊಮ್ಮಟೇಶ್ವರ ವಿಗ್ರಹಗಳು ನಿರ್ಮಾಣವಾಗಲು ಕಾರಣವೇನಿರಬಹುದು ಎಂಬ ಕುತೂಹಲ ಸಹಜವಾದುದು. ಅದಕ್ಕೆ ಹೀಗೆ ಊಹೆ ಮಾಡಬಹುದು: ದಕ್ಷಿಣ ಭಾರತದಲ್ಲಿ, ಅದರಲ್ಲೂ ಕರ್ನಾಟಕದಲ್ಲಿ ಇದ್ದ ಜೈನ ಧರ್ಮ ದಿಗಂಬರ ಸಂಪ್ರದಾಯದ್ದು. ಬಾಹುಬಲಿ ವಿಗ್ರಹದ ಪೂಜೆ ದಿಗಂಬರ ಜೈನ ಸಂಪ್ರದಾಯದಲ್ಲಿ ವಿಶೇಷ ಮಾನ್ಯತೆ ಪಡೆದುಕೊಂಡಿರುವುದರಿಂದ ಈ ಭಾಗದಲ್ಲಿ ಅದಕ್ಕೆ ಹೆಚ್ಚು ಪ್ರಾಶಸ್ತ್ಯ ಲಭಿಸಿರಬಹುದು. ಬೇರೆ ತೀರ್ಥಂಕರ ಕಥೆಗಳಿಗಿಂತಲೂ ಬಾಹುಬಲಿಯ ಕಥೆ—ಅಣ್ಣತಮ್ಮಂದಿರಾದ ಭರತ ಬಾಹುಬಲಿಯರ ಯುದ್ಧ, ಯುದ್ಧದಲ್ಲಿ ಗೆದ್ದ ಮೇಲೂ ಬಾಹುಬಲಿ ತೋರುವ ತ್ಯಾಗ ಮನೋಭಾವ—ಅತ್ಯಂತ ಆಕರ್ಷಣೀಯವಾಗಿರುವುದರಿಂದಲೂ ಬಾಹುಬಲಿಯ ವಿಗ್ರಹಗಳಿಗೆ ಪ್ರಾಮುಖ್ಯ ಬಂದಿರಬಹುದು.

ಮೇಲೆ ನೋಡಿದ ಗೊಮ್ಮಟೇಶ್ವರ ವಿಗ್ರಹಗಳ ಕೆತ್ತನೆಯಲ್ಲಿ ಎರಡು ರೀತಿಯ ಸಂಪ್ರದಾಯವನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಬಾದಾಮಿ. ಐಹೊಳೆ. ಎಲ್ಲೋರಗಳ ವಿಗ್ರಹಗಳ ಕೆತ್ತನೆ ಒಂದು ಸಂಪ್ರದಾಯಕ್ಕೂ ಶ್ರವಣಬೆಳ್ಗೊಳ. ಕಾರ್ಕಳ. ವೇಣೂರು. ಗೊಮ್ಮಟಗಿರಿ. ಬಸ್ತಿಹೊಸಕೋಟೆಯ ವಿಗ್ರಹಗಳು ಮತ್ತೊಂದು ಸಂಪ್ರದಾಯಕ್ಕೂ ಸೇರುತ್ತವೆ. ಉತ್ತರ ಕರ್ನಾಟಕದ ಬಾದಾಮಿ ಐಹೊಳೆ ಎಲ್ಲೋರ ಗುಹೆಗಳ ವಿಗ್ರಹಗಳಲ್ಲಿ ತಲೆಗೂದಲು ಭುಜದ ವರೆಗೆ ಇಳಿದಿದೆ: ಮತ್ತು ಪಾದದ ಬಳಿ ಅತ್ತಿತ್ತ ಸ್ತ್ರೀಯರಿಬ್ಬರು ಬಳ್ಳಿಗಳನ್ನು ಹಿಡಿದುಕೊಂಡಿದ್ದಾರೆ. (ಈ ಸ್ತ್ರೀಯರು ಬಾಹುಬಲಿಯ ಸಹೋದರಿಯರೆಂದು ಖಚಿತವಾಗಿ ಹೇಳುವಂತಿಲ್ಲ. ಕಾರಣ ಬಾಹುಬಲಿ ತಪಸ್ಸು ಮಾಡುತ್ತಿದ್ದಾಗ ಗಗನಗಾಮಿಗಳಾಗಿದ್ದ ದೇವತಾ ಸ್ತ್ರೀಯರು ಇವನ ತಪಸ್ಸಿನ ಪ್ರಭಾವವನ್ನು ತಿಳಿದು ಬಂದು. ಉಪಸರ್ಗವಾಗದಿರಲೆಂದು ಶರೀರದ ಮೇಲೆ ಹತ್ತಿದ ಬಳ್ಳಿಗಳನ್ನು ಬಿಡಿಸಿ ಹೋಗುತ್ತಿದ್ದರೆಂದು ಪೂರ್ವಪುರಾಣದಲ್ಲಿ ಉಕ್ತವಾಗಿದೆ.) ದಕ್ಷಿಣ ಕರ್ನಾಟಕದ ಶ್ರವಣಬೆಳ್ಗೊಳ. ಕಾರ್ಕಳ ಮುಂತಾದ ಕಡೆ ಇರುವ ವಿಗ್ರಹಗಳಲ್ಲಿ ಹಾಗಿಲ್ಲ. ಇದಕ್ಕೆ ಕಾಲ. ಪ್ರಾದೇಶಿಕ ವೈಶಿಷ್ಟ್ಯ ಈ ಎರಡೂ ಕಾರಣಗಳಿರಬಹುದು. ಉತ್ತರ ಕರ್ನಾಟಕದ ವಿಗ್ರಹಗಳು ಬಾದಾಮಿ ಗುಹೆಯ ಮಾದರಿಯನ್ನೇ (ಭುಜದ ವರೆಗೆ ಇಳಿದ ತಲೆಗೂದಲು. ಗುಹೆಯ ಗೋಡೆಯಿಂದ ಪ್ರತ್ಯೇಕವಾಗಿ ಬಿಡಿಸದೆ ಅದರಲ್ಲೇ ವಿಗ್ರಹದ ಕೆತ್ತನೆ. ಇತ್ಯಾದಿ) ಅನುಸರಿಸಿ ಒಂದು ಪರಂಪರೆಯಲ್ಲಿ ನಿಂತುವು. ಆದರೆ ಯಾವಾಗ ಶ್ರವಣಬೆಳ್ಗೊಳದಲ್ಲಿ ಗೊಮ್ಮಟೇಶ್ವರನ ಬೃಹದ್‌ಗಾತ್ರದ ಸುಂದರ ವಿಗ್ರಹದ ಮಹಾ ನಿರ್ಮಾಣವಾಯಿತೋ ಆ ಕಾಲದಿಂದ ಮುಂದಕ್ಕೆ ಕಾರ್ಕಳ, ವೇಣೂರು, ಗೊಮ್ಮಟಗಿರಿ ಮುಂತಾದ ಕಡೆಗಳಿಗೆ ಈ ವಿಗ್ರಹವೇ ಮಾದರಿಯಾಗಿ ಇನ್ನೊಂದು ಪರಂಪರೆ ಬೆಳೆಯಿತು. ಆದರೆ ಪ್ರಾದೇಶಿಕ ವೈಶಿಷ್ಟ್ಯ ಮತ್ತು ಕಾಲ ಈ ಎರಡೂ ದೃಷ್ಟಿಗಳಿಂದ ಮೇಲಿನ

ಪರಂಪರೆಯನ್ನು ಬಿಟ್ಟು ನಿರ್ಮಾಣವಾದ ಮೂರ್ತಿಯೆಂದರೆ ಧರ್ಮಸ್ಥಳದ ವಿಗ್ರಹ. ಇದು ದಕ್ಷಿಣ ಕರ್ನಾಟಕದಲ್ಲಿದೆ, ಇತ್ತೀಚೆಗೆ ನಿರ್ಮಾಣವಾಗಿದೆ. ಆದರೂ ಶ್ರವಣಬೆಳ್ಗೊಳದ ವಿಗ್ರಹದ ಪರಂಪರೆಯನ್ನು ಅನುಸರಿಸದೆ ಬಾದಾಮಿ ಗುಹೆಯಲ್ಲಿ ಕಾಣುವಂತೆ ವಿಗ್ರಹದ ತಲೆಗೂದಲು ಭುಜದ ವರೆಗೂ ಇಳಿದಿದೆ.

ಇತ್ತೀಚಿನ ಅಧ್ಯಯನದಲ್ಲಿ ಇನ್ನೆರಡು ಗೊಮ್ಮಟೇಶ್ವರ ವಿಗ್ರಹಗಳು ನನ್ನ ಗಮನ ಸೆಳೆದಿವೆ. ಈ ಎರಡೂ ವಿಗ್ರಹಗಳು ಶ್ರವಣಬೆಳ್ಗೊಳದ ದೊಡ್ಡ ಬೆಟ್ಟದ ಮೇಲಿವೆ. ಗೊಮ್ಮಟೇಶ್ವರನ ಬೃಹತ್ ಮೂರ್ತಿಯ ಸುತ್ತಾಲಯದ ಕೊನೆಯಲ್ಲಿ ಗಣಧರ ಚರಣದ ಪಕ್ಕದಲ್ಲಿ ಸು. 5 ಅಡಿ ಎತ್ತರದ ಗೊಮ್ಮಟೇಶ್ವರ ವಿಗ್ರಹವಿದೆ. ಪಾದದಿಂದ ಸು. 7 ಅಡಿ ಎತ್ತರವಿರುವ ಪ್ರಭಾವಳಿಯಲ್ಲಿ ಪಾದದ ಪಕ್ಕದಿಂದ ಹೊರಟ ಬಳ್ಳಿ ಹಬ್ಬಿ ಹರಡಿಕೊಂಡಿದೆ. ಬಳ್ಳಿಯ ಗುಂಗುರುಗಳೊಳಗೆ ನವಿಲುಗಳ, ದೇವತೆಗಳ ಚಿತ್ರಗಳಿವೆ. ಪಾದಗಳ ಬಳಿಯಲ್ಲಿ ಅತ್ತಿತ್ತ ಸ್ತ್ರೀಯರಿಬ್ಬರು ತಮ್ಮ ಕೈಯಿಂದ ಬಳ್ಳಿಗಳನ್ನು ಹಿಡಿದುಕೊಂಡಿದ್ದಾರೆ. ಇನ್ನೊಂದು ಗೊಮ್ಮಟೇಶ್ವರ ವಿಗ್ರಹ ದೊಡ್ಡಬೆಟ್ಟದ ಅಖಂಡ ಬಾಗಿಲಿನಲ್ಲಿ ಬಲಗಡೆಯಿದೆ. ಇದು ಹನ್ನೆರಡನೆಯ ಶತಮಾನದಲ್ಲಿ ನಿರ್ಮಾಣವಾದುದು. ಮೂಲದ ಬಂಡೆಯನ್ನು ಕೊರೆದು ಈ ವಿಗ್ರಹವನ್ನು ಮಾಡಲಾಗಿದೆ. ಇದು ಸು. 5½ ಅಡಿ ಎತ್ತರವಿದೆ. ಪಾದದ ಬಳಿ ಹುತ್ತವಾಗಲಿ ಹಾವುಗಳಾಗಲಿ ಇಲ್ಲ. ಬಳ್ಳಿಗಳು ಕಾಲು ಮತ್ತು ಕೈಗಳಲ್ಲಿ ಹಬ್ಬಿವೆ. ಪಾದದ ಬಳಿ ಇರುವ ಬಳ್ಳಿಯನ್ನು ಇಲ್ಲಿಯೂ ಅತ್ತಿತ್ತ ಸ್ತ್ರೀಯರಿಬ್ಬರು ಹಿಡಿದುಕೊಂಡಿದ್ದಾರೆ. ಇವೆರಡು ವಿಗ್ರಹಗಳಲ್ಲೂ ಗಮನಾರ್ಹ ಅಂಶವೆಂದರೆ, ಇವು ಬೃಹನ್ ಬಾಹುಬಲಿ ವಿಗ್ರಹದ ಹತ್ತಿರವೇ ಇವೆ. ಆದರೂ ಇವನ್ನು ನಿರ್ಮಾಣ ಮಾಡಿದ ಶಿಲ್ಪಿಗಳ ಮೇಲೆ ಆ ವಿಗ್ರಹದ ಪ್ರಭಾವ (ಪಾದಗಳ ಬಳಿ ಹಾವಿರುವ ಹುತ್ತಗಳ ಕೆತ್ತನೆ) ಏಕೆ ಆಗಲಿಲ್ಲ?

ಮಂಡ್ಯ ಜಿಲ್ಲೆಯ ಬಸ್ತಿ ತಿಪ್ಪೂರಿನ ಗೊಮ್ಮಟೇಶ್ವರ ವಿಗ್ರಹದ ಪಾದದ ಬಳಿಯೂ ಅತ್ತಿತ್ತ ಸ್ತ್ರೀಯರಿಬ್ಬರು ಬಳ್ಳಿಗಳನ್ನು ಹಿಡಿದುಕೊಂಡಿದ್ದಾರೆ.

ಮೇಲೆ ಹೇಳಿದ ಗೊಮ್ಮಟೇಶ್ವರ ವಿಗ್ರಹಗಳೇ ಅಲ್ಲದೆ ಕರ್ನಾಟಕದ ಒಳಗೆ ಮತ್ತು ಹೊರಗೆ ಇನ್ನೂ ಅನೇಕ ವಿಗ್ರಹಗಳಿವೆ. ಅವೆಲ್ಲವನ್ನೂ ಕೂಲಂಕಷವಾಗಿ ನೋಡಿ ಅವುಗಳ ನಿರ್ಮಾಣದ ಕಾಲ, ಕಾರಣ, ಪರಿಸರ ಇತ್ಯಾದಿಗಳನ್ನು ವಿಶೇಷವಾಗಿ ಅಭ್ಯಾಸಮಾಡಿ ಇನ್ನೂ ಕೆಲವು ಹೊಸ ಅಂಶಗಳನ್ನು ಬೆಳಕಿಗೆ ತರಬಹುದಾಗಿದೆ.

ಶ್ರವಣಬೆಳಗೊಳದ ಗೊಮ್ಮಟೇಶ್ವರ ವಿಗ್ರಹದ ಬೇರೆಬೇರೆ ಭಾಗಗಳ ಅಳತೆಗಳು ಈ ರೀತಿ ಯಾಗಿವೆ :[1]

| | |
|---|---|
| ಒಟ್ಟು ಮೂರ್ತಿಯ ಎತ್ತರ | 58′ 0″ |
| ಕಿವಿಯ ಕೆಳಭಾಗದ ವರೆಗಿನ ಎತ್ತರ | 51′ 0″ |
| ಕಿವಿಯ ಕೆಳಭಾಗದಿಂದ ನೆತ್ತಿಯ ವರೆಗಿನ ಎತ್ತರ ಸುಮಾರು | 6′ 6″ |
| ಪಾದದ ಉದ್ದ | 8′ 3″ |
| ಕಾಲ ಹೆಬ್ಬೆರಳಿನ ಉದ್ದ | 2′ 9″ |
| ತೊಡೆಯ ಉದ್ದ | 10′ 0″ |
| ಕಿಬ್ಬೊಟ್ಟೆಯ ಅಡ್ಡಳತೆ | 13′ 0″ |
| ಸೊಂಟದ ಅಡ್ಡಳತೆ | 10′ 0″ |
| ಭುಜಗಳ ನಡುವೆ ಇರುವ ವಿಸ್ತಾರ | 23′ 7½″ |
| ಕುತ್ತಿಗೆಯ ಕೆಳಭಾಗದಿಂದ ಕಿವಿಯ ವರೆಗೆ | 2′ 7″ |
| ತೋರು ಬೆರಳಿನ ಉದ್ದ | 3′ 9″ |
| ನಡು ಬೆರಳಿನ ಉದ್ದ | 5′ 0″ |
| ಅನಾಮಿಕದ ಉದ್ದ | 4′ 8″ |
| ಕಿರುಬೆರಳಿನ ಉದ್ದ | 3′ 2″ |

1 ಶ್ರವಣಬೆಳ್ಗೊಳ. ಪ್ರಾಚೀನ ವಸ್ತು ಶೋಧನ ಶಾಖೆ (1957), ಪು. 18

ಡಾ. ಎ. ಎಸ್. ಸೀತಾರಾಂ

# ಶಿಕ್ಷಣದ ದೃಷ್ಟಿಯಲ್ಲಿ ತತ್ತ್ವಶಾಸ್ತ್ರ

ಸಕಲರಿಗೂ ಸಮಂಜಸವಾಗಿರುವಂಥ ವ್ಯಾಖ್ಯೆಯನ್ನು ತತ್ತ್ವಶಾಸ್ತ್ರಕ್ಕೆ ನೀಡುವುದಕ್ಕಾಗುವುದಿಲ್ಲ. ಅದಕ್ಕೆ ಹಲವಾರು ಅರ್ಥಗಳಿವೆ. ತತ್ತ್ವಶಾಸ್ತ್ರದ ಅರ್ಥವ್ಯತ್ಯಾಸಗಳು ಜೀವನದ ವೈವಿಧ್ಯವನ್ನು ಹೊಂದಿಕೊಂಡಿವೆ. ಈ ಅರ್ಥಗಳು ಬದಲಾದಂತೆಲ್ಲ ಅದನ್ನು ಹೊಂದಿಕೊಂಡಿರುವ ಶಿಕ್ಷಣದ ಅರ್ಥಗಳು ಬದಲಾಗುತ್ತವೆ. ಶಿಕ್ಷಣದ ಕ್ರಮಬದ್ಧ ತಿಳವಳಿಕೆಗೆ ತತ್ತ್ವಶಾಸ್ತ್ರದ ಕೆಳಗಿನ ಅರ್ಥಗಳು ಉಪಕಾರಿಗಳಾಗಿವೆ.

## ತತ್ತ್ವಶಾಸ್ತ್ರವೆಂದರೆ ಜ್ಞಾನಪ್ರೇಮ

ತತ್ತ್ವಶಾಸ್ತ್ರಕ್ಕೆ ಇಂಗ್ಲಿಷ್ ಸಮಾನಶಬ್ದ **Philosophy**. ಈ ಶಬ್ದದ ವ್ಯುತ್ಪತ್ತಿ ಎರಡು ಗ್ರೀಕ್ ಶಬ್ದಗಳಾದ **Philos** ಮತ್ತು **Sophia** ಎಂಬ ಮೂಲಶಬ್ದಗಳಿಂದಾಗಿದೆ. **Philos** ಎಂದರೆ ಪ್ರೀತಿ. **Sophia** ಎಂದರೆ ಜ್ಞಾನ, ವಿವೇಕ ಎಂಬ ಅರ್ಥ ಬರುತ್ತವೆ. ಪುರಾತನ ಗ್ರೀಕರಲ್ಲಿ ಜ್ಞಾನದ, ತಿಳಿವಳಿಕೆಯ. ಅರಿವಿನ ಮೂಲಕ ಒಬ್ಬ ವ್ಯಕ್ತಿ ವಿವೇಕಿಯಾಗುತ್ತಾನೆ ಎಂಬ ನಂಬಿಕೆ ಇತ್ತು. ವಿವೇಕವಂತನಾಗಿ ಬಾಳುವುದೇ ಪ್ರತಿಯೊಬ್ಬ ಮಾನವನ ಆದರ್ಶವಾದ್ದರಿಂದ, ವಿವೇಕಿಯಾಗಲು ಬೇಕಾದ ಜ್ಞಾನದ ಅರಿವಿನ ಮೇಲಿನ ಪ್ರೀತಿಯೇ ತತ್ತ್ವಜ್ಞಾನ ಎಂಬ ಈ ನಂಬಿಕೆಗೆ ನಿದರ್ಶನವಾಗಿ ಪ್ಲೇಟೋನ 'ರಿಪಬ್ಲಿಕ್' ಗ್ರಂಥದಲ್ಲಿ ಈ ರೀತಿಯಾದ ಉಕ್ತಿಯಿದೆ: "ಯಾವ ವ್ಯಕ್ತಿಗೆ ಎಲ್ಲ ತೆರನಾದ ಜ್ಞಾನಗಳ ಮೇಲೆ ಅಭಿರುಚಿ ಇದೆಯೋ ಮತ್ತು ಯಾವ ವ್ಯಕ್ತಿ ಕಲಿಯುವುದಕ್ಕೆ ಉತ್ಸುಕನಾಗಿರುತ್ತಾನೋ ಅಂಥ ವ್ಯಕ್ತಿಯನ್ನು ತತ್ತ್ವಜ್ಞಾನಿ ಎಂದು ಕರೆಯಬಹುದು".1 ಮೇಲಿನ ಉಕ್ತಿಯಲ್ಲಿ ಗಮನಿಸಬೇಕಾದ ಅಂಶವೆಂದರೆ, ತತ್ತ್ವಜ್ಞಾನಿಗೆ 'ಎಲ್ಲ ತೆರನಾದ ಜ್ಞಾನಗಳ'ಲ್ಲಿ ಅಭಿರುಚಿ ಇರತಕ್ಕದ್ದು ಎಂಬ ಅಂಶ. ಒಬ್ಬ ಭೌತಶಾಸ್ತ್ರಜ್ಞನಿಗೆ ಪ್ರಪಂಚದ ಭೌತಿಕ ಕ್ರಿಯೆಗಳಲ್ಲಿಯೂ ಸಸ್ಯಶಾಸ್ತ್ರಜ್ಞನಿಗೆ ಸಸ್ಯಜಗತ್ತಿನಲ್ಲಿಯೂ, ಸಮಾಜಶಾಸ್ತ್ರಜ್ಞನಿಗೆ ಸಮಾಜದ ಜೀವನ ರೀತಿಯ ಜ್ಞಾನದಲ್ಲಿಯೂ ಅಭಿರುಚಿ ಇರುತ್ತದೆ. ಅವರು ಈ ರೀತಿಯ ಸೀಮಿತ ಅಭಿರುಚಿ ಹೊಂದಿರುವುದು ಸಾಧ್ಯ. ಆದರೆ ತತ್ತ್ವಜ್ಞಾನಿಯಾಗಬೇಕಾದರೆ ಈ ಎಲ್ಲ ವಿಷಯಗಳಲ್ಲಿಯೂ ಅಭಿರುಚಿ ರೂಢಿಸಿಕೊಳ್ಳಬೇಕು ಎಂದು ಹೇಳಿದಲ್ಲಿ, ಈ ರೀತಿಯ ಬಹುಮುಖ ಅಭಿರುಚಿ ಸಾಧ್ಯವೇ ಎಂಬ ಸಂದೇಹ ಉದ್ಭವಿಸುತ್ತದೆ. ಆದರೆ ಪ್ರಪಂಚದ ಹಲವಾರು ತತ್ತ್ವಜ್ಞಾನಿಗಳು ಈ ಸಂದೇಹಕ್ಕೆ ಉತ್ತರರೂಪವಾಗಿದ್ದಾರೆ. ಉದಾಹರಣೆಗೆ, ಗ್ರೀಕ್ ಸಂಸ್ಕೃತಿಯ ಶ್ರೇಷ್ಠ ತತ್ತ್ವಜ್ಞಾನಿಗಳಲ್ಲಿ ಒಬ್ಬನಾದ ಅರಿಸ್ಟಾಟಲ್ ತನ್ನ ಸಮಕಾಲೀನ ಜ್ಞಾನಭಂಡಾರದ ನಿಧಿಯಾಗಿದ್ದ. ಅವನ ಗ್ರಂಥಗಳಾದ 'De Anima' (ಮನಶ್ಶಾಸ್ತ್ರದ ಪುಸ್ತಕ), 'Potitics' (ರಾಜ್ಯಶಾಸ್ತ್ರ. ಶಿಕ್ಷಣಗಳಿಗೆ ಉಪಯುಕ್ತವಾದ ಪುಸ್ತಕ). 'Poetics' (ಸಾಹಿತ್ಯ ವಿಮರ್ಶೆಯನ್ನು ಕುರಿತ ಪುಸ್ತಕ), 'Ethics'' (ಧರ್ಮಶಾಸ್ತ್ರ) ಮತ್ತು ಇತರ ವಿಜ್ಞಾನಗಳ ಮೇಲಿನ ಗ್ರಂಥಗಳು ಅರಿಸ್ಟಾಟಲನ ಬಹುಮುಖ ಅಭಿರುಚಿಗೆ ಮತ್ತು

---

1 Plato : *Republic*, (Tr) Jowett, Ch. V, p. 475

ಪಾಂಡಿತ್ಯಕ್ಕೆ ನಿದರ್ಶನಗಳಾಗಿವೆ. ಕೆಲವು ಶತಮಾನಗಳ ಹಿಂದಿನ ತನಕ ಈಗ ವಿಶ್ವವಿದ್ಯಾನಿಲಯಗಳಲ್ಲಿ ಸ್ವತಂತ್ರ ಸ್ಥಾನಮಾನವುಳ್ಳ ಹಲವು ವಿಷಯಗಳು ಕೂಡ ತತ್ತ್ವಶಾಸ್ತ್ರದ ವಿಭಾಗಗಳೆಂದು ಪರಿಗಣಿಸಲ್ಪಟ್ಟಿದ್ದುವು. ಭೌತಶಾಸ್ತ್ರ. ರಸಾಯನಶಾಸ್ತ್ರ ಇತ್ಯಾದಿಗಳನ್ನು ನಿಸರ್ಗ ತತ್ತ್ವಶಾಸ್ತ್ರ (Natural Philosophy) ಎಂದೂ ರಾಜ್ಯಶಾಸ್ತ್ರ. ಅರ್ಥಶಾಸ್ತ್ರ. ಸಮಾಜಶಾಸ್ತ್ರ ಇತಾದಿಗಳನ್ನು ನೈತಿಕ ತತ್ತ್ವಶಾಸ್ತ್ರ (Moral Philosophy) ಎಂದೂ ಮನೋವಿಜ್ಞಾನವನ್ನು ಮಾನಸಿಕ ತತ್ತ್ವಶಾಸ್ತ್ರ (Mental Philosophy) ಎಂದೂ ಕರೆಯುತ್ತಿದ್ದರು. ಇಂದಿಗೂ ತತ್ತ್ವಶಾಸ್ತ್ರದ ವಿಷಯ ಸ್ವರೂಪದಲ್ಲಿ ಬದಲಾವಣೆಯಾಗಿಲ್ಲ. ತತ್ತ್ವಜ್ಞಾನಿ ಎಲ್ಲ ವಿಷಯ ವಿಭಾಗಗಳ ಮೂಲಸಿದ್ಧಾಂತಗಳಲ್ಲಿ, ಅಂತಿಮ ನಿರ್ಣಯಗಳಲ್ಲಿ ಆಸಕ್ತಿಹೊಂದಿರಬೇಕು. ಅಮೆರಿಕದ ಶ್ರೇಷ್ಠ ಶಿಕ್ಷಣ ತತ್ತ್ವಜ್ಞನಾದ ಜಾನ್ ಡ್ಯೂಯಿ ಹೇಳಿರುವ ಹಾಗೆ, "ವಿಶೇಷವಾದ ವಿಜ್ಞಾನಗಳ ವಿಭಾಗಗಳು ಹಾಗೂ ವಿಧಾನಗಳಿಂದ ದೊರೆಯಬಹುದಾದ ಜ್ಞಾನಕ್ಕಿಂತಲೂ ಹೆಚ್ಚಾದ, ಸಮಗ್ರವಾದ, ಮೂಲಭೂತವಾದ ಮತ್ತು ಅಂತಿಮವಾದ ವಾಸ್ತವಿಕತೆಯ ಜ್ಞಾನಸಂಪಾದನೆಯೇ ತತ್ತ್ವಶಾಸ್ತ್ರದ ಮೂಲ ಉದ್ದೇಶ."[2] ಈ ರೀತಿಯ ಪಾರಮಾರ್ಥಿಕವಾದ, ವಿಶ್ವವ್ಯಾಪಕ ಜ್ಞಾನಕ್ಕೆ ಭೌತಿಕ, ನೈಸರ್ಗಿಕ ಹಾಗೂ ಮಾನವಿಕ ವಿಜ್ಞಾನಗಳ ಮೂಲತತ್ತ್ವಗಳ ಜ್ಞಾನ ಆಧಾರಭೂತವಾಗಿರಬೇಕು.

ತತ್ತ್ವಶಾಸ್ತ್ರವೆಂದರೆ ಜ್ಞಾನದ ಮೇಲಿನ ಪ್ರೇಮ ಎಂಬ ಅರ್ಥಕ್ಕೆ ಭಾರತದಲ್ಲೂ ಪುರಾತನ ಕಾಲದಿಂದ ಪುರಸ್ಕಾರವಿದೆ. ಗೀತೆಯಲ್ಲಿ ಶ್ರೀಕೃಷ್ಣ ಅರ್ಜುನನಿಗೆ ಉಪದೇಶ ಮಾಡುವಾಗ ಜ್ಞಾನದ ಹಿರಿಮೆಯನ್ನು ವಿವರಿಸಿ "ಜ್ಞಾನಕ್ಕೆ ಸಮನಾದ್ದು ಬೇರೊಂದಿಲ್ಲ" ಎಂದು ಹೇಳಿದ್ದಾನೆ. ಮೈಸೂರು ವಿಶ್ವವಿದ್ಯಾನಿಲಯ ಕೂಡ, ಗೀತೆಯ "ನ ಹಿ ಜ್ಞಾನೇನ ಸದೃಶಂ" ಎಂಬ ಉಕ್ತಿಯನ್ನು ತನ್ನ ಲಾಂಛನದಲ್ಲಿ ಸೇರಿಸಿದೆ.

### ತತ್ತ್ವಶಾಸ್ತ್ರ ಒಂದು ಚಟುವಟಿಕೆ

ತತ್ತ್ವಶಾಸ್ತ್ರದ ಅಧ್ಯಯನ ಮಾಡುವುದೆಂದರೆ ಒಂದು ಚಟುವಟಿಕೆಯಲ್ಲಿ ತೊಡಗಿರುವುದು. ತತ್ತ್ವಶಾಸ್ತ್ರವೆಂದರೆ ಮೂಲತಃ ಒಂದು ಚಟುವಟಿಕೆ ಅಥವಾ ಕ್ರಿಯೆ: ತರುವಾಯ ಅದನ್ನು ಒಂದು ಕಲಿಕೆಯ ಮತ್ತು ಬೋಧನೆಯ ವಿಷಯ ಎಂದು ಕೆಲವರು ಪರಿಗಣಿಸಿದ್ದಾರೆ. ಲೆವಿಸನ್ ಹೇಳುವ ಹಾಗೆ, "ತತ್ತ್ವಶಾಸ್ತ್ರ ಪ್ರಪ್ರಥಮವಾಗಿ ಒಂದು ತೆರನಾದ ಚಟುವಟಿಕೆ. ಆಮೇಲೆ ಮಾತ್ರ ಅದು ನಿರ್ದಿಷ್ಟ ವಿಷಯಗಳಿಂದ ಕೂಡಿದ ಜ್ಞಾನವಿಭಾಗವಾಗಿದೆ".[3] ನಾವು ಪ್ರತಿನಿತ್ಯ ಹಲವಾರು ಚಟುವಟಿಕೆಗಳಲ್ಲಿ ತೊಡಗಿರುತ್ತೇವೆ. ಇವನ್ನೆಲ್ಲ ತತ್ತ್ವಶಾಸ್ತ್ರ ಎಂದು ಕರೆಯಬೇಕೆ? ಇಲ್ಲವಾದಲ್ಲಿ ತತ್ತ್ವಶಾಸ್ತ್ರವನ್ನು ಯಾವ ಅರ್ಥದಲ್ಲಿ ಚಟುವಟಿಕೆ ಎಂದು ಕರೆಯಬಹುದು ಎಂದು ಸಂದೇಹ ಬರುತ್ತದೆ. ಆದರೆ ತತ್ತ್ವಶಾಸ್ತ್ರವೆಂದರೆ ಮಾನಸಿಕ ಚಟುವಟಿಕೆ: ಮಾನವ ಜನಾಂಗ ಎದುರಿಸುವ ಸಮಸ್ಯೆಗಳನ್ನು ಕುರಿತು ಯೋಚಿಸುವುದು. ಉದಾಹರಣೆಗೆ ಜೀವನ, ಅದರ ಸ್ವರೂಪ, ಉದ್ದೇಶಗಳು: ಮನಸ್ಸು ಮತ್ತು ಅದರ ವ್ಯಾಪಾರಗಳು: ಹುಟ್ಟು, ಸಾವು, ವಿಶ್ವದ ಆಗುಹೋಗುಗಳು: ಭಾವನೆಗಳು, ಸಾಮಾಜಿಕ ಜೀವನದ ಮೌಲ್ಯಗಳು, ಇತ್ಯಾದಿಗಳ ಬಗ್ಗೆ ಚಿಂತಿಸುವಂಥ ಮಾನಸಿಕ ಚಟುವಟಿಕೆಗಳು. ಈ ಕ್ರಿಯೆ ಕೇವಲ ಒಬ್ಬ ವ್ಯಕ್ತಿಯ ಅಥವಾ ಒಂದು ಗುಂಪಿನ, ದೇಶದ ಸಮಸ್ಯೆಗಳಿಗೆ ಸೀಮಿತವಾಗಿರದೆ ಇಡೀ ಮಾನವ ಜನಾಂಗದ ಸಮಸ್ಯೆಗಳನ್ನು ಒಳಗೊಂಡು ಅವರೆಲ್ಲರ ಆಸಕ್ತಿಯನ್ನೂ ಕೆರಳಿಸುವಂಥವಾಗಿರ

[2] Dewey, John: *Problems of Men*, Preface

[3] Levison, Arnold B.: *The Uses of Philosophy and the Problems of Educators* in *Selected Readings in the Philosophy of Education*, (Ed) Park Joe; Macmillan Co., N.Y., 1968

ಬೇಕು. ರಸೆಲ್ ಹೇಳುವ ಹಾಗೆ, "ತತ್ತ್ವಶಾಸ್ತ್ರ ಸಾಮಾನ್ಯ ಜ್ಞಾನವುಳ್ಳ ಮಾನವ ಜನಾಂಗ ಆಸಕ್ತ ವಹಿಸುವ ವಿಷಯಗಳು ಮತ್ತು ಸಮಸ್ಯೆಗಳನ್ನು ಕುರಿತದ್ದಾಗಿದೆ. ಕೆಲವೇ ದಾರ್ಶನಿಕ ಕಸುಬುದಾರರಿಗೆ ಅರ್ಥವಾಗುವ ವಿಷಯಗಳನ್ನು ಕುರಿತದ್ದಾದರೆ ಅದು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ."[4] ತತ್ತ್ವಶಾಸ್ತ್ರದ ವ್ಯಾಖ್ಯೆಯನ್ನು ಕೊಡುತ್ತ ಹೆಂಡರ್‌ಸನ್ ಇದೇ ರೀತಿಯಲ್ಲಿ ಹೇಳಿದ್ದಾರೆ: "ಮಾನವ ಇಲ್ಲಿಯ ವರೆಗೆ ಎದುರಿಸಿರುವ ಅತ್ಯಂತ ಕಷ್ಟವಾದ ಸಮಸ್ಯೆಗಳ ಕಟ್ಟುನಿಟ್ಟಾದ, ಕ್ರಮಬದ್ಧವಾದ, ಜಾಗರೂಕ ವಿಶ್ಲೇಷಣೆಯೇ ತತ್ತ್ವಶಾಸ್ತ್ರ"[5]. ಈ ವ್ಯಾಖ್ಯೆಗಳ ಹಿನ್ನೆಲೆಯಲ್ಲಿ ವಿಶ್ವದ ತತ್ತ್ವಜ್ಞಾನಿಗಳ ಜೀವನವನ್ನೂ ಅವರ ಕೃತಿಗಳನ್ನೂ ನೋಡಿದರೆ ತತ್ತ್ವಶಾಸ್ತ್ರ ಮೊದಲಿನಿಂದಲೂ ಸಮಸ್ತರಿಗೂ ಸಂಬಂಧಪಟ್ಟ ಸಮಸ್ಯೆಗಳ ಅಧ್ಯಯನ ಮಾಡುತ್ತದೆ ಎಂದು ತಿಳಿದುಬರುತ್ತದೆ. ಜಾನ್ ಡ್ಯೂಯಿಯವರ ಹಲವು ಪುಸ್ತಕಗಳಲ್ಲಿ ಪೂರ್ಣವಾಗಿ ತತ್ತ್ವಶಾಸ್ತ್ರದ ಮೇಲೆ ಬರೆದ ಪುಸ್ತಕದ ಶಿರೋನಾಮೆಯೇ 'ಮಾನವರ ಸಮಸ್ಯೆಗಳು' (Problems of men) ಎಂದು. ತತ್ತ್ವಶಾಸ್ತ್ರ ಮಾನವರ ಸಮಸ್ಯೆಗಳಿಗೆ ಸಂಜೀವಿನಿಯಂತಾಗಿರದೆ ಆ ಸಮಸ್ಯೆಗಳನ್ನು ಅವರು ಪರಿಹರಿಸುವ ವಿಧಾನಗಳಿಂದ ಉದ್ಭವವಾಗಬೇಕು ಎಂಬುದೇ ಡ್ಯೂಯಿಯವರ ವಾದ. ಜೀವನದಿಂದ ದರ್ಶನವೇ ಹೊರತು ದರ್ಶನದ ನಿರ್ದೇಶನದ ಮೇರೆಗೆ ಸಂಪೂರ್ಣವಾಗಿ ಜೀವಿಸಬಾರದು. ಗ್ರೀಕರಲ್ಲಿ ಪ್ರಸಿದ್ಧನಾದ ಸಾಕ್ರಟೀಸನಿಗೆ ತತ್ತ್ವಜ್ಞಾನ ಒಂದು ದೈನಂದಿನ ಚಟುವಟಿಕೆಯಾಗಿತ್ತು. ಅವನು ಅಥೆನ್ಸ್ ನಗರದ ಕಂಡಕಂಡ ವ್ಯಕ್ತಿಗಳೆಲ್ಲರನ್ನೂ ವಾದಕ್ಕೆ ಆಹ್ವಾನಿಸಿ ಅವರೊಡನೆ ಜಗದ ಮತ್ತು ಜೀವನದ ಸಮಸ್ಯೆಗಳನ್ನು ಅವರಿಗೆ ಬೇಸರಬರುವ ತನಕ ಚರ್ಚಿಸುತ್ತಿದ್ದುದರಿಂದ ಅವನನ್ನು ಅಥೆನ್ಸ್ ನಗರದ ತೊಣಚಿ ಎಂದು ಕರೆಯುತ್ತಿದ್ದರು. ಆದ್ದರಿಂದ ಜೀವನದ ಟೀಕೆ, ಜೀವನವನ್ನು ವಿಶದೀಕರಿಸುವ ಕ್ರಿಯೆ ಅಥವಾ ಸ್ಪಷ್ಟಗೊಳಿಸುವ ಚಟುವಟಿಕೆಯೇ ತತ್ತ್ವಶಾಸ್ತ್ರ. ಡಿ. ಜೆ. ಓಕೊನ್ನೊರ್ ಎಂಬವರು "ತತ್ತ್ವಶಾಸ್ತ್ರ ಒಂದು ಜೀವನ ವಿಮರ್ಶೆಯ ಕ್ರಿಯೆ" ಎಂದಿದ್ದಾರೆ.[6] ತತ್ತ್ವಶಾಸ್ತ್ರದ ಇದೇ ಅರ್ಥವನ್ನು ಪ್ರಧಾನವಾಗಿಟ್ಟುಕೊಂಡ ಒಂದು ನೂತನ ತತ್ತ್ವಪಂಥ ಈ ಶತಮಾನದಲ್ಲಿ ಬಹಳ ಪ್ರಸಿದ್ಧವಾಗಿದೆ. ವಿಟ್ಟೆಂಗ್‌ಸ್ಟೇನ್, ಇಸ್ರೇಲ್ ಷೆಫ್ಲರ್, ಡಿ. ಜೆ. ಓಕೊನ್ನೋರ್, ಎಂ. ಜೆ. ಅಯ್ಯರ್ ಮುಂತಾದ ವಿದ್ವಾಂಸರಿಂದ ಕೂಡಿದ ಈ ಪಂಥಕ್ಕೆ "Language Analysis" ಎಂದು ಹೆಸರು.

## ವಿಶ್ವದ ವ್ಯಾಪಕ ಚಿತ್ರವನ್ನು ಕೊಡುವ ಒಂದು ವಿಷಯ ವಿಭಾಗವೇ ತತ್ತ್ವಶಾಸ್ತ್ರ

ತತ್ತ್ವಶಾಸ್ತ್ರಕ್ಕೆ ದಾರ್ಶನಿಕರು ಬಹಳ ಹಿಂದಿನಿಂದಲೂ ಈ ಅರ್ಥವನ್ನು ಕಲ್ಪಿಸಿದ್ದಾರೆ. ಸಾಫೋಕ್ಲಿಸ್ ಎಂಬ ಗ್ರೀಕ್ ತತ್ತ್ವಜ್ಞಾನಿ ಜೀವನವನ್ನು ನಿರಂತರವಾಗಿಯೂ ಸಮಗ್ರವಾಗಿಯೂ ಅಭ್ಯಸಿಸುವುದೇ ತತ್ತ್ವಜ್ಞಾನಿಯ ಕಾರ್ಯ ಎಂದು ಹೇಳಿದ್ದಾನೆ. ಆದ್ದರಿಂದ ಅವನು ಜೀವನದ ಹಾಗೂ ವಿಶ್ವದ ಬಗ್ಗೆ ಸಂಪೂರ್ಣವಾದ ಹಾಗೂ ಸ್ವಯಂಪೂರ್ಣವಾದ ದೃಷ್ಟಿಕೋನವನ್ನು ಹೊಂದಿರಬೇಕು. ಹೆಂಡರ್‌ಸನ್ ಹೇಳುವ ಹಾಗೆ, "ತತ್ತ್ವಶಾಸ್ತ್ರ ಜಗತ್ತಿನ ಬಗ್ಗೆ ಒಂದು ಸಮಷ್ಟಿ ದೃಷ್ಟಿಯನ್ನು (ಪೂರ್ಣಚಿತ್ರ, ಅಖಂಡ ಜ್ಞಾನ, ಸಮಗ್ರ ದೃಷ್ಟಿ) ಕೊಡುವುದು."[7] ಇದೇ ಅರ್ಥವನ್ನೇ ಪ್ರಧಾನವಾಗಿಟ್ಟುಕೊಂಡು ಡಾ॥ ರಾಧಾಕೃಷ್ಣನ್ ಶಿಕ್ಷಣದ ಉದ್ದೇಶವನ್ನು ಈ ರೀತಿ ನಿರೂಪಿಸಿದ್ದಾರೆ: "ವಿಶ್ವದ ಬಗ್ಗೆ

---

[4] Russell, Bertrand : *Human Knowledge*

[5] Henderson, S. V. P. *Introduction to the Philosophy of Education*, University of Chicago Press, Chicago, 1941, Ch. I

[6] D. J. O'Connor : *An Introduction to the Philosophy of Education*, Routledge & Kegan Paul, London, 1966, p. 1

[7] Henderson : *op. cit.*, Ch. I

ಒಂದು ಸಮನ್ವಯ (ಸಮಗ್ರ) ದೃಷ್ಟಿಯನ್ನು ಕೊಡುವುದೇ ಶಿಕ್ಷಣದ ಉದ್ದೇಶವಾಗಿದೆ."[8] ಭೌತ. ನೈಸರ್ಗಿಕ ಮತ್ತು ಸಮಾಜವಿಜ್ಞಾನಗಳು ಕ್ರಮವಾಗಿ ಭೌತ. ನಿಸರ್ಗ ಹಾಗೂ ಮಾನವ ಜಗತ್ತಿನ ಬಗ್ಗೆ ಸಂಪೂರ್ಣವಾದ ದೃಷ್ಟಿಕೋನವನ್ನು ಕೊಟ್ಟರೂ ಇಡೀ ಜಗತ್ತಿನ ಬಗ್ಗೆ ಸಂಪೂರ್ಣವಾದ ದೃಷ್ಟಿಕೋನವನ್ನು ಕೊಡುವುದರಲ್ಲಿ ವಿಫಲವಾಗುತ್ತವೆ. ತತ್ತ್ವಜ್ಞಾನಿ ಈ ಎಲ್ಲ ವಿಜ್ಞಾನಗಳನ್ನು ಅರಿತು ಅವುಗಳಿಂದ ಪಡೆದ ಜ್ಞಾನದ ಆಧಾರದ ಮೇಲೆ ಪ್ರಪಂಚದ ಬಗ್ಗೆ ಒಂದು ವ್ಯವಸ್ಥಿತ ಹಾಗೂ ಕ್ರಮಬದ್ಧವಾದ ಸಮಗ್ರಜ್ಞಾನವನ್ನು ಕೊಡುತ್ತಾನೆ. ಡ್ಯೂಯಿ ವೀಕ್ಷಿಸಿರುವಂತೆ. "ವಿಷಯದ ಬಗ್ಗೆ ಹೇಳುವುದಾದರೆ. ತತ್ತ್ವಜ್ಞಾನ ಪ್ರಪಂಚದ ವಿವಿಧ ವಿವರಗಳನ್ನು ಕಲೆಹಾಕಿ. ಅವುಗಳ ಬಗ್ಗೆ ಒಂದು ಪರಿಪೂರ್ಣ ದೃಷ್ಟಿಯನ್ನು ಕೊಡುವುದೇ ಆಗಿದೆ."[9] ಆದ್ದರಿಂದ ತತ್ತ್ವಶಾಸ್ತ್ರದ ಅಧ್ಯಯನವೆಂದರೆ ಜ್ಞಾನಸೃಷ್ಟಿ ಅಥವಾ ಜ್ಞಾನಪ್ರಕಾಶನ ಕಾರ್ಯವಲ್ಲ: ಅದು ಜ್ಞಾನಸಂಪಾದನೆ. ಪುನರ್ವ್ಯವಸ್ಥೆ ಹಾಗೂ ಈ ಪುನರ್ವ್ಯವಸ್ಥಿತ ಜ್ಞಾನದ ವಿಮರ್ಶೆ, ವ್ಯಾಖ್ಯಾನ ಮತ್ತು ಸ್ಪಷ್ಟೀಕರಣ. ವಿಜ್ಞಾನವೆಂದರೆ ಒಂದು ವಿಷಯದ ಬಗ್ಗೆ ಇರುವ ವ್ಯವಸ್ಥಿತ. ಕ್ರಮಬದ್ಧ ಜ್ಞಾನ. ತತ್ತ್ವಜ್ಞಾನವೆಂದರೆ ಎಲ್ಲ ವಿಜ್ಞಾನಗಳ ಪುನರ್ವ್ಯವಸ್ಥಿತ ಜ್ಞಾನ. ಆದ್ದರಿಂದಲೇ ಬ್ರೂಬಾಕರ್‌ರವರು ತತ್ತ್ವಜ್ಞಾನವನ್ನು ವಿಜ್ಞಾನಗಳ ವಿಜ್ಞಾನ ಎಂದು ಕರೆದಿದ್ದಾರೆ.[10] ಅದನ್ನು ಎಲ್ಲ ವಿಜ್ಞಾನಗಳ ಮಾತೆ ಎಂದೂ ಕರೆದಿದ್ದಾರೆ. ಏಕೆಂದರೆ ಇಂದಿನ ಸ್ವತಂತ್ರ ವಿಷಯ ವಿಭಾಗಗಳು ಒಂದಲ್ಲ ಮತ್ತೊಂದು ಕಾಲದಲ್ಲಿ ತತ್ತ್ವಜ್ಞಾನದ ಭಾಗಗಳಾಗಿದ್ದುವು. ಪ್ಲೇಟೋ ಕೂಡ ತತ್ತ್ವಜ್ಞಾನಿಯನ್ನು ಎಲ್ಲ ಕಾಲಗಳ ಮತ್ತು ಎಲ್ಲ ಜೀವಿಗಳ ಪ್ರೇಕ್ಷಕ ಎಂದು ಕರೆದಿದ್ದಾನೆ.

ಪಿ. ಜಿ. ಸ್ಮಿತ್‌ರವರು ತಾತ್ತ್ವಿಕ ಚಿಂತನೆಗೆ ಮೂರು ಪರಿಮಿತಿಗಳನ್ನು ಸೂಚಿಸಿದ್ದಾರೆ. ಅವು ವ್ಯಾಪಕತೆ (ಸಂಯುಕ್-ಜ್ಞಾನ) (Comprehensiveness). ಭೇದನ (Penetration). ಹಾಗೂ ಅನಾಗ್ರಹ (Flexibility).[11] ಇವುಗಳಲ್ಲಿ ಅನಾಗ್ರಹ ಎಂಬ ಪದ ಗಮನಾರ್ಹ. ತತ್ತ್ವಶಾಸ್ತ್ರ ಎಂಬುದು ಮಾನವರ ಸಮಸ್ಯೆಗಳಿಗೆ ಚಿರ ಪರಿಹಾರಗಳನ್ನಾಗಲಿ ವಿಶ್ವದ ವ್ಯವಸ್ಥೆಯ ಬಗ್ಗೆ ಚಿರಸತ್ಯವನ್ನಾಗಲೀ, ಕೊಡುವುದಿಲ್ಲ. ಅದು ವಿಜ್ಞಾನಗಳಲ್ಲಿಯ ಸತ್ಯಗಳು, ದೃಷ್ಟಿಕೋನಗಳು, ವಿಷಯಜ್ಞಾನಗಳು ಬದಲಾದಂತೆಲ್ಲ ಹೆಚ್ಚಾದಂತೆಲ್ಲ ತಾನೂ ಬದಲಾವಣೆ ಹೊಂದುತ್ತಿರುತ್ತದೆ. ಅದು ಸಾರ್ವಕಾಲಿಕವೂ, ಸರ್ವಸಮಸ್ಯೆಗಳಿಗೂ ಅನ್ವಯಿಸುವಂಥ ಶಾಶ್ವತ ಜ್ಞಾನವನ್ನು ಬೋಧಿಸುವುದಿಲ್ಲ. ಕಿಲ್‌ಪ್ಯಾಟ್ರಿಕ್ ಹೇಳಿರುವಂತೆ. "ತತ್ತ್ವಶಾಸ್ತ್ರ ಜೀವನದ ಬಗ್ಗೆ ಒಂದು ದೃಷ್ಟಿಕೋನ. ಒಂದು ಉತ್ತಮ ತತ್ತ್ವಶಾಸ್ತ್ರದ ಒರೆಗಲ್ಲೇನೆಂದರೆ–ಅದು ಹೊಸ ಸಮಸ್ಯೆಗಳ ಹಾಗೂ ಹೊಸ ಅಂತರ್‌ದೃಷ್ಟಿಗಳ ಹಿನ್ನೆಲೆಯಲ್ಲಿ ಪುನರ್‌ಪರೀಕ್ಷೆಯಲ್ಲಿ ಜಯಿಸಿ ಪುನರಾವೃತ್ತಿಗೊಳ್ಳುತ್ತಿರಬೇಕು".[12] ಆದ್ದರಿಂದ ಈ ಪ್ರಕಾರವಾಗಿ ತತ್ತ್ವಜ್ಞಾನಿ ಮಾನವರ ಸಮಸ್ಯೆಗಳು ಹಾಗೂ ವಿಶ್ವದ ಬಗ್ಗೆ ಒಂದು ಸಂಪೂರ್ಣವಾದ. ಸಮನ್ವಯವಾದ. ಕಟ್ಟುನಿಟ್ಟಿಲ್ಲದ. ದೃಷ್ಟಿಕೋನ ಹೊಂದಿರಬೇಕು.

---

[8] Dr. Radhakrishnan: *University Education Commission Report*, Ch. I

[9] Dewey, John: *Democracy and Education*, John Wiley & Sons, Ch. 24

[10] Brubachor, J. S.: *Modern Philosophies of Education*, McGraw Hill Book Co., Tokyo, 1962, Ch. I

[11] P. G. Smith: *Philosophy of Education*, Introductory Studies, Harper & Row, N.Y., 1965, Ch. I

[12] Kilpatric: *Philosophy of Education*, Macmillan Co., N.Y., 1963, Ch. I

## ತತ್ತ್ವಶಾಸ್ತ್ರಕ್ಕೆ ಜೀವನ ದರ್ಶನ ಎಂಬ ಅರ್ಥ

ತತ್ತ್ವಶಾಸ್ತ್ರ ಜೀವನದ ಒಂದು ಅವಲೋಕನ. ಹೊರನೋಟ ಅಥವಾ ದೃಷ್ಟಿಕೋನ. ಅದು ಜೀವನ ಪಥಕ್ಕೆ ನಿರ್ದೇಶನವನ್ನೀಯುತ್ತದೆ. ಡಾ. ರಾಧಾಕೃಷ್ಣನ್ ಎರಡು ವಿಭಿನ್ನವಾದ ವಿಶಿಷ್ಟ ತತ್ತ್ವಪಂಥಗಳ ಬಗ್ಗೆ ಗ್ರಂಥಗಳನ್ನು ಬರೆದು ಅವುಗಳ ಶಿರೋನಾಮೆಯಲ್ಲಿಯೇ ತತ್ತ್ವಶಾಸ್ತ್ರಕ್ಕೆ ಈ ಅರ್ಥವನ್ನು ಸೂಚಿಸಿದ್ದಾರೆ: ಆ ಗ್ರಂಥಗಳು 'ಹಿಂದೂ ಜೀವನದರ್ಶನ' ಹಾಗೂ 'ಆದರ್ಶ ಜೀವನದರ್ಶನ'. ತತ್ತ್ವಶಾಸ್ತ್ರ ಜೀವನಕ್ಕೆ ನಿರ್ದೇಶನವನ್ನೀಯುತ್ತದೆ ಮತ್ತು ಜೀವನದ ಅನುಭವಗಳಿಂದ ಪರಿಷ್ಕರಿಸಲ್ಪಡುತ್ತದೆ. ಜೀವನದ ಅನೇಕ ಸಂದಿಗ್ಧ ಪರಿಸ್ಥಿತಿಗಳಲ್ಲಿ ಮಾನವ ಸಿಕ್ಕಾಗ ಧರ್ಮ, ಕರ್ಮ (ಕರ್ತವ್ಯ), ನ್ಯಾಯ, ನೀತಿ, ಜಗತ್ತು, ಅದರ ಪರಿಪಾಲನೆ, ಇತ್ಯಾದಿಗಳ ಬಗ್ಗೆ ಚಿಂತಿಸುತ್ತಾನೆ ಮತ್ತು ತನ್ನದೇ ಆದ ನಿರ್ಣಯಗಳನ್ನು ಮಂಡಿಸುತ್ತಾನೆ. ಈ ಅನುಭವಗಳೆಂಬ ಇಟ್ಟಿಗೆಗಳನ್ನು ವಿಚಾರವೆಂಬ ಸಿಮೆಂಟಿನಿಂದ ಒಂದುಗೂಡಿಸಿ, ವಿವೇಚನೆ ಎಂಬ ನಕ್ಷೆಯ ಆಧಾರದ ಮೇಲೆ ಕಟ್ಟುವ ಕಟ್ಟಡವೇ ತತ್ತ್ವಶಾಸ್ತ್ರ. ಜೀವನದ ಅನುಭವಗಳಿಂದ ತತ್ತ್ವಶಾಸ್ತ್ರದ ನಿರ್ಮಾಣ ಮತ್ತು ಈ ನಿರ್ಮಿತ ಜ್ಞಾನದ ಜ್ಯೋತಿಯಿಂದ ಜೀವನ. ಲಂಡನ್ ಶಿಕ್ಷಣ ಸಂಸ್ಥೆಯ ನಿರ್ದೇಶಕರೂ ಶಿಕ್ಷಣ ತತ್ತ್ವಶಾಸ್ತ್ರದ ಪ್ರಾಧ್ಯಾಪಕರೂ ಆಗಿದ್ದ ಎಲ್. ಎ. ರೀಡ್‌ರವರು ಹೇಳಿರುವಂತೆ, "ತತ್ತ್ವಶಾಸ್ತ್ರ ಅಂತಿಮವಾಗಿ ಜೀವನವನ್ನು ಕುರಿತ ಜ್ಞಾನ ಎಂದು ನಾನು ಪುನಃಪುನಃ ಹೇಳುತ್ತೇನೆ; ಮತ್ತು ಅದು ಅನ್ಯರು ಜೀವನದ ಬಗ್ಗೆ ವರದಿ ಮಾಡಿರುವ ಜ್ಞಾನವಲ್ಲ; ಪ್ರತಿ ವ್ಯಕ್ತಿಯೂ ವಿವೇಕಯುತವಾಗಿ ಚಿಂತಿಸುವುದಕ್ಕಾಗಿ ಮತ್ತು ಮಾತನಾಡುವುದಕಾಗಿ ಅತ ಪೂರ್ಣವಾದ, ಅನುಭವಸಮೃದ್ಧವಾದ ಜೀವನವನ್ನು ಜೀವಿಸಿರಬೇಕು."[13] ಭಾರತದ ತಾತ್ತ್ವಿಕರಲ್ಲೂ ಜೀವನಮಾರ್ಗಕ್ಕೂ ಜೀವನದರ್ಶನಕ್ಕೂ ಹೆಚ್ಚು ವ್ಯತ್ಯಾಸವಿರಲಿಲ್ಲ. ಅವರಿಗೆ ತತ್ತ್ವಜ್ಞಾನದ ಪ್ರಯೋಗಶಾಲೆಯೇ ಜೀವನವಾಗಿತ್ತು. ಗಾಂಧೀಜಿಯವರೂ ತಮ್ಮ ಜೀವನಚರಿತ್ರೆಯ ಶಿರೋನಾಮೆಯನ್ನು 'ಸತ್ಯಶೋಧನೆ, ಸತ್ಯದ ಬಗ್ಗೆ ನನ್ನ ಪ್ರಯೋಗಗಳು' ಎಂದಿಟ್ಟಿದ್ದಾರೆ. ಪ್ರಪಂಚಕ್ಕೆ ಅವರ ಸಂದೇಶವೇನೆಂದು ಅವರನ್ನು ಒಮ್ಮೆ ಕೇಳಿದಾಗ "ನನ್ನ ಜೀವನವೇ ನನ್ನ ಸಂದೇಶ (ಮಾನವೀಯ ಆದರ್ಶವಾದ)" ಎಂದು ನುಡಿದಿದ್ದರು. ಪಶ್ಚಿಮದಲ್ಲಿ ತತ್ತ್ವಶಾಸ್ತ್ರ ಆಶ್ಚರ್ಯದಿಂದ ಹುಟ್ಟಿತು. (ಮಿಲೆಟಸ್‌ನ ಥೇಲ್ಸ್ ಎಂಬವನು ತನ್ನ ಸುತ್ತಮುತ್ತಲಿನ ಜಗತ್ತಿನ ಬಗ್ಗೆ ಆಶ್ಚರ್ಯಪೂರ್ವಕವಾಗಿ ಚಿಂತಿಸುತ್ತಿದ್ದಾಗ ತತ್ತ್ವಶಾಸ್ತ್ರ ಹುಟ್ಟಿತು ಎಂಬ ನಂಬಿಕೆಯಿಂದಾಗಿ ಥೇಲ್ಸನನ್ನು ಪಾಶ್ಚಾತ್ಯ ತತ್ತ್ವಶಾಸ್ತ್ರದ ಜನಕ ಎಂದು ಪಾಶ್ಚಾತ್ಯ ತತ್ತ್ವಶಾಸ್ತ್ರದ ಚರಿತ್ರಕಾರರೆಲ್ಲರೂ ಪರಿಗಣಿಸಿದ್ದಾರೆ.) ಆದರೆ ಭಾರತದಲ್ಲಿ ತತ್ತ್ವಜ್ಞಾನ ಜೀವನಮಾರ್ಗದಲ್ಲಿ ಒದಗಿಬರುವ ಲೌಕಿಕ ಸಮಸ್ಯೆಗಳಿಂದ ಪ್ರಾಪ್ತವಾಗುವ ಅನುಭವಗಳ ಆಧಾರದ ಮೇಲೆ ರೂಪಿತವಾಯಿತು. ಆದ್ದರಿಂದಲೇ ನಮ್ಮಲ್ಲಿ ಈಗಲೂ ಅನುಭವಿಯಾದ ವ್ಯಕ್ತಿಗೆ ಗೌರವವನ್ನು ಸೂಚಿಸುತ್ತೇವೆ. ಪ್ರೊ. ಹಿರಿಯಣ್ಣನವರು ಕೂಡ ತಮ್ಮ ಲೇಖನಗಳಲ್ಲಿ ತತ್ತ್ವಶಾಸ್ತ್ರಕ್ಕೆ ಇದೇ ಅರ್ಥವನ್ನು ಸೂಚಿಸಿದ್ದಾರೆ.[14]

## ತತ್ತ್ವಜ್ಞಾನಕ್ಕೂ ವಿಜ್ಞಾನಕ್ಕೂ ಇರುವ ಸಂಬಂಧ

ವಿಜ್ಞಾನಕ್ಕೂ ತತ್ತ್ವಜ್ಞಾನಕ್ಕೂ ಒಂದು ಅಪೂರ್ವವಾದ ಸಂಬಂಧವಿದೆ. ವಿಜ್ಞಾನದ ಅಂತ್ಯವೇ ತತ್ತ್ವಜ್ಞಾನದ ಆದಿ. ವಿಜ್ಞಾನ ಶೋಧಿಸಿದ ವಿವರವಾದ ಜ್ಞಾನಗಳ ಆಧಾರದ ಮೇಲೆ ತತ್ತ್ವಜ್ಞಾನ ಬೆಳೆಯುತ್ತದೆ. ಬಟ್ಲರ್ ಹೇಳಿರುವ ಹಾಗೆ, "ಉಭಯ ವಿಷಯಗಳೂ ಜ್ಞಾನದಲ್ಲಿ ಆಸಕ್ತಿ ಹೊಂದಿವೆ. ಆದರೆ ಈ ಜ್ಞಾನದ ಲಕ್ಷಣದಲ್ಲಿ ಸ್ವಲ್ಪ ಪ್ರಭೇದವಿದೆ. ಪ್ರಪಂಚದ ವಸ್ತುಸ್ಥಿತಿಯ ವಿವರವಾದ

---

[13] L. A. Reid : *Philosophy and the Theory and Practice of Education*, University of London, Institute of Education, Evans Brothers Ltd., London, 1965, p. 23

[14] Hiriyanna, M.: *The Aim of Indian Philosophy* in *Philosophical Studies*, Kavyalaya Publishers, Mysore

ಜ್ಞಾನವನ್ನು ಶೋಧಿಸುತ್ತದೆ. ತತ್ತ್ವಜ್ಞಾನ ವಿಜ್ಞಾನಪ್ರಪಂಚದ ವಸ್ತುಸ್ಥಿತಿಯ ಮೂಲಜ್ಞಾನವನ್ನು ಶೋಧಿಸುತ್ತದೆ."[15] ಈ ಮೂಲಜ್ಞಾನ ವಿವರವಾದ ಜ್ಞಾನಕ್ಕಿಂತ ಅತೀತವಾದ್ದಾದರೂ ಅದನ್ನೇ ಆಧಾರವಾಗಿಟ್ಟುಕೊಂಡಿದೆ. ಈ ಎರಡು ವಿಷಯಗಳಿಗೆ ಇರುವ ಸಂಬಂಧವನ್ನು ಕೆಳಗಿನ ಉದ್ಧರಣಗಳ ಮೂಲಕ ಸ್ಪಷ್ಟವಾಗಿ ಅರಿಯಬಹುದು:

ಫೀನಿಕ್ಸ್: "ವಿಜ್ಞಾನದ ಆಸಕ್ತಿ ಇರುವುದು ವಸ್ತುಸಂಗತಿಗಳ ಶೋಧನೆಯಲ್ಲಿ ಮಾತ್ರ. ತತ್ತ್ವಶಾಸ್ತ್ರದ ಆಸಕ್ತಿ ಇಷ್ಟಕ್ಕೇ ಸೀಮಿತವಾಗಿಲ್ಲ. ವಸ್ತುಸಂಗತಿಗಳ ಬಗ್ಗೆ ಒಂದು ದೃಷ್ಟಿಕೋನವನ್ನು ಬೆಳೆಸಲು ಎಷ್ಟು ಬೇಕೋ ಅಷ್ಟು ಮಾತ್ರ ಅದಕ್ಕೆ ವಸ್ತುಸಂಗತಿಗಳ ಮೇಲೆ ಆಸಕ್ತಿಯಿದೆ. ವಿಜ್ಞಾನ ಮೊದಲೇ ಶೋಧಿಸಿರುವ ವಸ್ತುಸಂಗತಿಗಳನ್ನು ಅದು ವ್ಯವಸ್ಥೆಗೊಳಿಸಿ, ವ್ಯಾಖ್ಯಾನಮಾಡಿ, ಸ್ಪಷ್ಟಪಡಿಸಿ, ವಿಮರ್ಶಿಸಲು ಪ್ರಯತ್ನಿಸುತ್ತದೆ."[16]

ಡ್ಯೂಯಿ: "ಜಗತ್ತಿನ ಬಗ್ಗೆ ತಾನು ಶೋಧಿಸಿರುವ ವಸ್ತುಸಂಗತಿಗಳ ವರದಿ ಮಾತ್ರವೇ ವಿಜ್ಞಾನವಾಗಿರದೆ, ಅವುಗಳ ಬಗೆಗೆ ದೃಷ್ಟಿಕೋನವನ್ನು ಕೊಡುವುದಕ್ಕೆ ಯಾವಾಗ ಪ್ರಾರಂಭ ಮಾಡುತ್ತದೋ ಆಗ ಅದು ತತ್ತ್ವಜ್ಞಾನವಲ್ಲಿ ಸಮ್ಮಿಳಿತವಾಗುತ್ತದೆ."[17]

ಜಿ. ಟಿ. ಡಬ್ಲ್ಯು. ಪ್ಯಾಟ್ರಿಕ್: ವಿಜ್ಞಾನ ಮತ್ತು ತತ್ತ್ವಜ್ಞಾನಗಳಿಗೆ ನಿಕಟವಾದ ಸಂಬಂಧವಿದೆ. ಈ ಜ್ಞಾನಗಳ ಉಗಮ ಸ್ಥಾನ ಒಂದೇ—ಜ್ಞಾನದ ಮೇಲಿನ ಪ್ರೇಮ. ಅವು ಅನ್ವೇಷಿಸುವ ಗುರಿಯೂ ಒಂದೇ—ಸತ್ಯದ ಜ್ಞಾನ. ವಿಜ್ಞಾನ ವಸ್ತುಸಂಗತಿಗಳನ್ನು ವರ್ಣಿಸಿದರೆ, ತತ್ತ್ವಜ್ಞಾನ ಅವರ ವ್ಯಾಖ್ಯಾನ ಮಾಡುತ್ತದೆ".[18]

ಬ್ರೂಬಾಕರ್: "ವಸ್ತುಸಂಗತಿಗಳ ನಿಕಟವಾದ, ತತ್‌ಕ್ಷಣದ ಕಾರಣಗಳಲ್ಲಿ ವಿಜ್ಞಾನದ ಆಸಕ್ತಿ; ಅವುಗಳ ಅಂತಿಮವಾದ ಮೂಲಕಾರಣಗಳಲ್ಲಿ ತತ್ತ್ವಜ್ಞಾನದ ಆಸಕ್ತಿ."[19]

ಆಕ್ಸ್‌ಫರ್ಡ್ ಡಿಕ್ಷನರಿ ಆಫ್ ಫಿಲಾಸೊಫಿ: "ಯಾವ ವಿಷಯ ವಸ್ತುಸಂಗತಿಗಳ ಮೂಲ ಕಾರಣಗಳನ್ನು ಹಾಗೂ ನಿಯಮಗಳನ್ನು ಕುರಿತದ್ದಾಗಿರುತ್ತದೆಯೋ ಅದೇ ತತ್ತ್ವಜ್ಞಾನ."[20]

ಈ ಮೇಲಿನ ಉಕ್ತಿಗಳಿಂದ ತಿಳಿಯುವುದೇನೆಂದರೆ, ವಿಜ್ಞಾನಿಯದು ಆಂಶಿಕವಾದ, ಖಂಡವಾದ ಮತ್ತು ವಿವರಗಳಿಂದ ತುಂಬಿದ ದೃಷ್ಟಿಕೋನವಾದರೆ ತತ್ತ್ವಜ್ಞಾನಿಯದು ಪೂರ್ಣವಾದ, ವ್ಯಾಪಕವಾದ ದೃಷ್ಟಿಕೋನ. ಆದರೆ ಜೀವನ ಹಸನಾಗಬೇಕಾದರೆ, ವಿಶ್ವ ಪ್ರಗತಿಯ ಹಾದಿಯನ್ನು ತುಳಿಯಬೇಕಾದರೆ, ವಿಜ್ಞಾನ ಮತ್ತು ತತ್ತ್ವಜ್ಞಾನಗಳೆರಡೂ ಪರಸ್ಪರ ಪೂರಕವಾಗಿವೆ. ಉದಾಹರಣೆಗೆ, ವಿಜ್ಞಾನ ಪರಮಾಣುಶಕ್ತಿಯನ್ನು ಉತ್ಪಾದಿಸಲು ಬೇಕಾದ ತಾಂತ್ರಿಕ ಜ್ಞಾನವನ್ನೊ ಕೌಶಲವನ್ನೊ ಒದಗಿಸುತ್ತದೆ. ಈ ಶಕ್ತಿಯನ್ನು ಕ್ರಿಯಾತ್ಮಕ ಹಾಗೂ ಸೃಜನಾತ್ಮಕ ಉಪಯೋಗಗಳಿಗೆ ತೊಡಗಿಸಲು ಹಿತಕರವಾದ ತತ್ತ್ವದೃಷ್ಟಿಯ ಅವಶ್ಯಕತೆ ಇದೆ. ಅಹಿತಕರವಾದ ತತ್ತ್ವದೃಷ್ಟಿ ಇದೇ ಶಕ್ತಿಯನ್ನು ವಿನಾಶಾತ್ಮಕ ಗುರಿಗಳಿಗೆ ಉಪಯೋಗಿಸಲು ಪ್ರೇರೇಪಿಸುತ್ತದೆ. ಜ್ಞಾನಸಂಶೋಧನೆ ವಿಜ್ಞಾನದ ಕಾರ್ಯವಾದರೆ, ಸಂಶೋಧಿತ ಜ್ಞಾನದ ಉಪಯೋಗವನ್ನು ನಿರ್ದೇಶಿಸುವುದು ತತ್ತ್ವಜ್ಞಾನದ

---

[15] Butler: *Four Philosophies and Their Practice in Education and Religion*, Harper & Row, N.Y., 1968, p. 4

[16] Phenix: *Philosophy of Education*, Holt & Rinehart, N.Y., 1958, Ch. I

[17] Dewey: *Democracy and Education*, Ch. 24

[18] G. T. W. Patrick: *Introduction to Philosophy*

[19] Brubacher: *op. cit.*, Ch. I

[20] Shorter Oxford Dictionary of Philosophy

ಕೆಲಸ. ಆದ್ದರಿಂದ ವಿಜ್ಞಾನಕ್ಕೂ ತತ್ತ್ವಜ್ಞಾನಕ್ಕೂ ಯಾವುದೇ ರೀತಿಯ ವಿರೋಧವಿಲ್ಲ; ಜೀವನದಲ್ಲಿ ಅವುಗಳ ನಡುವೆ ಸಾಮರಸ್ಯವೇ ಇದೆ.

### ತತ್ತ್ವಶಾಸ್ತ್ರಕ್ಕೂ ಮತಧರ್ಮಗಳಿಗೂ ಇರುವ ವ್ಯತ್ಯಾಸ

ತತ್ತ್ವಶಾಸ್ತ್ರವಿಷಯದ ಸ್ವಭಾವವನ್ನು ಅರಿಯದ ಹಲವರಿಗೆ ಮತಧರ್ಮವೇ ತತ್ತ್ವಶಾಸ್ತ್ರ ಎಂಬ ಸಾಮಾನ್ಯವಾದ ತಪ್ಪು ತಿಳುವಳಿಕೆ ಇದೆ. ಆದರೆ ಇವೆರಡು ವಿಷಯಗಳಿಗೆವ್ರ ಕೆಲ ಸಾಮ್ಯಗಳಿದ್ದರೂ ಪ್ರಮುಖವಾದ ವ್ಯತ್ಯಾಸಗಳುಂಟು. ಎರಡೂ ವಿಭಾಗಗಳ ಉದ್ದೇಶ ಒಂದೇ—ಸತ್ಯಾನ್ವೇಷಣೆ. ಉದಾ: ಆತ್ಮಜ್ಞಾನ, ಆತ್ಮ–ಪರಮಾತ್ಮ ಸಂಬಂಧ, ಜ್ಞಾನ ಇತ್ಯಾದಿ. ಆದರೆ, ಈ ಎರಡೂ ವಿಷಯಗಳಲ್ಲಿ ವ್ಯತ್ಯಾಸವಿರುವುದು ಸತ್ಯಾನ್ವೇಷಣೆಯ ಮಾರ್ಗದಲ್ಲಿ. ಮತಧರ್ಮಗಳ ಮಾರ್ಗದಲ್ಲಿ ಶ್ರದ್ಧೆಯೇ ಪ್ರಧಾನ. ಅವು ಹಲವು ನಂಬಿಕೆಗಳನ್ನು ಇಟ್ಟುಕೊಂಡಿರುತ್ತವೆ. ಆ ನಂಬಿಕೆಗಳನ್ನು ಪ್ರಶ್ನಿಸುವ ಹಾಗೆಯೇ ಇಲ್ಲ. ಅವುಗಳಿಗೆ ವೈಯಕ್ತಿಕವಾಗಿ ಒಪ್ಪುವಾಗಿರುವುದೇ ಮುಖ್ಯ. ಆದರೆ ತತ್ತ್ವಜ್ಞಾನದ್ದು ಪಕ್ಷಪಾತವಿಲ್ಲದ, ಸ್ವತಂತ್ರವಾದ ವಿಚಾರಮಾರ್ಗ. ತತ್ತ್ವಜ್ಞಾನ ಚಿಂತನಾತ್ಮಕ ಹಾಗೂ ವೈಚಾರಿಕವಾದರೆ ಮತಧರ್ಮಗಳು ಕ್ರಿಯಾತ್ಮಕ ಹಾಗೂ ಸಂಸ್ಕಾರಪೂರಿತ (ವಿಧಿಯುಕ್ತ). ಜೀವನದ ವಾಸ್ತವತೆಯ ಸತ್ಯವನ್ನು ಸಾಧಿಸುವ ಮಾರ್ಗವೇ ಮತಧರ್ಮ. ಜೀವನದ ವಾಸ್ತವತೆಯ ಸತ್ಯವನ್ನು ಗ್ರಹಿಸಿಕೊಳ್ಳುವ ಪ್ರಯತ್ನವೇ ತತ್ತ್ವಜ್ಞಾನ. ಈ ಪ್ರಭೇದಗಳು ಪಾಶ್ಚಾತ್ಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಪೂರ್ಣವಾಗಿ ಸರಿಯಾಗಿದ್ದರೂ ಭಾರತೀಯ ಸಂಸ್ಕೃತಿಯ ಬಗ್ಗೆ ಹೇಳುವಾಗ ಅಷ್ಟು ಸರಿಯಾಗಿ ಕಾಣುವುದಿಲ್ಲ. ಏಕೆಂದರೆ ಭಾರತೀಯ ಮತಧರ್ಮಗಳು ಹೆಚ್ಚು ಚಿಂತನಾತ್ಮಕವಾಗಿಯೇ ಹಾಗೂ ತಾತ್ತ್ವಿಕವಾಗಿಯೇ ಇವೆ. ಬರ್ಟ್ರೆಂಡ್ ರಸೆಲ್ ಮತ್ತು ಆಲ್‌ಬರ್ಟ್ ಸ್ವೀಟ್ಜರ್[21] ಹೇಳಿರುವ ಹಾಗೆ, ಭಾರತೀಯ ಮತಧರ್ಮಗಳ ಹಾಗೂ ತತ್ತ್ವಶಾಸ್ತ್ರಗಳ ಮಧ್ಯೆ ಸ್ಪಷ್ಟವಾದ ರೇಖೆಯನ್ನೆಳೆಯುವುದಕ್ಕಾಗುವುದಿಲ್ಲ.

### ತತ್ತ್ವಶಾಸ್ತ್ರ ಅಭ್ಯಸಿಸುವ ಸಮಸ್ಯೆಗಳು

ತತ್ತ್ವಶಾಸ್ತ್ರ ಅಭ್ಯಸಿಸುವ ಸಮಸ್ಯೆಗಳನ್ನು ಅದರ ಕ್ರಮಬದ್ಧವಾದ ಅಧ್ಯಯನಕ್ಕಾಗಿ ಐದು ವಿಭಾಗಗಳಾಗಿ ವರ್ಗೀಕರಿಸಿದ್ದಾರೆ. ಅವು ಅಧ್ಯಾತ್ಮಶಾಸ್ತ್ರ (Mataphysics), ಜ್ಞಾನಮೀಮಾಂಸೆ (Epistomology) ಮೌಲ್ಯಮೀಮಾಂಸೆ (Axiology), ತರ್ಕಶಾಸ್ತ್ರ (Logic) ಹಾಗೂ ಸೌಂದರ್ಯಮೀಮಾಂಸೆ (Aesthetics); ಅಧ್ಯಾತ್ಮಶಾಸ್ತ್ರದ ವಸ್ತು ಜಗತ್ತಿನ ಸತ್ಯಾಸತ್ಯತೆಯ ಸಮಸ್ಯೆ; ಕಾಲ, ಅವಕಾಶ ಹಾಗೂ ಬ್ರಹ್ಮಾಂಡಗಳ ಸ್ವಭಾವದ ಸಮಸ್ಯೆ; ಕಾರ್ಯಕಾರಣ ಸಂಬಂಧ, ಮನಸ್ಸಿನ ಸ್ವರೂಪ ಇತ್ಯಾದಿ ಅಭ್ಯಾಸ. ಜ್ಞಾನಮೀಮಾಂಸೆಯಲ್ಲಿ ಜ್ಞಾನದ ಸ್ವರೂಪ, ನಿಜವಾದ ಜ್ಞಾನ, ಅದನ್ನು ಅರಿಯುವ ವಿಧಾನ ಇತ್ಯಾದಿಗಳ ಚರ್ಚೆ ಮಾಡುತ್ತೇವೆ. ಮೌಲ್ಯಮೀಮಾಂಸೆಯಲ್ಲಿ ಮೌಲ್ಯಗಳು, ಅವುಗಳ ವಿಧಗಳು, ಅವುಗಳನ್ನು ಪಡೆಯುವ ವಿಧಾನ ಇತ್ಯಾದಿಗಳ ಚರ್ಚೆ ಮಾಡುತ್ತೇವೆ. ತರ್ಕಶಾಸ್ತ್ರದಲ್ಲಿ ವಿಚಾರದ ಸ್ವಭಾವ, ವಿಚಾರದ ವಿಧಾನಗಳು (ಉದಾ: ಬೇಕನ್ ಹೇಳಿರುವ ಅನುಗಮನ ಪದ್ಧತಿ, ಅರಿಸ್ಟಾಟಲ್ ಹೇಳಿರುವ ನಿಗಮನ ಪದ್ಧತಿ, ಇತ್ತೀಚೆಗೆ ಪಿಯಾಜೆ ಹೇಳಿರುವ ಅಂತರಾನುಮಿತಿ ಪದ್ಧತಿ (Transduction), ಅನುಭವಗಳ ವಿಶ್ಲೇಷಣ ರೀತಿ ಇತ್ಯಾದಿಗಳ ಬಗ್ಗೆ ಚಿಂತಿಸುತ್ತೇವೆ. ಸೌಂದರ್ಯಮೀಮಾಂಸೆಯಲ್ಲಿ ಸೌಂದರ್ಯ ಜ್ಞಾನದ ಸಿದ್ಧಾಂತ, ಸತ್ಯಕ್ಕೂ ಸೌಂದರ್ಯಕ್ಕೂ ಇರುವ ಸಂಬಂಧ ಇತ್ಯಾದಿಗಳ ವಿವರಣೆ ಇರುತ್ತದೆ.

---

[21] Russell: Why I Am Not a Christian? *Collected Essays*, Schweitzer: *Civilisation and Ethics*

ನಮಗೊಂದು ದರ್ಶನ ಬೇಕು. ದಿಕ್ಕುದೆಸೆಯೊಂದು ಬೇಕು, ಭರವಸೆ ಬೇಕು. ಇಲ್ಲವಾದರೆ ನಮ್ಮ ಇಂದಿನ ಅನಿಶ್ಚಿತ ಸ್ಥಿತಿ ನಮ್ಮನ್ನೂ ಶೂನ್ಯದ ಕಡೆಗೆ ಒಯ್ಯದಿರುವುದಿಲ್ಲ. ನಮ್ಮ ಮನಸ್ಸುಗಳು ಕಲಕಿ ಹೋಗಿವೆ, ಹೊಸ ಬೆಳಕನ್ನು ಎದಿರು ನೋಡುತ್ತಿದ್ದೇವೆ. ನಾವು ಹೊಸ ಜೀವನದ ಹೊಸ್ತಿಲಿನ ಮೇಲೆ ನಿಂತಿದ್ದೇವೆಂದು ಇವು ಸೂಚಿಸುತ್ತವೆ. ನಾವೊಂದು ಧಾರ್ಮಿಕ ಸಂದೇಶವನ್ನು ಹುಡುಕುತ್ತಿದ್ದೇವೆ. ಯಾವ ಸಂದೇಶ ವೈಶಿಷ್ಟ್ಯವಾವದ್ದೋ ಸರ್ವತ್ರ ಸಮಂಜಸವೋ, ತೃಪ್ತಿಕರವೋ, ಪ್ರಮಾಣ ಪೂರ್ವಕವೋ, ಸತ್ಯದ ನವ್ಯ ಪ್ರಜ್ಞೆಯೊಂದನ್ನು ನೀಡುವುದೋ, ಜಾಗ್ರತವಾದ ಸಾಮಾಜಿಕ ಹಿತದ ಅರಿವನ್ನು ಉಂಟುಮಾಡುವುದೋ ಅಂತಹ ಸಂದೇಶ ನಮಗೆ ಬೇಕು. ಅವು ಇಂದಿನ ಧಾರ್ಮಿಕ ಪರಿಸ್ಥಿತಿಯ ಪ್ರಧಾನ ಲಕ್ಷಣಗಳು. ನಂಬುವುದು ಕಷ್ಟವಾಗಬಹುದು; ಆದರೆ ನಂಬಿಕೆಯ ಆವಶ್ಯಕತೆ ಯಂತೂ ಅನಿವಾರ್ಯ. ಪೇಚಾಡುತ್ತಿರುವ ಹಾಗೂ ಉತ್ಕಾಂಕ್ಷೆಯಿಂದ ಕೂಡಿರುವ ಮಾನವ ಕುಲಕ್ಕೆ ಯುಕ್ತಿಯುಕ್ತವಾದ ಧರ್ಮ ಒಂದನ್ನು ನೀಡಬೇಕು. ಇದು ವಿಚಾರಕ್ಕೆಡೆಕೊಡದ, ಮಾನವನ ಇಚ್ಛಾ ಸ್ವಾತಂತ್ರ್ಯವನ್ನು ಅಲ್ಲಗಳೆಯುವ ನಂಬಿಕೆ ಆಗಬಾರದು. ಬರಿ ಅನಿಶ್ಚಿತ ನಕಾರಾತ್ಮಕವಾಗಬಾರದು. ಇದೊಂದು ನವೀನ ದಿವ್ಯದರ್ಶನವಾಗಿರಬೇಕು. ಇಂದು ಇದರ ಹೆಸರಿನಲ್ಲಿ ಜೀವನದ ಮೌಲ್ಯವನ್ನು ಬಯಸುತ್ತಿರುವ ಮನಸ್ಸಿನ ಮೇಲೆ ಆಧಿಪತ್ಯ ಸ್ಥಾಪಿಸಲು ಹೋರಾಟ ನಡೆಸುತ್ತಿರುವ ವಿಚಿತ್ರ ಪಂಥ ಗಳನು ಎದುರಿಸಬೇಕು, ಅವುಗಳೊಡನೆ ಹೋರಾಡಬೇಕು.[1]

—ಡಾ. ಎಸ್. ರಾಧಾಕೃಷ್ಣನ್

1 'ಮತಧರ್ಮದ ಪುನರುಜ್ಜೀವನ'; ಅನು: ಎಂ. ಯಾಮುನಾಚಾರ್ಯ; ಚೇತನ ಪುಸ್ತಕಾಲಯ, ಮೈಸೂರು (1959); ಪು. 38.

ಎಸ್. ವಿ. ಸ್ವರ್ಣಲತಾ

# ಹೊಯ್ಸಳರ ಕಾಲದ ಕೆಲವು ಖ್ಯಾತ ರೂವಾರಿಗಳು

ಬಾದಾಮಿಯ ಚಾಳುಕ್ಯರು ಉತ್ತರ ಭಾರತದ ನಾಗರ ಶೈಲಿಯನ್ನೂ ದಕ್ಷಿಣ ಭಾರತದ ದ್ರಾವಿಡ ಶೈಲಿಯನ್ನೂ ಸಮ್ಮಿಳನ ಮಾಡಿಕೊಂಡು ತಮ್ಮದೇ ಆದ ಶಿಲ್ಪವನ್ನು ರೂಢಿಸಿಕೊಂಡರು. ವೇಸರ ಶೈಲಿಯೆಂದು ಹೆಸರಾದ ಅವರ ವಾಸ್ತುಶೈಲಿಯಲ್ಲಿ ಬೌದ್ಧಚೈತ್ಯಗಳ ಕುದುರೆಲಾಳಾಕೃತಿ, ಎರಡು ಕಡೆಯೂ ಬಾಗುಳ್ಳ ಹಾಗೂ ಸಮತಳ ಅಂತಸ್ತುಗಳುಳ್ಳ ಶಿಖರ ಇವು ಮುಖ್ಯ ಲಕ್ಷಣಗಳಾಗಿ ಕಂಡುಬರುತ್ತವೆ. ಎಂಟನೆಯ ಶತಮಾನದ ವರೆಗೂ ಬೆಳೆದು ಬಂದ ಈ ಸಮ್ಮಿಳಿತ ವಾಸ್ತುಶೈಲಿ ರಾಷ್ಟ್ರಕೂಟರ ಕಾಲದಲ್ಲಿ ಮುಂದುವರಿದು, ಕಲ್ಯಾಣ ಚಾಳುಕ್ಯರ ಕಾಲದಲ್ಲಿ ನೂತನ ವೈಶಿಷ್ಟ್ಯಗಳನ್ನು ತಾಳಿ ಮುಂದಿನ ಕರ್ನಾಟಕದ ಶಿಲ್ಪಕಲಾ ವೈಭವಕ್ಕೆ ನಾಂದಿಯಾಯಿತು. ಅದು ಉತ್ತರ ಕರ್ನಾಟಕದಲ್ಲಿ ಮೊದಲು ಪ್ರಚಾರಕ್ಕೆ ಬಂದು ಹನ್ನೊಂದನೆಯ ಶತಮಾನದಲ್ಲಿ ಶಿವಮೊಗ್ಗ ಜಿಲ್ಲೆಗೂ ಪಸರಿಸಿತು. ಶಿಕಾರಿಪುರದ ಬಳಿಯ ಬಳ್ಳಿಗಾಮೆಯ ದೇವಾಲಯಗಳು ಆ ಶೈಲಿಯಲ್ಲಿ ರೂಪುಗೊಂಡಿವೆ. ಅಲ್ಲಿಯ ಐದು ದೇವಾಲಯಗಳಲ್ಲಿ ಮೂರ್ತಿಶಿಲ್ಪದ ಹಲವು ರಮ್ಯಕೃತಿಗಳಿವೆ. ಅಲ್ಲಿ ಕೆತ್ತಿರುವ ತ್ರಿಪುರ ಸಂಹಾರ, ನಾಗಕನ್ನೆಯರು, ನರ್ತಕಿಯರು, ಪಂಚತಂತ್ರದ ಕಥಾಚಿತ್ರಗಳು–ಇವೆಲ್ಲ ಮನಮೋಹಕವಾಗಿದ್ದು ಹೊಯ್ಸಳರ ಮೂರ್ತಿಶಿಲ್ಪಕ್ಕೆ ತಳಹದಿಯಾದುವು. ಆ ಕಾಲದಲ್ಲಿ ಹೊಯ್ಸಳ ಅರಸರು ಚಾಳುಕ್ಯರಿಗೆ ಅಧೀನರಾಗಿದ್ದುದರಿಂದ ಅವರೂ ಆ ಶೈಲಿಯಲ್ಲೇ ಕಟ್ಟಡಗಳನ್ನು ನಿರ್ಮಿಸುತ್ತಿದ್ದರು. ಅವರ ಮಹೋನ್ನತ ಶಿಲ್ಪ ವೈಭವವನ್ನು ಮೆರೆಸುತ್ತಿರುವ ಅವರ ಕೆಲವು ದೇವಾಲಯಗಳ ಅಲಂಕರಣದ ಮೂರ್ತಿಗಳ ನಿರ್ಮಾಣದಲ್ಲಿ ಬಳ್ಳಿಗಾಮೆಯ ಖ್ಯಾತ ಶಿಲ್ಪಿಗಳು ಭಾಗವಹಿಸಿದ್ದರೆಂಬ ಸಂಗತಿ ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. ಈ ದೃಷ್ಟಿಯಲ್ಲಿ ಹೊಯ್ಸಳ ವಾಸ್ತುಶಿಲ್ಪ ಚಾಳುಕ್ಯ ವಾಸ್ತುಶಿಲ್ಪವನ್ನು ಉತ್ಕರ್ಷಿಸಿ ಮುಂದುವರಿಸಿಕೊಂಡು ಬಂತು.

ಹೊಯ್ಸಳರ ವಾಸ್ತುಶೈಲಿ ಉತ್ತರದ ನಾಗರ ಶೈಲಿಯನ್ನು ಮೈಗೂಡಿಸಿಕೊಂಡ ದ್ರಾವಿಡ ಶೈಲಿಯಾದರೂ ದ್ರಾವಿಡ ಶೈಲಿಯ ಇತರ ಪ್ರಕಾರಗಳಿಗಿಂತ ವೈಶಿಷ್ಟ್ಯಪೂರ್ಣವೆನಿಸಿದೆ. ಚೋಳ ದೇವಾಲಯಗಳು ದೂರಕ್ಕೆ ವೈಭವದಿಂದ ಕಂಗೊಳಿಸುವಷ್ಟು ಎತ್ತರವಾಗಿವೆ. ಹೊಯ್ಸಳದೇವಾಲಯಗಳು ಅಷ್ಟು ಎತ್ತರವಾಗಿಲ್ಲವಾದುದರಿಂದ ದೂರಕ್ಕೆ ಅವುಗಳ ವೈಭವ ಎದ್ದು ಕಾಣುವುದಿಲ್ಲ. ಆದರೆ ಸೂಕ್ಷ್ಮವೂ ರಮಣೀಯವೂ ಆದ ಅವುಗಳ ಕೆತ್ತನೆಯ ಕುಸುರಿ ಕೆಲಸದ ಅಲಂಕರಣ ಹತ್ತಿರದಿಂದ ನೋಡಿದಾಗ ಅದ್ಭುತ ಕಲಾಕೌಶಲದ ಸೊಬಗನ್ನು ಪ್ರದರ್ಶಿಸುತ್ತದೆ. ಕಟ್ಟಡದ ಶೈಲಿಯೊಡನೆ ವಿಗ್ರಹಾದಿ ಕೆತ್ತನೆಗಳನ್ನು, ಎಂದರೆ, ವಾಸ್ತುಶಿಲ್ಪವನ್ನು ಮೂರ್ತಿ ಶಿಲ್ಪದೊಡನೆ ಸೇರಿಸಿಕೊಂಡು ಅವುಗಳ ಸಾಮರಸ್ಯದ ರಮಣೀಯತೆಯನ್ನು ಸಾಧಿಸಿರುವುದು ದಕ್ಷಿಣ ಭಾರತದ ಇತರ ಪ್ರಕಾರಗಳಲ್ಲಿ ಅಷ್ಟಾಗಿ ಕಾಣದಿರುವ, ಆದರೆ ಹೊಯ್ಸಳ ದೇವಾಲಯಗಳಲ್ಲಿ ಮಾತ್ರ ಕಂಡುಬರುವ ಇನ್ನೊಂದು ವೈಶಿಷ್ಟ್ಯ. ನಕ್ಷತ್ರಾಕೃತಿಯ ಆರೇಳಡಿ ಎತ್ತರವಾದ ಜಗಲಿಯ ಮೇಲೆ ದೇಗುಲದ ಕಟ್ಟಡದ ನಿರ್ಮಾಣವಾಗಿರುವುದರಿಂದ ಹತ್ತಿರದಿಂದ ಎದ್ದು ಕಾಣುವ ಅವಕಾಶ ಕಲ್ಪಿಸಿದೆ; ಕಟ್ಟಡದ ಹೊರ ಮೈಕಟ್ಟನ್ನು ಅಲಂಕರಣದ ಅಲೆಅಲೆಯಾಗಿ ಬಿಡಿಸಿ, ಏರುತಗ್ಗುಗಳನ್ನು ರಚಿಸಿರುವುದರಿಂದ ನೆರಳು ಬೆಳಕುಗಳ

ಕಾಂತಿಭೇದದ ಹಿನ್ನೆಲೆಯಲ್ಲಿ ಕೆತ್ತನೆಯ ಅಲಂಕರಣದ ಪೂರ್ಣ ರಮಣೀಯತೆ ಗೋಚರವಾಗುತ್ತದೆ. ವಿಗ್ರಹಶಿಲ್ಪ, ಪ್ರಾಣಿಶಿಲ್ಪ, ಕಥಾಶಿಲ್ಪ, ಬಳ್ಳಿಶಿಲ್ಪ–ಇವನ್ನು ದೇವಾಲಯದ ಹೊರ ಅಲಂಕರಣಾಂಶಗಳನ್ನಾಗಿ ಬಳಸಿಕೊಂಡಿದೆ. ಗರ್ಭಗುಡಿಯ ಎದುರು ನವರಂಗದ ಕಂಬಗಳ ಅಲಂಕರಣ ಹೊಯ್ಸಳ ಶಿಲ್ಪದ ನೂತನ ಕಾಣಿಕೆ. ಹಾಗೂ ಅವರ ವೈಭವದ ಅಲಂಕರಣ ಆ ದೇವಾಲಯಗಳ ಕೀರ್ತಿಗೆ ಒಂದು ಮುಖ್ಯ ಕಾರಣ. ಕನ್ನಡಿಯಂತೆ ಹೊಳೆಯುವ ದ್ಯುಕಾಂತಿಯ ವರ್ತುಳಾಕಾರದ ಅಥವಾ ಗಂಟೆಯಾಕಾರದ ಶಿಲಾಸ್ತಂಭಗಳೂ ಒಂದೊಂದು ಕಂಬದಲ್ಲೂ ಕೆತ್ತಿರುವ ದಿವ್ಯಭವ್ಯ ಅಲಂಕಾರಗಳೂ ಚಾಚುಪೀಠಗಳ ಮೇಲೆ ರಾರಾಜಿಸುತ್ತಿರುವ ದೇವದೇವಿಯರ ರಮಣೀಯ ಮೂರ್ತಿಗಳೂ ಶಿಲ್ಪ ಕಲಾಪ್ರೌಢಿಮೆಯ ಔನ್ನತ್ಯದ ಪ್ರತೀಕವಾದ ಭುವನೇಶ್ವರಿಯೂ ಭಗವಂತನಾಲಯವೆನಿಸಿರುವ ದೇವಾಲಯದ ಒಟ್ಟಾರೆ ಸೊಬಗನ್ನು ಉಜ್ವಲಗೊಳಿಸಿವೆ.

ಹೊಯ್ಸಳರ ಕಾಲದಲ್ಲಿ ನೂರೈವತ್ತಕ್ಕೂ ಹೆಚ್ಚು ದೇವಾಲಯಗಳು ಬಳಪದಕಲ್ಲಿನಲ್ಲಿ ನಿರ್ಮಾಣವಾದುವು. ಅವು ಹೊಯ್ಸಳರ ಹೆಸರನ್ನು ಇತಿಹಾಸದಲ್ಲೂ ವಾಸ್ತುಶಿಲ್ಪ ರಚನೆಯಲ್ಲೂ ಸ್ಥಿರವಾಗಿ ನಿಲ್ಲಿಸಿವೆ. ಅವುಗಳಲ್ಲಿ ಹೊಯ್ಸಳರ ರಾಜಧಾನಿಗಳಾಗಿ ಮೆರೆದ ಬೇಲೂರು, ಹಳೇಬೀಡುಗಳ ಮತ್ತು ಸೋಮನಾಥಪುರದ ದೇವಾಲಯಗಳು ಆಕೃತಿ ಶಿಲ್ಪದ ಜಗತ್ತಿನ ರಮ್ಯವೂ ಭವ್ಯವೂ ಆದ ಕಲಾನಿಲಯಗಳೆಂದು ಖ್ಯಾತಿಗಳಿಸಿವೆ. ಚೋಳರ ಮೇಲಿನ ತನ್ನ ವಿಜಯದ ಕುರುಹಾಗಿ ಹೊಯ್ಸಳರಾಜ, ವಿಷ್ಣುವರ್ಧನ 1117ರಲ್ಲಿ ಬೇಲೂರಿನ ವಿಜಯನಾರಾಯಣ (ಕೇಶವ) ದೇವಾಲಯವನ್ನೂ ತಲಕಾಡಿನ ಕೀರ್ತಿನಾರಾಯಣ ದೇವಾಲಯವನ್ನೂ ಕಟ್ಟಿಸಿದ. ನಾಲ್ಕುವರ್ಷಗಳ ಅನಂತರ ಅವನ ಅಧಿಕಾರಿ ಕೇತಮಲ್ಲ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯವನ್ನು ಎರಡು ಕೋಣೆಗಳ ಮಂದಿರವಾಗಿ ಕಟ್ಟಿಸಿದ. ಇಪ್ಪತ್ತು ವರ್ಷಗಳ ಅನಂತರ ಒಂದನೆಯ ನರಸಿಂಹನ ಪಟ್ಟದ ಶಿಲ್ಪಿ ಕೇದಾರೋಜ ಅದಕ್ಕೆ ನಾಲ್ಕು ದ್ವಾರ ಮಂಟಪಗಳನ್ನೂ ಅವುಗಳ ಜಾಲಂಧ್ರಗಳನ್ನೂ ಸೇರಿಸಿದ. 1268ರಲ್ಲಿ ಮುಮ್ಮಡಿ ನರಸಿಂಹನ ಅಧಿಕಾರಿ ಸೋಮ ಸೋಮನಾಥಪುರದ ಕೇಶವ ದೇವಸ್ಥಾನವನ್ನು ಕಟ್ಟಿಸಿದ. ದೇಶದ ಇತರೆಡೆಗಳಲ್ಲೂ ದೇವಾಲಯಗಳು ನಿರ್ಮಾಣವಾದುವು. ಚಿನ್ನ ಬೆಳ್ಳಿಗಳ ಕುಸುರಿ ಕೆಲಸಕ್ಕೆ ಹೋಲಿಸಬಹುದಾದ ಅವುಗಳ ಸೂಕ್ಷ್ಮ ಕೆತ್ತನೆ, ಜೀವಕಳೆಯನ್ನು ತುಂಬಿಕೊಂಡು ರಾರಾಜಿಸುವಂತೆ ಕಡೆದಿರುವ ಶಿಲಾಬಾಲಿಕೆಯರು, ದೇವದೇವಿಯರು, ಪ್ರಾಣಿಪಕ್ಷಿಗಳು, ನರ್ತಕಿಯರು, ಅಲಂಕರಣದ ಪೀಠಿಕೆಯ ಪಟ್ಟಿಗಳಲ್ಲಿ ಕಡೆದಿರುವ ಆನೆ ಕುದುರೆಗಳು, ಪೌರಾಣಿಕ ಕಥಾಚಿತ್ರಗಳು–ಇವೆಲ್ಲ ಆ ಕಾಲದ ಕನ್ನಡ ಶಿಲ್ಪಕಲೆಯ ವೈಭವವನ್ನು ಮೆರೆಸುತ್ತವೆ. ಹೊಯ್ಸಳೇಶ್ವರನ ರಾಣಿ, ನಾಟ್ಯಕಲಾವಿದೆ ಶಾಂತಲೆಯ ವೈಭವದ ನಾಟ್ಯದಿಂದ ಆರಿಸಿದವೋ ಎನ್ನುವಂಥ ಭವ್ಯ ಭಂಗಿಗಳಲ್ಲಿ ಕೆತ್ತಿರುವ ಶಿಲಾಬಾಲಿಕೆಯರು ಮಾನವನ ಕರಕೌಶಲದ ಪರಮೋನ್ನತ ಮಟ್ಟಕ್ಕೆ ನಿದರ್ಶನವೆನಿಸುವಂತಿವೆ. ದೇವಾಲಯದ ಹೊರಗೋಡೆಗಳ ಚಾಚು ಪೀಠಗಳನ್ನಲಂಕರಿಸಿರುವ ದೇವ ದೇವಿಯರ, ಅಪ್ಸರೆಯರ ಮೂರ್ತಿಗಳು ಸ್ವರ್ಗೀಯ ವೈಭವದಿಂದ ಕಂಗೊಳಿಸುತ್ತಿವೆ. ಹೀಗೆ ಆ ದೇವಾಲಯಗಳು ಬರೀ ವಾಸ್ತುಶಿಲ್ಪವಾಗಿರದೆ ಕಲಾನಿಲಯಗಳಾಗಿ ರಾರಾಜಿಸುತ್ತಿವೆ. ಅಲ್ಲದೆ ಆ ಕಾಲದ ಸುಸಂಸ್ಕೃತ ಜನತೆಯ ವೈಭವ ವಿಲಾಸಗಳನ್ನೂ ರಸದೃಷ್ಟಿ ರುಚಿಶುದ್ಧಿಗಳನ್ನೂ ಪ್ರತಿಬಿಂಬಿಸುವಂಥ ಭವ್ಯ ಕಲ್ಪನೆಗಳನ್ನೂ ಅವನ್ನು ಕೃತಿಗಿಳಿಸಿದ ಅಂದಿನ ರೂವಾರಿಗಳ ಸುಪ್ರೌಢ ಹಸ್ತಕೌಶಲವನ್ನೂ ನೋಡಿ ನಾವು ಬೆರಗಾಗುತ್ತೇವೆ. ತಮ್ಮ ಕೌಶಲವನ್ನು ಶಿಲೆಗಳಲ್ಲಿ ತುಂಬಿ ಕನ್ನಡ ವಾಸ್ತುಶಿಲ್ಪವನ್ನು ಉತ್ತುಂಗ ಶಿಖರಕ್ಕೇರಿಸಿ, ಜಗದ್ವಂದ್ಯವೆನಿಸುವಂತೆ ಮಾಡಿದ ಆ ಶಿಲ್ಪಿವರ್ಯರ ಬಗ್ಗೆ ಸ್ವಾಭಾವಿಕವಾಗಿ ನಮ್ಮ ಕುತೂಹಲ ಕೆರಳುತ್ತದೆ.

ಕವಿಗಳು ತಮ್ಮ ಕೃತಿಗಳಲ್ಲಿ ತಮ್ಮ ಹೆಸರು ಕುಲಗೋತ್ರಾದಿಗಳನ್ನು ಸೂಚಿಸುವಂತೆ ಚಿತ್ರಕಾರರೂ ಶಿಲ್ಪಿಗಳೂ ತಮ್ಮ ಹೆಸರುಗಳನ್ನು ಸೂಚಿಸಿರುವುದು ಅಷ್ಟಾಗಿ ಕಂಡುಬರುವುದಿಲ್ಲ. ಆದರೆ ಹೊಯ್ಸಳರ ಕಾಲದ ಹಲವು ಪ್ರಖ್ಯಾತ ಶಿಲ್ಪಿಗಳು ತಾವು ಕಡೆದ ಶಿಲ್ಪಕೃತಿಗಳ ತಳದಲ್ಲಿ ತಮ್ಮ ಹೆಸರನ್ನು ಪೂರ್ಣವಾಗಿಯೊ, ಸಂಕ್ಷಿಪ್ತವಾಗಿಯೊ ಸೂಚಿಸಿರುವರು. ಆದ್ದರಿಂದ ಅವರ ಕಲಾಕೃತಿಗಳನ್ನು ನೋಡಿ

ಆನಂದಿಸುವ ಇಂದಿನವರಾದ ನಾವು ಆ ಕಲಾವಿದರ ಹೆಸರನ್ನು ತಿಳಿದು ಅವರ ಸೇವೆಯನ್ನು ಸ್ಮರಿಸಿ ಕೊಳ್ಳಬಹುದಾಗಿದೆ.

ಕರ್ನಾಟಕವನ್ನು 'ಜಕಣನ ಶಿಲ್ಪದ ಶೋಭಾವರಣ' ಎಂದು ವರ್ಣಿಸಿದ ಕವಿ ಬೇಲೂರು ಹಳೇಬೀಡು ದೇವಾಲಯಗಳನ್ನು ನಿರ್ಮಿಸಿದ ಶಿಲ್ಪಿ ಜಕಣಾಚಾರಿಯೆಂಬ ಜನಜನಿತ ಕಥೆಯ ಆಧಾರದ ಮೇಲೆ ಬರೆದದ್ದು. ಆದರೆ ಆ ದೇವಾಲಯಗಳಲ್ಲಾಗಲಿ ಆ ಕಾಲದ ಇತರ ಪ್ರಖ್ಯಾತ ದೇವಾಲಯಗಳಲ್ಲಾಗಲಿ ಅವನ ಹೆಸರು ಕಂಡುಬರುವುದಿಲ್ಲ. ಆಮೇಲೆ ಒಂದೂವರೆ ಶತಮಾನದ ಅನಂತರ ನಿರ್ಮಾಣವಾದ ತುರುವೇಕೆರೆಯ ಮೂಲೆ ಶಂಕರೇಶ್ವರ ದೇವಾಲಯದಲ್ಲಿ ಮಾತ್ರ ಜಕಣ್ಣನೆಂಬ ಶಿಲ್ಪಿಯ ಹೆಸರು ಕಂಡು ಬರುತ್ತದೆ. ಆದರೆ ಆ ದೇವಾಲಯದ ಶಿಲ್ಪಕಲೆ ಕರ್ನಾಟಕದ ಕೀರ್ತಿಯನ್ನು ಬೇಲೂರು ಹಳೇಬೀಡು ದೇವಾಲಯಗಳಷ್ಟು ವೈಭವೋಜ್ವಲವಾಗಿಸಿಲ್ಲ. ಇವೆಲ್ಲ ಕಾರಣಗಳಿಂದ ಜಕಣಾಚಾರಿ ಮತ್ತು ಅವನ ಮಗ ಡಂಕಣಾಚಾರಿಯರಿಗೆ ಸಂಬಂಧಿಸಿದ ಪ್ರಸಂಗ ಕೇವಲ ದಂತಕಥೆಯೆ ಹೊರತು ಅವರು ಐತಿಹಾಸಿಕ ವ್ಯಕ್ತಿಗಳಲ್ಲವೆನ್ನುವುದುಂಟು. ಅವರೇನಾದರೂ ಈ ಸಾಧಾರಣ ನಾಡಾಡಿ ಹೆಸರುಗಳಿಗೆ ಬದಲು ಹೆಚ್ಚು ಗಂಭೀರವೆನ್ನುವಂಥ ನಾಮಗಳನ್ನು ಬಳಸುತ್ತಿದ್ದರೆ? ಜನಗಳು ಮಾತ್ರ ಅವರನ್ನು ಅವರ ಹುಟ್ಟು ಹೆಸರುಗಳಿಂದಲೇ ಕರೆಯುತ್ತಿದ್ದರೆ? ಈ ಆಧಾರವಚನ ನಿಜವೆನಿಸುವುದಾದರೆ, ಹಾಗೆ ಬೇಲೂರು ಹಳೇಬೀಡುಗಳ ದೇವಾಲಯಗಳಲ್ಲಿ ತಂದೆ ಮಕ್ಕಳೀರ್ವರೂ ಕೆಲಸ ಮಾಡಿದ್ದರೆ, ಅವರು ದಾಸೋಜ, ಚಾವಣರೇ ಇರಬಹುದೆ? ಅಥವಾ ಇತರ ರೂವಾರಿಗಳಿರಬಹುದೆ? ಅವರು ತಮ್ಮ ಹುಟ್ಟು ಹೆಸರುಗಳನ್ನು ಗುರುತಿಸದೆ ತಮ್ಮ ಕೃತಿಯಲ್ಲಿ ಈ ಹೆಸರುಗಳನ್ನು ಗುರುತಿಸಿರುವರೆ? ಅವರ ಶಿಲ್ಪಕಲೆಯ ವೈಭವವನ್ನು ಅರಿತು ಪೂಜ್ಯಭಾವದಿಂದ ಮುಂದಿನ ಪೀಳಿಗೆಯ ಶಿಲ್ಪಿ ಮನೆತನಗಳು ತಮ್ಮ ಮಕ್ಕಳಿಗೆ ಅವರ ಹೆಸರನ್ನಿಡುವುದು ವಾಡಿಕೆಗೆ ಬಂತೆ?–ಇವು ವಿಚಾರಾರ್ಹವೆನಿಸುವ ಅಂಶಗಳು.

ಹೊಯ್ಸಳರ ಕಾಲದಲ್ಲಿ ನಿರ್ಮಿತವಾದ ಒಂದೊಂದು ದೇವಾಲಯದಲ್ಲೂ ಅನೇಕ ಪ್ರಖ್ಯಾತ ಶಿಲ್ಪಿಗಳು ಪಾತ್ರವಹಿಸಿದ್ದರು. ಅವರಲ್ಲಿ ಕೆಲವರು ತಾವು ಕೆತ್ತಿದ ಕೃತಿಗಳಲ್ಲಿ ತಮ್ಮ ಹೆಸರನ್ನು ಸೂಚಿಸಿರುವರು. ಆ ಕಾಲದಲ್ಲಿ ಕರ್ನಾಟಕದಲ್ಲಿ ನಿರ್ಮಾಣವಾದ ಹಲವು ಪ್ರಮುಖ ದೇವಾಲಯಗಳಲ್ಲಿ ಕಂಡುಬರುವ ಶಿಲ್ಪಿಗಳ ಹೆಸರುಗಳ ಆಧಾರದ ಮೇಲೆ ಅವರ ಬಗ್ಗೆ ತಿಳಿದುಬಂದಿರುವ ಅಂಶಗಳನ್ನೂ ಅವರು ರಚಿಸಿದ ಕಲಾಕೃತಿಗಳ ಸೊಬಗನ್ನೂ ಮುಂದೆ ವಿವರಿಸಲು ಯತ್ನಿಸಿದೆ.

**ಮಣಿಯೋಜ:** 1114ರಲ್ಲಿ ನಿರ್ಮಾಣವಾದ ದೊಡ್ಡಗದ್ದವಳ್ಳಿಯ ಲಕ್ಷ್ಮೀದೇವಿಯ ದೇವಾಲಯ ಹೊಯ್ಸಳ ವಾಸ್ತುಶೈಲಿಯ ಆದರ್ಶಮಾದರಿಯೆನ್ನಬಹುದು. ಆದರೆ ಅವರ ಮತ್ತಾವ ದೇವಾಲಯಗಳಲ್ಲೂ ಕಾಣದಿರುವ ನಾಲ್ಕು ಕೋಣೆಗಳ ವಾಸ್ತುರಚನೆ ಇತರ ದೇವಾಲಯಗಳಿಗಿಂತ ಭಿನ್ನವೆನಿಸಿದೆ. ಇದನ್ನು ಮಣಿಯೋಜನೆಂಬ ಶಿಲ್ಪಿ (ವಿಶ್ವಕರ್ಮ) ಕಟ್ಟಿದನೆಂದು ಶಾಸನವೊಂದರಿಂದ ತಿಳಿಯುತ್ತದೆ.

**ದಾಸೋಜ:** ಬೇಲೂರಿನ ವಿಜಯನಾರಾಯಣ (ಕೇಶವ) ದೇವಾಲಯವನ್ನು ನಿರ್ಮಿಸಲು ವಿಷ್ಣುವರ್ಧನ ಅದರ ಪ್ರಧಾನ ಶಿಲ್ಪಿಗಳನ್ನಾಗಿ ಇವನನ್ನೂ, ಇವನ ಮಗ ಚಾವಣನನ್ನೂ ನೇಮಿಸಿದ. ಇವರು ಚಾಲುಕ್ಯ ಶಿಲ್ಪಕಲೆಯ ನೆಲೆವೀಡೆನಿಸಿದ್ದ ಬಳ್ಳಿಗಾವೆ ಅಥವಾ ಬೆಳಗಾಮಿಯವರು. ದಾಸೋಜನ ಹೆಸರುಳ್ಳ ನಾಲ್ಕು ಭವ್ಯಕೃತಿಗಳು ಬೇಲೂರು ದೇವಾಲಯದಲ್ಲಿವೆ. ಅವುಗಳಲ್ಲಿ ಮೂರು ಕೃತಿಗಳು ದೇವಾಲಯದ ಹೊರಗೋಡೆಗಳ ಚಾಚು ಪೀಠಗಳನ್ನಲಂಕರಿಸಿವೆ. ಅವುಗಳಲ್ಲಿ ಒಂದು. ಗಿಳಿಗೆ ಲೋಲಕನ್ನು ಧರಿಸಿರುವ ಸ್ತ್ರೀಯೊಬ್ಬಳ ಭವ್ಯವೂ, ಗಂಭೀರವೂ ಆದ ರಮ್ಯ ಚಿತ್ರಣ; ಇನ್ನೊಂದು, ಸ್ನಾನಮಾಡಿ ತನ್ನ ನೀಳ ಕೇಶರಾಶಿಯಿಂದ ನೀರೂರಿಸುತ್ತಿರುವ ಸುರಸುಂದರ ನೀರೆಯೋರ್ವಳದು; ಮತ್ತೊಂದು, ಕೋತಿಯೊಂದು ಯುವತಿಯೊಬ್ಬಳ ಸೀರೆಯ ಸೆರಗನ್ನೆಳೆಯುತ್ತಿರುವಂತೆ ಕೆತ್ತಿರುವ ಕೃತಿ. ದೇವಾಲಯದ ಹೊರಗೋಡೆಗಳನ್ನಲಂಕರಿಸಿರುವ ಇವು ಮೂರು ಕೃತಿಗಳ ಜೊತೆಗೆ ದಾಸೋಜನ ಮತ್ತೊಂದು ಕೃತಿ ದೇವಾಲಯದ ನವರಂಗ ಮಂಟಪದ ಚಾಚು ಪೀಠವನ್ನಲಂಕರಿಸಿದೆ. ಅದೂ ಹಿಂದ ನೀರೆಯೋರ್ವಳು ತನ್ನ ನೀಳ ಕೇಶರಾಶಿಯಿಂದ ನೀರೂರಿಸುತ್ತಿರುವಂತೆ ಕೆತ್ತಿರುವ ಚಿತ್ರ. ಈ ದೇವಾಲಯದ ಚಾಚು

ಪೀಠಗಳನ್ನು ಅಲಂಕರಿಸಿರುವ ಈ ನಾಲ್ಕೂ ಶಿಲ್ಪಕಲೆಯ ರಮ್ಯತೆಗೆ ನಿದರ್ಶನವೆನಿಸುವ ಭವ್ಯಕೃತಿಗಳೆಂದು ಹೆಸರಾಗಿವೆ.

ದಾಸೋಜ ಕಿಕ್ಕೇರಿಯ ಕೇಶವ ದೇವಾಲಯದಲ್ಲೂ ಕೆಲಸ ಮಾಡಿದಂತೆ ಇತ್ತೀಚೆಗೆ ತಿಳಿದು ಬಂದಿದೆ. ನ್ಯೂಯಾರ್ಕ್ ನಗರದ ವಸ್ತುಸಂಗ್ರಹಾಲಯಕ್ಕೆ ಹೇಗೋ ಹೋಗಿ ಸೇರಿಕೊಂಡಿರುವ ಕೇಶವದೇವನ ವಿಗ್ರಹವೊಂದರ ಕೆಳಗೆ ಅವನ ಹೆಸರಿದೆ. ಆ ವಸ್ತುಸಂಗ್ರಹಾಲಯದ ಸೇರ್ಪಡೆಯ ನೋಂದಣಿಯಲ್ಲಿ ಆ ವಿಗ್ರಹ ಕಿಕ್ಕೇರಿ ದೇವಾಲಯಕ್ಕೆ ಸೇರಿದ್ದೆಂದು ಉಲ್ಲೇಖಿಸಿದೆ. ಇದು ನಿಜವಿದ್ದ ಪಕ್ಷದಲ್ಲಿ ನಾಲ್ಕಡಿ ಎತ್ತರದ, ಬಹು ರಮ್ಯವಾಗಿ ಕೆತ್ತಿರುವ ಆ ಶಿಲ್ಪಕೃತಿಯ ಕರ್ತೃವಾದ ದಾಸೋಜ ಕಿಕ್ಕೇರಿಯ ಕೇಶವ ದೇವಾಲಯದಲ್ಲೂ ಕೆಲಸ ಮಾಡಿರಬೇಕೆಂದು ವ್ಯಕ್ತಪಡುತ್ತದೆ.

ದಾಸೋಜನಿಗೆ 'ಬಿರುದ ರೂವಾರಿಗೊಂದಲ ಬಡಿವ' ಎಂಬ ಬಿರುದಿತ್ತು. 1121ರಲ್ಲಿ ಕಟ್ಟಿರುವ ಹಳೇಬೀಡು ಹೊಯ್ಸಳೇಶ್ವರ ದೇವಾಲಯದಲ್ಲೂ ಇವನು ಕೆಲಸಮಾಡಿದ.

**ಚಾವಣ :** ಇವನು ದಾಸೋಜನ ಮಗ. ವಿಷ್ಣುವರ್ಧನ ಬೇಲೂರು ದೇವಾಲಯದ ನಿರ್ಮಾಣಕ್ಕಾಗಿ ತಂದೆಯೊಡನೆ ಇವನನ್ನೂ ಬಳ್ಳಿಗಾಮೆಯಿಂದ ಕರೆಸಿಕೊಂಡ. ತಂದೆಯಂತೆ ಮಗನೂ ನಾಲ್ಕು ಬ್ರಾಕೆಟ್ ಕೃತಿಗಳನ್ನು ಕೆತ್ತಿದ. ಅವುಗಳಲ್ಲಿ ಎರಡು ಕೃತಿಗಳು ದೇವಾಲಯದ ಹೊರಗೋಡೆಯ ಚಾಚು ಪೀಠಗಳನ್ನಲಂಕರಿಸಿವೆ. ಇನ್ನೆರಡು ನವರಂಗದ ಗೋಡೆಯ ಒಳಗಡೆಯ ಚಾಚುಪೀಠಗಳನ್ನಲಂಕರಿಸಿವೆ. ಅವುಗಳಲ್ಲಿ ಪರೇಂಗಿತವರಿತು ಹೊಂದಿಕೊಳ್ಳುವ ನಯ ನಾಜೋಕಿನ, ವಿನಯಶೀಲೆ ಬೇಟೆಗಾತಿಯೊಬ್ಬಳ ಕೃತಿ ಭವ್ಯವಾಗಿದೆ. ನವರಂಗದ ಇನ್ನೊಂದು ಚಾಚು ಪೀಠದ ಮೇಲಿರುವ, ವೈಭವದ ನೃತ್ಯ ಭಂಗಿಯಲ್ಲಿ ಕಡೆದಿರುವ ನರ್ತಕಿಯೊಬ್ಬಳ ಕೃತಿಯೂ ಮನಮೋಹಕವಾಗಿದೆ. ತಂದೆಯ ಕಲಾಕೃತಿಗಳಂತೆ ಮಗನ ಈ ನಾಲ್ಕು ಕೃತಿಗಳೂ ಬೇಲೂರು ದೇವಾಲಯದ ಖ್ಯಾತಿಗೆ ಕಾರಣವೆನಿಸಿವೆ. ಇವನಿಗೆ 'ಮಚ್ಚರಿಪ ಬಿರುದ ರೂವಾರಿ ಮದನಮಹೇಶ' ಮತ್ತು 'ಮಚ್ಚರಿಪ ರೂವಾರಿ ಶರಭಭೇರುಂಡ' ಎಂಬ ಬಿರುದುಗಳಿದ್ದುವು.

**ಬೀರಣ :** ದಾಸೋಜ ಚಾವಣರೊಡನೆ ಬೇಲೂರು ದೇವಾಲಯದ ನಿರ್ಮಾಣದಲ್ಲಿ ಪಾತ್ರ ವಹಿಸಿದ್ದ ಮತ್ತೊಬ್ಬ ಶಿಲ್ಪಿ.

**ನಾಗೋಜ :** ಬೇಲೂರು ದೇವಾಲಯದ ಅಲಂಕರಣ ಶಿಲ್ಪಗಳನ್ನು ಕೆತ್ತಿರುವ ಮತ್ತೊಬ್ಬ ಶಿಲ್ಪಿ. ಇವನು ಗದುಗಿನಿಂದ ಬಂದವನು. ಇವನು ಚನ್ನಕೇಶವ ದೇವಾಲಯದ ಚಾಚು ಪೀಠವನ್ನಲಂಕರಿಸಿರುವ ನೃತ್ಯಗಾತಿಯ ಬ್ರಾಕೆಟ್ ಮೂರ್ತಿಯನ್ನು ಕಡೆದಿದ್ದಾನೆ. ಇದು ಭಾವಪೂರ್ಣವೂ ರಮ್ಯವೂ ಆದ ಕಲಾಕೃತಿಯೆಂದು ಹೆಸರಾಗಿದೆ. ಇವನಿಗೆ 'ರೂವಾರಿ ಜಗದ್ದಳ' ಎಂಬ ಬಿರುದಿತ್ತು.

**ಮಲ್ಲಿಯಣ್ಣ :** ಬೇಲೂರು ಚೆನ್ನಕೇಶವ ದೇವಾಲಯದ ಅಲಂಕರಣ ಶಿಲ್ಪಗಳ ನಿರ್ಮಾಣದಲ್ಲಿ ಭಾಗವಹಿಸಿದ್ದ ಇನ್ನೊಬ್ಬ ಶಿಲ್ಪಿ. ಇವನು ಕೆತ್ತಿರುವ ಕೊಳಲ ನೃತ್ಯದ ಶಿಲಾಬಾಲಿಕೆಯ ವಿಗ್ರಹ ಮನಮೋಹಕವೂ ಕಲಾಪೂರ್ಣವೂ ಆದ ಕೃತಿಯೆನಿಸಿದೆ. ಇವನಿಗೆ 'ಮಚ್ಚರಿಪ ರೂವಾರಿ ಗಿರಿವಜ್ರದಂಡ' ಎಂಬ ಬಿರುದಿತ್ತು.

**ಪಾದರಿ ಮಲ್ಲೋಜ :** ಇವನು ಕಡೆದ ಕೆಲವು ಶಿಲ್ಪಕೃತಿಗಳು ಬೇಲೂರು ಕೇಶವ ದೇವಾಲಯದ ಅಲಂಕರಣಕ್ಕೆ ಸೇರಿವೆ. ಮುಖ್ಯವಾಗಿ ಇವನು ನವರಂಗ ಮಂಟಪದ ರಚನೆಯಲ್ಲಿ ತೊಡಗಿದ್ದ. 'ಬಿರುದ ರೂವಾರಿ ಗಂಡಗತ್ರಿ' ಎಂಬುದು ಇವನ ಬಿರುದು.

**ಚಿಕ್ಕ ಹಂಪ :** ಬೇಲೂರು ಚೆನ್ನಕೇಶವ ದೇವಾಲಯದ ನವರಂಗ ಮಂಟಪದ ಆಲಂಕಾರಿಕ ಕೆತ್ತನೆಯಲ್ಲಿ ಪಾಲ್ಗೊಂಡ ಮತ್ತೊಬ್ಬ ಚತುರ ಶಿಲ್ಪಿ.

ಬೇಲೂರಿಗೆ ಅನತಿ ದೂರದಲ್ಲಿರುವ ಹಳೇಬೀಡು ಒಂದು ಕಾಲದಲ್ಲಿ ಹೊಯ್ಸಳರ ದೇವಾಲಯಗಳ ಪ್ರದರ್ಶನಾಲಯದಂತೆ ಇದ್ದಿರಬೇಕು! ಆದರೆ ಅವುಗಳಲ್ಲಿ ಅನೇಕ ಈಗ ನಾಶವಾಗಿವೆ. ಉಳಿದಿರುವ ಹೊಯ್ಸಳೇಶ್ವರ ದೇವಾಲಯದ ಮೂಲ ಕಟ್ಟಡ ವಿಷ್ಣುವರ್ಧನನ ಅಧಿಕಾರಿ ಕೇತಮಲ್ಲನ ಪ್ರೋತ್ಸಾಹ

ದಿಂದ 1121ರಲ್ಲಿ ರಚನೆಯಾಯಿತು. ಇಪ್ಪತ್ತು ವರ್ಷಗಳ ಅನಂತರ ಒಂದನೆಯ ನರಸಿಂಹನ ಪಟ್ಟದ ಶಿಲ್ಪಿ ಕೇದಾರೋಜ ಎರಡಂಕಣದ ಮೂಲಕಟ್ಟಡದ ಅಲಂಕರಣ ಕಾರ್ಯವನ್ನು ನಿರ್ವಹಿಸಿದ. ಆ ಕಾರ್ಯದಲ್ಲಿ ಅವನಿಗೆ ನೆರವಾದ ಶಿಲ್ಪಿಗಳ ಹೆಸರುಗಳು ಅವರು ಕೆತ್ತಿದ ಕೃತಿಗಳ ಕೆಳಗೆ ಕಂಡು ಬರುತ್ತವೆ. ದೇವಾಲಯದ ದಕ್ಷಿಣದ್ವಾರ ಮಂಟಪದ ಮೇಲಿನ ಶಾಸನವೊಂದು 'ಸ್ವಸ್ತಿ ಶ್ರೀಮತು ಪ್ರತಾಪ ಹೊಯ್ಸಳ ನಾರಸಿಂಹದೇವನ ರೂವಾರಿ ಕೇದಾರೋಜಂಗೆ ಮಲಪರ ಗಂಡಭೇರುಂಡ, ರೂವಾರಿ ಕಾಳಿದಾಸಿ ಗೆಯ್ದ ಮಕರ ತೋರಣ ಮಂಗಳ ಶ್ರೀ' ಎಂಬ ಅಂಶಗಳನ್ನು ಸೂಚಿಸುತ್ತದೆ. ಹೊಯ್ಸಳೇಶ್ವರ ದೇವಾಲಯದ ದ್ವಾರಮಂಟಪಾದಿ ಅಲಂಕರಣ ಕಾರ್ಯದಲ್ಲಿ ಭಾಗವಹಿಸಿದ್ದ ಪ್ರಧಾನ ಮತ್ತು ಸಹಾಯಕ ರೂವಾರಿಗಳನ್ನೂ ಅವರು ಕೆತ್ತಿದ ಶಿಲ್ಪಕೃತಿಗಳನ್ನೂ ಮುಂದೆ ವಿವರಿಸಿದೆ.

**ಕೇದಾರೋಜ**: ಒಂದನೆಯ ನರಸಿಂಹನ ಪಟ್ಟದ ಶಿಲ್ಪಿಯಾಗಿದ್ದ ಇವನು ಹೊಯ್ಸಳೇಶ್ವರ ದೇವಾಲಯದ ಪ್ರಧಾನ ಶಿಲ್ಪಿಯಾಗಿ ನೇಮಕವಾಗಿದ್ದ. ಇಪ್ಪತ್ತು ವರ್ಷಗಳ ಹಿಂದೆ ನಿರ್ಮಾಣ ವಾಗಿದ್ದ ಎರಡು ಕೋಣೆಗಳ ಮೂಲ ದೇವಾಲಯದ ಕಟ್ಟಡದ ಅಲಂಕರಣ ಕಾರ್ಯವನ್ನು ಇವನು ನಿರ್ವಹಿಸಿದ. ಸ್ವತಃ ಖ್ಯಾತ ಶಿಲ್ಪಿಯೆನಿಸಿದ್ದ ಇವನು ದೇವಾಲಯಕ್ಕೆ ನಾಲ್ಕು ದ್ವಾರ ಮಂಟಪಗಳನ್ನೂ ಅವುಗಳ ಜಾಲಂದ್ರಗಳನ್ನೂ ನಿರ್ಮಿಸಿದ. ಈ ಅಂಶಗಳನ್ನು ದೇವಾಲಯದ ದಕ್ಷಿಣದ ದ್ವಾರ ಮಂಟಪದ ಮೇಲೆ ಹಾಕಿರುವ ಶಾಸನದಿಂದ ತಿಳಿಯಬಹುದು.

**ಕಾಳಿದಾಸಿ** : ಕೇದಾರೋಜನ ನಿಕಟವರ್ತಿಯಾಗಿದ್ದು ಹೊಯ್ಸಳೇಶ್ವರ ದೇವಾಲಯದ ದ್ವಾರ ಮಂಟಪಗಳ ಅಲಂಕರಣ ಕಾರ್ಯದಲ್ಲಿ ಪಾತ್ರವಹಿಸಿದ ಆ ಕಾಲದ ಮತ್ತೊಬ್ಬ ಖ್ಯಾತ ಶಿಲ್ಪಿ.

**ಹಂಪ**: ಹೊಯ್ಸಳೇಶ್ವರ ದೇವಾಲಯದ ಅಲಂಕರಣ ಚಿತ್ರಣಗಳಲ್ಲಿ ಉತ್ಕೃಷ್ಟ ಕಲಾಕೃತಿ ಯೆನಿಸಿರುವ ನೃತ್ಯ ಸರಸ್ವತಿಯ ವಿಗ್ರಹವನ್ನು ಕೆತ್ತಿದ ಕುಶಲ ಶಿಲ್ಪಿ.

**ಮಾಬ: (ಮಾಣ ಬಳಕಿ ?)** : ಹಳೇಬೀಡಿನ ಕೇದಾರೇಶ್ವರ ದೇವಾಲಯದಲ್ಲಿರುವ ಯುವತಿ ಯೊಬ್ಬಳ ಸುಂದರ ಕೃತಿಯನ್ನು ಕೆತ್ತಿರುವ ಚತುರ ಶಿಲ್ಪಿ. ಅಲ್ಲಿನ ಅಲಂಕರಣ ಚಿತ್ರಗಳಲ್ಲೆಲ್ಲ ಇದು ರಮ್ಯಾದ್ಭುತ ರೀತಿಯದೆಂದು ಹೆಸರಾಗಿದೆ. ಗಂಭೀರ ಭಾವಗಳನ್ನು ಯಶಸ್ವಿಯಾಗಿ ಬಿಡಿಸಬಲ್ಲ ಕೌಶಲ್ಯ ಇವನದು. ಇವನು ತನ್ನ ಕೃತಿಯ ಕೆಳಗೆ 'ಮಾ' ಎಂಬ ಸಂಕ್ಷಿಪ್ತ ನಾಮವನ್ನು ಮಾತ್ರ ಹಾಕಿಕೊಂಡಿದ್ದಾನೆ. ಇವನು ಅಲ್ಲಿನ ಹೊಯ್ಸಳೇಶ್ವರ ದೇವಾಲಯದಲ್ಲೂ ಕೆಲಸಮಾಡಿದ.

**ಬಿಲ್ಲಣ**: ಹೊಯ್ಸಳೇಶ್ವರ ದೇವಾಲಯದ ಶಿಲ್ಪದ ಕೆತ್ತನೆಗಳಲ್ಲಿ ಭಾಗವಹಿಸಿದ ಮತ್ತೊಬ್ಬ ಕುಶಲ ಶಿಲ್ಪಿ.

**ಬೋಚಣ್ಣ** : ಹೊಯ್ಸಳೇಶ್ವರ ದೇವಾಲಯದ ಶಿಲ್ಪದ ಕೆತ್ತನೆಗಳಲ್ಲಿ ಭಾಗವಹಿಸಿದ ಮತ್ತೊಬ್ಬ ಶಿಲ್ಪಿ.

**ಚವುಗ**: ಹೊಯ್ಸಳೇಶ್ವರ ದೇವಾಲಯದಲ್ಲಿ ಕೆಲಸ ಮಾಡಿದ ಮತ್ತೊಬ್ಬ ಶಿಲ್ಪಿ.

**ಬೀರಣ**: ಇವನು ಹೊಯ್ಸಳೇಶ್ವರದೇವಾಲಯದಲ್ಲಿ ಕೆಲಸಮಾಡಿದುದರ ಜೊತೆಗೆ ದಾಸೋಜ ನೊಡನೆ ಬೇಲೂರಿನ ಕೇಶವ ದೇವಸ್ಥಾನದಲ್ಲೂ ಕೆಲಸ ಮಾಡಿದ್ದ.

ಹೊಯ್ಸಳೇಶ್ವರ ದೇವಾಲಯದಲ್ಲಿ ಬೇಲೂರು ಕೇಶವ ದೇವಾಲಯದ ಮುಖ್ಯ ಶಿಲ್ಪಿಯಾಗಿದ್ದ ದಾಸೋಜನೂ ಕೆಲಸಮಾಡಿದ್ದಾನೆ.

ಹೊಯ್ಸಳರ ಶಿಲ್ಪಕಲೆ ಸೋಮನಾಥಪುರದ ಕೇಶವ ದೇವಸ್ಥಾನದಲ್ಲಿ ಉತ್ತುಂಗ ಶಿಖರವನ್ನು ಮುಟ್ಟಿದೆ. ತಿರುಮಕೂಡಲು ನರಸೀಪುರದ ಬಳಿಯಿರುವ ಈ ದೇವಾಲಯವನ್ನು ಮುಮ್ಮಡಿ ನರಸಿಂಹನ ಅಧಿಕಾರಿ ಸೋಮ ನಿರ್ಮಿಸಿ ಆ ಊರಿಗೆ ಸೋಮನಾಥಪುರವೆಂದು ಹೆಸರಿಟ್ಟ. ಅಲ್ಲಿನ ಎತ್ತರವಾದ ಜಗುಲಿಯ ಮೇಲೆ ನಿರ್ಮಿತವಾಗಿರುವ ಆ ದೇವಾಲಯದ ಗೋಪುರ ಮತ್ತು ಗೋಡೆ ಗಳನ್ನು ಅಲಂಕರಿಸಲು ಅನೇಕ ಶಿಲ್ಪಿವರೇಣ್ಯರು ಕೆಲಸ ಮಾಡಿರುವರು. ಅವರಲ್ಲಿ ನಲವತ್ತು ಅಮೋಘ

ವಾದ ಕಲಾಕೃತಿಗಳನ್ನು ಕಡೆದ ಮಲ್ಲಿತಮ್ಮ ಎಂಬ ಶಿಲ್ಪಿ ಪ್ರಸಿದ್ಧನಾದವನು. ಅವನ ಬಗ್ಗೆ ಮುಂದೆ ವಿವರಗಳನ್ನು ನೀಡಿದೆ.

**ಮಲ್ಲಿತಮ್ಮ:** ಹೊಯ್ಸಳರ ಕಾಲದಲ್ಲಿ ಅನೇಕ ದೇವಾಲಯಗಳಲ್ಲಿ ತನ್ನ ಕಲಾಕೃತಿಗಳನ್ನು ರೂಪಿಸಿ, ಅವುಗಳ ಅಲಂಕರಣದ ವೈಭವಕ್ಕೆ ತನ್ನ ಅಮೋಘ ಕಾಣಿಕೆಯನ್ನು ಸಲ್ಲಿಸಿರುವ ಹಾಗೂ ಜನಪ್ರಿಯತೆಯನ್ನೂ ಸಾರ್ವತ್ರಿಕ ಕೀರ್ತಿಯನ್ನೂ ಗಳಿಸಿದ್ದ ಶಿಲ್ಪಿ. ಎರಡನೆಯ ಬಲ್ಲಾಳನ ಅಧಿಕಾರಿ, ಅಮೃತೇಶ್ವರ ದಂಡನಾಯಕ ಇವನ ಪೋಷಕನಾಗಿದ್ದಂತೆ ಕಂಡು ಬರುತ್ತದೆ. ಅವನು ತರೀಕೆರೆ ತಾಲ್ಲೋಕಿನ ಅಮೃತಪುರದಲ್ಲಿ 1196ರಲ್ಲಿ ಕಟ್ಟಿಸಿದ ಅಮೃತೇಶ್ವರ ದೇವಾಲಯದಲ್ಲಿ ಕೆಲಸಮಾಡಲು ಮಲ್ಲಿತಮ್ಮನನ್ನು ನೇಮಿಸಿಕೊಂಡ. ಅಲ್ಲಿ ಮಲ್ಲಿತಮ್ಮನ ಜೊತೆಗೂಡಿ ಶಿಲ್ಪಕಲೋಪಾಸನೆ ಪದಾರ್ಪಣ ಮಾಡಿದೆ. ಅಲ್ಲಿನ ಭುವನೇಶ್ವರಿಗಳನ್ನು ಅವನು ನಿರ್ಮಿಸಿದ. ಅನಂತರ 1234ರಲ್ಲಿ ಅರಸೀಕೆರೆಯ ಬಳಿಯ ಹಾರ್ನಹಳ್ಳಿಯ ಕೇಶವ ದೇವಾಲಯದಲ್ಲಿ ಕೆಲಸಮಾಡಿದ. ಅಲ್ಲಿರುವ ಇಪ್ಪತ್ತೈದು ಕಲಾಕೃತಿಗಳು ಅವನ ಹೆಸರಿನಲ್ಲಿವೆ. ಅವು ಅವನ ಶಿಲ್ಪಕಲೆಯ ವೈಭವವನ್ನು ನಾಡಿನಲ್ಲಿ ಪ್ರಚಾರ ಮಾಡಿದ್ದರ ಜೊತೆಗೆ ಮುಂದೆ ಇತರ ದೇವಾಲಯಗಳ ನಿರ್ಮಾಣದಲ್ಲಿ ಕೆಲಸಮಾಡಲು ಅವನಿಗೆ ಆಹ್ವಾನವನ್ನು ದೊರಕಿಸಿ ಕೊಟ್ಟುವು. 1249ರಲ್ಲಿ ಚನ್ನರಾಯಪಟ್ಟಣ ತಾಲ್ಲೂಕು ನುಗ್ಗೇಹಳ್ಳಿಯಲ್ಲಿ ನಿರ್ಮಾಣವಾದ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ಆ ಕಾಲದ ಮತ್ತೊಬ್ಬ ಖ್ಯಾತಶಿಲ್ಪಿಯೆನಿಸಿದ್ದ ಬೈಚೋಜನ ಸಹೋದ್ಯೋಗಿಯಾಗಿ ಇವನು ಕೆಲಸ ಮಾಡಿದ. ಆ ದೇವಾಲಯದ ಉತ್ತರ ಗೋಡೆಯನ್ನಲಂಕರಿಸಿರುವ ಹದಿನಾರು ಕಲಾಕೃತಿಗಳ ಕೆಳಗೆ ಇವನ ಹೆಸರಿದೆ. ಅವುಗಳಲ್ಲಿ ನಾಟ್ಯಲಕ್ಷ್ಮಿಯ ವಿಗ್ರಹ ಅತ್ಯಂತ ರಮಣೀಯತೆಯನ್ನು ಮುಟ್ಟಿದೆ.

ಅನಂತರ ಮಲ್ಲಿತಮ್ಮ ಹಾಸನ ಜಿಲ್ಲೆಯ ಜಾವಗಲ್ಲಿನಲ್ಲಿ ಕೆಲಸ ಮಾಡಿದ. ಅಲ್ಲಿನ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ಹದಿನೇಳು ವಿಗ್ರಹಗಳನ್ನು ಕೆತ್ತಿದ್ದಾನೆ. ಅವುಗಳಲ್ಲಿ ಅಷ್ಟಭುಜಗಳ ನೃತ್ಯ-ಲಕ್ಷ್ಮಿಯ ವಿಗ್ರಹ ಅತ್ಯಂತ ರಮಣೀಯವೂ ಗಂಭೀರ ಮುಖಮುದ್ರೆಯದೂ ಆದ ಕೃತಿಯೆನಿಸಿದೆ. ಆ ಕೃತಿಯ ಎರಡು ಪಾರ್ಶ್ವಗಳಲ್ಲೂ ಡಿಂಡೆ ಹೊಡೆಯುತ್ತಿರುವ ಬಾಲಕರು ಜೀವಕಳೆಯಿಂದ ರಾರಾಜಿಸುತ್ತಿರುವರು.

ಮಲ್ಲಿತಮ್ಮ ಮಂಡ್ಯ ಜಿಲ್ಲೆಯ ಗೋವಿಂದನಹಳ್ಳಿಯ ಪಂಚಲಿಂಗ ದೇವಾಲಯದಲ್ಲೂ ಕೆಲಸ ಮಾಡಿದ್ದಾನೆ. ಸಮರೇಖೆಯಲ್ಲಿ ನಿರ್ಮಾಣವಾಗಿರುವ ಐದು ಕೋಣೆಗಳ, ಐದು ಗೋಪುರಗಳ ಆ ದೇವಾಲಯದಲ್ಲಿನ ಎರಡು ದ್ವಾರಪಾಲಕರ ವಿಗ್ರಹಗಳಲ್ಲಿ ಇವನ ಹೆಸರನ್ನು ಕೆತ್ತಿದೆ.

ಮಲ್ಲಿತಮ್ಮನ ಪ್ರತಿಭೆ ಮಹೋನ್ನತ ಶಿಖರವನ್ನು ಮುಟ್ಟಿರುವುದು ನಕ್ಷತ್ರಾಕೃತಿಯ ಗೋಪುರಗಳನ್ನುಳ್ಳ ಸೋಮನಾಥಪುರದ ಕೇಶವ ದೇವಾಲಯದಲ್ಲಿ. 1268ರಲ್ಲಿ ನಿರ್ಮಾಣವಾದ ಅದರ ನಲವತ್ತು ಅಮೋಘ ಕಲಾಕೃತಿಗಳಲ್ಲಿ ಇವನ ಹೆಸರಿದೆ. ಇವನಂತೆ ಅಲ್ಲಿನ ಅನೇಕ ಶಿಲ್ಪಿಗಳು ಅಲಂಕರಣ ಚಿತ್ರಗಳನ್ನು ಕೆತ್ತಿದ್ದರೂ ಇವನ ಕೃತಿಗಳು ಅದೆಲ್ಲಕ್ಕಿಂತ ಬಹು ಶ್ರೇಷ್ಠ ಮಟ್ಟದವೆನಿಸಿವೆ. ಸೂಕ್ಷ್ಮತಮ ಕುಸುರಿ ಕೆಲಸದಲ್ಲಿ ಇವನ ಕಲೆ ಅಲ್ಲಿ ಪರಾಕಾಷ್ಠತೆಯನ್ನು ಮುಟ್ಟಿರುವುದನ್ನೂ ಕಾಣಬಹುದು. ಅವನ ಹೆಸರಿನಲ್ಲಿರುವ ಮಹಿಷಾಸುರಮರ್ದಿನಿಯ ವಿಗ್ರಹ ಅತ್ಯುತ್ತಮ ಕಲಾಕೃತಿಯೆನಿಸಿದೆ. ಇವುಗಳಲ್ಲದೆ ಈ ದೇವಾಲಯದ ಶಿಖರದ ಇತರೆಡೆಗಳಲ್ಲೂ ಇವನ ಹೆಸರು ಕೆತ್ತಿರುವುದನ್ನು ಕಾಣಬಹುದು.

**ಯಳಮಸಯ:** ಸೋಮನಾಥಪುರದ ದೇವಾಲಯದಲ್ಲಿ ಮಲ್ಲಿತಮ್ಮನೊಡನೆ ಕೆಲಸಮಾಡಿದ ಇನ್ನೊಬ್ಬ ಕುಶಲ ಶಿಲ್ಪಿ. ಇವನ ಹೆಸರನ್ನು ಹೊತ್ತಿರುವ ಅಲ್ಲಿನ ವೀಣಾಪಾಣಿ ಸರಸ್ವತಿಯ ವಿಗ್ರಹ ಮಧುರ ಭಾವದಿಂದ ರಾಜಿಸುತ್ತಿರುವ ಸುಂದರ ಕಲಾಕೃತಿಯೆನಿಸಿದೆ.

**ಬೈಚೋಜ:** ಇವನು ಮಲ್ಲಿತಮ್ಮನ ಸಹೋದ್ಯೋಗಿಯಾಗಿ ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ಕೆಲಸಮಾಡಿದ್ದಾನೆ. ಅಲ್ಲಿನ ದಕ್ಷಿಣದ ಗೋಡೆಯನ್ನಲಂಕರಿಸಿರುವ ಕೆಲವು ಶಿಲ್ಪ ಕೃತಿಗಳು ಇವನ ಹೆಸರನ್ನು ಹೊತ್ತಿವೆ. ತುಮಕೂರು ಜಿಲ್ಲೆಯ ನಾಗಲಾಪುರದ ಕೇಶವ ದೇವಾಲಯ

ದಲ್ಲೂ ಕೆಲವು ವಿಗ್ರಹಗಳನ್ನು ಕೆತ್ತಿದ್ದಾನೆ. ತನ್ನ ಬಿರುದುಬಾವಲಿಗಳನ್ನು ಕೆತ್ತಿಕೊಳ್ಳುವುದರಲ್ಲಿ ಇವನಿಗೆ ತುಂಬ ಉತ್ಸುಕತೆಯಿದ್ದಂತೆ ತೋರುತ್ತದೆ.

**ಹೋನೋಜ:** ಇವನು ತಿಪಟೂರು ತಾಲ್ಲೂಕಿನ ಅರಳಗುಪ್ಪೆ ಕೇಶವ ದೇವಾಲಯದ ನಿರ್ಮಾಣದಲ್ಲಿ ಭಾಗವಹಿಸಿದ್ದ ಶಿಲ್ಪಿ. ಅಲ್ಲಿನ ಇಪ್ಪತ್ತೇಳು ಶಿಲ್ಪಕೃತಿಗಳಲ್ಲಿ ಇವನ ಹೆಸರಿದೆ. ಅವುಗಳಲ್ಲಿ ಹನ್ನೆರಡು ಕೃತಿಗಳಲ್ಲಿ ತನ್ನ ಸಂಕ್ಷಿಪ್ತ ನಾಮವಾದ 'ಹೋ' ಎಂಬುದನ್ನು ಕೆತ್ತಿದ್ದಾನೆ.

**ಜಕ್ಕಣ:** ಬೇಲೂರು ಹಳೇಬೀಡುಗಳ ದೇವಾಲಯಗಳು ಜಕ್ಕಣನ ಶಿಲ್ಪವೆಂದು ಜನಜನಿತವಾಗಿದ್ದರೂ ಆ ಹೆಸರಿನ ಈ ಶಿಲ್ಪಿ ಸುಮಾರು ಒಂದೂವರೆ ಶತಮಾನದ ಅನಂತರದವನು. ಇವನನ್ನು ಸೋಮ ತುರುವೇಕೆರೆಯ ಮೂಲೇಶಂಕರೇಶ್ವರ ದೇವಾಲಯವನ್ನು ಕಟ್ಟುವಾಗ ನೇಮಿಸಿಕೊಂಡಿದ್ದ.

ಕರ್ನಾಟಕದ ಅರಸುಮನೆತನಗಳಲ್ಲಿ ಚಾಳುಕ್ಯರಂತೆ ಹೊಯ್ಸಳರೂ ಶಿಲ್ಪಕಲೆಗೆ ಪ್ರೋತ್ಸಾಹ ನೀಡಿದರು. ಅವರ ಆ ಕಲಾಭಿಮಾನದ ಪ್ರತೀಕವಾಗಿ ಅವರು ನಿರ್ಮಿಸಿದ ಸುಮಾರು ನಲವತ್ತು ದೇವಾಲಯಗಳು ನಾಡಿನ ಶಿಲ್ಪಕಲಾವೈಭವವನ್ನು ಮೆರೆಸುತ್ತಿವೆ. ವಿಷ್ಣುವರ್ಧನ ಆರಂಭಿಸಿದ ದೇವಾಲಯಗಳ ನಿರ್ಮಾಣ ಅವನ ಸಾಮಂತರಿಗೂ ದಂಡನಾಯಕರಿಗೂ ಇತರ ಅಧಿಕಾರಿಗಳಿಗೂ ಮಹದಾದರ್ಶವಾಯಿತು. ಹನ್ನೆರಡನೆಯ ಶತಮಾನದ ಮೊದಲಲ್ಲಿ ಆರಂಭವಾದ ಆ ಕಾರ್ಯವನ್ನು ಅವನ ಪೀಳಿಗೆಯವರು ಮುಂದುವರಿಸಿಕೊಂಡು ಬಂದರು. ಅವರ ಕಾಲದ ಅಮರ ಕಲಾವೈಭವದ ರೂವಾರಿಗಳು ರೂಪಿಸಿಕೊಟ್ಟಿರುವ ಭವ್ಯಶಿಲ್ಪಕೃತಿಗಳು ನಮ್ಮ ನಾಡಿನ ಮಹದೈಶ್ವರ್ಯವಾಗಿ ಉಳಿದುಕೊಂಡುಬಂದಿವೆ. ಗತಕಾಲದ ನಮ್ಮ ಶಿಲ್ಪಿಗಳ ಕೌಶಲ್ಯದ ಹಿರಿಮೆಯನ್ನು ಜಗತ್ತಿಗೆ ಸಾರುತ್ತಿವೆ. ಈಚೆಗೆ ಅಂಥ ಅಮೂಲ್ಯ ಸ್ಮಾರಕಗಳು ಭಾರತದಿಂದ ಅನ್ಯದೇಶಗಳಿಗೆ ಸದ್ದಿಲ್ಲದೆ ಸಾಗಿಹೋಗುತ್ತಿವೆ. ಸರ್ಕಾರವೂ ಜನತೆಯೂ ಬಿಚ್ಚುಕಣ್ಣಿನಿಂದ ಆ ಸಂಪತ್ತನ್ನು ಕಾಯ್ದು ರಕ್ಷಿಸಿಕೊಳ್ಳಬೇಕಾಗಿದೆ. ಆ ಮೂಲಕ, ತಮ್ಮ ಕಲಾಜೀವನದ ಸಾಕ್ಷಾತ್ಕಾರವೊ ಎನ್ನುವಂಥ ರಮಣೀಯ ಕೃತಿಗಳನ್ನು ರೂಪಿಸಿ, ಅಜ್ಞಾತ ಜೀವನ ನಡೆಸಿ ಮರೆಯಾಗಿ ಹೋಗಿರುವ ಆ ರೂವಾರಿ ಕಲಾಬ್ರಹ್ಮರಿಗೆ ನಮ್ಮ ಗೌರವಾಭಿಮಾನಗಳನ್ನು ಸಲ್ಲಿಸಿದಂತಾಗುತ್ತದೆ.

# ವಸ್ತು ಕೋಶ

## ಮಿಥಿಕ್ ಸೊಸೈಟಿಯ ವಜ್ರಮಹೋತ್ಸವ

ಕರ್ನಾಟಕ ಸಂಸ್ಕೃತಿಯ ಅಧ್ಯಯನವನ್ನು ಮುಖ್ಯ ಗುರಿಯಾಗಿಟ್ಟುಕೊಂಡು ಕೆಲಸ ಮಾಡುತ್ತಿರುವ ಸಂಸ್ಥೆಗಳಲ್ಲಿ ಬೆಂಗಳೂರಿನಲ್ಲಿರುವ ಮಿಥಿಕ್ ಸೊಸೈಟಿ ಬಹು ಮುಖ್ಯವಾದ್ದು. 1909ರಲ್ಲಿ ಪ್ರಾರಂಭವಾದ ಈ ಸಂಸ್ಥೆ ಕರ್ನಾಟಕದ ಇತಿಹಾಸ, ಶಾಸನ, ವಾಸ್ತುಶಿಲ್ಪ, ತತ್ವಶಾಸ್ತ್ರ ಮುಂತಾದ ವಿಷಯಗಳಲ್ಲಿ ಪ್ರೌಢಲೇಖನಗಳನ್ನೊಳಗೊಂಡ ವಿದ್ವತ್ಪತ್ರಿಕೆಯಿಂದ ಅಂತರರಾಷ್ಟ್ರೀಯ ಖ್ಯಾತಿಯನ್ನೂ ಗಳಿಸಿದೆ. ಎಫ್. ಜೆ. ರಿಚರ್ಡ್ಸ್, ಕ್ರುಂಬೀಗಲ್, ಟ್ಯಾಬರ್ಡ್, ಎಂ. ಶಾಮರಾವ್, ಆರ್. ನರಸಿಂಹಾಚಾರ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಆರ್. ಶಾಮಶಾಸ್ತ್ರಿ, ಬಿ. ಎಂ. ಶ್ರೀಕಂಠಯ್ಯ. ಹಯವದನ ರಾವ್, ಎಸ್. ಶ್ರೀಕಂಠಯ್ಯ ಮುಂತಾದ ವಿದ್ವಾಂಸರು ಈ ಸಂಸ್ಥೆಯನ್ನು ಬೌದ್ಧಿಕವಾಗಿ ಬೆಳೆಸಲು ಶ್ರಮಿಸಿದರು. ಮೈಸೂರಿನ ಮಹಾರಾಜರು, ಯುವರಾಜರು, ಡಾ. ಎಂ. ವಿಶ್ವೇಶ್ವರಯ್ಯನವರು ಮುಂತಾದವರು ಈ ಸಂಸ್ಥೆಗಾಗಿ ಅನೇಕ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರು. ಇತ್ತೀಚೆಗೆ ಈ ಸಂಸ್ಥೆಯನ್ನು ಪುನರುಜ್ಜೀವನಗೊಳಿಸುವಲ್ಲಿ ತಿರುಮಲೆ ತಾತಾಚಾರ್ಯಶರ್ಮರು ವಿಶೇಷ ಆಸಕ್ತಿ ವಹಿಸಿದರು. ಅವರು ಮತ್ತು ಅವರ ಸ್ನೇಹಿತರ ದುಡಿಮೆಯಿಂದಾಗಿ ಮಿಥಿಕ್ ಸೊಸೈಟಿ ವಜ್ರಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿತು.

ಮಿಥಿಕ್ ಸೊಸೈಟಿಗೆ ಡಾ. ಎಂ. ವಿ.ಯವರು ನಿವೇಶನವನ್ನು ಒದಗಿಸಿಕೊಟ್ಟರು. ರಾಜ ಮಹಾರಾಜರ ಸಹಾಯದಿಂದಾಗಿ ಅಲ್ಲಿ ಸುಂದರವಾದ ಕಟ್ಟಡವನ್ನು ಕಟ್ಟಲಾಯಿತು. ಬೆಂಗಳೂರಿನಲ್ಲಿ ರೆಸಿಡೆಂಟರಾಗಿದ್ದ ಸರ್ ಹ್ಯೂ ಡ್ಯಾಲಿಯವರು ತಮ್ಮ ಅಮೂಲ್ಯ ಪುಸ್ತಕ ಭಂಡಾರವನ್ನು ಈ ಸಂಸ್ಥೆಗೆ ದಾನಕೊಟ್ಟರು. ಇದಾದ ಅನಂತರ ಅನೇಕ ಮಹನೀಯರು ಅಮೂಲ್ಯ ಗ್ರಂಥಗಳನ್ನು ಈ ಸಂಸ್ಥೆಗೆ ದಾನಮಾಡಿದರು. ಇದರಿಂದ ಮಿಥಿಕ್ ಸೊಸೈಟಿಯಲ್ಲಿರುವ ಪುಸ್ತಕ ಭಂಡಾರ ಬಹು ಅಮೂಲ್ಯವಾಗಿದ್ದು ಕರ್ನಾಟಕದ ಸಂಸ್ಕೃತಿಯನ್ನು ಅಭ್ಯಾಸ ಮಾಡುವವರಿಗೆ ಮತ್ತು ಅದರಲ್ಲಿ ಸಂಶೋಧನೆಯನ್ನು ಕೈಗೊಳ್ಳುವವರಿಗೆ ಅತ್ಯಾವಶ್ಯಕವಾದ ಸಂಸ್ಥೆಯಾಗಿದೆ.

ಮಿಥಿಕ್ ಸೊಸೈಟಿಗೆ ಕೀರ್ತಿಯನ್ನು ತಂದುಕೊಟ್ಟಿರುವ ಇನ್ನೊಂದು ಕಾರ್ಯವೆಂದರೆ 'ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ" ಎಂಬ ವಿದ್ವತ್ ಪತ್ರಿಕೆ. ಕರ್ನಾಟಕ ಇತಿಹಾಸದ ಸಂಶೋಧನೆಗಂತೂ ಈ ಸಂಪುಟಗಳು ಆಕರಗ್ರಂಥಗಳಾಗಿವೆ. ಅಂತರರಾಷ್ಟ್ರೀಯ ಖ್ಯಾತಿವೆತ್ತ ಅನೇಕ ವಿದ್ವಾಂಸರು ಈ ಪತ್ರಿಕೆಯ ಸಂಪುಟಗಳಲ್ಲಿ ತಮ್ಮ ಲೇಖನಗಳನ್ನು ಪ್ರಕಟಿಸಿದ್ದಾರೆ.

ಈ ರೀತಿ ಕನ್ನಡನಾಡಿನ ವಿದ್ವತ್ ಪ್ರಪಂಚಕ್ಕೆ ವಿಶೇಷ ಸೇವೆ ಸಲ್ಲಿಸಿದ ಮಿಥಿಕ್ ಸೊಸೈಟಿ 1973ರ ಸೆಪ್ಟೆಂಬರ್ 14, 15 ಮತ್ತು 16 ಬೆಂಗಳೂರಿನಲ್ಲಿ ವಜ್ರ ಮಹೋತ್ಸವನ್ನು ಆಚರಿಸಲಿರುವುದು ಬಹು ಸಂತೋಷದ ಸಂಗತಿ. ವಜ್ರಮಹೋತ್ಸವದ ಪ್ರಾರಂಭೋತ್ಸವವನ್ನು ರಾಜ್ಯಪಾಲ ಮೋಹನ್‌ಲಾಲ್ ಸುಖಾಡಿಯ ಅವರು ನೆರವೇರಿಸಲಿದ್ದಾರೆ. ವಜ್ರಮಹೋತ್ಸವದ ಅಂಗವಾಗಿ ಒಂದು ವಿಶೇಷ ಸಂಚಿಕೆಯನ್ನೂ ಬಿಡುಗಡೆ ಮಾಡಲಾಗುತ್ತದೆ. ಅಷ್ಟೇ ಅಲ್ಲದೆ ಕರ್ನಾಟಕ ವಿದ್ವತ್ ಪ್ರಪಂಚಕ್ಕೆ ವಿಶೇಷ ಸೇವೆ ಸಲ್ಲಿಸಿರುವ ಶ್ರೀ ಎನ್. ಲಕ್ಷ್ಮೀನಾರಾಯಣರಾವ್. ಶ್ರೀ. ತಿ. ತಾ. ಶರ್ಮ ಡಾ. ಶ್ರೀಕಂಠ ಶಾಸ್ತ್ರೀ, ಡಾ. ಜಿ. ಎಸ್. ಗಾಯಿ ಮತ್ತು ಡಾ. ಪಿ.ಬಿ. ದೇಸಾಯಿ ಇವರುಗಳನ್ನು ಸನ್ಮಾನಿಸುವ ಕಾರ್ಯಕ್ರಮವಿದೆ. ಪ್ರತಿಯೊಬ್ಬರೂ ತಮ್ಮ ತಮ್ಮ ಕ್ಷೇತ್ರದಲ್ಲಿ ವಿಶೇಷ ಸೇವೆಯನ್ನು ಸಲ್ಲಿಸಿರುವ ಮಹಾ ಪಂಡಿತರು. ಇಂಥವರ ಸನ್ಮಾನ ಔಚಿತ್ಯಪೂರ್ಣವಾದ್ದು.

ವಜ್ರ ಮಹೋತ್ಸವದ ನೆನಪಿನಲ್ಲಿ ಮಿಥಿಕ್ ಸೊಸೈಟಿ ಅನೇಕ ಯೋಜನೆಗಳನ್ನು ರೂಪಿಸಿ ಕೊಂಡಿದೆ. ಅವುಗಳಲ್ಲಿ ಮುಖ್ಯವಾದ್ದು ವಜ್ರಮಹೋತ್ಸವ ಸ್ಮಾರಕ ಭವನ, ಕರ್ನಾಟಕ ಇತಿಹಾಸದ ವಾರ್ಷಿಕ ಉಪನ್ಯಾಸ ದತ್ತಿ ಮತ್ತು ಕೆಲವು ವಿಶೇಷ ಪ್ರಕಟನೆಗಳು. ಇದೇ ರೀತಿ ಮಿಥಿಕ್ ಸೊಸೈಟಿ ಪತ್ತಾರು ಹೊಸ ಯೋಜನೆಗಳನ್ನು ಹಾಕಿಕೊಂಡು ಕರ್ನಾಟಕ ಇತಿಹಾಸ–ಸಂಸ್ಕೃತಿಯ ಅಧ್ಯಯನವನ್ನು ಇನ್ನೂ ವಿಶೇಷವಾಗಿ ಮಾಡಲಿ, ಅದರ ಯಶಸ್ಸು ವರ್ಧಿಸಲಿ ಎಂಬುದೇ ಎಲ್ಲ ಕನ್ನಡಿಗರ ಹಾರೈಕೆ.

—ಡಾ. ಎ. ವಿ. ನರಸಿಂಹಮೂರ್ತಿ

### ಬೋನಸ್ ಅಧಿನಿಯಮದ ತಿದ್ದುಪಡಿ

ಬೋನಸ್ ಕಾನೂನನ್ನು ತಿದ್ದುಪಡಿ ಮಾಡಿ ಕೈಗಾರಿಕೆಗಳು ಕಾರ್ಮಿಕರಿಗೆ ಕನಿಷ್ಠ ಪಕ್ಷ ಸೇ. 8.33 ರಷ್ಟು ಬೋನಸ್ ದೊರೆಯುವಂತೆ ಮಾಡಲು ಕೇಂದ್ರ ಸರ್ಕಾರ ಮೇ 29ರಂದು ಕೈಗೊಂಡ ನಿರ್ಧಾರದ ಪರವಾಗಿಯೂ ವಿರುದ್ಧವಾಗಿಯೂ ನಾನಾ ಅಭಿಪ್ರಾಯಗಳು ವ್ಯಕ್ತವಾಗಿವೆ. ಬೋನಸ್ ಎಂಬುದು ವೇತನದಂತೆ ಕಾರ್ಮಿಕನಿಗೆ ಕಡ್ಡಾಯವಾಗಿ ಕೊಡಬೇಕಾದ ಹಣವೇ ಅಥವಾ ಅದು ಲಾಭದ ಒಂದು ಅಂಶವಾಗಿ ಕಾರ್ಮಿಕನಿಗೆ ದತ್ತವಾಗುವ ಉಚಿತಾರ್ಥವೇ ಎಂಬುದರ ಮೇಲೆ ಇದರ ನ್ಯಾಯಾನ್ಯಾಯ ವನ್ನು ತೀರ್ಮಾನಿಸಬೇಕಾಗುತ್ತದೆ. ಕಾರ್ಮಿಕರಿಗೆ ಪ್ರೋತ್ಸಾಹ ನೀಡಿ ಅಧಿಕ ಉತ್ಪಾದನೆಗೆ ಕಾರಣರಾಗಲು ಅವರಿಗೆ ಉತ್ತೇಜನ ನೀಡುವ ಉದ್ದೇಶದಿಂದ ಬೋನಸ್ ಕೊಡಲಾಗುತ್ತದೆ. ಉತ್ಪನ್ನ ಹೆಚ್ಚಿದಂತೆ ಬೋನಸ್ ಹೆಚ್ಚುತ್ತದೆ. ಉತ್ಪನ್ನ ಕಡಿಮೆಯಾಗಿ ಲಾಭ ಕಡಿಮೆಯಾದರೆ ಬೋನಸ್ ಕಡಿಮೆಯಾಗುತ್ತದೆ. ಆದುದರಿಂದ ಕನಿಷ್ಠ ಬೋನಸ್ ಎಂಬ ಮಾತು ಅನ್ವಯಿಸುವುದಿಲ್ಲವೆಂದು ವಾದಿಸಲಾಗಿದೆ.

ಭಾರತ ಸರ್ಕಾರದ ನಿರ್ಧಾರದಿಂದ ಬೋನಸ್‌ಗೆ ಬೇರೆ ಅರ್ಥ ದೊರೆತಂತಾಗಿದೆ. ಬೋನಸ್ ಅನ್ನು ಮುಂದೂಡಲ್ಪಟ್ಟ ಕೂಲಿ ಎಂದು ಭಾವಿಸಿ, ಅದನ್ನು ಕನಿಷ್ಠ ಮಿತಿಗಿಂತ ಕಡಿಮೆ ದರದಲ್ಲಿ ಕೊಡ ಕೂಡದು ಎಂಬುದು ಭಾರತ ಸರ್ಕಾರದ ಆದೇಶ. ಪ್ರತಿ ಕಾರ್ಮಿಕನಿಗೂ ಕನಿಷ್ಠ ಸೇ. 8.33 ಬೋನಸ್ ಕೊಡಬೇಕು ಎಂದು ನಿರ್ಧರಿಸುವುದು ಅನೇಕ ಸಂಸ್ಥೆಗಳ ಮೇಲೆ ದುಷ್ಪರಿಣಾಮ ಉಂಟುಮಾಡುವ ಅಂಶವೆಂದು ಅನೇಕ ಉದ್ಯಮಪತಿಗಳು ಭಾವಿಸಿದ್ದಾರೆ. ಉತ್ಪಾದನೆ ಹೆಚ್ಚಲಿ ಅಥವಾ ಹೆಚ್ಚದಿರಲಿ, ಈ ಪ್ರಮಾಣದ ಬೋನಸ್ ಕೊಡಬೇಕೆಂಬುದು ಸರಿಯಲ್ಲವೆಂದು ಅವರ ಭಾವನೆ.

ಕಾರ್ಮಿಕ ವರ್ಗದವರಿಗೆ, ನಮ್ಮ ದೇಶದಲ್ಲಿ ಈಗಿರುವಂತಹ ದುರ್ದಿನಗಳಲ್ಲಿ, ಸ್ವಲ್ಪ ಹೆಚ್ಚು ಸಂಭಾವನೆ ಕೊಡುವುದಕ್ಕೆ ಯಾರೂ ಅತೃಪ್ತಿ ವ್ಯಕ್ತಪಡಿಸುವುದಿಲ್ಲ. ಏನೇ ಆದರೂ ಕನಿಷ್ಠ 8.33% ಬೋನಸ್ ದೊರೆಯುತ್ತದೆ ಎಂದು ಗೊತ್ತಾದಾಗ ಕಾರ್ಮಿಕ ವರ್ಗದವರು ಉತ್ಸಾಹದಿಂದ ಕೆಲಸಮಾಡಿ ಅಧಿಕ ಉತ್ಪಾದನೆಗೆ ನೆರವಾಗುವುದಿಲ್ಲವೆಂದು ಅವರ ಭಯ. ಈ ಹೊಸ ಆಜ್ಞೆಯಿಂದ ಸಣ್ಣ ಉದ್ಯಮ ಸಂಸ್ಥೆಗಳು ತೊಂದರೆಗೆ ಈಡಾಗುವವೆಂದು ಹೇಳಲಾಗಿದೆ. ತಮ್ಮ ಉತ್ಪಾದನೆಯನ್ನು ವೃದ್ಧಿಗೊಳಿಸಿ ಕೊಳ್ಳುವ ಶಕ್ತಿ ಪಡೆಯದಿದ್ದರೂ, ಸಣ್ಣ ಉದ್ಯಮ ಸಂಸ್ಥೆಗಳು ಕನಿಷ್ಠ ಬೋನಸ್ ಕೊಡಲೇಬೇಕಾಗುತ್ತದೆ. ಭಾರತದಲ್ಲಿರುವ ಒಟ್ಟು ಉದ್ಯಮ ಸಂಸ್ಥೆಗಳ ಪೈಕಿ ಕಾಲು ಭಾಗದಷ್ಟು ಸಣ್ಣ ಉದ್ಯಮ ಸಂಸ್ಥೆಗಳು. ಸಣ್ಣ ಉದ್ಯಮ ಸಂಸ್ಥೆಗಳು ಕಾನೂನಿನ ಪ್ರಕಾರ ಬೋನಸ್ ಮತ್ತು ಕೂಲಿ ಕೊಡಲಾರದೆ ಹೋದರೆ ಮುಷ್ಕರವೇ ಮುಂತಾದ ಪರಿಣಾಮಗಳಾಗಬಹುದು. ಉತ್ಪಾದನೆ ಅಧಿಕಗೊಳ್ಳುವುದರ ಬದಲು ಉತ್ಪಾದನೆ ಇಳಿಮುಖವಾಗುವ ಸಂಭವ ಉಂಟೆಂದು ಕೆಲವರು ಅಂಜಿದ್ದಾರೆ. ಹೊಸ ಆಜ್ಞೆಯ ಪರಿಣಾಮಗಳೇನು ಎಂದು ಕೂಡಲೇ ಹೇಳಲು ಸಾಧ್ಯವಿಲ್ಲ. ಸ್ವಲ್ಪ ವರ್ಷಗಳ ವರೆಗೆ ಕಾದು ನೋಡ ಬೇಕಾಗಿದೆ.

### ರಿಸರ್ವ್ ಬ್ಯಾಂಕ್ ಮತ್ತು ಹಣದುಬ್ಬರ

ಹಣದುಬ್ಬರ ತಡೆಗಟ್ಟಲು ರಿಸರ್ವ್ ಬ್ಯಾಂಕು ಕೆಳಗೆ ಕಂಡ ಕ್ರಮಗಳನ್ನು ಕೈಗೊಳ್ಳುವುದಾಗಿ ಮೇ

30ರಂದು ಪ್ರಕಟಿಸಿದೆ: 1 ಬ್ಯಾಂಕು ದರದಲ್ಲಿ ಸೇ. 6ರಿಂದ 7ಕ್ಕೆ ಏರಿಕೆ. 2 ವಾಣಿಜ್ಯ ಬ್ಯಾಂಕುಗಳು ರಿಸರ್ವ್ ಬ್ಯಾಂಕಿನಲ್ಲಿ ಇರಿಸಬೇಕಾದ ನಗದು ಸಂಚಿತಿಯ ದರದಲ್ಲಿ ಸೇ. 3ರಿಂದ 5ಕ್ಕೆ ಏರಿಕೆ. 3 ವಾಣಿಜ್ಯ ಬ್ಯಾಂಕುಗಳು ಕೊಡುವ ಸಾಲದ ಮೇಲೆ ಕನಿಷ್ಠ ಸೇ. 10ರಂತೆ ಬಡ್ಡಿ ನಿಗದಿ.

ಬ್ಯಾಂಕುದರ ಏರಿಸುವುದರಿಂದ ಮತ್ತು ವಾಣಿಜ್ಯ ಬ್ಯಾಂಕುಗಳ ಕನಿಷ್ಠ ಬಡ್ಡಿದರ ಏರಿಕೆಯಿಂದ ಸಾಲ ತೆಗೆದುಕೊಳ್ಳುವವರು ಮತ್ತು ವ್ಯವಹಾರ ನಡೆಸುವವರು ಇನ್ನು ಮುಂದೆ ಹಿಂಜರಿಯುತ್ತಾರೆ ಎಂದು ಅಭಿಪ್ರಾಯಪಡಲಾಗಿದೆ. ನಗದು ಅನುಪಾತ ಹೆಚ್ಚಿಸಿರುವುದರಿಂದ 200 ಕೋಟಿ ರೂ.ಗಳಷ್ಟು ಹಣ ಚಲಾವಣೆಯಿಂದ ಅವರೋಧಗೊಂಡು ಹಣದುಬ್ಬರಕ್ಕೆ ಸ್ವಲ್ಪಮಟ್ಟಿಗೆ ತಡೆ ಉಂಟಾಗುತ್ತದೆ ಎಂದು ಭಾವಿಸಲಾಗಿದೆ.

ಈ ಪ್ರಕಟಣೆ ಹೊರಬಿದ್ದ ಕೂಡಲೇ ಮುಂಬಯಿಯ ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ಕುಸಿತ ಉಂಟಾಯಿತು. ಆದರೆ ಸರಕುಗಳ ಮಾರುಕಟ್ಟೆಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಬ್ಯಾಂಕುದರ ಬದಲಾವಣೆಯ ಮೂಲಕ ಹಣದುಬ್ಬರ ತಡೆಗಟ್ಟಲು ಭಾರತದ ಈಗಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ ಎಂದು ಕಂಡುಬರುತ್ತದೆ. ಒಂದು ದೊಡ್ಡ ಉದ್ಯಮ ಸಂಸ್ಥೆಯ ವೆಚ್ಚದ ಪಟ್ಟಿಯನ್ನು ಪರಿಶೀಲಿಸಿದಾಗ ಅದರ ಬಡ್ಡಿ ಬಾಬ್ತಿನ ವೆಚ್ಚ ಒಟ್ಟು ವೆಚ್ಚದ ಸೇಕಡ 2ರಷ್ಟು ಮಾತ್ರ. ಆದುದರಿಂದ ಉದ್ಯಮಗಳು ಈ ವೆಚ್ಚವನ್ನು ಕಡೆಗಣಿಸಿ ಬ್ಯಾಂಕಿನಿಂದ ಅಧಿಕ ಬಡ್ಡಿದರದಲ್ಲಿ ಸಾಲ ಪಡೆದು ವ್ಯವಹಾರ ನಡೆಸಬಹುದು. ಉದ್ಯಮ ಸಂಸ್ಥೆಗಳು ಉತ್ಪಾದಿಸುವ ವಸ್ತುಗಳಿಗೆ ಒಳ್ಳೆಯ ಬೇಡಿಕೆ ಇದೆ. ವಸ್ತುಗಳ ಅಭಾವ ಇರುವ ಈ ಕಾಲದಲ್ಲಿ ವಸ್ತುಗಳು ದೊರೆತರೆ ಸಾಕೆಂದು ಗ್ರಾಹಕರು ಕಾದಿದ್ದಾರೆ. ಇಂಥ ಸಂದರ್ಭದಲ್ಲಿ ಉದ್ಯಮಗಳು ಹೆಚ್ಚಿನ ಬಡ್ಡಿದರದಿಂದ ಉಂಟಾಗುವ ವೆಚ್ಚವನ್ನು ವಸ್ತುಗಳ ಬೆಲೆಗೆ ಸೇರಿಸಿ ಗ್ರಾಹಕರ ಮೇಲೆ ಅದರ ಭಾರವನ್ನು ಹೊರಿಸುವ ಅಪಾಯವುಂಟು.

ಈ ಕಾರಣಗಳಿಂದಾಗಿ ರಿಸರ್ವ್ ಬ್ಯಾಂಕಿನ ಉದ್ದೇಶ ನೆರವೇರುವುದಿಲ್ಲ ಎನ್ನಬಹುದು. ಭಾರತದ ಈಗಿನ ಹಣದುಬ್ಬರಕ್ಕೆ ಎರಡು ಮುಖ್ಯ ಕಾರಣಗಳು: 1 ಸಾರ್ವಜನಿಕ ವೆಚ್ಚ ಒಂದೇ ಸಮನೆ ಬೆಳೆಯುತ್ತಿರುವುದರಿಂದ ಹಣದುಬ್ಬರಕ್ಕೆ ಪ್ರೋತ್ಸಾಹ ದೊರಕಿದೆ. 2 ಅತ್ಯಾವಶ್ಯಕ ವಸ್ತುಗಳ ಉತ್ಪಾದನೆ ಬೇಡಿಕೆಗೆ ಅನುಗುಣವಾಗಿ ಹೆಚ್ಚುತ್ತಿಲ್ಲ.

ಸರ್ಕಾರ ತನ್ನ ಖರ್ಚಿಗಾಗಿ 1972–73ರಲ್ಲಿ 1291 ಕೋಟಿ ರೂಪಾಯಿಗಳಷ್ಟು ಸಾಲವನ್ನು ಬ್ಯಾಂಕುಗಳಿಂದ ಪಡೆದಿದೆ. ಇದಲ್ಲದೆ ಬ್ಯಾಂಕುಗಳು ಜನರಿಗೂ ಸಾಲ ಒದಗಿಸಿವೆ. ಇದರ ಪರಿಣಾಮವಾಗಿ ಹಣದ ಚಲಾವಣೆ ಅಧಿಕಗೊಂಡಿದೆ. ಹಣದುಬ್ಬರ ಕಡಿಮೆಯಾಗುವ ಬದಲು ಏರುತ್ತ ಇದೆ. ಹಣದುಬ್ಬರವನ್ನು ತಡೆಗಟ್ಟಬೇಕಾದರೆ ಸಾರ್ವಜನಿಕ ವೆಚ್ಚವನ್ನು ಕಡಿಮೆ ಮಾಡುವುದು ಅತ್ಯಾವಶ್ಯಕ. ಸೀಮೆ ಎಣ್ಣೆ, ಸಕ್ಕರೆ, ಬಟ್ಟೆ, ಆಹಾರಧಾನ್ಯಗಳು ಖಾದ್ಯ ತೈಲಗಳು ಮುಂತಾದ ಆವಶ್ಯಕ ವಸ್ತುಗಳ ಸರಬರಾಜನ್ನು ಉತ್ತಮ ಪಡಿಸುವುದು ಅಗತ್ಯ.

—ಎನ್. ಪ್ರಭುಸ್ವಾಮಿ

# ಪುಸ್ತಕ ಲೋಕ

## ಉನ್ನತ ಶಿಕ್ಷಣದ ಸಮಸ್ಯೆಗಳ ಸೂಕ್ಷ್ಮ ಪರಿಶೀಲನೆ

ಭಾರತೀಯ ವಿದ್ಯಾರಂಗದಲ್ಲಿ ದಿವಂಗತ ಎ. ಲಕ್ಷ್ಮಣಸ್ವಾಮಿ ಮುದಲಿಯಾರ್ ಅವರು ಈ ಶತಮಾನದ ಪ್ರಧಾನ ವ್ಯಕ್ತಿಗಳು. ಅವರು ಸ್ವತಃ ವೈದ್ಯಶಾಸ್ತ್ರದ ಪ್ರಾಧ್ಯಾಪಕರಾಗಿ, ಕಾಲೇಜಿನ ಮುಖ್ಯರಾಗಿ, ವಿಶ್ವವಿದ್ಯಾಲಯದ ಕುಲಪತಿಗಳಾಗಿ ದೀರ್ಘಕಾಲ ದಕ್ಷತೆಯಿಂದ ಸೇವೆಸಲ್ಲಿಸಿದ ಮೇಧಾವಿಗಳು. ಅವರು ರಚಿಸಿರುವ ಸ್ತ್ರೀರೋಗ ವಿಜ್ಞಾನ (Gynaecology), ಗ್ರಂಥ ಪ್ರಪಂಚಾದ್ಯಂತ ಅತ್ಯುತ್ತಮ ಪಠ್ಯಪುಸ್ತಕವೆಂದು ಖ್ಯಾತಿಗಳಿಸಿ ಬಳಕೆಯಲ್ಲಿದೆ. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಅವರು ರಾಷ್ಟ್ರದ ಅನೇಕ ಆಯೋಗನಿಯೋಗಗಳಲ್ಲೂ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳಲ್ಲೂ ಇದ್ದುಕೊಂಡು ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. 1953ರ ಪ್ರೌಢಶಿಕ್ಷಣ ಪುನರ್ವ್ಯವಸ್ಥೆಯ ಆಯೋಗದ ಅಧ್ಯಕ್ಷರಾಗಿದ್ದು ಆ ಮಟ್ಟದ ಶಿಕ್ಷಣದ ಪುನರ್ವ್ಯವಸ್ಥೆಗೆ ಸಲಹಾರೂಪದ ವರದಿ ಸಲ್ಲಿಸಿದ್ದಾರೆ. ಅವರ ಸಲಹೆಗಳು ಕಳೆದ ಎರಡು ದಶಕಗಳಿಂದ ಕ್ರಮಕ್ರಮವಾಗಿ ಆಚರಣೆಗೆ ಬರುತ್ತಿವೆ. ಶಿಕ್ಷಣ ಪ್ರಪಂಚಕ್ಕೆ ಅವರು ಸಲ್ಲಿಸಿದ ಸೇವೆಯ ಸ್ಮರಣೆಗಾಗಿ 1960ರಲ್ಲಿ ಅವರಿಗೆ ದಾದಾಭಾಯಿ ನವರೋಜಿ ಸ್ಮಾರಕ ಫೆಲೋಷಿಪ್ ಪ್ರಶಸ್ತಿಯನ್ನಿತ್ತು ಗೌರವಿಸಲಾಯಿತು. ಅದೇ ವರ್ಷ ಮುಂಬಯಿ ವಿಶ್ವವಿದ್ಯಾಲಯದ ಘಟಿಕೋತ್ಸವ ಮಂಟಪದಲ್ಲಿ ಅವರು ದಾದಾಭಾಯಿ ನವರೋಜಿ ಉಪನ್ಯಾಸ ಮಾಲೆಗೆ ಸಂಬಂಧಿಸಿದಂತೆ 'ಭಾರತೀಯ ಶಿಕ್ಷಣದ ವಿಕಾಸ' ಎಂಬ ವಿಷಯವನ್ನು ಕುರಿತು ಎರಡು ಉಪನ್ಯಾಸಗಳನ್ನು ಕೊಟ್ಟರು. ಇಂಗ್ಲಿಷ್ ಭಾಷೆಯ ಆ ಉಪನ್ಯಾಸಗಳನ್ನು ಏಷ್ಯ ಪಬ್ಲಿಷಿಂಗ್ ಹೌಸಿನವರು Education in India ಎಂಬ ಹೆಸರಿನಲ್ಲಿ ಕಿರುಹೊತ್ತಗೆಯಾಗಿ ಪ್ರಕಟಿಸಿದರು. ಅದರ ಕನ್ನಡ ಅನುವಾದವನ್ನು ಕರ್ನಾಟಕ ವಿಶ್ವ ವಿದ್ಯಾಲಯ ಈಚೆಗೆ ಹೊರತಂದಿದೆ.*

ಈ ಕೃತಿಯಲ್ಲಿ ಮೂರು ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ಪ್ರಾಚೀನಕಾಲದಿಂದ ಹತ್ತೊಂಬತ್ತನೆಯ ಶತಮಾನದ ವರೆಗಿನ ಭಾರತೀಯ ಶಿಕ್ಷಣದ ಸಂಕ್ಷಿಪ್ತ ಇತಿಹಾಸದ ಹೆಗ್ಗುರೆಗಳನು ಸಂಗ್ರಹಿಸಿದೆ. ಎರಡನೆಯ ಅಧ್ಯಾಯದಲ್ಲಿ ಆಧುನಿಕ ಶಿಕ್ಷಣದ ಬೆಳವಣಿಗೆ ಮತ್ತು ಪ್ರಗತಿಯನ್ನು ವಿವರಿಸಿದೆ. ಕೊನೆಯ ಅಧ್ಯಾಯದಲ್ಲಿ ಉನ್ನತ ಶಿಕ್ಷಣದ ಕೆಲವು ಸಮಸ್ಯೆಗಳನ್ನು ಪರಿಶೀಲಿಸಿದೆ. ಒಂದು, ಎರಡನೆಯ ಅಧ್ಯಾಯಗಳಲ್ಲಿ ನಮ್ಮ ಶಿಕ್ಷಣದ ಇತಿಹಾಸದ ಪ್ರಮುಖ ಘಟ್ಟಗಳನ್ನು ಗುರುತಿಸಿದ್ದರೆ ಕೊನೆಯ ಅಧ್ಯಾಯದಲ್ಲಿ ಪ್ರಚಲಿತ ಶಿಕ್ಷಣ ಸಮಸ್ಯೆಗಳನ್ನು ಪರಿಶೀಲಿಸಿ ಅವುಗಳ ಪರಿಹಾರಕ್ಕೆ ತಮ್ಮ ಸಲಹೆಗಳನ್ನು ಮುಂದಿಸಿದ್ದಾರೆ. ಈ ಕೃತಿಯ ಪ್ರಾಮುಖ್ಯ ಮೂರನೆಯ ಅಧ್ಯಾಯಕ್ಕೆ ಸಲ್ಲುವದೆಂದು ಹೇಳಬಹುದು. ಅವರು ಎತ್ತಿರುವ ಹಲವು ಸಮಸ್ಯೆಗಳನ್ನೂ ನೀಡಿರುವ ಸಲಹೆಗಳನ್ನೂ ಬೇರೆಬೇರೆ ಶೀರ್ಷಿಕೆಗಳಲ್ಲಿ ಮುಂದೆ ವಿಮರ್ಶಿಸಿದೆ.

### ಸಮಗ್ರ ಉನ್ನತ ಶಿಕ್ಷಣದಲ್ಲಿ ಸಮನ್ವಯ

ಭಾರತದಲ್ಲಿ ನೂರಾರು ವಿಶ್ವವಿದ್ಯಾಲಯಗಳೂ ಪರಿಗಣಿತ ವಿಶ್ವವಿದ್ಯಾಲಯಗಳೂ ರಾಷ್ಟ್ರೀಯ ಪ್ರಾಮುಖ್ಯದ ಸಂಸ್ಥೆಗಳೂ ಸಂಶೋಧನ ಸಂಸ್ಥೆಗಳೂ ಉನ್ನತ ಶಿಕ್ಷಣ ನೀಡುತ್ತಿವೆ. ಅವುಗಳಲ್ಲಿ

---

* **ಭಾರತದಲ್ಲಿ ಶಿಕ್ಷಣ** : ಲೇ: ಎ. ಲಕ್ಷ್ಮಣಸ್ವಾಮಿ ಮುದಲಿಯಾರ್; ಕನ್ನಡ ಅನು: ಪ್ರೊ. ಜಿ. ಬಿ. ಮೆಂಚ; ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಪುಟಗಳು: 6 + 81; ಬೆಲೆ: ಸಾದಾ ಪ್ರತಿ ರೂ. 2.50 ಕ್ಯಾಲಿಕೊ ಪ್ರತಿ ರೂ. 4.00

ಸಾಂಸ್ಕೃತಿಕ (ಸಾಮಾನ್ಯ) ವಿಶ್ವವಿದ್ಯಾಲಯಗಳು ಮಾತ್ರ ವಿಶ್ವವಿದ್ಯಾಲಯದ ಧನ ಆಯೋಗದ ವ್ಯಾಪ್ತಿಗೆ ಒಳಪಟ್ಟಿದ್ದು ಅದರಿಂದ ಧನಸಹಾಯವನ್ನು ಪಡೆಯುತ್ತಿವೆ. ಎಂಜಿನಿಯರಿಂಗ್ ಮತ್ತು ತಾಂತ್ರಿಕ ಶಿಕ್ಷಣದ ಸಲಹಾ ಸಮಿತಿಯೊಂದು ಧನ ಆಯೋಗದ ನೇತೃತ್ವದಲ್ಲಿ ಕೆಲಸಮಾಡುತ್ತಿರುವುದರಿಂದ ಅವುಗಳಿಗೂ ಧನ ಆಯೋಗದ ಸಲಹೆ ಸಹಕಾರಗಳೂ ಧನಸಹಾಯವೂ ದೊರಕುತ್ತಿವೆ. ಈ ಕ್ಷೇತ್ರಗಳಲ್ಲಿ ಮಾತ್ರ ಆಯೋಗ ಸಮನ್ವಯವನ್ನು ಸಾಧಿಸುವುದಕ್ಕೂ ಶಿಕ್ಷಣದ ಮಟ್ಟವನ್ನು ಸಂರಕ್ಷಿಸಿಕೊಂಡು ಏಕರೂಪತೆಯನ್ನು ಕಾಪಾಡಿಕೊಂಡು ಬರುವುದಕ್ಕೂ ಸಾಧ್ಯವಾಗಿದೆ. ಅದರ ಫಲವಾಗಿ ಆ ಕ್ಷೇತ್ರಗಳಲ್ಲಿ ಗಣನೀಯ ಪ್ರಮಾಣದ ಪ್ರಗತಿ ಸಾಧನೆಯಾಗಿದೆ. ಆದರೆ ವೈದ್ಯ, ಕೃಷಿ, ಪಶುವೈದ್ಯ ಮುಂತಾದ ಕೆಲವು ವೃತ್ತಿಶಿಕ್ಷಣ ಸಂಸ್ಥೆಗಳು ಆಯಾ ಸಚಿವಾಲಯದಿಂದಲೇ ಹಣವನ್ನು ಪಡೆಯುತ್ತಿವೆ. ಜೊತೆಗೆ ಆ ಮೂಲದಿಂದಲೇ ಆದೇಶ ನಿರ್ದೇಶಗಳನ್ನೂ ಪಡೆದುಕೊಳ್ಳುತ್ತಿವೆ. ಇದರಿಂದ ವಿಶ್ವವಿದ್ಯಾಲಯದ ಧನ ಆಯೋಗಕ್ಕೆ ರಾಷ್ಟ್ರದ ಉನ್ನತ ಶಿಕ್ಷಣದ ಸಮಗ್ರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಮನ್ವಯವನ್ನು ಸಾಧಿಸುವುದಾಗಲಿ, ಶಿಕ್ಷಣದ ಮಟ್ಟವನ್ನು ಸಂರಕ್ಷಿಸಿಕೊಂಡು ಬರುವುದಾಗಲಿ ಸಾಧ್ಯವಾಗುತ್ತಿಲ್ಲ. ಅದು ಸಾಧ್ಯವಾಗಬೇಕಾದರೆ ಆ ಸಂಸ್ಥೆಗಳೂ ಧನ ಆಯೋಗದ ಕಾರ್ಯವ್ಯಾಪ್ತಿಗೆ ಒಳಪಡಬೇಕೆಂದು ಲೇಖಕರು ಸೂಚಿಸಿರುವರು. ಈ ಅಭಿಪ್ರಾಯವನ್ನು 1966ರಲ್ಲಿ ಕೊಠಾರಿ ಶಿಕ್ಷಣ ಆಯೋಗವೂ ಸಮ್ಮತಿಸಿದೆ. ತಾಂತ್ರಿಕಶಿಕ್ಷಣ, ಔದ್ಯೋಗಿಕ ಶಿಕ್ಷಣ, ಕೃಷಿವಿಜ್ಞಾನ, ದಂತವೈದ್ಯ, ವಾಣಿಜ್ಯಶಾಸ್ತ್ರ ಮುಂತಾದ ವಿಶೇಷ ವಿಷಯಗಳ ಸಲಹಾ ಸಮಿತಿಗಳನ್ನು ನೇಮಿಸಿ ಅವು ಧನ ಆಯೋಗದ ನೇತೃತ್ವದಲ್ಲಿ ಕೆಲಸಮಾಡುವಂತಾಗಬೇಕೆಂದೂ ಅವು ನೀಡುವ ಸಲಹೆಗಳ ಆಧಾರದ ಮೇಲೆ ಆಯೋಗ ಆಯಾ ಸಂಸ್ಥೆಗಳ ಶಿಕ್ಷಣದಲ್ಲಿ ಸಮನ್ವಯವನ್ನು ಸಾಧಿಸುವುದರ ಜೊತೆಗೆ ಗುಣಮಟ್ಟವನ್ನೂ ಉತ್ತಮಪಡಿಸಬಹುದೆಂದೂ ಲೇಖಕರು ಸಲಹೆಮಾಡಿರುವರು. ಇದು ಸಾಧ್ಯವಾಗಬೇಕಾದರೆ ಆ ಸಂಸ್ಥೆಗಳೆಲ್ಲ ಧನ ಆಯೋಗದ ಮೂಲಕವೇ ಹಣವನ್ನು ಪಡೆದುಕೊಳ್ಳುವಂತಾಗಬೇಕು.

## ನೂತನ ವಿಶ್ವವಿದ್ಯಾಲಯಗಳ ಸ್ಥಾಪನೆ

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ವಿಶ್ವವಿದ್ಯಾಲಯಗಳು ನಾಯಿಕೊಡೆಗಳಂತೆ ಅಧಿಕ ಸಂಖ್ಯೆಯಲ್ಲಿ ಅಸ್ತಿತ್ವಕ್ಕೆ ಬರುತ್ತಿವೆ. ರಾಜಕೀಯ ಮತ್ತು ಇತರ ಕಾರಣಗಳಿಂದಾಗಿ ಹಲವು ವೇಳೆ ಧನ ಆಯೋಗದ ಅನುಮತಿಗೂ ಕಾಯದೆ ರಾಜ್ಯ ಸರ್ಕಾರಗಳು ತೀರ ಆತುರದಿಂದ ವಿಶ್ವವಿದ್ಯಾಲಯಗಳನ್ನು ಸಂಘಟಿಸುತ್ತಿವೆ. ಅನಂತರ ಸಹಾಯಧನ ನೀಡುವಂತೆ ಧನ ಆಯೋಗದ ಮೇಲೆ ಇಲ್ಲದ ಸಲ್ಲದ ಒತ್ತಡ ಬೀರುವ ಯತ್ನ ನಡೆಯುತ್ತಿದೆ. ಕೇಂದ್ರ ಸರ್ಕಾರ ಅಂಥ ನೂತನ ವಿಶ್ವವಿದ್ಯಾಲಯಗಳ ಬಗ್ಗೆ ಹಣವನ್ನು ಆಯೋಗಕ್ಕೆ ಒದಗಿಸಿರುವುದಿಲ್ಲ. ಇದರ ಫಲವಾಗಿ ಆಯೋಗಕ್ಕೆ ಹಣ ಕೊಡುವುದು ದುಸ್ಸಹವಾಗುತ್ತದೆ. ನೂತನ ವಿಶ್ವವಿದ್ಯಾಲಯದ ಬೆಳವಣಿಗೆ ಕುಂಟುತ್ತ ಸಾಗಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಅನಗತ್ಯವಾದ ತೊಂದರೆಯಾಗಿ ಶಿಕ್ಷಣಾಭಿವೃದ್ಧಿ ನಿರೀಕ್ಷಿಸುವ ಮಟ್ಟಿಗೆ ಸಾಗವಾಗುತ್ತದೆ. ಇದೆಲ್ಲ ತಪ್ಪಬೇಕಾದರೆ ರಾಜ್ಯ ಸರ್ಕಾರ ನೂತನ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸಲು ಶಾಸನ ಮಾಡುವ ಮುನ್ನ ಅಧಿಕೃತ ಧನ ಆಯೋಗದ ಅನುಮತಿ ಪಡೆದುಕೊಳ್ಳುವುದು ಕಡ್ಡಾಯವಾಗಬೇಕೆಂದು ಲೇಖಕರು ಸಲಹೆ ಮಾಡಿರುವರು. ಈಚೆಗೆ ಈ ಅಭಿಪ್ರಾಯಕ್ಕೆ ಬೆಂಬಲ ದೊರೆತಿರುವುದಲ್ಲದೆ ಅದು ಅನುಷ್ಠಾನಕ್ಕೂ ಬರುತ್ತಿದೆ.

## ವಿಶ್ವವಿದ್ಯಾಲಯಗಳ ಮೇಲೆ ರಾಜ್ಯ ಸರ್ಕಾರದ ಹತೋಟಿ

ರಾಜ್ಯ ವಿಶ್ವವಿದ್ಯಾಲಯಗಳಿಗೆ ರಾಜ್ಯ ಸರ್ಕಾರಗಳು ಹೆಚ್ಚಿನ ಪ್ರಮಾಣದಲ್ಲಿ ಧನ ಒದಗಿಸುತ್ತಿವೆ. ಈ ಕಾರಣದಿಂದ ಸ್ವತಂತ್ರ ಸಂಸ್ಥೆಗಳಾಗಿದ್ದರೂ ವಿಶ್ವವಿದ್ಯಾಲಯಗಳ ಆಡಳಿತದಲ್ಲಿ ಅವು ಕೈಹಾಕುತ್ತಿರುವುದು ಕಂಡುಬರುತ್ತಿದೆ. ಅವುಗಳ ಆದಾಯ ವೆಚ್ಚಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಪರಿಶೀಲಿಸುವುದು, ಅಲ್ಲಿಯ ಆಗುಹೋಗುಗಳನ್ನು ವಿಧಾನಸಭೆಯಲ್ಲಿ ಚರ್ಚಿಸುವುದು, ನೂತನ ಯೋಜನೆಗಳಿಗೆ

ಅನುಮತಿ ನೀಡಿ ತಮ್ಮ ಪಾಲಿನ ಹಣ ಒದಗಿಸುವಾಗ ಯೋಜನೆಗಳನ್ನು ಪರಿಶೀಲಿಸುವುದು, ತಮ್ಮಿಷ್ಟವಂತೆ ವಿಶ್ವವಿದ್ಯಾಲಯ ಕೆಲಸಮಾಡುತ್ತಿದೆಯೆ ಎಂದು ವಿಚಾರಿಸುತ್ತಿರುವುದು—ಇವೇ ಮುಂತಾದ ರೀತಿಯಲ್ಲಿ ಕೈಹಾಕುತ್ತಿರುವುದು ಕಂಡುಬರುತ್ತಿದೆ. ಮುಖ್ಯವಾಗಿ ನೂತನ ಯೋಜನೆಗಳನ್ನು ಆರಂಭಿಸುವಾಗ ಇಲ್ಲದ ಸಲ್ಲದ ಆಕ್ಷೇಪಣೆಗಳನ್ನೆತ್ತಿ ಅಡಚಣೆಯೊಡ್ಡುತ್ತಿವೆ. ಲೇಖಕರು ಈ ಪರಿಸ್ಥಿತಿಯನ್ನು ಕುರಿತು "ಆಯೋಗದಿಂದ ಒಪ್ಪಿತವಾದ ಹಾಗೂ ಸುದೀರ್ಘ ಆಲೋಚನೆಯ ಅನಂತರ ಸಿದ್ಧಪಡಿಸಲಾದ ವಿಶ್ವವಿದ್ಯಾಲಯಗಳ ಯೋಜನೆಗಳ ಬಗೆಗೆ ಚರ್ಚಿಸುವ ಅಧಿಕಾರ ಎಲ್ಲ ರಾಜ್ಯ ಸರ್ಕಾರಗಳಿಗೂ ಇರಬೇಕೆಂದು ಪ್ರತಿಪಾದಿಸಲಾಗಿದೆ. ಹಾಗೆ ಮಾಡುತ್ತ ಹೋದರೆ ಧನಸಹಾಯಕ ಆಯೋಗದ ಸ್ವಾತಂತ್ರ್ಯ ಸ್ಥಾನಮಾನಗಳಿಗೆ ಚ್ಯುತಿ ಬರುತ್ತದೆ. ಈ ಕಾರಣಗಳಿಂದಾಗಿ......ಆಯೋಗ ತನಗೆ ಒಪ್ಪಿತವಾದ ಎಲ್ಲ ಆವರ್ತ ವೆಚ್ಚಗಳಿಗಾಗಿಯೂ ಅಲ್ಲದೆ ತಾನು ಸೂಚಿಸುವ ಎಲ್ಲ ವಿಶಿಷ್ಟ ಸುಧಾರಣೆಗಳನ್ನು ಕಾರ್ಯರೂಪದಲ್ಲಿ ತರಲೂ ಎಲ್ಲ ವಿಶ್ವವಿದ್ಯಾಲಯಗಳಿಗೆ ನೇರವಾಗಿ ಧನಸಹಾಯ ಮಾಡುವುದು ಒಳ್ಳೆಯದು. ಹೀಗೆ ಮಾಡಿದಲ್ಲಿ ಭಾರತದ ಲೋಕಸಭೆ ಯಾವ ಉದ್ದೇಶವನ್ನಿಟ್ಟುಕೊಂಡು ಈ ಆಯೋಗವನ್ನು ರಚಿಸಲು ಕಾಯ್ದೆ ಪಾಸುಮಾಡಿದೆಯೊ ಆ ಉದ್ದೇಶಗಳನ್ನು ಕಾರ್ಯರೂಪದಲ್ಲಿ ತರಲು ಸಾಧ್ಯವಾಗುತ್ತದೆ" ಎಂದು ಸೂಚಿಸಿರುವರು. ಉನ್ನತ ಶಿಕ್ಷಣದ, ಹಾಗೂ ವಿಶೇಷವಾಗಿ ಸ್ನಾತಕೋತ್ತರ ಶಿಕ್ಷಣದ ಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರವೇ ವಹಿಸಿಕೊಳ್ಳಬೇಕೆಂಬುದು ಅವರ ಮತ್ತೊಂದು ಸಲಹೆ. ಈ ಸಲಹೆಗಳು ನಿಜವಾಗಿಯೂ ರಾಜ್ಯ ಸರ್ಕಾರ ವಿಶ್ವವಿದ್ಯಾಲಯಗಳ ಆಡಳಿತದಲ್ಲಿ ಕೈಹಾಕುವುದನ್ನು ತಪ್ಪಿಸಬಹುದಾದ್ದರಿಂದ ಸ್ವಾಗತಾರ್ಹವೆನ್ನಬೇಕು. ಈ ಪದ್ಧತಿ ಮುಂದುವರಿದ ಹಲವು ರಾಷ್ಟ್ರಗಳಲ್ಲಿ ಆಚರಣೆಯಲ್ಲಿದೆ. ಇದು ಆರ್ಥಿಕ ದೃಷ್ಟಿಯಿಂದ ರಾಜ್ಯ ಸರಕಾರಗಳಿಗೆ ಒಪ್ಪಿಗೆಯಾದರೂ ತಮ್ಮ ಅಧಿಕಾರವ್ಯಾಪ್ತಿಯ ದೃಷ್ಟಿಯಿಂದ ವಿರೋಧ ಸ್ವಾಭಾವಿಕವಾಗಿ ವ್ಯಕ್ತಪಡುತ್ತದೆ. ಲೇಖಕರ ಸಲಹೆ ಅನುಷ್ಠಾನಕ್ಕೆ ಬರುವುದಾದರೆ ರಾಜ್ಯ ವಿಶ್ವವಿದ್ಯಾಲಯಗಳೂ ಕೇಂದ್ರೀಯ ವಿಶ್ವವಿದ್ಯಾಲಯಗಳಂತೆ ಕೆಲಸಮಾಡಬಲ್ಲುವು.

## ವಿಶ್ವವಿದ್ಯಾಲಯದ ಸ್ವಾಯತ್ತತೆ

ವಿಶ್ವವಿದ್ಯಾಲಯಗಳ ಸ್ವಾತಂತ್ರ್ಯ ಎರಡು ಮುಖಗಳನ್ನು ಹೊಂದಿದೆ—ವಿದ್ಯಾ ಸ್ವಾತಂತ್ರ್ಯ ಮತ್ತು ಆಡಳಿತ ಸ್ವಾತಂತ್ರ್ಯ. ಪ್ರವೇಶ ನೀಡಿಕೆ, ಪಠ್ಯಕ್ರಮದ ನಿಷ್ಕರ್ಷೆ, ಬೋಧನ ವಿಧಾನ, ಪರೀಕ್ಷಾ ವ್ಯವಸ್ಥೆ, ಸಂಶೋಧನೆ, ವಿಚಾರ ವಿಮರ್ಶೆ ಮತ್ತು ಅವುಗಳ ಪ್ರಕಟನೆ ಮತ್ತು ಅಧ್ಯಾಪಕರ ನೇಮಕ—ಇವು ಮೊದಲ ಮುಖಕ್ಕೆ ಸೇರಿದ ಅಂಶಗಳು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಾಗೂ ವಿಶ್ವವಿದ್ಯಾಲಯ ಧನ ಆಯೋಗ, ಅಂತರ ವಿಶ್ವವಿದ್ಯಾಲಯ ಮಂಡಲಿ, ಅಖಿಲ ಭಾರತೀಯ ಪರಿಷತ್ತುಗಳೇ ಮುಂತಾದವುಗಳ ಬಾಹ್ಯನಿಯಂತ್ರಣಗಳಿಂದ ವಿಮುಕ್ತಿ ಪಡೆದಿರುವುದು ಎರಡನೆಯ ಮುಖ. ವಿದ್ಯಾಸ್ವಾತಂತ್ರ್ಯ ಎಲ್ಲ ದೃಷ್ಟಿಗಳಿಂದಲೂ ಸ್ವಾಗತಾರ್ಹ ಹಾಗೂ ಜ್ಞಾನಪ್ರಗತಿಗೆ ತೀರ ಅಗತ್ಯ. ಎರಡನೆಯ ಮುಖವಾದ ಆಡಳಿತ ಕ್ಷೇತ್ರದಲ್ಲೂ ತನ್ನ ಕರ್ತವ್ಯ ನಿರ್ವಹಣೆಗೆ ಅಗತ್ಯವಾದಷ್ಟು ಸ್ವಾತಂತ್ರ್ಯ ಇರಬೇಕು. ಈ ದ್ವಿಮುಖ ಸ್ವಾತಂತ್ರ್ಯವನ್ನು ಎತ್ತಿ ಹಿಡಿದಿದ್ದರೂ ಲೇಖಕರು ವಿಶ್ವವಿದ್ಯಾಲಯಗಳಿಗೆ ನಿರಂಕುಶ ಸ್ವಾತಂತ್ರ್ಯವನ್ನು ಮಾತ್ರ ಪ್ರತಿಪಾದಿಸಿಲ್ಲ. ತಪ್ಪುದಾರಿ ಹಿಡಿದಾಗಲೂ ಅದಕ್ಕೆ ಸ್ವಾತಂತ್ರ್ಯ ಇರಬೇಕೆಂದು ವಾದಿಸಿದರೆ ಅಂಥ ವಾದಕ್ಕೆ ಸಾರ್ವಜನಿಕರ ಬೆಂಬಲ ಹೇಗೆ ತಾನೆ ದೊರಕಬಲ್ಲದೆಂದು ಪ್ರಶ್ನಿಸಿರುವರು. ಇದು ಸಹಜ. ಸಾರ್ವಜನಿಕ ಹಣದಿಂದ ನಡೆಯುವ ಯಾವ ಸೇವಾ ವ್ಯವಸ್ಥೆಯೇ ಆಗಲಿ ಸಾರ್ವಜನಿಕರಿಗೆ, ಅವರ ಪ್ರತಿನಿಧಿಗಳಿಗೆ, ಎಂದರೆ ಸರ್ಕಾರಕ್ಕೆ ಹೊಣೆಯಾಗಿರಬೇಕೆನ್ನುವುದು ಸ್ವಾಭಾವಿಕ. ಪ್ರಾದೇಶಿಕ ಹಾಗೂ ಮತೀಯ ಕೈವಾಡ ಅಧಿಕವಾಗಿರುವ ಭಾರತದಲ್ಲಿ ವಿಶ್ವವಿದ್ಯಾಲಯಗಳು ತಪ್ಪು ದಾರಿ ಹಿಡಿಯುವ ಸಂಭವ ಇದ್ದೇ ಇದೆ. ಅಂಥ ಸಂದರ್ಭಗಳಲ್ಲಿ ಸರ್ಕಾರ ಅಗತ್ಯವಾಗಿ ಕೈಹಾಕಬೇಕಾಗುತ್ತದೆ. ಆದರೆ ಅನಗತ್ಯವಾಗಿ ಸಣ್ಣಪುಟ್ಟ ವಿಷಯಗಳಿಗೆಲ್ಲ ಸರ್ಕಾರ ಕೈಹಾಕುವುದಾಗಲಿ, ಲೇಖಕರು ಆ ಬಗ್ಗೆ, "ಮಂತ್ರಿಸೈಕ ಣಿಕ ವಿಷಯಗಳ ಬಗ್ಗೆ ನಿಯಂತ್ರಿಸುವುದಾಗಲಿ ಉಚಿತವೆನಿಸದು.

ಶಾಖೆಗಳ ಪ್ರಮುಖ ವ್ಯಕ್ತಿಗಳು ಸರ್ಕಾರದ ಅವಶ್ಯಕತೆಗಳಿಗನುಗುಣವಾಗಿ, ಅದಕ್ಕೆ ತಕ್ಕ ಶಿಕ್ಷಣವನ್ನು ಕೊಡುವ ರೀತಿಯಲ್ಲಿ ಅಭ್ಯಾಸಕ್ರಮ ಹಾಗೂ ಕೋರ್ಸುಗಳನ್ನು ರಚಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇದು ದುರ್ದೈವದ ಸಂಗತಿ. ಇದರಿಂದ ತೊಡಕಿನ ಪ್ರಸಂಗಗಳು ಉದ್ಭವಿಸುತ್ತವೆ" ಎಂದು ಎಚ್ಚರಿಸಿರುವರು. ಈ ಅಭಿಪ್ರಾಯ ಎಲ್ಲ ರಾಷ್ಟ್ರಗಳಲ್ಲೂ ಮಾನ್ಯತೆಯನ್ನು ಪಡೆದಿದೆ. ಶಿಕ್ಷಣ ಕ್ಷೇತ್ರದಲ್ಲಿ ಅಷ್ಟಾಗಿ ಅನುಭವವೇ ಇಲ್ಲದ ಸಚಿವಾಲಯದ ಕಾರ್ಯದರ್ಶಿಗಳು ಸರ್ಕಾರದ ಆ ಅಭಿಪ್ರಾಯಗಳನ್ನು ವಿಶ್ವವಿದ್ಯಾಲಯಗಳ ಮೇಲೆ ಹೇರಲು ಬಂದರೆ ಅನರ್ಥವೇ ಸಂಭವಿಸಬಹುದು. ಚೆನ್ನಾಗಿ ಆಲೋಚಿಸಿ ವಿಶ್ವವಿದ್ಯಾಲಯಗಳಿಗೆ ಅಂಥ ಸಲಹೆಗಳನ್ನು ನೀಡಲೆಂದು ರಚಿಸಿರುವ ವಿಶ್ವವಿದ್ಯಾಲಯದ ಧನ ಆಯೋಗ, ಅಂತರ ವಿಶ್ವವಿದ್ಯಾಲಯ ಮಂಡಲಿ ಮುಂತಾದವು ಆ ಕಾರ್ಯವನ್ನು ನಿರ್ವಹಿಸಬೇಕು. ಸರ್ಕಾರದ ಅಧಿಕಾರ ಆಗಾಗ ಪಕ್ಷ ಪಂಗಡಗಳ ಕೈ ಬದಲಾಯಿಸುವ ಭಾರತದಂಥ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಮಂತ್ರಿಗಳಾಗಲಿ, ರಾಜಕೀಯ ಪ್ರಭಾರಿಗಳಾಗಲಿ, ಅವರ ಇಷ್ಟದಂತೆ ಸಚಿವಾಲಯದ ಕಾರ್ಯದರ್ಶಿಗಳಾಗಲಿ ವಿಶ್ವವಿದ್ಯಾಲಯದ ಕಾರ್ಯಕ್ರಮಗಳನ್ನು ನಿರ್ದೇಶಿಸುವುದರಿಂದ ವಿಶ್ವವಿದ್ಯಾಲಯಗಳಿಗೆ ಸ್ವತಂತ್ರ ಅಸ್ತಿತ್ವವಾಗಲಿ ವ್ಯಕ್ತಿತ್ವವಾಗಲಿ ಉಳಿಯಲಾರದು.

## ಏಕಘಟಕ ವಿಶ್ವವಿದ್ಯಾಲಯಗಳ ಸ್ಥಾಪನೆ

ಒಂದೇ ವಿಷಯ ವಿಭಾಗವುಳ್ಳ ಸಂಸ್ಥೆಗಳನ್ನು ವಿಶ್ವವಿದ್ಯಾಲಯದ ಮಟ್ಟಕ್ಕೆ ಏರಿಸುವುದನ್ನು ಅವರು ವಿರೋಧಿಸುತ್ತ, "ಇಂಥ ಪದ್ಧತಿ ಸಂಕುಚಿತ ವಿಚಾರ ಹಾಗೂ ವಿಶ್ವವಿದ್ಯಾಲಯಗಳ ಕೆಳಮಟ್ಟಕ್ಕೆ ಕಾರಣೀಭೂತವಾಗುವುದರಲ್ಲಿ ಸಂದೇಹವೇ ಇಲ್ಲ ..ವಿಶ್ವವಿದ್ಯಾಲಯದ ತಾತ್ವಿಕ ಅರ್ಥಕ್ಕೆ ಬಾಧೆ ಬರುವಂತಾಗುತ್ತದೆ. ಅಲ್ಲದೆ ಅದರಿಂದ ಒಂದು ವಿಭಾಗದ ವಿದ್ಯಾರ್ಥಿಗಳಿಗೆ ಉಳಿದ ವಿಭಾಗಗಳಾದ ಸಮಾಜಶಾಸ್ತ್ರ, ವಿಜ್ಞಾನ ಹಾಗೂ ತಾಂತ್ರಿಕ ವಿಭಾಗಗಳಲ್ಲಿರುವ ಅಸಂಖ್ಯಾತ ವಿದ್ಯಾರ್ಥಿಗಳೊಡನೆ ಬೆರೆಯುವ ಸುವರ್ಣಾವಕಾಶವನ್ನು ತಪ್ಪಿಸಿದಂತಾಗುವುದು", ಎಂದು ಸೂಚಿಸಿರುವರು. ಹಿಂದೆ ಟೆಕ್ನಾಲಜಿ ಕಾಲೇಜೊಂದನ್ನು ವಿಶ್ವವಿದ್ಯಾಲಯದ ಅಂತಸ್ತಿಗೆ ಸರ್ಕಾರ ಏರಿಸಿದಾಗ ಅಂತರವಿಶ್ವವಿದ್ಯಾಲಯ ಮಂಡಲಿಯೂ ಇದೇ ರೀತಿಯ ವಿರೋಧವನ್ನು ವ್ಯಕ್ತಪಡಿಸಿತು. ಅಲ್ಲಿಂದೀಚೆಗೆ ಅಂಥ ಹಲವಾರು ಏಕವಿಭಾಗದ ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬಂದಿವೆ. ಲೇಖಕರ ಮೇಲಿನ ಅಭಿಪ್ರಾಯವನ್ನು ಸ್ಥೂಲವಾಗಿ ಒಪ್ಪಬಹುದಾದರೂ ಕೆಲವು ಸಂಸ್ಥೆಗಳ ಬಗ್ಗೆ ಆ ಮುಖ್ಯವಾದ ವ್ಯವಸ್ಥೆಗೆ ಅವಕಾಶ ಕಲ್ಪಿಸುವುದು ಅಗತ್ಯವೆನಿಸುತ್ತದೆ. ಇಂಡಿಯನ್ ಇನ್ಸ್ಟಿಟ್ಯೂಟ್ಸ್ ಆಫ್ ಟೆಕ್ನಾಲಜಿ(ಐ.ಐ.ಟಿ)ಗಳ ಬಗ್ಗೆ ಹೇಳುವುದಾದರೆ ಇಂಥ ವ್ಯವಸ್ಥೆಯಿಂದ ಒಳ್ಳೆಯದೇ ಆಗಿರುವುದು ಸ್ಪಷ್ಟವಾಗುತ್ತದೆ. ಬೆಂಗಳೂರು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ಗೆ ಪರಿಗಣಿತ ವಿಶ್ವವಿದ್ಯಾಲಯದ ಅಂತಸ್ತನ್ನು ಕೊಟ್ಟ ಮೇಲೆ ಅದರ ಕಾರ್ಯದಲ್ಲಿ ಹೆಚ್ಚಿನ ದಕ್ಷತೆ ಕಂಡುಬಂದಿದೆ. ಎಂದ ಮೇಲೆ ಏಕ ವಿಷಯ ವಿಭಾಗಗಳಾಗಿದ್ದರೂ ಕೆಲವು ವಿಶಿಷ್ಟ ರೀತಿಯ ಸಂಸ್ಥೆಗಳಿಗೆ ವಿಶ್ವವಿದ್ಯಾಲಯದ ಸ್ಥಾನಮಾನಗಳನ್ನು ಕೊಡುವುದು ಒಂದು ಪ್ರಗತಿಯ ಲಕ್ಷಣವೆಂದು ಹೇಳಬೇಕಾಗುತ್ತದೆ.

## ರಾಷ್ಟ್ರೀಯ ಪರಿಷತ್ತುಗಳ ಒತ್ತಡ

ಕೇಂದ್ರದಲ್ಲಿ ಏರ್ಪಟ್ಟಿರುವ ರಾಷ್ಟ್ರೀಯ ಪರಿಷತ್ತುಗಳು ವಿಶ್ವವಿದ್ಯಾಲಯಗಳ ಮೇಲೆ ಹಾಕುತ್ತಿರುವ ಒತ್ತಡ ಮತ್ತು ನಿರ್ಬಂಧಗಳು ಸಾಧುವೇ ಎಂಬುದು ಭಾರತದಲ್ಲಿ ಈಚೆಗೆ ಪ್ರಾಮುಖ್ಯಕ್ಕೆ ಬಂದಿರುವ ಸಮಸ್ಯೆಗಳಲ್ಲೊಂದು. ಲೇಖಕರು ಈ ಸಮಸ್ಯೆಯನ್ನು ಪರಿಶೀಲಿಸುತ್ತ, "ವಿಶ್ವವಿದ್ಯಾಲಯಗಳಿಗೆ ಸ್ವಾಯತ್ತತೆ ಬೇಕೆನ್ನುವವರು ವಿಶ್ವವಿದ್ಯಾಲಯಗಳ ಮೇಲೆ ಒತ್ತಡವನ್ನು ತರುವ ಮತ್ತೊಂದು ಶಕ್ತಿಯ ಕಡೆ ತೀವ್ರವಾಗಿ ಗಮನವೀಯಬೇಕಾಗುತ್ತದೆ. ಈ ಶಕ್ತಿಯು ವೈದ್ಯಕೀಯ, ತಾಂತ್ರಿಕ, ಆಯುರ್ವೇದ ಮತ್ತು ಔದ್ಯೋಗಿಕ ರಂಗದಲ್ಲಿ ತನ್ನ ಒತ್ತಡವನ್ನು ತರುತ್ತದೆ", ಎಂದು ಸೂಚಿಸಿ, ಅದಕ್ಕೊಂದು ಉದಾಹರಣೆ ಕೊಡುತ್ತ "ಭಾರತೀಯ ವೈದ್ಯಕೀಯ ಪರಿಷತ್ತು (ಇಂಡಿಯನ್ ಮೆಡಿಕಲ್ ಕೌನ್ಸಿಲ್) ವೈದ್ಯ

ಕೀಯ. ವಿದ್ಯಾರಂಗದಲ್ಲಿ ಯಾವುದೇ ವಿಶ್ವವಿದ್ಯಾಲಯಕ್ಕಿಂತ ಹೆಚ್ಚಿನ ನಿಯಂತ್ರಣವಿಡುವವರ ಮಟ್ಟಿಗೆ ಅದರ ಒತ್ತಡ ಹೆಚ್ಚಾಗಿದೆ. ಅಭ್ಯಾಸಕ್ರಮ, ಉಪಕರಣಗಳ ಮಟ್ಟ, ಶಿಕ್ಷಕರ ಶಿಕ್ಷಣಾರ್ಹತೆ, ಪರೀಕ್ಷಾ ವಿಧಾನ, ವಿದ್ಯಾಮಟ್ಟ–ಇವೆಲ್ಲವನ್ನೂ ಪರಿಷತ್ತೇ ರೂಪಿಸುವುದರಿಂದ ವಿಶ್ವವಿದ್ಯಾಲಯಗಳಿಗೆ ಈ ರಂಗದಲ್ಲಿ ಕೆಲಸ ಮಾಡಲು ಅವಕಾಶವೇ ಸಿಕ್ಕುವುದಿಲ್ಲ", ಎಂದಿರುವರು. ಈ ಮಾತು ಅಕ್ಷರಶಃ ನಿಜವೆನಿಸಿದೆ. ಎಲ್ಲೋ ಗೌರೀಶಂಕರದ ಬಳಿ ಕುಳಿತು ಕನ್ಯಾಕುಮಾರಿಯ ವರೆಗೆ ಹರಡಿರುವ ಶಿಕ್ಷಣ ಸಂಸ್ಥೆಗಳ ಕಾರ್ಯವನ್ನು ಗುಂಡಿಯೊತ್ತಿ ತಮ್ಮಿಷ್ಟ ಬಂದಂತೆ ನಿಯಂತ್ರಿಸಲು ಯತ್ನಿಸುವ ಆ ಪರಿಷತ್ತುಗಳು ತಮಗೆ ವಹಿಸಿರುವ ಕಾರ್ಯವನ್ನು ಕಣ್ಣು ಮುಚ್ಚಿಕೊಂಡು ಯಾಂತ್ರಿಕವಾಗಿ ನಿರ್ವಹಿಸುತ್ತಿವೆಯೆನ್ನದೆ ವಿಧಿಯಿಲ್ಲ. ಉನ್ನತ ಶಿಕ್ಷಣದಲ್ಲಿ ಏಕರೂಪತೆಯನ್ನೂ ಸಮನ್ವಯತೆಯನ್ನೂ ಮೂಡಿಸಿ, ಗುಣಮಟ್ಟವನ್ನು ಸಂರಕ್ಷಿಸಿಕೊಂಡು ಬರಲೆಂದು ಸ್ಥಾಪಿಸಲಾಗಿರುವ ಅಂಥ ಸಂಸ್ಥೆಗಳು ಸ್ಥಳೀಯ ಪರಿಸ್ಥಿತಿಯನ್ನು ನಿರ್ಲಕ್ಷಿಸಿ ಸರ್ವಾಧಿಕಾರಿಗಳಂತೆ ನಡೆದುಕೊಳ್ಳುತ್ತಿರುವುದು ಶೋಚನೀಯ ವಿಷಯ. ವಿಶ್ವವಿದ್ಯಾಲಯಗಳನ್ನು ಪ್ರಾಥಮಿಕ ಶಾಲೆಗಳಂತೆ ಭಾವಿಸಿ ಅವುಗಳ ಕಾರ್ಯವನ್ನು ಹೆಜ್ಜೆ ಹೆಜ್ಜೆಗೂ ನಿಯಂತ್ರಿಸಲು ಯತ್ನಿಸುವ ಆ ಸಂಸ್ಥೆಗಳ ಸರ್ವಾಧಿಕಾರ ಪ್ರವೃತ್ತಿಯಿಂದ ವಿಶ್ವವಿದ್ಯಾಲಯಗಳ ವ್ಯಕ್ತಿತ್ವಕ್ಕೆ ಕಳಂಕ ಬರುತ್ತಿದೆ. ಅವುಗಳ ಸ್ವಾಯತ್ತತೆಗೆ ಧಕ್ಕೆ ಬರುತ್ತಿದೆ. ರಾಷ್ಟ್ರದ ಬೊಕ್ಕಸವನ್ನು ಕರಗಿಸುತ್ತಿರುವ ಅಂಥ ಹಲವಾರು ಸಂಸ್ಥೆಗಳು ತಮ್ಮ ನಿಜವಾದ ಕರ್ತವ್ಯಗಳನ್ನು ಅರಿತುಕೊಂಡು ಅಧಿಕಾರದ ವ್ಯಾಪ್ತಿಯನ್ನು ಮೀರದೆ ಮೂಲ ಉದ್ದೇಶವನ್ನು ಸಾಧಿಸಬೇಕೆಂದು ಲೇಖಕರು ಸೂಚಿಸಿರುವುದು ಸಾಧುವೇ ಆಗಿದೆ.

## ಉನ್ನತ ಶಿಕ್ಷಣದಲ್ಲಿ ವ್ಯಾಪಾರೀ ಪ್ರವೃತ್ತಿ

ಕೆಲವು ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳು ದೇಣಿಗೆ ತೆಗೆದುಕೊಂಡು ಪ್ರವೇಶಾವಕಾಶ ನೀಡುವುದು, ಶ್ರೀಮಂತರಿಗೆ ನಾಲ್ಕಾರು ವರ್ಷ ಮುಂಚಿತವಾಗಿ ಸ್ಥಾನವನ್ನು ಕಾದಿರಿಸುವುದು–ಇವೇ ಮುಂತಾದ ವ್ಯಾಪಾರೀ ಪ್ರವೃತ್ತಿಗಳಿಂದ ಆಗುತ್ತಿರುವ ಅನರ್ಥವನ್ನು ಪರಿಶೀಲಿಸುತ್ತ ಲೇಖಕರು ಇದರಿಂದ "ಶಿಕ್ಷಣವು ಕೇವಲ ಶ್ರೀಮಂತರಿಗೆ ಮಾತ್ರ ಲಭಿಸುವಂತೆ ಮಾಡಲು ಕಾರಣವಾಗುತ್ತದೆ. ಇವುಗಳಿಂದಾಗುವ ದುಷ್ಪರಿಣಾಮಗಳು ಇಷ್ಟೇ ಎಂದು ಹೇಳಲು ಸಾಧ್ಯವಿಲ್ಲ. ಇಂಥವುಗಳಿಗೆ ಸರ್ಕಾರದ ಪ್ರೋತ್ಸಾಹ ಮತ್ತು ಸಹನೆ ಇರುವುದರಿಂದ ಈ ದೇಶದ ಉಚ್ಚ ಶಿಕ್ಷಣದ ಭವಿಷ್ಯದ ಸ್ಥಿತಿಯು ಗಂಡಾಂತರಕಾರಿಯಾಗಿದೆ", ಎಂದು ಸೂಚಿಸಿ. ಅರ್ಹತೆಯುಳ್ಳ ಎಲ್ಲ ವರ್ಗದ ವಿದ್ಯಾರ್ಥಿಗಳಿಗೂ ಆ ಸೌಲಭ್ಯ ದೊರಕುವಂತಾಗಬೇಕೆಂಬ ಕಳಕಳಿಯ ಆಶಯವನ್ನು ವ್ಯಕ್ತಪಡಿಸಿರುವರು.

## ವಿದ್ಯಾರ್ಥಿ ಸಂಘಗಳು ಮತ್ತು ರಾಜಕೀಯ ಪಕ್ಷಗಳು

ವಿದ್ಯಾರ್ಥಿಗಳು ಕೆಲವು ರಾಜಕೀಯ ಪಕ್ಷಗಳ ನಿರ್ದೇಶನಕ್ಕೆ ಒಳಗಾಗಿ ಅವರ ಸ್ವಾರ್ಥ ದೃಷ್ಟಿಗೆ ಹೆಜ್ಜೆಯಿಡುತ್ತಿರುವ ಬಗ್ಗೆ ಲೇಖಕರು ಕಳವಳ ವ್ಯಕ್ತಪಡಿಸಿರುವರು. ಸದ್ಯದಲ್ಲಿ ಎಲ್ಲೆಡೆಯೂ ತಲೆದೋರುತ್ತಿರುವ ವಿದ್ಯಾರ್ಥಿ ಅಶಾಂತಿಗೆ ರಾಜಕೀಯ ಪಕ್ಷಗಳ ಕೈವಾಡವೂ ಒಂದು ಕಾರಣವೆಂಬ ಅಂಶ ಸ್ಪಷ್ಟವಾಗಿದೆ. ವಿದ್ಯಾರ್ಥಿಗಳು ಹಾಗೆ ರಾಜಕೀಯವಾಗಿ ಚಟುವಟಿಕೆಯಿಂದಿರುವುದು ವಿಹಿತವೇ ಎಂಬ ಅಂಶವನ್ನು ಪ್ರಶ್ನಿಸುವುದು ಈಗ ಹಳೆಯ ಮಾತಾಗಿ ತೋರುತ್ತಿದೆ. ಆ ಬಗ್ಗೆ ಲೇಖಕರು, "ವಿದ್ಯಾರ್ಥಿಗಳು ದೇಶದ ಮಹತ್ವದ ವಿಷಯಗಳನ್ನು ಕುರಿತು ಚರ್ಚಿಸಕೂಡದೆಂಬುದೂ ಅಲ್ಲ; ಅಥವಾ ಅವರು ಯಾವುದೇ ರಾಜಕೀಯ ಪಕ್ಷವನ್ನು ಮೆಚ್ಚಕೂಡದೆಂಬುದೂ ಅಲ್ಲ. ಆದರೆ ರಾಜಕೀಯ ಪುಢಾರಿಗಳು ವಿದ್ಯಾರ್ಥಿಗಳ ಸಂಘಟನೆಗಳನ್ನು ಉಪಯೋಗಿಸಿ ಯಾವುದೊಂದು ರಾಜಕೀಯ ಪಕ್ಷದ ಇಲ್ಲವೆ ವ್ಯಕ್ತಿಯ ಸ್ವಾರ್ಥ ಸಾಧಿಸಲು ಯತ್ನಿಸುವುದು ಖಂಡನೀಯ", ಎಂದಿರುವರು. ರಾಜಕೀಯ ಪಕ್ಷಗಳು ವಿದ್ಯಾರ್ಥಿಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವುದರಿಂದ ಶಿಕ್ಷಣಸಂಸ್ಥೆಗಳಲ್ಲಿ ಅಶಿಸ್ತು, ಅಶಾಂತಿಗಳು ತಲೆಹಾಕಿಕೊಂಡು ಅವುಗಳು ತಮ್ಮ ಕರ್ತವ್ಯವನ್ನು ನಿರ್ವಹಿಸಲಾರವಾಗುತ್ತಿವೆ. ವಿದ್ಯಾರ್ಥಿಗಳು ರಾಜಕೀಯ ಮತ್ತು ಇತರ ಸಮಸ್ಯೆಗಳನ್ನು ಚರ್ಚಿಸಲಿ; ತಮ್ಮ ಒಲವನ್ನು ರೂಢಿಸಿಕೊಳ್ಳಲಿ; ಆದರೆ

ಪಕ್ಷಗಳ ಕೈಗೊಂಬೆಯಾಗದಿರಲಿ. ತಮ್ಮ ಸಂಘಟಿತ ಶಕ್ತಿಸಾಮರ್ಥ್ಯಗಳನ್ನು ಜ್ಞಾನಾರ್ಜನೆ, ವ್ಯಕ್ತಿತ್ವದ ಬೆಳವಣಿಗೆ, ಮುಂಬರುವ ಜೀವನೋಪಾಯಾದಿ ಸಮಸ್ಯೆಗಳ ಬಗ್ಗೆ ಚಿಂತನೆ—ಇವುಗಳ ಕಡೆ ಹರಿಸಿದರೆ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಲು ಸಾಧ್ಯವಾಗುತ್ತದೆ. ವಿಶ್ವವಿದ್ಯಾಲಯಗಳು ತಮ್ಮ ಕರ್ತವ್ಯ ವನ್ನು ಸುಸೂತ್ರವಾಗಿ ನಿರ್ವಹಿಸಲೂ ಅವಕಾಶವಾಗುತ್ತದೆ. ಈ ಅಂಶವನ್ನು ನಮ್ಮ ರಾಜಕೀಯ ಪಕ್ಷಗಳು ಅರಿತು ಆಚರಣೆಗೆ ತರಲೆಂದು ಲೇಖಕರು ಆಶಿಸಿರುವರು.

## ಶಿಕ್ಷಣದ ಮಟ್ಟ

ಈಚೆಗೆ ಎಲ್ಲ ಅಂತಸ್ತುಗಳಂತೆ ಉನ್ನತ ಶಿಕ್ಷಣದ ಅಂತಸ್ತಿನಲ್ಲೂ ಶಿಕ್ಷಣದ ಮಟ್ಟ ಇಳಿದಿದೆ ಎಂದು ಹೇಳುವುದು ಕೇಳಿಬರುತ್ತಿದೆ. ಲೇಖಕರು "ಈ ಅಂಶವನ್ನು ಒಪ್ಪಿದರೂ, ವಿದ್ಯಾರ್ಥಿಗಳು ಅಸಮರ್ಥರೆಂದು ಭಾವಿಸುವುದು ತಪ್ಪಾಗುವುದು...ಶಿಕ್ಷಣದ ಮಟ್ಟ ಇಳಿದಿದೆಯೆನ್ನತಕ್ಕವರು ಆ ಸಮಸ್ಯೆಯನ್ನು ಸರಿಯಾಗಿ ಅಭ್ಯಸಿಸಿ ಅದಕ್ಕೆ ನಿಜವಾದ ಕಾರಣಗಳನ್ನು ಏಕೆ ಕಂಡುಹಿಡಿಯಬಾರದು" ಎಂದು ಪ್ರಶ್ನಿಸುತ್ತಿರುವರು. ಮಿತಿಮೀರಿದ ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಸೇರ್ಪಡೆ, ಅನನುಭವಿಗಳಾದ ಅಧ್ಯಾಪಕರ ನೇಮಕ, ಆಕರ್ಷಕವಲ್ಲದ ಅವರ ಸಂಬಳಸಾರಿಗೆಗಳು, ವೃತ್ತಿಯಲ್ಲಿ ಮುನ್ನಡೆಗೂ ಮಹತ್ಕಾರ್ಯ ಸಾಧನೆಗೂ ಅವಕಾಶವಿಲ್ಲದ ಸನ್ನಿವೇಶಗಳು—ಇತ್ಯಾದಿ ಅಂಶಗಳು ಶಿಕ್ಷಣದ ಮಟ್ಟದ ಪತನಕ್ಕೆ ವಿಷ್ಟರಮಟ್ಟಿನ ಕಾರಣಗಳೆಂದು ಪರಿಶೀಲಿಸಬೇಕೆಂದೂ ಸೂಚಿಸಿರುವರು.

## ಶಿಕ್ಷಣ ಮಾಧ್ಯಮ

ಕೆಲವು ವರ್ಷಗಳ ಹಿಂದೆ ಕೇಂದ್ರ ಶಿಕ್ಷಣ ಸಚಿವರೊಬ್ಬರು ಮಾತೃಭಾಷಾ ಮಾಧ್ಯಮವನ್ನು ವಿಶ್ವ ವಿದ್ಯಾಲಯದ ಮಟ್ಟದಲ್ಲಿ ತತ್‌ಕ್ಷಣ ಆಚರಣೆಗೆ ತರುವಂತೆ ಆಗ್ರಹದ ಸೂಚನೆಯನ್ನು ಮಾಡಿದಾಗ ಮುದಲಿಯಾರರು ಬಲವಾಗಿ ಪ್ರತಿಭಟಿಸಿದರು. ಆದರೆ ಅವರು ಪ್ರತಿಭಟಿಸಿದ್ದು ಮಾತೃಭಾಷಾ ಮಾಧ್ಯಮವನ್ನಲ್ಲ: ಕೇಂದ್ರ ಸಚಿವರು ರಾಜ್ಯ ಸರ್ಕಾರಗಳ ಶಿಕ್ಷಣದಲ್ಲಿ ಕೈಹಾಕಿದ ಸರ್ವಾಧಿಕಾರಿ ಪ್ರವೃತ್ತಿ ಯನ್ನು. ಆ ಬಗ್ಗೆ ತಮ್ಮ ಗ್ರಂಥದಲ್ಲಿ ಲೇಖಕರು "ವಿಶ್ವವಿದ್ಯಾಲಯದ ಎಲ್ಲ ಮಟ್ಟದಲ್ಲಿ ಮಾತೃಭಾಷೆ ಯಲ್ಲಿ ಶಿಕ್ಷಣ ಕೊಡುವ ಅವಶ್ಯಕತೆಯನ್ನು ನಾವೆಲ್ಲರೂ ಅರಿತಿದ್ದೇವೆಯಲ್ಲದೆ ಹಾಗೆ ಇಚ್ಛೆಯುಳ್ಳವರೂ ಆಗಿದ್ದೇವೆ. ಆದರೆ ಸರ್ಕಾರವು ಇಂಥ ದಿನದಿಂದ, ಇಂಥ ರಾಜ್ಯದಲ್ಲಿ, ಇದೇ ಭಾಷೆಯ ಮೂಲಕ ಶಿಕ್ಷಣವನ್ನು ಸಾಗಿಸಬೇಕು ಎಂದು ಕಾಯ್ದೆ ಇಲ್ಲವೆ ನಿಯಮವನ್ನು ಪಾಸುಮಾಡಿ ಅದರ ಪ್ರಾಯೋಗಿಕ ತೊಂದರೆಗಳನ್ನು ಪೂರ್ವಭಾವಿಯಾಗಿ ಲಕ್ಷಿಸದೇ ಕಾರ್ಯರೂಪಕ್ಕೆ ತರಲು ಒತ್ತಾಯಿಸಿದರೆ ಸ್ಥಿತಿ ಏನಾಗಬಹುದು? ಇದರಿಂದ ವಿಶ್ವವಿದ್ಯಾಲಯಗಳಿಗೆ ಸ್ವಂತದ ಅಸ್ತಿತ್ವವನ್ನು ತಂದುಕೊಟ್ಟಂತಾಯಿತೇ? ಅಥವಾ ವಿಶ್ವವಿದ್ಯಾಲಯಕ್ಕೆ ರಾಜಕೀಯ ಮುಖಂಡನಿಗಿಂತ ಕಡಿಮೆ ಜವಾಬ್ದಾರಿಯಿದೆಯೆಂದು ಪರಿಗಣಿಸಬೇಕೇ?...... ಅನೇಕ ಉಚ್ಚ ವಿಚಾರಗಳು, ದೇಶಾಭಿಮಾನ, ತನ್ನ ಪಕ್ಷದ ಆದರ್ಶಗಳು—ಇವೆಲ್ಲ ಒಳ್ಳೆಯ ಗುಣಗಳು ಮುಖಂಡನಲ್ಲಿರಬಹುದು. ಅಂದ ಮಾತ್ರಕ್ಕೆ ಅವನ ತತ್ವಗಳನ್ನು ವಿಶ್ವ ವಿದ್ಯಾಲಯಗಳು ಪಾಲಿಸಬೇಕೇ? ಒಂದು ವೇಳೆ ಇಂಥ ನಿಯಮಗಳನ್ನು ವಿಶ್ವವಿದ್ಯಾಲಯಗಳ ಮೇಲೆ ಹೇರುತ್ತ ಹೋದರೆ ವಿಶ್ವವಿದ್ಯಾಲಯಗಳು ಸ್ವಾಯತ್ತತೆಯನ್ನು ಸಾಧಿಸುವ ಪ್ರಶ್ನೆಯೇ ಬರುವುದಿಲ್ಲ". ಎಂದು ಸೂಚಿಸಿರುವರು. ವಿಶ್ವವಿದ್ಯಾಲಯದ ಸ್ವಾಯತ್ತತೆಯ ಬಗ್ಗೆ ಪ್ರತಿಪಾದಿಸುತ್ತ ಪ್ರಾಸಂಗಿಕವಾಗಿಯೇ ಲೇಖಕರು ಮಾತೃಭಾಷಾ ಮಾಧ್ಯಮದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಅವರು ಇಂಗ್ಲಿಷಿನ ಅಭಿಮಾನಿಗಳಾಗಿದ್ದರೂ ವಿಶ್ವವಿದ್ಯಾಲಯದಲ್ಲಿ ಮಾತೃ ಭಾಷಾ ಮಾಧ್ಯಮವನ್ನು ಸ್ವಾಗತಿಸಿರುವರು. ಅದರ ಸೂಕ್ತತೆಯನ್ನೂ ಅಗತ್ಯವನ್ನೂ ಒಪ್ಪಿರುವರು. ಆದರೆ ಆ ಬಗ್ಗೆ ಸೂಕ್ತ ತೀರ್ಮಾನ ಕೈಕೊಳ್ಳಲು ವಿಶ್ವವಿದ್ಯಾಲಯಗಳೇ ತಕ್ಕ ಸಂಸ್ಥೆಗಳೆಂಬುದು ಅವರ ಖಚಿತ ಅಭಿಪ್ರಾಯ. ಇದನ್ನು ಕೆಲವರು ಒಪ್ಪದಿರಬಹುದು. ಪ್ರತಿ ವಿಶ್ವವಿದ್ಯಾಲಯಕ್ಕೂ ಆ ವಿಷಯ ವನ್ನು ಐಚ್ಛಿಕವಾಗಿ ಬಿಡುವುದಾದರೆ ಕೆಲವು ವಿಶ್ವವಿದ್ಯಾಲಯಗಳು ಆ ಮುಖವಾಗಿ ಹೆಜ್ಜೆಯಿಡಬಹುದು.

ಮಿಕ್ಕವು ಇಡದಿರಬಹುದು. ಹಾಗೂ ಅಲ್ಲಿನ ಅಧ್ಯಾಪಕರಿಗೆ ರುಚಿಸದೆಯೊ, ಆಡಳಿತಾಧಿಕಾರಿಗಳಿಗೆ ಬೇಕಿಲ್ಲದೆಯೊ. ವಿದ್ಯಾರ್ಥಿಗಳ ನಿರಾಸಕ್ತಿಯಿಂದಲೊ, ರಾಜ್ಯ ಸರ್ಕಾರಕ್ಕೆ ಒಲವಿಲ್ಲದ್ದರಿಂದಲೊ ಆ ಕಾರ್ಯ ರಾಷ್ಟ್ರದಲ್ಲಿ ಕುಂಟುತ್ತ ಸಾಗಬಹುದು; ಅಥವಾ ಹಿಂಬದಿಗೆ ಬೀಳಬಹುದು. ಈ ಶತಮಾನದ ಆದಿಯಿಂದಲೂ ಈ ಮುಖವಾದ ಯತ್ನ ನಡೆದಿದ್ದರೂ ವಿಶ್ವವಿದ್ಯಾಲಯದ ಮಟ್ಟದಲ್ಲಿ ಮಾತೃಭಾಷಾ ಮಾಧ್ಯಮ ಅಷ್ಟಾಗಿ ಪ್ರಗತಿ ಸಾಧಿಸದಿರುವುದಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಆ ಬಗ್ಗೆ ಸ್ಪಷ್ಟವೂ ಕಾಲನಿಷ್ಠವೂ (ಟೈಂ ಬೌಂಡ್) ಆದ ನೀತಿಯನ್ನು ಅನುಸರಿಸದಿರುವುದೇ ಕಾರಣವೆಂದು ವಾದಿಸಬಹುದಾಗಿದೆ. ಜಪಾನಿನಲ್ಲೋ ರಷ್ಯ ಅಥವಾ ಚೀನದಲ್ಲೊ ಆಗಿದ್ದರೆ ಇಂಥ ಪರಿವರ್ತನೆ ಹಲವಾರು ವರ್ಷಗಳಲ್ಲಿ ಆಗಿಹೋಗುತ್ತಿತ್ತು! ಶಿಕ್ಷಣ ಕ್ಷೇತ್ರದಲ್ಲಿ ಯಾವ ಪರಿವರ್ತನೆ ರಾಷ್ಟ್ರಾದ್ಯಂತ ಅನುಷ್ಠಾನಕ್ಕೆ ಬರಬೇಕಾಗಿದೆಯೊ, ರಾಷ್ಟ್ರದ ಅಧಿಕೃತ ನೀತಿಗೆ ಅನುಗುಣವಾಗಿದೆಯೊ, ಆಚರಣೆಗೆ ತರುವುದು ಅಸಾಧ್ಯವಲ್ಲವೊ ಅಂಥ ಪರಿವರ್ತನೆಗಳನ್ನು ಕೇಂದ್ರ ಮತ್ತು ರಾಜ್ಯಸರ್ಕಾರಗಳು ಕಡ್ಡಾಯವಾಗಿ ಆಗಮಾಡಿಸಬೇಕು. ಆದರೆ ಭಾರತದಲ್ಲಿ ಕೇಂದ್ರ ಸರ್ಕಾರ ಇಂಗ್ಲಿಷಿನ ಮೋಹದಿಂದಲೊ, ಹಿಂದಿಯ ಅಭಿಮಾನದಿಂದಲೊ, ಭಾವೈಕ್ಯಕ್ಕೆ ಅಡ್ಡಿಬರುವುದೆಂಬ ಶಂಕೆಯಿಂದಲೊ ಆ ಬಗ್ಗೆ ಅಷ್ಟಾಗಿ ಅಧಿಕೃತವಾಗಿ ಒತ್ತಾಯ ಹಾಕುತ್ತಿಲ್ಲ. ಆ ಕಾರ್ಯವನ್ನು ವಿಶ್ವವಿದ್ಯಾಲಯಗಳಿಗೇ ಬಿಟ್ಟಿರುವುದರಿಂದ ಆಗಿರುವ ಪ್ರಗತಿ ಅಷ್ಟೇನೂ ಆಶಾದಾಯಕವಾಗಿಲ್ಲ. ಇದರಿಂದಾಗಿ ಮಾತೃಭಾಷಾ ಮಾಧ್ಯಮವನ್ನು ಅನುಷ್ಠಾನಕ್ಕೆ ತರುವ ವಿಧಾನದ ಬಗ್ಗೆ ಲೇಖಕರ ಸೂಚನೆಯನ್ನು ಅನೇಕರು ಒಪ್ಪದಿರುವುದು ಸಂಭವ.

## ವಿಶ್ವವಿದ್ಯಾಲಯದ ಧನ ಆಯೋಗದ ವಿಕೇಂದ್ರೀಕರಣ

ಲೇಖಕರು ಮಾಡಿರುವ ಮತ್ತೊಂದು ಸಲಹೆ ಉನ್ನತ ಶಿಕ್ಷಣದ ಪುರೋಗಮನಕ್ಕೆ ಮೂಲಭೂತವಾಗಿ ಸಂಬಂಧಿಸಿದೆ. ಭಾರತದಲ್ಲಿ ಸುಮಾರು ನೂರು ವಿಶ್ವವಿದ್ಯಾಲಯಗಳೂ ಹನ್ನೊಂದು ಪರಿಗಣಿತ ವಿಶ್ವವಿದ್ಯಾಲಯಗಳೂ ಹತ್ತು ರಾಷ್ಟ್ರೀಯ ಪ್ರಾಮುಖ್ಯವುಳ್ಳ ಸಂಸ್ಥೆಗಳೂ ಉನ್ನತ ಶಿಕ್ಷಣಕ್ಕೆ ಮೀಸಲಾಗಿವೆ. ಅವುಗಳಿಗೆ ಸೇರಿದ ಸುಮಾರು ಮೂರುವರೆ ಸಹಸ್ರ ಕಾಲೇಜುಗಳಲ್ಲಿ ಮೂವತ್ತು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿದ್ದಾರೆ. ಲಕ್ಷಗಟ್ಟಲೆ ಅಧ್ಯಾಪಕರೂ ಇತರ ಸಿಬ್ಬಂದಿಯವರೂ ಆ ಕಾರ್ಯದಲ್ಲಿ ನಿರತರಾಗಿದ್ದಾರೆ. ಇಂಥ ಬೃಹತ್ ಸೇವಾವ್ಯವಸ್ಥೆಯನ್ನು ದೆಹಲಿಯಲ್ಲಿ ಸ್ಥಾಪಿಸಿರುವ ಧನ ಆಯೋಗವೊಂದಕ್ಕೇ ವಹಿಸಿರುವುದು ಎಷ್ಟರ ಮಟ್ಟಿಗೆ ಅನುಕೂಲ ಎಂಬ ಪ್ರಶ್ನೆಯನ್ನು ಲೇಖಕರು ತಮ್ಮ ಪುಸ್ತಕದಲ್ಲಿ ಎತ್ತಿರುವರು. ಆ ಬಗ್ಗೆ ತಮ್ಮ ಸಲಹೆಯನ್ನು ಮಂಡಿಸುತ್ತ, "ಅಸಂಖ್ಯಾತ ಕಾಲೇಜುಗಳೊಡನೆ ಸರಿಯಾದ ಸಂಪರ್ಕ ಪಡೆಯುವುದೂ ಅವುಗಳ ಸರಿಯಾದ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವುದೂ ಅಸಾಧ್ಯವಾಗಿ ಬಿಟ್ಟಿದೆ. ಆದುದರಿಂದ ಆಯೋಗಕ್ಕೆ ಎಷ್ಟು ನಿಧಿಯನ್ನು ಕೇಂದ್ರ ಸರ್ಕಾರ ಪೂರೈಸಬೇಕೆಂಬುದನ್ನೂ ಮತ್ತು ಯಾವ ಮುಂದಿನ ಕ್ರಮಗಳನ್ನು ಕೈಕೊಂಡರೆ ಎಲ್ಲ ವಿಶ್ವವಿದ್ಯಾಲಯಗಳಿಂದ ವರದಿಗಳನ್ನೂ ಅಂಕಿ ಅಂಶಗಳನ್ನೂ ಪಡೆದು ಅವುಗಳಿಗೆ ಆ ಧನಸಹಾಯವು ಸರಿಯಾಗಿ ವಿತರಣೆಗೊಳ್ಳುವ ಬಗ್ಗೆಯೂ ಉಪಾಯಗಳನ್ನು ಕಂಡುಹಿಡಿಯಬೇಕಾಗಿದೆ. ಇಂಥ ಪರಿಸ್ಥಿತಿಯಲ್ಲಿ ವಿಕೇಂದ್ರೀಕೃತವಾದ ಒಂದು ಮಾರ್ಗವನ್ನು ಕಂಡುಹಿಡಿಯುವುದು ಒಳ್ಳೆಯದು", ಎಂದು ಸಲಹೆಮಾಡಿರುವರು. ಭಾರತೀಯ ತಾಂತ್ರಿಕ ಶಿಕ್ಷಣದ ಸಲಹಾಮಂಡಲಿ ಆಗಲೆ ಈ ರೀತಿಯಲ್ಲಿ ವಿಕೇಂದ್ರೀಕರಣವಾಗಿದೆ. ಕಲ್ಕತ್ತ, ದೆಹಲಿ, ಮುಂಬಯಿ, ಮದ್ರಾಸುಗಳಲ್ಲಿ ಅದರ ಶಾಖಾ ಸಲಹಾ ಸಮಿತಿಗಳು ನೇಮಕವಾಗಿವೆ. ಈ ನಾಲ್ಕು ಪ್ರಾದೇಶಿಕ ವಿಭಾಗಗಳು ತಮ್ಮತಮ್ಮ ಕಕ್ಷೆಯಲ್ಲಿ ಬರುವ ಎಲ್ಲ ತಾಂತ್ರಿಕ ಮತ್ತು ಎಂಜಿನಿಯರಿಂಗ್ ಕಾಲೇಜುಗಳ ನೇರ ಸಂಪರ್ಕ ಹೊಂದಿದ್ದು, ಮಾಹಿತಿಗಳನ್ನು ಸಂಗ್ರಹಿಸಿ ಕೇಂದ್ರ ಮಂಡಲಿಗೆ ಒದಗಿಸುತ್ತಿವೆ. ಆಯಾ ಪ್ರದೇಶದ ಶಿಕ್ಷಣ ಸಂಸ್ಥೆಗಳು ಅಲ್ಲಿಯ ಪ್ರಾದೇಶಿಕ ಸಲಹಾ ಮಂಡಲಿಯ ಮೇಲ್ವಿಚಾರಣೆಯಲ್ಲಿ ಕೆಲಸಮಾಡುತ್ತ ಅಗತ್ಯವಾದ ಧನಸಹಾಯ ಪಡೆದು ಪ್ರಗತಿಪಥದಲ್ಲಿ ಕೆಲಸ ಮಾಡಲು ಅವಕಾಶವಾಗಿದೆ. ಇದೇ ಮಾದರಿಯಲ್ಲಿ ಧನ ಆಯೋಗ ಕಲ್ಕತ್ತ, ದೆಹಲಿ, ಮುಂಬಯಿ, ಮದ್ರಾಸುಗಳಲ್ಲಿ ತನ್ನ 4–5 ಶಾಖಾ ಕಚೇರಿಗಳನ್ನು ಸ್ಥಾಪಿಸಿ, ಪ್ರತಿ ಶಾಖೆಗೂ ಆ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರತಿನಿಧಿಗಳನ್ನೊಳಗೊಂಡ ಉಪಸಲಹಾ

ಮಂಡಳಿಗಳನ್ನು ನೇಮಿಸಿ ವಿಕೇಂದ್ರೀಕೃತ ವ್ಯವಸ್ಥೆಮಾಡುವುದು ಒಳ್ಳೆಯದೆಂದು ಸೂಚಿಸಿರುವರು. ಆಗ ಆಯಾ ಪ್ರಾದೇಶಿಕ ಕಚೇರಿ ಆ ಕ್ಷೇತ್ರದ ಎಲ್ಲಾ ಕಾಲೇಜುಗಳ ಸರಿಯಾದ ವರದಿ, ಮಾಹಿತಿ, ಅಂಕಿ ಅಂಶಗಳು, ಆವಶ್ಯಕತೆಗಳು, ಬೇಡಿಕೆಗಳ ವಾಸ್ತವ ಕಲ್ಪನೆ—ಇವೆಲ್ಲ ಕೇಂದ್ರ ಧನ ಆಯೋಗಕ್ಕೆ ದೊರಕುವಂತಾಗುತ್ತದೆ. ಆಗ ಆಯಾ ಕಾಲೇಜುಗಳ ಕಾರ್ಯದ ಮೌಲ್ಯಮಾಪನಮಾಡಿ ಸೂಕ್ತ ರೀತಿಯಲ್ಲಿ ಹಣ ಹಂಚಲು ಅನುಕೂಲವಾಗುವುದಲ್ಲದೆ ಧನ ಆಯೋಗದ ಕಾರ್ಯಕ್ಷಮತೆಯೂ ಹೆಚ್ಚುತ್ತದೆ. ಇನ್ನೂ ಧನ ಆಯೋಗದ ಅಧಿಕಾರವ್ಯಾಪ್ತಿಗೆ ಒಳಪಡದಿರುವ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅದರ ವ್ಯಾಪ್ತಿಗೆ ಬರುವಂತಾದ ಮೇಲಂತೂ ಈ ವಿಕೇಂದ್ರೀಕರಣ ವ್ಯವಸ್ಥೆ ಅನಿವಾರ್ಯವೇ ಆಗುತ್ತದೆ. ಅಗತ್ಯವೆನಿಸಿದರೆ 1956ರ ಲೋಕಸಭೆಯ ಧನ ಆಯೋಗದ ಕಾಯಿದೆಗೆ ಆ ವ್ಯವಸ್ಥೆಗೆ ಅವಕಾಶ ಕೊಡುವಂತೆ ತಿದ್ದುಪಡಿಯನ್ನು ತರಬಹುದು.

ಒಟ್ಟಿನಲ್ಲಿ ಲೇಖಕರು ಉನ್ನತ ಶಿಕ್ಷಣದ ಹಲವಾರು ಮುಖಗಳನ್ನು ಪರಿಶೀಲಿಸಿ ಅಲ್ಲಿರುವ ಸಮಸ್ಯೆಗಳಿಗೆ ಪರಿಹಾರ ರೂಪದ ಸಲಹೆಗಳನ್ನು ಸೂಚಿಸಿರುವರು. ಸುಮಾರು 15 ವರ್ಷಗಳ ಹಿಂದೆ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಇಂದಿಗೂ ಪ್ರಗತಿಪರವಾಗಿಯೇ ತೋರುತ್ತವೆ. ಇಂಗ್ಲಿಷ್ ಭಾಷೆಯಲ್ಲಿರುವ ಅವರ ಗ್ರಂಥವನ್ನು ಕಾಮದೊತ್ತಗೆಯಾಗಿ ಕನ್ನಡದಲ್ಲಿ ಪ್ರಕಟಿಸಿ ಕರ್ನಾಟಕ ವಿಶ್ವವಿದ್ಯಾಲಯ ಉಪಕಾರಮಾಡಿದೆ. ಭಾಷಾಂತರ ತೃಪ್ತಿಕರವಾಗಿದೆ.

—ಡಾ. ಎನ್. ಎಸ್. ವೀರಪ್ಪ

**ಶಿಕ್ಷಣತತ್ತ್ವಶಾಸ್ತ್ರ :** ಲೇ: ಶಿ. ಎಚ್. ಮರಿದೇವರು: ಪ್ರ: ಉದಯಭಾನು ಪ್ರಕಾಶನ. ಸಿದ್ಧಗಂಗಾ ಬಡಾವಣೆ. ತುಮಕೂರು: ಪು: ಕ್ರೌನ್ ಅಷ್ಟದಳ 22 + 448: ಬೆಲೆ: ಸಾದಾ 15 ರೂ., ಕ್ಯಾಲಿಕೊ 22 ರೂ.

ಉನ್ನತ ಶಿಕ್ಷಣಕ್ಷೇತ್ರದಲ್ಲಿ 1958ರಲ್ಲಿ ಆರಂಭವಾದ ಕನ್ನಡ ಭಾಷಾ ಮಾಧ್ಯಮ ಕ್ರಮಕ್ರಮವಾಗಿ ಜನಪ್ರಿಯವಾಗುತ್ತ ಬಂತು. ಮೊದಲು ಪಿ.ಯು.ಸಿ. ಮಟ್ಟದಲ್ಲೂ ಅನಂತರ ಪದವೀ ಮಟ್ಟದಲ್ಲೂ ಈಗ ಸ್ನಾತಕೋತ್ತರ ತರಗತಿಗಳಲ್ಲೂ ಪ್ರಚಾರಕ್ಕೆ ಬರುತ್ತಿದೆ. ಇತ್ತೀಚಿನ ವರೆಗೆ ಅದು ಕೇವಲ ಮಾನವಿಕ ಶಾಸ್ತ್ರಗಳು, ಸಮಾಜಶಾಸ್ತ್ರ ಮತ್ತು ವಿಜ್ಞಾನ ಈ ಸಾಂಸ್ಕೃತಿಕ ವ್ಯಾಸಂಗ ಕ್ಷೇತ್ರಗಳಿಗೆ ಮೀಸಲಾಗಿದ್ದು ಮೂರು ವರ್ಷಗಳಿಂದೀಚೆಗೆ ವೃತ್ತಿ ವಿಷಯಗಳಿಗೂ ವಿಸ್ತರಿಸುತ್ತಿದೆ. ಶಿಕ್ಷಣಶಾಸ್ತ್ರದ ಕಾಲೇಜಿನಲ್ಲಿ ಮೊದಲು ಕನ್ನಡ ಮಾಧ್ಯಮವನ್ನು ಅನುಷ್ಠಾನಕ್ಕೆ ತಂದ ಕೀರ್ತಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲುತ್ತದೆ. ಅಲ್ಲದೆ ಅದು ಬಿ.ಇಡಿ. ತರಗತಿಗಳಿಗೆ ಕನ್ನಡ ಪಂಡಿತರಿಗೂ ಪ್ರವೇಶಾವಕಾಶವನ್ನು ಕಲ್ಪಿಸಿಕೊಟ್ಟಿತು. 1973–74ನೆಯ ವರ್ಷದಿಂದ ಎಂ.ಎ. ಮತ್ತು ಎಂ.ಇಡಿ. ವಿದ್ಯಾರ್ಥಿಗಳಿಗೂ ಪರೀಕ್ಷೆಯಲ್ಲಿ ಕನ್ನಡದಲ್ಲಿ ಉತ್ತರಿಸುವ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಇವೆಲ್ಲವರ ಫಲವಾಗಿ ಶಿಕ್ಷಣಶಾಸ್ತ್ರದ ವಿವಿಧ ಶಾಖೆಗಳನ್ನು ಕುರಿತು ಪದವೀ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಉಪಯುಕ್ತವೆನಿಸುವ ಪಠ್ಯಪುಸ್ತಕಗಳೂ ಪರಾಮರ್ಶನ ಗ್ರಂಥಗಳೂ ಕನ್ನಡದಲ್ಲಿ ಹೊರಬರಲು ಅವಕಾಶವಾಯಿತು. ಹಾಗೆ ಪ್ರಕಟವಾಗುತ್ತಿರುವ ಕೃತಿಗಳಲ್ಲಿ ಶ್ರೀ ಮರಿದೇವರ ಶಿಕ್ಷಣತತ್ತ್ವಶಾಸ್ತ್ರವೂ ಒಂದು.

ಮೈಸೂರು ವಿಶ್ವವಿದ್ಯಾನಿಲಯದ ಬಿ.ಇಡಿ. ತರಗತಿಗೆ ಹೊಸದಾಗಿ ಗೊತ್ತುಮಾಡಿರುವ 'ಶಿಕ್ಷಣದ ತಾತ್ತ್ವಿಕ ಮತ್ತು ಸಾಮಾಜಿಕ ಬುನಾದಿ' (Philosophical and Social foundations of Education) ಎಂಬ ಪಠ್ಯವಿಷಯವನ್ನು ಕುರಿತು 'ಶಿಕ್ಷಣತತ್ತ್ವಶಾಸ್ತ್ರ' ಎಂಬ ಹೆಸರಿನಲ್ಲಿ ಈ ಕೃತಿ ಮುಖ್ಯವಾಗಿ ಬಿ.ಇಡಿ. ವಿದ್ಯಾರ್ಥಿಗಳ ಆವಶ್ಯಕತೆಯನ್ನು ಗಮನದಲ್ಲಿರಿಸಿಕೊಂಡು ರಚನೆಯಾಗಿದೆ. ಲೇಖಕರು ಆ ತರಗತಿಗೆ ತಾವು ಮಾಡುತ್ತಿದ್ದ ಉಪನ್ಯಾಸಗಳನ್ನೆ ಆಧಾರವಾಡಿಕೊಂಡು ಕೃತಿ ರಚಿಸಿರುವರು. 448 ಪುಟಗಳಿಗೆ ವಿಸ್ತರಿಸಿರುವ ಈ ಗ್ರಂಥದಲ್ಲಿ ಎಂಟು ಅಧ್ಯಾಯಗಳೂ ಕೊನೆಯಲ್ಲಿ ಒಂದು ಅವಲೋಕನ ಗ್ರಂಥಸೂಚಿಯೂ ಇವೆ.

ಪ್ರಕೃತ ಕೃತಿ ಶಿಕ್ಷಣ ಶಾಸ್ತ್ರಕ್ಕೆ ಸೇರಿದ 'ಶಿಕ್ಷಣತತ್ತ್ವ' ಮತ್ತು 'ಶೈಕ್ಷಣಿಕ ಸಮಾಜಶಾಸ್ತ್ರ' ಎಂಬ ಎರಡು ಪ್ರತ್ಯೇಕ ಶಾಖೆಗಳನ್ನು ಒಟ್ಟುಗೂಡಿಸಿಕೊಂಡು ಒಂದು ಪರೀಕ್ಷಾ ವಿಷಯವನ್ನಾಗಿ ಮಾಡಿರುವ ಪಠ್ಯಕ್ರಮಕ್ಕೆ ಹೊಂದಿಕೊಂಡಿದೆ. ಆದ್ದರಿಂದ ಇದರಲ್ಲಿ ಆವೆರಡು ಶಾಖೆಗಳಿಗೂ ಸಂಬಂಧಿಸಿದ ಕೆಲಕೆಲವು ಅಧ್ಯಾಯಗಳು ಸೇರಿವೆ. ಹಿಂದೆ ಈ ಎರಡು ಶಾಖೆಗಳನ್ನೂ ಒಂದಾಗಿ ಪರಿಗಣಿಸುತ್ತಿದ್ದರೂ ಈಚೆಗೆ ಶೈಕ್ಷಣಿಕ ಸಮಾಜಶಾಸ್ತ್ರ ಅಭಿವೃದ್ಧಿಯಾಗಿ ಪ್ರತ್ಯೇಕ ಶಾಖೆಯಾಗಿ ರೂಪುಗೊಂಡಿದೆ. ಪ್ರಗತಿ ಪಠ್ಯ ಕ್ರಮಗಳಲ್ಲಿ ಅದೊಂದು ಪ್ರತ್ಯೇಕವೂ ಪ್ರಮುಖವೂ ಆದ ಸ್ಥಾನವನ್ನು ಪಡೆದುಕೊಳ್ಳುತ್ತಿದೆ. ಆದರೂ ಕೆಲವು ವಿಶ್ವವಿದ್ಯಾಲಯಗಳು ಓಬಿರಾಯನ ಕಾಲದ ಹಳೆಯ ಮಾದರಿಯ ಪಠ್ಯಕ್ರಮವನ್ನೆ ಆಧುನಿಕವೆಂದು ಮತ್ತೆಮತ್ತೆ ಪ್ರಚಾರಕ್ಕೆ ತರುತ್ತಿವೆ. ಇದರ ಫಲವಾಗಿ ಅವನ್ನನುಸರಿಸಿ ರಚನೆಯಾಗುವ ಪಠ್ಯಗ್ರಂಥಗಳೂ ಹಳೆಯ ಮಾದರಿಯವಾಗಿದ್ದು 'ಚೌಚೌ ನೋಟ್ಸು'ಗಳಂತೆ ಪ್ರಕಟವಾಗುತ್ತಿವೆ. ಈ ಪರಿಸ್ಥಿತಿಗೆ ಲೇಖಕರು ಹೊಣೆಯೆನ್ನುವುದಕ್ಕಿಂತ ಪಠ್ಯಕ್ರಮದಲ್ಲಿರುವ ದೋಷವೇ ಕಾರಣವೆನ್ನಬೇಕಾಗುತ್ತದೆ.

ಲೇಖಕರು ತಮ್ಮ ಈ ಕೃತಿಯ ಮೊದಲನೆಯ ಅಧ್ಯಾಯದಲ್ಲಿ ಶಿಕ್ಷಣವೃತ್ತಿ, ಅಧ್ಯಾಪಕರು, ಬೋಧನ ಕ್ರಮ—ಇವಕ್ಕೆ ಸಂಬಂಧಿಸಿದ ತಾತ್ವಿಕ ಬುನಾದಿಯನ್ನು ವಿವರಿಸಿ, ಎರಡನೆಯ ಅಧ್ಯಾಯದಲ್ಲಿ ಶಿಕ್ಷಣದ ಅರ್ಥ, ಶಿಕ್ಷಣದ ಕರ್ತವ್ಯ ಮತ್ತು ಗುರಿ, ವಿವಿಧ ಹಂತಗಳ ಶಿಕ್ಷಣ, ವಿವಿಧ ಉದ್ದೇಶಗಳ ಶಿಕ್ಷಣ ಮುಂತಾದ ಅಂಶಗಳನ್ನು ಪರಿಶೀಲಿಸಿರುವರು. ಮೂರು ಮತ್ತು ನಾಲ್ಕನೆಯ ಅಧ್ಯಾಯಗಳಲ್ಲಿ ಧ್ಯೇಯವಾದ (idealism), ಪ್ರಕೃತಿವಾದ (naturalism), ವ್ಯವಹಾರವಾದ (pragmatism) ಮತ್ತು ವಾಸ್ತವವಾದ (realism) ಈ ನಾಲ್ಕು ಪ್ರಮುಖ ತತ್ತ್ವದೃಷ್ಟಿ ಗಳನ್ನು ಪರಿಶೀಲಿಸಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಾಚೀನ ಮತ್ತು ಆಧುನಿಕ ತತ್ತ್ವದೃಷ್ಟಿಗಳನ್ನು ವಿವರಿ ಸಿರುವರು. ನಾಲ್ಕನೆಯ ಅಧ್ಯಾಯದಲ್ಲಿ ಶಿಕ್ಷಣದ ಪ್ರಾತಿನಿಧಿಕ ಸಂಸ್ಥೆಗಳು, ಶಿಕ್ಷಣ ಮತ್ತು ಸಮಾಜ, ಅವುಗಳು ಬೀರುವ ಪರಸ್ಪರ ಪರಿಣಾಮ ಮತ್ತು ಹೊಂದಿರುವ ಅವಲಂಬನೆ, ಆಧುನಿಕ ಶಾಲೆಯ ಕಲ್ಪನೆ ಈ ಅಂಶಗಳನ್ನು ವಿವರಿಸಿರುವರು. ಆರನೆಯ ಅಧ್ಯಾಯದಲ್ಲಿ ಧರ್ಮ ಮತ್ತು ಶಿಕ್ಷಣ, ಶಿಕ್ಷಣಸೇವೆಯಲ್ಲಿ ರಾಷ್ಟ್ರದ ಹೊಣೆಗಾರಿಕೆ ಮತ್ತು ಶಿಕ್ಷಣದ ಮೇಲೆ ರಾಷ್ಟ್ರದ ಹತೋಟಿ ಮುಂತಾದ ಅಂಶಗಳನ್ನು ವಿವೇಚಿಸಿರುವರು. ಏಳನೆಯ ಅಧ್ಯಾಯ ವಿವಿಧ ಹಂತಗಳ ಶಿಕ್ಷಣ ಸಂಸ್ಥೆಗಳನ್ನೂ ಎಂಟ ನೆಯ ಅಧ್ಯಾಯ ಪಠ್ಯಕ್ರಮದ ರಚನೆಯನ್ನೂ ಕುರಿತವಾಗಿವೆ. ಪ್ರತಿ ಅಧ್ಯಾಯದ ಕೊನೆಯಲ್ಲಿ ಮುಖ್ಯಾಂಶಗಳನ್ನು ಸಂಗ್ರಹಿಸಿ ಕೊಟ್ಟಿರುವುದರ ಜೊತೆಗೆ ಅಭ್ಯಾಸಾರ್ಥ ಪ್ರಶ್ನೆಗಳನ್ನೂ ಸೂಚಿಸಿದೆ.

ಲೇಖಕರು ತಮ್ಮ ಗ್ರಂಥದಲ್ಲಿ ಪರಿಶೀಲಿಸಿರುವ ಒಂದೊಂದು ಸಾಂಪ್ರದಾಯಿಕ ತತ್ತ್ವದೃಷ್ಟಿಯೂ ಒಂದೊಂದು ಕಾಲದಲ್ಲಿ ಪ್ರಧಾನವಾಗಿದ್ದು ತನ್ನದೇ ಆದ ಉದ್ದೇಶ, ಗುರಿ, ಬೋಧನ ವಿಧಾನ, ಪಠ್ಯ ಯೋಜನೆ, ಕಾರ್ಯಕ್ರಮ ಮುಂತಾದ ಅಂಶಗಳನ್ನು ಶಿಕ್ಷಣವೃತ್ತಿಗೆ ಸೂಚಿಸುತ್ತ ಬಂದಿದೆ. ಆದರೆ ಆಧುನಿಕ ಶಿಕ್ಷಣ ಆ ಯಾವೊಂದು ವಿಶಿಷ್ಟ ತತ್ತ್ವದೃಷ್ಟಿಯನ್ನೂ ಪೂರ್ಣವಾಗಿ ಅವಲಂಬಿಸಿಲ್ಲ: ಅವೆಲ್ಲ ತತ್ತ್ವಪಂಥಗಳಿಂದಲೂ ಉತ್ತಮಾಂಶಗಳನ್ನು ಆರಿಸಿಕೊಂಡು ಪರಿಪುಷ್ಟಿಗೊಂಡು ಪಕ್ವವಾಗಿ ರೂಪುಗೊಂಡು ಆಧುನಿಕ ಜೀವನಕ್ಕೆ ಹೊಂದಿಕೊಂಡಿರುವ ಸಾರಸಂಗ್ರಹಿ ತತ್ತ್ವ (eclectic philo-sophy) ದೃಷ್ಟಿಯನ್ನು ಅವಲಂಬಿಸಿದೆ. ಆದ್ದರಿಂದ ಈ ತತ್ತ್ವದೃಷ್ಟಿಯ ಸ್ಥೂಲ ರೂಪರೇಷೆ ಗಳನ್ನು ಮೂರು ಅಥವಾ ನಾಲ್ಕನೆಯ ಅಧ್ಯಾಯದಲ್ಲಿ ಅಗತ್ಯವಾಗಿ ವಿವರಿಸಬೇಕಾಗಿತ್ತು. ಅದರಿಂದ ವಿದ್ಯಾರ್ಥಿಗಳು ಆಧುನಿಕ ಶಿಕ್ಷಣ ವೃತ್ತಿಗೆ ಆಯಾ ತತ್ತ್ವದೃಷ್ಟಿ ನೀಡಿರುವ ಕಾಣಿಕೆ ಎಷ್ಟರಮಟ್ಟಿನ ಮಹತ್ವವನ್ನು ಹೊಂದಿರುವುದೆಂಬ ಅಂಶವನ್ನು ಅರಿತುಕೊಳ್ಳಲು ಸಹಾಯವಾಗುತ್ತಿತ್ತು.

ಒಟ್ಟಿನಲ್ಲಿ ಕನ್ನಡ ಮಾಧ್ಯಮವನ್ನು ಆರಿಸಿಕೊಳ್ಳುವ ಬಿ.ಇಡಿ. ವಿದ್ಯಾರ್ಥಿಗಳಿಗೆ ಈ ಪುಸ್ತಕ ನಿಜ ವಾಗಿಯೂ ಉಪಯುಕ್ತ ಕೈಪಿಡಿಯೆನಿಸಬಲ್ಲದು.

ಗ್ರಂಥದ ಆದ್ಯಂತವೂ ಲೇಖಕರು ತೀರ ಭಾವಪರವಶತೆಯಿಂದ ಕೃತಿರಚನೆ ಮಾಡಿರುವುದು ಸ್ಪಷ್ಟಪಡುತ್ತದೆ. ಇದರಿಂದ ಓದುಗರಲ್ಲೂ ಸಹಜವಾಗಿ ಉತ್ಸಾಹ ಮೂಡಿಬರುತ್ತದೆ. ಆದರೆ ಅಲ್ಲಲ್ಲಿ ಅನಗತ್ಯ ಅಪ್ರಸಕ್ತ ಅಂಶಗಳ ಕಡೆ ಲೇಖಕರು ಅಲೆದಾಡಿರುವುದೂ ಅದರಿಂದ ಮುಖ್ಯ ಅಂಶಗಳಿಂದ

ಆಗಾಗ ದೂರ ಸರಿಯುತ್ತ ಹೋಗಿರುವುದೂ ಕಂಡುಬರುತ್ತದೆ. ಕೆಲವು ಪ್ರಕಾರದ ಕೃತಿಗಳಲ್ಲಿ ಮೇಲಿನ ಅಂಶಗಳು ಸತ್ಯಲಕ್ಷಣಗಳಾಗಿ ಪರಿಣಮಿಸಬಹುದೆಂದು ವಾದಿಸಬಹುದಾದರೂ ತತ್ತ್ವಶಾಸ್ತ್ರವನ್ನು ಕುರಿತ ಗ್ರಂಥದ ಭಾಷೆ ನೇರವೂ ಸರಳವೂ ಆಗಿದ್ದು ಆವೇಶಕ್ಕಿಂತ ವಿವೇಚನೆ ಹೆಚ್ಚು ಪರಿಣಾಮಕಾರಿಯಾಗಿ ಪ್ರದರ್ಶಿತವಾಗಬೇಕು. ಪಠ್ಯಪುಸ್ತಕಗಳಲ್ಲಿ ಇವು ಇನ್ನೂ ಹೆಚ್ಚಿನ ಅಗತ್ಯವೆನಿಸುವ ಗುಣಗಳು. ಆಗ ಮಾತ್ರ ಶಾಸ್ತ್ರೀಯ ವಿಷಯಗಳನ್ನು ನಿರ್ವಿಕಾರ ಸನ್ನಿವೇಶದಲ್ಲಿ ಪ್ರತಿಪಾದಿಸುವುದು ಸಾಧ್ಯವಾಗುತ್ತದೆ.

ಬಳಸಿರುವ ಪಾರಿಭಾಷಿಕ ಪದಗಳ ಬಗ್ಗೆ ಒಂದು ಸೂಚನೆ. ಅನೇಕ ಇಂಗ್ಲಿಷ್ ಪಾರಿಭಾಷಿಕ ಶಬ್ದಗಳಿಗೆ ಸೂಕ್ತವೂ ಖಚಿತವೂ ಸರ್ವಮಾನ್ಯವೂ ಆದ ಕನ್ನಡ ಶಬ್ದಗಳು ಈಗತಾನೆ ರೂಪುಗೊಳ್ಳುತ್ತಿರುವುವಾದರೂ ಈಗಾಗಲೆ ಸರ್ವಮಾನ್ಯತೆ ಪಡೆದು ಆ ಪ್ರಕಾರದ ಸಾಹಿತ್ಯಕೃತಿಗಳಲ್ಲಿ ಪ್ರಚಾರಕ್ಕೆ ಬಂದಿರುವ ಪದಗಳನ್ನು ಬಳಸುವುದು ಒಳ್ಳೆಯದು ಹಾಗೂ ಅಗತ್ಯವೆನಿಸುವೆಡೆ ಭಾರತ ಸರ್ಕಾರದ ವೈಜ್ಞಾನಿಕ ಮತ್ತು ತಾಂತ್ರಿಕ ಪಾರಿಭಾಷಿಕ ಶಬ್ದ ಆಯೋಗದವರು ಪ್ರಕಟಿಸಿರುವ ಸಂಸ್ಕೃತಜನ್ಯ ಶಬ್ದಗಳನ್ನಾದರೂ ಬಳಸಬಹುದು. ಆ ಮೂಲಕ ಅವಕ್ಕೆ ಅಖಿಲಭಾರತ ವ್ಯಾಪ್ತಿಯೂ ಬರುತ್ತದೆ.

ಲೇಖಕರ ಉತ್ಸಾಹ, ಕಾರ್ಯತತ್ಪರತೆ, ಕನ್ನಡದ ಅಭಿಮಾನ ಮೆಚ್ಚತಕ್ಕವಾಗಿವೆ. ಅವರು ಮೇಲಿನ ಹಲವು ಸೂಚನೆಗಳನ್ನು ಅನುಸರಿಸುವುದಾದರೆ ಅವರಿಂದ ಶಿಕ್ಷಣಶಾಸ್ತ್ರಕ್ಕೆ ಸಂಬಂಧಿಸಿದ ಹಲವಾರು ಉತ್ತಮ ಕೃತಿಗಳು ರಚನೆಯಾಗಬಹುದು. ಕನ್ನಡ ಶಾಸ್ತ್ರಸಾಹಿತ್ಯ ಅವರ ಕೃತಿರಚನೆಯಿಂದ ಶ್ರೀಮಂತವಾಗಬಹುದು.

**—ಡಾ. ಎನ್. ಎಸ್. ವೀರಪ್ಪ**

**ಕರ್ನಾಟಕ ಸಂಸ್ಕೃತಿಯ ವಿಶ್ವರೂಪ**: ಲೇ: ವ್ಹಿ.ಜಿ. ಮಾರೀಹಾಳ, ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (1973): ಪು. 8+98, ಬೆಲೆ: 25 ಪೈ.

ಲೇಖಕರು ಸವಣೂರಿನಲ್ಲಿ ಮಾಡಿದ ಭಾಷಣದ ಸಾರಾಂಶವಿದು. "ಹಿರಿಯರ ಪುಣ್ಯದಿಂದಾಗಿ, ಈ ನಾಡನ್ನು ಸಮಗ್ರವಾಗಿ ನೋಡುವ ಭಾಗ್ಯ" ಪಡೆದ ಲೇಖಕರು "ನನ್ನ ನಾಡು ಎಂಥದು ಎಂಬುದು ಹೃದಯದಲ್ಲಿ ಮೂಡಿ, ಅದರ ಆನಂದವನ್ನು ಉಳಿದವರೊಡನೆ ಹಂಚಿಕೊಳ್ಳಬೇಕೆಂಬ ಅಭೀಪ್ಸೆ" ಹೊಂದಿದವರು. ಅದರಂತೆ ಅದನ್ನು ಈಗ ಓದುಗರೊಡನೆಯೂ ಹಂಚಿಕೊಂಡಿದ್ದಾರೆ.

ನಮ್ಮ ಹಿಂದಿನ ಕನ್ನಡ ಜನ "ಏನು ಮಾಡಿದರೂ ತ್ರಿಕರಣಪೂರ್ವಕವಾಗಿ ಮಾಡಿ ಅದು ಸರ್ವಾಂತರ್ಯಾಮಿಗೆ ಸಲ್ಲಬೇಕೆಂಬ ಚರಮಗುರಿಯಿಂದಲೇ ಅವರು ತಮ್ಮ ಬಾಳನ್ನು ಬದುಕಿದರು. ಮುಂದಿನವರಿಗೆ ಆ ಬದುಕನ್ನು ಕರ್ನಾಟಕ ಸಂಸ್ಕೃತಿಯ ಹೆಸರಿನಲ್ಲಿ ಬಿಟ್ಟುಹೋದರು", ಎನ್ನುತ್ತಾರೆ ಲೇಖಕರು. ಆದರೆ ಈ 'ಚರಮಗುರಿ' ನಮ್ಮವರಿಗೆ ಮಾತ್ರ ಮೀಸಲೆ? ಕರ್ನಾಟಕ ಸಂಸ್ಕೃತಿ ಎಂಬುದು ಭಾರತೀಯ ಸಂಸ್ಕೃತಿಯಲ್ಲಿ ವೈಶಿಷ್ಟ್ಯ ಪಡೆದಿದೆ ಎಂದರೆ, ಯಾವ ವಿಧದಲ್ಲಿ ಎಂಬುದಕ್ಕೆ ಈ ಪುಸ್ತಕ ಯಾವ ಉತ್ತರವನ್ನೂ ನೀಡುವುದಿಲ್ಲ. ಮಹಾಭಾರತದ ಸಭಾಪರ್ವದಲ್ಲಿ ಭಾರತದಲ್ಲಿ ವಾಸಿಸುತ್ತಿದ್ದ ಜನಾಂಗಗಳ ಹೆಸರಿದ್ದು, "ಕರ್ಣಾಟಕಾಃ" ಎಂಬ ಶಬ್ದವು ಪ್ರಥಮದಲ್ಲಿ ಬರುವುದರಿಂದ ಕರ್ಣಾಟಕರು ಅಂದಿನಿಂದಲೇ ಭಾರತದಲ್ಲಿ ಮಹತ್ತ್ವದ ಜನಾಂಗವಾಗಿದ್ದರೆಂಬುವದರಲ್ಲಿ ಸಂದೇಹವಿಲ್ಲ", ಎಂಬುದು ಲೇಖಕರ ಹೇಳಿಕೆ. ಆಕ್ಸಿರಿಂಖಿಸ್ ಪೇಪರಿಯಲ್ಲಿ ಬರುವ ಕೆಲವು ಪದಗಳು ಕನ್ನಡದವುಗಳೆಂದು ಹೇಳಿ, "ಬೇರೆ ಕೊಂಚ ಮಧುಪಾತ್ರಕ್ಕೆ ಹಾಕಿ; ಪಾನಂ ಬೆರೆತ್ತಿ ಕಟ್ಟಿ ಮಧುವಂ ಬೆರೆತ್ತುವೆನ್" ಎಂಬುವು ಕನ್ನಡದವುಗಳೆಂಬುದಕ್ಕೆ ಮತ್ತಾವ ಸಾಕ್ಷಿ ಬೇಕು? ಎನ್ನುತ್ತಾರೆ (ಪು. 13). ಆದರೆ ಈ ಎರಡು ಉಲ್ಲೇಖಗಳೂ ವಿವಾದಾಸ್ಪದ. ಸಾಮಾನ್ಯ ಓದುಗನಿಗೆ ಈ ಮಾತುಗಳಿಂದ ತಪ್ಪುಕಲ್ಪನೆಗೆ ಎಡೆ ಮಾಡಿದಂತಾಗುತ್ತದೆ. ಆರು ಪುಟ್ಟ ಪುಟಗಳಲ್ಲಿ ಕನ್ನಡ ಭಾಷೆ–ಸಾಹಿತ್ಯಗಳ ವಿಶ್ವರೂಪದರ್ಶನ ಮಾಡಿಕೊಡುವುದೆಂತು? ಪಂಪನ, ಅಕ್ಕಮಹಾದೇವಿಯ, ಚಾಮರಸನ, ಬಸವಣ್ಣನ, ಪುರಂದರದಾಸನ ಒಂದೊಂದು ಪದ್ಯ–ವಚನಗಳನ್ನು ಉದ್ಧರಿಸಿದರೆ ಸಾಕೆ? ಪಟ್ಟದಕಲ್ಲಿನ ರೂವಾರಿ ಗುಂಡ 'ಮಾನಸಾರ'

ಎಂಬ ಗ್ರಂಥವನ್ನು ರಚಿಸಿದ್ದಾನೆ ಎಂಬ ಲೇಖಕರ ಹೇಳಿಕೆ ಆಶ್ಚರ್ಯಕರವಾಗಿದೆ. ಭಾರತದ ಶಿಲ್ಪಶಾಸ್ತ್ರಕ್ಕೆ ಬುನಾದಿಯನ್ನು ಹಾಕಿದ ಶ್ರೇಯಸ್ಸು ಕನ್ನಡನಾಡಿನ ಬಾದಾಮಿಗೆ ಇದೆ ಎಂಬುದು ಅತ್ಯುಕ್ತಿಗೆ ಒಂದು ನಿದರ್ಶನ. ಐಹೊಳೆಯ ಗುಡಿಗಳಲ್ಲಿ ಶ್ರುತಿ, ಸ್ಮೃತಿ, ವೇದ, ಆಗಮ, ಪುರಾಣಗಳಲ್ಲಿ ಬರುವ ಅನೇಕ ವಿಷಯಗಳನ್ನು ರೂವಾರಿಗಳು ಕೆತ್ತಿದ್ದಾರೆ ಎಂಬುದು ತೇಲಿಕೆಯ ಮಾತು.

ಪಟ್ಟದಕಲ್ಲಿನ ವಿರೂಪಾಕ್ಷ, ಸಂಗಮನಾಥ ದೇವಾಲಯಗಳಲ್ಲಿ "ಒಂದಂತೂ ಒಬ್ಬ ಚಾಲುಕ್ಯ ರಾಜನ ಸಮಾಧಿಯೇ ಎಂಬುದರಲ್ಲಿ ಯಾವ ಸಂದೇಹವೂ ಉಳಿದಿಲ್ಲ," ಎಂದು 24ನೆಯ ಪುಟದಲ್ಲಿ ಹೇಳಿ, 94ನೆಯ ಪುಟ ಬರುವ ವೇಳೆಗೆ ಇನ್ನೊಂದೂ ಸಹ ಸಮಾಧಿಯೇ ಎಂಬ ದೃಢ ನಿರ್ಧಾರಕ್ಕೆ ಬಂದಿದ್ದಾರೆ. ಹಳೇಬೀಡಿನ ಹೊಯ್ಸಳೇಶ್ವರ, ಶಾಂತಲೇಶ್ವರ ಲಿಂಗಗಳು ಒಂದೇ ಗುಡಿಯಲ್ಲಿದ್ದು ಅವು ಕೂಡ ರಾಜ ರಾಣಿಯ ಸಮಾಧಿಗಳೇಕೆ ಆಗಬಾರದು? ಎಂದು ಪ್ರಶ್ನಿಸಿದ್ದಾರೆ. ಸಮಾಧಿಗೂ, ಸ್ಮಾರಕಕ್ಕೂ ವ್ಯತ್ಯಾಸವನ್ನು ಇವರು ಕಾಣುವುದಿಲ್ಲವೇನೋ!

"ಕದಂಬರ ನಂತರದ ಚಾಲುಕ್ಯರು ದಕ್ಷಿಣಭಾಗದಲ್ಲಿಯೇ ಸುಪ್ರಸಿದ್ಧರಾಗಿದ್ದಾರೆ. ಅವರ ಒಂದು ವಂಶಾವಳಿ ಬಾದಾಮಿಯಲ್ಲಿ ರಾಜ್ಯವಾಳಿದರೆ, ಕಲ್ಯಾಣ, ಗುಜರಾತಗಳಲ್ಲಿಯೂ ಕೆಲವರು ಆಳಿದಂತೆ ಕಾಣುತ್ತದೆ" ಎಂಬ ವಾಕ್ಯಗಳು (ಪು. 55) "ಉತ್ತರ ಚಾಲುಕ್ಯ ಅಥವಾ ಕಲ್ಯಾಣ ಚಾಲುಕ್ಯರಲ್ಲಿ ಅತ್ಯಂತ ಪ್ರಬಲನಾದ, ಇಷ್ಟೇ ಅಲ್ಲ, ಕರ್ನಾಟಕವನ್ನಾಳಿದ ಒಬ್ಬ ಪ್ರಮುಖ ಸಾರ್ವಭೌಮನಾದ 2ನೇ ವಿಕ್ರಮಾದಿತ್ಯನು ಕಲ್ಯಾಣವನ್ನು 1076–1124ರ ವರೆಗೆ 50 ವರ್ಷ ಆಳಿದನು", (ಪು. 59) ಎಂಬ ಹೇಳಿಕೆಗಳು ಹೀಗೆಯೇ ಚಾರಿತ್ರಿಕ ಘಟನೆಗಳ ದೃಷ್ಟಿಯಿಂದ ಸತ್ಯದೂರವಾದವು.

ಹೆಜ್ಜೆಹೆಜ್ಜೆಗೂ ಇಂಥ ಅನುಚಿತ ಹೇಳಿಕೆಗಳು, ಅಭಿಮಾನದ ಉದ್ಗಾರಗಳು ಪುಸ್ತಕದಲ್ಲಿ ಕಾಣಬರುತ್ತವೆ. ಇನ್ನು ಕೆಲವನ್ನು ಇಲ್ಲಿ ಕಾಣಿಸಬಹುದು. ಚಿತ್ರಕಲೆಯ "ದೈವೀ ಶ್ರೀಮಂತ ಅಭಿವ್ಯಕ್ತಿಯನ್ನು ನಾವು ಬಾದಾಮಿಯ ಕಲ್ಪನೆಗಳಲ್ಲಿ ಕಾಣಬಹುದು." "ಕಲೆಯ ದೃಷ್ಟಿಯಿಂದ ವಿಚಾರಿಸಿದಲ್ಲಿ ಆ ಚಿತ್ರಕಾರರು ತಮ್ಮ ಕಲೆಯಲ್ಲಿ ಪರಿಪೂರ್ಣತೆಯನ್ನು ಪಡೆಯಲು ಪಟ್ಟ ಶ್ರಮ ಸಾರ್ಥಕವಾಗಿದೆ. "ಶಿಲ್ಪವನ್ನು ನಮ್ಮವರು ಕಂಡಷ್ಟು ರೀತಿಯಲ್ಲಿ ಬೇರಿನ್ನಾರಾದರೂ ಕಂಡಿರಬಹುದೇ ಎನ್ನಬಹುದಾದ ಕುತೂಹಲ ಕೆರಳುವಂತಹ ವೈವಿಧ್ಯ ಈ ಕನ್ನಡನಾಡಿನ ದೇವಾಲಯಗಳಲ್ಲಿದೆ." (ಪು. 25) "ಣಮೋ ಸಿದ್ಧಾಣಂ ಅರಿಹಂತಾಣಂ ಣಮೋ ಆಚಾರ್ಯಾಣಂ ಣಮೋ ಉವಯಾಣಂ ಣಮೋ ಸಬ್ಬಸಾದೂಣಾವಮ್ ಇಲ್ಲಿಯ ಈ ಪದ್ಯದ ಭಾಷೆ ಕನ್ನಡವಲ್ಲದಿದ್ದರೂ ಆಚರಣೆ ಕರ್ನಾಟಕದಾದ್ಯಂತ ನಡೆದು ಹೋಗಿದೆ."

ಇದರಲ್ಲಿ ನಮ್ಮ ಸಂಸ್ಕೃತಿಯ ಯಾವ 'ವಿಶ್ವರೂಪ'ವನ್ನೂ ನಾವು ಕಾಣುವುದಿಲ್ಲ. ಕೇವಲ ಪ್ರವಾಸಿಯೊಬ್ಬನ ಭಾವಪೂರಿತ ಉದ್ಗಾರಗಳನ್ನಿಲ್ಲಿ ನೋಡಬಹುದು.

—ಡಾ. ಬಾ. ರಾ. ಗೋಪಾಲ್

# ಮಾನವಿಕ ಕರ್ಣಾಟಕ

ಸಂಪುಟ ೩

೧೯೭೨—೭೩

ಸೂಚಿ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ

# ವಿಷಯಸೂಚಿ

## ವ್ಯಕ್ತಿ, ಜೀವನ



## ಅರ್ಥಶಾಸ್ತ್ರ

**ಗ್ರಂಥಾಲಯ ವಿಜ್ಞಾನ**



**ಚರಿತ್ರೆ, ಪುರಾತತ್ವ**

**ಇತರ ಲೇಖನಗಳು**

# ಲೇಖಕ ಸೂಚಿ

## ವಸ್ತುಕೋಶ

## ಪುಸ್ತಕಲೋಕ

ಸೂಚಿಯ ಸಂಕಲನ: ಪಿ. ಕೃಷ್ಣಕುಮಾರ

wo 13272—MUPM—1025 copies—19-10-74

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

⁂ ಮಾನವಿಕ ಕರ್ಣಾಟಕ

⁂ ಪ್ರಬುದ್ಧ ಕರ್ಣಾಟಕ

⁂ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

| | | |
|---|---|---|
| ವಿದ್ಯಾರ್ಥಿಗಳಿಗೆ | .... | ನಾಲ್ಕು ರೂಪಾಯಿ |
| ಇತರರಿಗೆ | .... | ಆರು ರೂಪಾಯಿ |
| ಸಂಸ್ಥೆಗಳಿಗೆ | .... | ಎಂಟು ರೂಪಾಯಿ |

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್

'ಪ್ರಸಾರಾಂಗ'

ಮಾನಸ ಗಂಗೋತ್ರಿ, ಮೈಸೂರು–೫೭೦೦೧೬